Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 122
ಭಾನುವಾರ,3 ಮೇ 2026 | ಪುಟಗಳು: 18 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
c
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಜಮೈಕಾ ಸೇರಿ 3 ಆಫ್ರಿಕನ್ ದೇಶಗಳಿಗೆ ಸಚಿವ ಜೈಶಂಕರ್ 8 ದಿನದ ಅಧಿಕೃತ ಪ್ರವಾಸ ಶುರು

ಬೆಂಗಳೂರು ದರ

₹13,835 ↑	₹15,093 ↑	₹2,65,000 ↑
1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಖ್ಯಾತ ಚಿತ್ರಸಾಹಿತಿ, ಸಂವಹನ ತಜ್ಞ ಪ್ರಸೂನ್ ಜೋಶಿ ಪ್ರಸಾರ ಭಾರತಿ ನೂತನ ಅಧ್ಯಕ್ಷ



ವಿಕ ಹೊಂಗಿರಣ

ನಿಮ್ಮ ಜೀವನದ ಸಂತೋಷದ ಮಟ್ಟವು ನಿಮ್ಮ ಆಲೋಚನೆಗಳ ಗುಣಮಟ್ಟವನ್ನು ಅವಲಂಬಿಸಿರುತ್ತದೆ.

- ಮಾರ್ಕಸ್ ಅರೆಲಿಯಸ್

SBI
The banker to every Indian
ಎಸ್‌ಬಿಐ ಡಿಜಿಟಲ್ ಎಂಎಸ್‌ಎಂಇ ಸಾಲಗಳು
• ರೂ. 5 ಕೋಟಿವರೆಗೆ ಸಾಲಗಳು
• ರೂ. 50 ಲಕ್ಷದವರಗಿನ ಸಾಲಗಳ ತ್ವರಿತ ಡಿಜಿಟಲ್ ಮಂಜೂರಾತಿ
• ಅವಧಿ: 10 ವರ್ಷಗಳವರೆಗೆ
• ಆಕರ್ಷಕ ಬಡ್ಡಿದರಗಳು
• ಕ್ರೆಡಿಟ್ ಗ್ಯಾರೆಂಟಿ ಸುರಕ್ಷಿತ ಸಾಲಗಳಿಗೆ ಶೂನ್ಯ ಆಧಾರ
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 | 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹110/- ಕೋಲಾರ 108/- ತುಮಕೂರು 108/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹150/- ಕೋಲಾರ 148/- ತುಮಕೂರು 148/-
ವಿಥ್ ಸ್ಕಿನ್ ₹212/- ಕೋಲಾರ 209/- ತುಮಕೂರು 209/-
ವಿಥೌಟ್ ಸ್ಕಿನ್ ₹242/- ಕೋಲಾರ 238/- ತುಮಕೂರು 238/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಕಾಶ್ಮೀರದಲ್ಲಿ ಭಾರಿ ದಾಳಿಗೆ ಪಾಕ್ ಸಂಚು »04

ಮುಂದುವರಿದ ಅಮೆರಿಕ-ಇರಾನ್ ಶೀತಲ ಸಮರ »14

ಉದ್ಯೋಗಾಕಾಂಕ್ಷಿಗಳಿಗೆ ಸಿಎಂ ಶುಭ ಸುದ್ದಿ | ಆದ್ಯತೆ ಮೇಲೆ ನೇಮಕ ಪ್ರಕ್ರಿಯೆ ಮುಗಿಸಲು ಸೂಚನೆ | ಸಭೆಯಲ್ಲಿ ಅಧಿಕಾರಿಗಳಿಗೆ ಚಾಟಿ

ನೇಮಕಾತಿಗೆ ಶುಕ್ರದೆಸೆ

■ **ವಿಕ ಸುದ್ದಿಲೋಕ** ಬೆಂಗಳೂರು

ಹಣಕಾಸು ಇಲಾಖೆಯ ಅನುಮೋದನೆ ಪಡೆದಿರುವ ಎಲ್ಲ ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನು ಚುರುಕುಗೊಳಿಸಬೇಕು. ಬಜೆಟ್ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮೇ ತಿಂಗಳೊಳಗೆ ಆದೇಶಗಳನ್ನು ಹೊರಡಿಸಬೇಕು. ಈ ಸಲ ಮಳೆ ವಾಡಿಕೆಗಿಂತ ಕಡಿಮೆಯಾಗುವ ಮುನ್ಸೂಚನೆ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ವಿಧಾನಸೌಧದಲ್ಲಿ ಶನಿವಾರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳು ಒಳಗೊಂಡು ಎಲ್ಲ ಇಲಾಖಾ ಮುಖ್ಯಸ್ಥರೊಂದಿಗೆ ಮುಖ್ಯಮಂತ್ರಿಯವರು ಮಹತ್ವದ ಸಭೆ ನಡೆಸಿದರು. ''ಜನಪರವಾಗಿ ಸಮರ್ಪಕ ಆಡಳಿತ ನಿರ್ವಹಣೆ ಮೂಲಕ ಸರಕಾರಕ್ಕೆ ಒಳ್ಳೆಯ ಹೆಸರು ತರಬೇಕು. ಜವಾಬ್ದಾರಿ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿದರೆ ಮುಲಾಜಿಲ್ಲದೆ ಶಿಸ್ತು ಕ್ರಮ ಜರುಗಿಸಲಾಗುವುದು,'' ಎಂದು ಎಚ್ಚರಿಸಿದರು.

ಖಾಲಿ ಹುದ್ದೆ ಭರ್ತಿ: ''ಪರಿಶಿಷ್ಟ ಒಳ ಮೀಸಲು ನಿಗದಿಯಾಗಿರುವ ಹಿನ್ನೆಲೆಯಲ್ಲಿ ಉದ್ಯೋಗಾಕಾಂಕ್ಷಿಗಳ ನಿರೀಕ್ಷೆಯಂತೆ ಖಾಲಿ ಹುದ್ದೆಗಳ ನೇರ ನೇಮಕ ಪ್ರಕ್ರಿಯೆ ಬೇಗ ಪೂರ್ಣಗೊಳ್ಳಬೇಕು. ಹಣಕಾಸು ಇಲಾಖೆ ಅನುಮೋದನೆ ಪಡೆದಿರುವ ನಾನಾ ಇಲಾಖೆಗಳ 24,300 ಹುದ್ದೆಗಳ ಭರ್ತಿಗೆ ಕೂಡಲೇ ಕ್ರಮ ವಹಿಸಬೇಕು. ಜತೆಗೆ ಕಲ್ಯಾಣ ಕರ್ನಾಟಕಕ್ಕೆ



ಸಂಬಂಧಿಸಿದ ವೃಂದದ ಒಟ್ಟು 32,132 ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನೂ ಆದ್ಯತೆಯ ಮೇಲೆ ಆರಂಭಿಸಬೇಕು. ಕೆಲವು ಇಲಾಖೆಗಳಲ್ಲಿ ಬಾಕಿ ಇರುವ ವೃಂದ ಮತ್ತು ನೇಮಕ ನಿಯಮಾವಳಿ ಪರಿಷ್ಕರಣೆ ಕಾರ್ಯವನ್ನು ಶೀಘ್ರ ಪೂರ್ಣಗೊಳಿಸಬೇಕು,'' ಎಂದು ಸಿಎಂ ನಿರ್ದೇಶನ ನೀಡಿದರು.

ಕುಡಿಯುವ ನೀರು: ''ಪ್ರಸಕ್ತ ವರ್ಷ ಮಳೆ ಶೇ.5 ರಷ್ಟು ವಾಡಿಕೆಗಿಂತ ಕಡಿಮೆಯಾಗುವ ಸ್ಪಷ್ಟ ಮುನ್ಸೂಚನೆ ದೊರಕಿದೆ. ಉಸ್ತುವಾರಿ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯ ಜಿಲ್ಲೆಯಲ್ಲಿನ ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ನಿರಂತರ ನಿಗಾ ವಹಿಸಬೇಕು. ಡಿಸಿ ಮತ್ತು ಸಿಇಒಗಳ ಜತೆ ಸಭೆ ನಡೆಸಬೇಕು. ಉಸ್ತುವಾರಿಯಲ್ಲಿನ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳುವುದು ಆಯಾ ಉಸ್ತುವಾರಿ ಕಾರ್ಯದರ್ಶಿಗಳ ಜವಾಬ್ದಾರಿಯಾಗಿದೆ. ಸಮಸ್ಯೆ ಕಂಡುಬಂದರೆ ಸಂಬಂಧಪಟ್ಟ ಕಾರ್ಯದರ್ಶಿಯನ್ನೇ ಹೊಣೆ ಮಾಡಲಾಗುವುದು,'' ಎಂದು ಸ್ಪಷ್ಟಪಡಿಸಿದರು. »15

ಸಿಎಂ ಸಭೆಯ ಮುಖ್ಯಾಂಶ

- ಬಜೆಟ್ ಯೋಜನೆಗಳ ಅನುಷ್ಠಾನ ಆದೇಶಕ್ಕೆ ಮೇ ಅಂತ್ಯದ ಗಡುವು
- ವಾಡಿಕೆಗಿಂತ ಕಡಿಮೆ ಮಳೆ ಮುನ್ಸೂಚನೆ ಹಿನ್ನೆಲೆ ಎಚ್ಚರ ವಹಿಸಲು ಸಲಹೆ
- ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನ ಕಾಲಮಿತಿಯೊಳಗೆ ಖರ್ಚು ಮಾಡಲು ಸೂಚನೆ

56,432
ಹುದ್ದೆಗಳ ನೇಮಕ ಚುರುಕು

ಅಧಿಕಾರಿಗಳು ಯಾವತ್ತೂ ಸರಕಾರಕ್ಕೆ ಮತ್ತು ಸಚಿವರಿಗೆ ತಪ್ಪು ಮಾಹಿತಿ ನೀಡಬಾರದು. ಅಧಿಕಾರಿಗಳ ನಿಲುವು ಮತ್ತು ತೀರ್ಮಾನ ಜನಪರವಾಗಿರಬೇಕು. ಅಧಿಕಾರಿಗಳು 30 ರಿಂದ 35 ವರ್ಷಗಳ ಕಾಲ ಆಡಳಿತ ವ್ಯವಸ್ಥೆಯಲ್ಲಿದ್ದರೆ ಜನಪ್ರತಿನಿಧಿಗಳು ಕೇವಲ 5 ವರ್ಷಗಳ ಕಾಲ ಮಾತ್ರ ಇರುತ್ತಾರೆ. ಹಾಗಾಗಿ ವ್ಯವಸ್ಥೆಯಲ್ಲಿ ಅಧಿಕಾರಿಗಳ ಜವಾಬ್ದಾರಿ ಹೆಚ್ಚಾಗಿದೆ.

- **ಸಿದ್ದರಾಮಯ್ಯ** ಮುಖ್ಯಮಂತ್ರಿ

ಅವಧಿಗೆ ಮುನ್ನ ಮುಂಗಾರು

ಮೇ 14-16ರಂದು ಅಂಡಮಾನ್ ದ್ವೀಪ ಪ್ರವೇಶ | ಮೇ ತಿಂಗಳಲ್ಲಿ ವಾಡಿಕೆಗಿಂತ ಅಧಿಕ ಮಳೆ | ಹವಾಮಾನ ಇಲಾಖೆ ಮುನ್ಸೂಚನೆ

ಹೊಸದಿಲ್ಲಿ: ದೇಶಾದ್ಯಂತ ಬಿರು ಬಿಸಿಲಿನ ಬೇಗೆಗೆ ಸಿಲುಕಿರುವ ಜನತೆಗೆ ಹವಾಮಾನ ಇಲಾಖೆ ಶುಭ ಸುದ್ದಿ ನೀಡಿದೆ. ಈ ಬಾರಿ ಅವಧಿಗೆ ಮುನ್ನವೇ ನೈಋತ್ಯ ಮುಂಗಾರು ಮಾರುತ ಆಗಮಿಸಲಿದ್ದು, ಮೇ 14ರಿಂದ 16ರ ನಡುವೆ ಅಂಡಮಾನ್ ನಿಕೋಬಾರ್ ದ್ವೀಪಕ್ಕೆ ಪ್ರವೇಶಿಸಲಿದೆ. ಜೂನ್ 1ರ ಬದಲಾಗಿ ಮೇ ಕೊನೆಯ ವಾರದಲ್ಲಿ ಕೇರಳ ಪ್ರವೇಶಿಸಲಿದೆ. ದೇಶದ ಬಹುತೇಕ ಭಾಗಗಳಲ್ಲಿ ಮೇ ತಿಂಗಳಲ್ಲಿ ವಾಡಿಕೆಗಿಂತಲೂ ಅಧಿಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಆದರೆ, ಹಿಮಾಲಯದ ತಪ್ಪಲಿನಲ್ಲಿ ವಾಡಿಕೆಗಿಂತ ಅಧಿಕ ಮಟ್ಟದಲ್ಲಿ ಉಷ್ಣ ಮಾರುತದ(ಹೀಟ್‌ವೇವ್) ಬಿಸಿ ತಟ್ಟಲಿದೆ. ದೇಶದ ಹಲವು ಭಾಗಗಳಲ್ಲಿ ಮೇ ತಿಂಗಳ ಉಷ್ಣಾಂಶ ವಾಡಿಕೆಗಿಂತಲೂ ಅಧಿಕ ಮಟ್ಟದಲ್ಲಿ ಮುಂದುವರಿಯಲಿದೆ ಎಂದೂ ಇಲಾಖೆ ಎಚ್ಚರಿಸಿದೆ.

ಈಶಾನ್ಯ ಭಾರತ, ಕೇಂದ್ರ ಭಾರತ ಮತ್ತು ಪೂರ್ವ ಭಾರತದ ಹಲವು ಭಾಗಗಳಲ್ಲಿ ಮೇ ತಿಂಗಳ ಮಳೆ ವಾಡಿಕೆಯಷ್ಟು ಅಥವಾ ವಾಡಿಕೆಗಿಂತ ಕಡಿಮೆ ಇರುವ ಸಾಧ್ಯತೆಯಿದೆ.

ಹವಾಮಾನ ಇಲಾಖೆ ಮಹಾ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ ಅವರು ಶನಿವಾರ ಈ ಕುರಿತು ಮಾಹಿತಿ ನೀಡಿದ್ದಾರೆ.

ಏಪ್ರಿಲ್ ತಿಂಗಳಲ್ಲಿ ದಕ್ಷಿಣ ಭಾರತದಲ್ಲಿ ವಾಡಿಕೆಗಿಂತಲೂ ಅಧಿಕ ತಾಪಮಾನ ದಾಖಲಾಗಿದ್ದು, ದೇಶದ ಉಳಿದ ಭಾಗಗಳಲ್ಲಿ ಕನಿಷ್ಠ ತಾಪಮಾನ ಸಾಮಾನ್ಯ ಅಥವಾ ಸಾಮಾನ್ಯಕ್ಕಿಂತಲೂ ಕಡಿಮೆ ಇತ್ತು ಎಂದು ಅವರು ತಿಳಿಸಿದ್ದಾರೆ.

ಪೆಸಿಫಿಕ್ ಸಾಗರದ ಮೇಲ್ಮೈ ನೀರು ಹೆಚ್ಚು ಬಿಸಿಯಾಗುವ ಪರಿಣಾಮವಾಗಿ ಉಂಟಾಗುವ 'ಎಲ್ ನಿನೊ' ಪರಿಸ್ಥಿತಿಯು ಮಾನ್ಸೂನ್ ಮಳೆಯ ಮೇಲೆ ಪ್ರಭಾವ ಬೀರಲಿದೆ ಎಂದು ಇಲಾಖೆ ಈಗಾಗಲೇ ಹೇಳಿದ್ದು, ಒಟ್ಟಾರೆ ಮುಂಗಾರು ಮಳೆ ಪ್ರಮಾಣ ವಾಡಿಕೆಗಿಂತ ಕಡಿಮೆ ಆಗಬಹುದೆಂದು ಹೇಳಿದೆ.

ಸುಪ್ರೀಂ ಕೋರ್ಟ್‌ನಲ್ಲೂ ಟಿಎಂಸಿಗೆ ಹಿನ್ನಡೆ

ಹೊಸದಿಲ್ಲಿ: ಪಶ್ಚಿಮ ಬಂಗಾಳದಲ್ಲಿ ಮೇ 4ಕ್ಕೆ ನಡೆಯಲಿರುವ ಮತ ಎಣಿಕೆ ಕಾರ್ಯಕ್ಕೆ ಕೇಂದ್ರದ ಸಿಬ್ಬಂದಿ ನಿಯೋಜನೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಟಿಎಂಸಿಗೆ ಹಿನ್ನಡೆಯಾಗಿದೆ.

ಈ ಸಂಬಂಧ ಮಮತಾ ಬ್ಯಾನರ್ಜಿ ನೇತೃತ್ವದ ಆಡಳಿತಾರೂಢ ಟಿಎಂಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದ್ದು, ಚುನಾವಣಾ ಆಯೋಗದ ಕ್ರಮವು ಕಾನೂನುಬಾಹಿರವಲ್ಲ ಎಂದು ಸ್ಪಷ್ಟಪಡಿಸಿದೆ.

''ಮತ ಎಣಿಕೆ ಕಾರ್ಯಕ್ಕೆ ಸಿಬ್ಬಂದಿ ನಿಯೋಜನೆಯು ಆಯೋಗದ ವಿವೇಚನೆಗೆ ಬಿಟ್ಟ ವಿಚಾರ. ಕಾನೂನಿನ ಚೌಕಟ್ಟಿನ ಅಡಿಯಲ್ಲೇ ಆಯೋಗ ನಿರ್ಧಾರ ಕೈಗೊಂಡಿದೆ,'' ಎಂದು ನ್ಯಾಯಪೀಠ ಹೇಳಿದೆ. ಇದಕ್ಕೂ ಮುನ್ನ ರಾಜ್ಯದಲ್ಲಿ ಭದ್ರತೆಗಾಗಿ ಕೇಂದ್ರೀಯ ಪಡೆಗಳ ನಿಯೋಜನೆ ಪ್ರಶ್ನಿಸಿ ಟಿಎಂಸಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ವಿವರ»14

ಜಿ. ಸತ್ಯವತಿಗೆ ರಾಜ್ಯ ಸಿಐಸಿ ಸಾರಥ್ಯ

ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಜಿ. ಸತ್ಯವತಿ ಅವರನ್ನು ರಾಜ್ಯ ಮುಖ್ಯ ಮಾಹಿತಿ ಆಯುಕ್ತರಾಗಿ(ಸಿಐಸಿ) ನೇಮಿಸಲಾಗಿದ್ದು, ಅಧಿಸೂಚನೆ ಹೊರಡಿಸಲಾಗಿದೆ.

ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ಹಿರಿಯ ಸಚಿವ ಕೆ.ಜೆ.ಜಾರ್ಜ್ ಹಾಗೂ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಪಾಲ್ಗೊಂಡಿದ್ದ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿತ್ತು. ಜಿ.ಸತ್ಯವತಿ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಎನ್.ಜಯರಾಂ ಅವರ ಹೆಸರು ಪ್ರಸ್ತಾಪವಾಗಿತ್ತು. ಕೊನೆಗೆ ಜಿ.ಸತ್ಯವತಿ ಅವರ ಹೆಸರು ಅಂತಿಮಗೊಳಿಸಲಾಗಿತ್ತು. ರಾಜ್ಯ ಮುಖ್ಯ ಮಾಹಿತಿ ಆಯುಕ್ತರಾಗಿ ಜಿ.ಸತ್ಯವತಿ ಅವರ ನೇಮಕ ಪ್ರಸ್ತಾವಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದು, ಶನಿವಾರ ಅಧಿಸೂಚನೆ ಹೊರಡಿಸಲಾಗಿದೆ.

ಶಾಸಕತ್ವದಿಂದ ವಿನಯ್ ಅನರ್ಹ

ಬೆಂಗಳೂರು: ಬಿಜೆಪಿ ಮುಖಂಡ ಯೋಗೇಶ್‌ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿರುವ ಧಾರವಾಡ ಕ್ಷೇತ್ರದ ವಿನಯ್ ಕುಲಕರ್ಣಿ ಅವರನ್ನು ವಿಧಾನಸಭಾ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಶಿಕ್ಷೆ ವಿಧಿಸಿ ತೀರ್ಪು ನೀಡಿದ ಏಪ್ರಿಲ್ 15ರಿಂದಲೇ ಜಾರಿಗೆ ಬರುವಂತೆ ವಿನಯ್ ಕುಲಕರ್ಣಿ ಅವರನ್ನು ಶಾಸಕತ್ವದಿಂದ ಅನರ್ಹಗೊಳಿಸಿ ವಿಧಾನಸಭೆ ಸಚಿವಾಲಯ ಶನಿವಾರ ಅಧಿಸೂಚನೆ ಹೊರಡಿಸಿದೆ. 'ಜನತಾ ಪ್ರಾತಿನಿಧ್ಯ ಕಾಯಿದೆ 1951ರ ಸೆಕ್ಷನ್ 8ರ ಅಡಿಯಲ್ಲಿ ಈ ಆದೇಶ ಹೊರಡಿಸಲಾಗಿದ್ದು, ಕೋರ್ಟ್ ತೀರ್ಪಿಗೆ ತಡೆಯಾಜ್ಞೆ ಸಿಗದ ಹೊರತು ಈ ಅನರ್ಹತೆ ಮುಂದುವರಿಯಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ತುಮಕೂರಿನಲ್ಲಿ ಮೂರರ ಸಂಭ್ರಮ

ತುಮಕೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರಕ್ಕೆ ಮೇ 20ರಂದು 3 ವರ್ಷ ತುಂಬಲಿದ್ದು, ಅದೇದಿನ ತುಮಕೂರಿನಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲು ಯೋಜಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.

ನಗರದಲ್ಲಿ ಶನಿವಾರ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ''ಜಿಲ್ಲೆಯಲ್ಲಿ ಕಂದಾಯ ಇಲಾಖೆ ಹಾಗೂ ವಿವಿಧ ಇಲಾಖೆಗಳ ಅಭಿವೃದ್ಧಿ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಮೇ 20ರಂದೇ ರಾಜ್ಯ ಸರಕಾರಕ್ಕೆ 3 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ತುಮಕೂರಿನಲ್ಲೇ ರಾಜ್ಯಮಟ್ಟದ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ. ಈ ಸಮಾವೇಶದಲ್ಲಿ ರಾಜ್ಯಾದ್ಯಂತ 2 ಲಕ್ಷಕ್ಕೂ ಅಧಿಕ ಫಲಾನುಭವಿಗಳು ಭಾಗವಹಿಸಲಿದ್ದಾರೆ,'' ಎಂದು ಹೇಳಿದರು.

2 ವಿಕ ಮನಿ ₹
From The House of THE ECONOMIC TIMES
ಅದ್ವಿತೀಯ ಸಂಭ್ರಮ
SECOND ANNIVERSARY
ಅವಳಿ ಸಂಚಿಕೆ ಧಮಾಕಾ
3ನೇ ವರ್ಷಕ್ಕೆ ಕಾಲಿಟ್ಟ ವಿಕ ಮನಿ
ಕನ್ನಡದ ಏಕೈಕ ಹಣಕಾಸು ವಾರಪತ್ರಿಕೆ
24 ಪುಟಗಳಲ್ಲಿ (12+12) ವಿತ್ತಲೋಕದ ಅನಾವರಣ
ಕವರ್ ಸ್ಟೋರಿ
ಕರ್ನಾಟಕದ ಆರ್ಥಿಕ ಬೆಳವಣಿಗೆ, ದೇಶದ ಅಭಿವೃದ್ಧಿಗೆ ರಾಜ್ಯವು ಹೇಗೆ ಎಂಜಿನ್ ಆಗಿದೆ?

ವಿಶೇಷ ಸಂದರ್ಶನಗಳು

ಕರ್ನಾಟಕದ ನಾಳೆಗಳಲ್ಲಿ ಭಾರತದ ಭವ್ಯ ಭವಿಷ್ಯ
ಸಿಎಂ ಸಿದ್ದರಾಮಯ್ಯ ಅಭಿಮತ
ಜಾಗತಿಕ ಉತ್ಪಾದನಾ ಕೇಂದ್ರವಾಗುವತ್ತ ಭಾರತ ದಾಪುಗಾಲು
ಸಚಿವ ಎಚ್.ಡಿ. ಕುಮಾರಸ್ವಾಮಿ ವಿಶ್ವಾಸ
ಭವಿಷ್ಯದಲ್ಲೂ ಐಟಿ ಕ್ಷೇತ್ರದಲ್ಲಿ ಕರ್ನಾಟಕದ್ದೇ ಪಾರುಪತ್ಯ
ಸಚಿವ ಪ್ರಿಯಾಂಕ್ ಖರ್ಗೆ ಭರವಸೆ
ಐಟಿ ಎಂಜಿನ್‌ಗೆ ಮೂಲಸೌಕರ್ಯವೇ ಇಂಧನ:
ಮೋಹನ್ ದಾಸ್ ಪೈ ಸ್ಪೆಷಲ್ ಸ್ಟೋರಿ
ಬೆಂಗಳೂರಿನ ಮೂರು ದಶಕಗಳ ಸ್ಟಾರ್ಟಪ್ ಕ್ರಾಂತಿ:
ವಸಂತ್ ಶೆಟ್ಟಿ ಲೇಖನ
ಪ್ಲಾನ್ 'ಎ', 'ಬಿ' ಮಾತ್ರವಲ್ಲ, ಪ್ಲಾನ್ 'ಸಿ' ಸಹ ಅತ್ಯಗತ್ಯ
ಉದ್ಯಮಿಗಳು, ಉದ್ಯೋಗಿಗಳಿಗೆ ಜಿ.ಕೆ. ಪ್ರಮೋದ್ ರೋಡ್ ಮ್ಯಾಪ್
ರಂಗಸ್ವಾಮಿ ಮೂಕನಹಳ್ಳಿ ಕಾಲಂ: ಬದಲಾಗುತ್ತಿದೆ ಜಗತ್ತು, ಬದಲಾವಣೆಗೆ ಒಗ್ಗಿಕೊಳ್ಳದಿದ್ದರೆ ಆಪತ್ತು
ವಿದೇಶಿ ಮ್ಯೂಚುವಲ್ ಫಂಡ್‌ಗಳಲ್ಲಿ ಇನ್ವೆಸ್ಟ್‌ಮೆಂಟ್ ಹೇಗೆ?
ಶರತ್ ಎಂ.ಎಸ್. ಗೈಡೆನ್ಸ್
ಪತ್ರಿಕೆಗಾಗಿ ಸಂಪರ್ಕಿಸಿ
72594 58080
ಪ್ರತಿ ಭಾನುವಾರ ನಿಮ್ಮ ಕೈ ಸೇರಲಿದೆ
ಬೆಲೆ ₹5
ಪ್ರತಿ ಭಾನುವಾರ ಮಾರುಕಟ್ಟೆಯಲ್ಲಿ ವಿಕ ಮನಿ ಬಿಡುಗಡೆ
ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

ಅಭಿಮಾನೋತ್ಸವ ಒಗ್ಗಟ್ಟಿನ ಸಂಕೇತ

ದಾವಣಗೆರೆ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಸಂಸದ ರಾಘವೇಂದ್ರ ಹೇಳಿಕೆ

■ **ವಿಕ ಸುದ್ದಿಲೋಕ** ದಾವಣಗೆರೆ

ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮ ಯಾವುದೇ ಗುಂಪಿನ ಶಕ್ತಿ ಪ್ರದರ್ಶನವಲ್ಲ, ಬದಲಾಗಿ ಪಕ್ಷ ಸಂಘಟನೆಯ ಒಗ್ಗಟ್ಟಿನ ಸಂಕೇತ ಎಂದು ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಸ್ಪಷ್ಟಪಡಿಸಿದರು.

ಯಡಿಯೂರಪ್ಪ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಬಿಜೆಪಿ ಶನಿವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆ ಉದ್ಘಾಟಿಸಿ, ಅವರು ಮಾತನಾಡಿದರು.

''ರಥ ಎಳೆಯಲು ಪ್ರತಿ ನೂಲು ಹಗ್ಗವಾಗಿ ಹೇಗೆ ಸಹಾಯವಾಗುತ್ತೋ, ಹಾಗೆಯೇ ಪ್ರತಿ ಕಾರ್ಯಕರ್ತರು ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಸಾಥ್ ನೀಡುತ್ತಿದ್ದಾರೆ. ಬಿಜೆಪಿಯನ್ನು 2008ರಲ್ಲಿ ಅಧಿಕಾರಕ್ಕೆ ತಂದು ದಕ್ಷಿಣ ಭಾರತದಲ್ಲಿ ಕಮಲ ಅರಳಿಸಿದ್ದು, ಬೃಹತ್ ಸಂಖ್ಯೆಯ ಮೂಲಕ ಶಕ್ತಿ ಪ್ರದರ್ಶಿಸಿ ಕೇಂದ್ರದ ಗಮನ ಸೆಳೆದು ಅಮಿತ್ ಶಾ ಅವರಿಗೆ ಕರ್ನಾಟಕಕ್ಕೆ ಸಮಯ ಕೊಡಲು ಉತ್ಸಾಹ ತುಂಬೋಣ'' ಎಂದರು.

ರೈತ ಹೋರಾಟಗಾರರಾಗಿರುವ ಯಡಿಯೂರಪ್ಪ ಮೇಲೆ ಗುಂಡೂರಾವ್ ಸರಕಾರದಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ಹಲ್ಲೆ ನಡೆದಿತ್ತು. ಆಗ ಚೆಲ್ಲಿದ ರಕ್ತದ ಫಲದಿಂದಲೇ ಬಿಎಸ್‌ವೈ ಅಧಿಕಾರಕ್ಕೆ ಬಂದ ತಕ್ಷಣ ಏಳುವರೆ ಲಕ್ಷ ಹೆಕ್ಟೇರ್ ಪ್ರದೇಶ ನೀರಾವರಿ ವ್ಯಾಪ್ತಿಗೆ ತಂದರು. ರೈತರಿಗೆ ಕೃಷಿ ಬಜೆಟ್ ಮಂಡಿಸಿದರು. ಹೆಣ್ಣುಭ್ರೂಣ ಹತ್ಯೆ ತಡೆಯಲು ಭಾಗ್ಯಲಕ್ಷ್ಮೀ ಬಾಂಡ್ ಯೋಜನೆ, ಪರಿಶಿಷ್ಟರಿಗೆ ಪ್ರತ್ಯೇಕ ನಿಗಮ ಸ್ಥಾಪಿಸಿ ಅನುದಾನ ಒದಗಿಸಿದರು. ನಾನಾ ದಾರ್ಶನಿಕರ ಜಯಂತಿ ಘೋಷಿಸಿ ಜನಪರ ಯೋಜನೆಗಳನ್ನು ನೀಡಿದ್ದರು'' ಎಂದು ಸ್ಮರಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಎನ್.ರಾಜಶೇಖರ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವರಾದ ಎಸ್.ಎ. ರವೀಂದ್ರನಾಥ್, ಬಿ.ಸಿ.ಪಾಟೀಲ್, ಎಂ.ಪಿ. ರೇಣುಕಾಚಾರ್ಯ, ಗಾಯತ್ರಿ ಸಿದ್ದೇಶ್ವರ್, ಶಿವಯೋಗಿಸ್ವಾಮಿ ಇದ್ದರು.

ಯಡಿಯೂರಪ್ಪ ಭೇಟಿಯಾದ ಬಿ.ಎಲ್.ಸಂತೋಷ್

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಶನಿವಾರ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ ಉಪಹಾರ ಸೇವಿಸಿ ಕೆಲಹೊತ್ತು ಸಮಾಲೋಚನೆ ನಡೆಸಿದರು. ರಾಜಕೀಯ ವಿದ್ಯಮಾನಗಳ ಬಗ್ಗೆಯೂ ಚರ್ಚಿಸಿದ ಉಭಯ ನಾಯಕರು ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸುವ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಇದೇ ಸಂದರ್ಭದಲ್ಲಿ ಸುದೀರ್ಘ 50 ವರ್ಷ ರಾಜಕೀಯ ಪಯಣವನ್ನು ಯಶಸ್ವಿಯಾಗಿ ಪೂರೈಸಿರುವ ಯಡಿಯೂರಪ್ಪ ಅವರಿಗೆ ಸಂತೋಷ್ ಅವರು ಶುಭಾಶಯ ತಿಳಿಸಿದರು. ಸುಮಾರು ಒಂದು ಗಂಟೆ ಯಡಿಯೂರಪ್ಪ ಅವರ ನಿವಾಸದಲ್ಲಿದ್ದರು. ಈ ಭೇಟಿ ಬಗ್ಗೆ ಮಾತನಾಡಿರುವ ಯಡಿಯೂರಪ್ಪ ಅವರು ಸಂತೋಷ್ ಅವರ ಸಂಘಟನಾ ಸಾಮರ್ಥ್ಯ, ಚತುರತೆಯು ಪ್ರತಿಯೊಬ್ಬ ಕಾರ್ಯಕರ್ತನಿಗೂ ಸ್ಫೂರ್ತಿಯ ಸೆಲೆಯಾಗಿದೆ ಎಂದು ಹೇಳಿದರು.

ಮೈಸೂರಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಶನಿವಾರ ಭೇಟಿ ನೀಡಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದುಕೊಂಡರು. ಬಳಿಕ ಮೇ 9ರಂದು ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದರು.

ಸಿಎಂ ಸ್ಥಾನಕ್ಕೆ ಖರ್ಗೆ ಕಣ್ಣು

ಮೈಸೂರು: ''ಎರಡು ಕ್ಷೇತ್ರದ ಉಪಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸ ಇಲ್ಲ ಅಂತ ಕಾಂಗ್ರೆಸ್ ಮುಖಂಡರೇ ನನಗೆ ಹೇಳಿದ್ದಾರೆ,'' ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು. 2028ಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಅನುಮಾನವಾಗಿ ಸಿಎಂ ಬದಲಾವಣೆ ಗೊಂದಲದಲ್ಲಿ ಮಲ್ಲಿಕಾರ್ಜುನ ಖರ್ಗೆಯವರೂ ಅವಕಾಶ ಸಿಗುತ್ತದಾ ಎಂದು ನೋಡುತ್ತಿದ್ದಾರೆ,'' ಎಂದು ಟೀಕಿಸಿದರು.

ಹೈಕಮಾಂಡ್ ಚಿಂತನೆ ಸಿಎಂ ಗಮನಕ್ಕೆ ತಂದ ಬಿಕೆಎಚ್

ಖರ್ಗೆ ಹೇಳಿಕೆ ಬೆನ್ನಲ್ಲೇ ಸಿಎಂ ಆಪ್ತರ ರಹಸ್ಯ ಸಮಾಲೋಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಸದ್ಯಕ್ಕಿಲ್ಲ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹಾಗೂ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ರಹಸ್ಯ ಸಭೆ ನಡೆಸಿ ಚರ್ಚಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಇತ್ತೀಚೆಗೆ ದಿಲ್ಲಿಯಲ್ಲಿ ಎಐಸಿಸಿ ನಾಯಕರನ್ನು ಭೇಟಿ ಮಾಡಿದ್ದ ಹರಿಪ್ರಸಾದ್, ನಾಯಕತ್ವ ಬದಲಾವಣೆಯ ಪರಿಣಾಮವನ್ನು ಕುರಿತಂತೆ ಮನವರಿಕೆ ಮಾಡಿಕೊಟ್ಟಿದ್ದಾರೆ ಎನ್ನಲಾಗಿದೆ. ಈ ವಿಚಾರದಲ್ಲಿ ವರಿಷ್ಠರ ಚಿಂತನೆ ಏನಿದೆ ಹಾಗೂ ಹೈಕಮಾಂಡ್ ಮಟ್ಟದಲ್ಲಿ ನಡೆದಿರುವ ಬೆಳವಣಿಗೆಗಳ ಕುರಿತು ಹರಿಪ್ರಸಾದ್ ಅವರು ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾಹಿತಿ ನೀಡಿದ್ದರು. ಆದಾದ ಬಳಿಕ ಈ ಮೂವರು ಸಚಿವರು ಪ್ರತ್ಯೇಕವಾಗಿ ಸಭೆ ಸೇರಿ ಸಮಾಲೋಚನೆ ನಡೆಸಿದ್ದಾರೆ.

ನಾಯಕತ್ವ ಬದಲಾವಣೆ ವಿಚಾರದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ತೀರ್ಮಾನ ಹೇಳಲು ಡೆಡ್‌ಲೈನ್ ನೀಡಿದ ಬೆನ್ನಲ್ಲೇ ಹರಿಪ್ರಸಾದ್, ಎಚ್.ಸಿ.ಮಹದೇವಪ್ಪ ಮತ್ತಿತರರು ದಿಲ್ಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿದ್ದರು. ಆ ಬಳಿಕ ಹರಿಪ್ರಸಾದ್ ಅವರು ದಿಲ್ಲಿಯಲ್ಲಿ ಉಳಿದು ವರಿಷ್ಠ ನಾಯಕರ ಜತೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದ್ದರು. ಸಿದ್ದರಾಮಯ್ಯ ಅವರ ನಾಯಕತ್ವ ಮುಂದುವರಿಕೆಯಿಂದ ರಾಜ್ಯದಲ್ಲಿ ಪಕ್ಷದ 'ಅಹಿಂದ' ನೆಲೆ ಗಟ್ಟಿಯಾಗಲಿದ್ದು, ಪಕ್ಷದ ಹಿತದೃಷ್ಟಿ ಹಾಗೂ ಸರಕಾರದ ಸ್ಥಿರತೆ ದೃಷ್ಟಿಯಿಂದ ಯಥಾಸ್ಥಿತಿ ಮುಂದುವರಿಕೆ ಒಳ್ಳೆಯದು ಎಂಬ ಅಭಿಪ್ರಾಯವನ್ನು ಹರಿಪ್ರಸಾದ್ ಅವರು ವರಿಷ್ಠ ನಾಯಕರ ಮುಂದಿಟ್ಟಿದ್ದಾರೆ ಎನ್ನಲಾಗಿದೆ. ಈ ಮಾತುಕತೆ ವಿವರಗಳನ್ನು ಹರಿಪ್ರಸಾದ್ ಅವರು ಸಚಿವರ ಜತೆಗಿನ ಸಭೆಯಲ್ಲೂ ಹಂಚಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಬೆಂಗಳೂರಿನಲ್ಲಿ ಶುಕ್ರವಾರ ರಾತ್ರಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದ ಎಂಎಲ್‌ಸಿ ಬಿ.ಕೆ. ಹರಿಪ್ರಸಾದ್.

ಕಂಪನಿಗಳಿಂದಲೇ ಸಿಲಿಂಡರ್ ಬೆಲೆ ಏರಿಕೆ

ಆಮದು ಸಮಸ್ಯೆ ಇತ್ಯರ್ಥ ಬಳಿಕ ದರ ಇಳಿಕೆ ಖಚಿತ: ಜೋಶಿ ಭರವಸೆ



ದಾವಣಗೆರೆ: ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ಏರಿಕೆಯನ್ನು ಆಯಾ ಕಂಪನಿಗಳೇ ಮಾಡಿವೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''2004-2005ರಲ್ಲಿ ಕಾಂಗ್ರೆಸ್ ಇದ್ದಾಗ ಕಂಪನಿಗಳಿಗೆ ಬೆಲೆ ಏರಿಕೆ ಮಾಡುವ ಅವಕಾಶ ಮಾಡಿಕೊಟ್ಟಿದ್ದೆ,'' ಎಂದರು.

''ಪಾಕಿಸ್ತಾನ ಸೇರಿ ಕೆಲ ದೇಶಗಳಲ್ಲಿ ಎಲ್‌ಪಿಜಿ, ಪೆಟ್ರೋಲಿಯಂ ಸಿಗುತ್ತಿಲ್ಲ, ಆದರೆ ಭಾರತದಲ್ಲಿ ನಿರಂತರವಾಗಿ ಸಿಗುತ್ತಿದೆ. ತೈಲ ಉತ್ಪನ್ನಗಳು ಹರ್ಮುಜ್ ಜಲಸಂಧಿಯಿಂದಲೇ ಬರಬೇಕಾದ ಹಿನ್ನೆಲೆ ಸ್ವಲ್ಪ ತೊಂದರೆಯಾಗಿದೆ. ಆಮದು ಮಾಡಿಕೊಳ್ಳುವುದೇ ಜಾಸ್ತಿ ಇರೋದ್ರಿಂದ ಬೆಲೆ ಏರಿಕೆಯಾಗಿದೆ. ಸಮಸ್ಯೆ ಬಗೆಹರಿದ ನಂತರ ದರ ಕಡಿಮೆ ಮಾಡುವ ಕೆಲಸ ಮಾಡಲಾಗುತ್ತದೆ,'' ಎಂದರು.

ಬಂಗಾಳದಲ್ಲಿ ಬಿಜೆಪಿ: ''ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ. ಮಮತಾ ಬ್ಯಾನರ್ಜಿ ಸೋಲಿನ ಭಯದಲ್ಲಿದ್ದಾರೆ, ಹಾಗಾಗಿ ಸ್ಟ್ರಾಂಗ್ ರೂಂಗೆ ನುಗ್ಗೋದು, ಅಧಿಕಾರಿಗಳಿಗೆ ಬಾಯಿಗೆ ಬಂದಂತೆ ಬೈಯುವ ಕೆಲಸ ಮಾಡುತ್ತಿದ್ದಾರೆ,'' ಎಂದರು.

ಕಲಬುರಗಿ ಡಿಸಿ ಫೌಜಿಯಾ ವರ್ಗ

ಬೆಂಗಳೂರು: ಕಲಬುರಗಿ ಜಿಲ್ಲಾಧಿಕಾರಿಯಾಗಿದ್ದ ಬಿ. ಫೌಜಿಯಾ ತರನುಂ ಅವರನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಆಯುಕ್ತ ಹುದ್ದೆಗೆ ವರ್ಗಾಯಿಸಿ ರಾಜ್ಯ ಸರಕಾರ ಶನಿವಾರ ಆದೇಶ ಹೊರಡಿಸಿದೆ. ಹಣಕಾಸು ಇಲಾಖೆ ಜಂಟಿ ಕಾರ್ಯದರ್ಶಿಯಾಗಿದ್ದ ಮೊಹಮ್ಮದ್ ಇಕ್ರಮುಲ್ಲಾ ಶರೀಫ್ ಅವರನ್ನು ನೂತನ ಕಲಬುರಗಿ ಜಿಲ್ಲಾಧಿಕಾರಿಯಾಗಿ ನೇಮಕ ಮಾಡಲಾಗಿದೆ.

ಅಸ್ಸಾಂನಲ್ಲಿ ಕಾಂಗ್ರೆಸ್‌ಗೆ ಗೆಲುವು: ಡಿಕೆಶಿ

■ **ವಿಕ ಸುದ್ದಿಲೋಕ** ಬೆಂಗಳೂರು

ಸಮೀಕ್ಷೆ ನಂಬಲ್ಲ

ಚುನಾವಣೋತ್ತರ ಸಮೀಕ್ಷೆಗಳ ಬಗ್ಗೆ ತಮಗೆ ವಿಶ್ವಾಸ ಇಲ್ಲ ಎಂದು ಹೇಳಿರುವ ಡಿಸಿಎಂ ಡಿ.ಕೆ.ಶಿವಕುಮಾರ್, ''ಕೇರಳ ಒಳಗೊಂಡು ಎಲ್ಲ ಐದು ರಾಜ್ಯಗಳಲ್ಲೂ ಐಎನ್‌ಡಿಐಎ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ,'' ಎಂದು ಹೇಳಿದ್ದಾರೆ.

ಗುವಾಹಟಿಯಲ್ಲಿ ಶನಿವಾರ ಅಸ್ಸಾಂ ಕಾಂಗ್ರೆಸ್ ಅಭ್ಯರ್ಥಿಗಳು, ಮುಖಂಡರ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ''ಚುನಾವಣೆಗಳಲ್ಲಿ ತಂತ್ರಗಾರಿಕೆಯೇ ಬೇರೆ ಇರುತ್ತವೆ. ಆದರೆ, ಸಮೀಕ್ಷೆಗಳಲ್ಲಿ ಬಳಸುವ ಮಾದರಿ ಸೀಮಿತವಾಗಿರುತ್ತದೆ. ಹಾಗಾಗಿ, ಚುನಾವಣೋತ್ತರ ಸಮೀಕ್ಷೆ ನಮ್ಮ ಪರ ಇರಲಿ ಅಥವಾ ಇಲ್ಲದಿರಲಿ ನಾನಂತೂ ನಂಬುವುದಿಲ್ಲ,'' ಎಂದು ಹೇಳಿದರು.

''ಅಸ್ಸಾಂನಲ್ಲಿ ನಮ್ಮ ನಾಯಕರು ಮತ್ತು ಕಾರ್ಯಕರ್ತರು ಸಾಕಷ್ಟು ಪರಿಶ್ರಮ ವಹಿಸಿದ್ದಾರೆ. ಪಕ್ಷದ ಉಸ್ತುವಾರಿ ವಹಿಸಿದ್ದ ನನಗೆ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ಇದೆ,'' ಎಂದರು.

'ಬಿಜೆಪಿಯಿಂದ ಮಹಿಳಾ ಮೀಸಲು ಅಪಪ್ರಚಾರ'

ಬಾಗಲಕೋಟೆ: ''ಚುನಾವಣೆ ರಾಜಕೀಯಕ್ಕಾಗಿ ಬಿಜೆಪಿಯು ಕಾಂಗ್ರೆಸ್ ಮಹಿಳಾ ಮೀಸಲು ವಿರೋಧಿ ಎಂಬ ಅಪಪ್ರಚಾರ ನಡೆಸಿದೆ'' ಎಂದು ರಾಜ್ಯ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷೆ ವೀಣಾ ಕಾಶಪ್ಪನವರ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ''ರಾಜೀವ್ ಗಾಂಧಿ ಪ್ರಧಾನಿಯಾಗಿದ್ದಾಗ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹಿಳಾ ಮೀಸಲು ಜಾರಿಗೆ ತಂದಿದ್ದರಿಂದ ನಾನು ಜಿಪಂ ಅಧ್ಯಕ್ಷೆಯಾದೆ,''ಎಂದರು.

ಎಪಿಎಂಸಿಗಳ ಸ್ವಾಧೀನಕ್ಕೆ 450 ಎಕರೆ: ಶಿವಾನಂದ ಪಾಟೀಲ್

■ **ವಿಕ ಸುದ್ದಿಲೋಕ** ಬೆಂಗಳೂರು

ಜಮೀನು ಭೂಸ್ವಾಧೀನ ಪ್ರಕರಣಗಳಲ್ಲಿ ನ್ಯಾಯಾಲಯಗಳು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಪರವಾಗಿ ತೀರ್ಪು ನೀಡಿದ್ದು, ಇದರಿಂದ 450 ಎಕರೆ ಸ್ವಾಧೀನಕ್ಕೆ ಸಾಧ್ಯವಾಗಿದೆ ಎಂದು ಸಚಿವ ಶಿವಾನಂದ ಪಾಟೀಲ್ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಸುದೀರ್ಘ ಕಾನೂನು ಸಮರದಲ್ಲಿ ಎಪಿಎಂಸಿಗೆ ಜಯ ಸಿಕ್ಕಿದೆ. 272 ಎಕರೆಯಲ್ಲಿ ಮೆಗಾ ಕೃಷಿ ಮಾರುಕಟ್ಟೆ ನಿರ್ಮಾಣ ಯೋಜನೆಯ ಭೂಸ್ವಾಧೀನ ತೊಡಕು ನಿವಾರಣೆಯಾಗಿದೆ,'' ಎಂದು ಹೇಳಿದರು.

''ಯಶವಂತಪುರ ಎಪಿಎಂಸಿಯಿಂದ 1994ರಲ್ಲಿ 'ಮೆಗಾ ಕೃಷಿ ಮಾರುಕಟ್ಟೆ' ನಿರ್ಮಾಣ ಸಂಬಂಧ ಮಾಗಡಿ ಮುಖ್ಯ ರಸ್ತೆಯ ಶ್ರೀಗಂಧ ಕಾವಲ್‌ನಲ್ಲಿ 172.22 ಎಕರೆ ಹಾಗೂ ಇದಕ್ಕೆ ಹೊಂದಿಕೊಂಡಿರುವ ಹೇರೋಹಳ್ಳಿಯಲ್ಲಿ 100.11 ಎಕರೆ ಭೂಮಿಯನ್ನು ನಿಯಮಾನುಸಾರ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಭೂಸ್ವಾಧೀನದ ಅಧಿಸೂಚನೆ ರದ್ದುಪಡಿಸಬೇಕೆಂದು ಕೋರಿ ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಭೂಸುಧಾರಣಾ ಕಾಯಿದೆಯ ಮಿತಿಗಿಂತಲೂ ಟ್ರಸ್ಟ್ ಹೆಚ್ಚುವರಿ ಭೂಮಿ ಹೊಂದಿದ್ದು, ಅದನ್ನು ಸರಕಾರಕ್ಕೆ ಮರಳಿಸಬೇಕೆಂದು ಭೂ ನ್ಯಾಯಮಂಡಳಿ ಆದೇಶಿಸಿತ್ತು. ಇದನ್ನೂ ಟ್ರಸ್ಟ್ ನ್ಯಾಯಾಲಯದಲ್ಲಿ ಪ್ರಶ್ನಿಸಿತ್ತು,'' ಎಂದು ತಿಳಿಸಿದರು.

''ಹೈಕೋರ್ಟ್‌ನ ತೀರ್ಪು ವಿರುದ್ಧ ಟ್ರಸ್ಟ್ ಸುಪ್ರೀಂಕೋರ್ಟ್‌ನಲ್ಲೂ ಮೇಲ್ಮನವಿ ಸಲ್ಲಿಸಿತ್ತು. ಅಲ್ಲಿಯೂ ಎಪಿಎಂಸಿಗೆ ಜಯ ದೊರೆತಿದೆ. ಈ ಪ್ರಕರಣದಲ್ಲಿ 186 ಕೋಟಿ ರೂ. ಪರಿಹಾರವನ್ನು ನ್ಯಾಯಾಲಯಕ್ಕೆ ಪಾವತಿಸಲಾಗಿದೆ,'' ಎಂದು ವಿವರಿಸಿದರು.

''2003ರಲ್ಲಿ ಸರ್ಜಾಪುರ ಹೋಬಳಿಯ ಗೂಳಿಮಂಗಲದಲ್ಲಿ ಸ್ವಾಧೀನಪಡಿಸಿಕೊಂಡಿದ್ದ 42.31 ಎಕರೆಗೆ ಸಂಬಂಧಿಸಿದ ಪ್ರಕರಣದಲ್ಲೂ ಎಪಿಎಂಸಿ ಪರವಾಗಿ ತೀರ್ಪು ಬಂದಿದ್ದು, 211.37 ಕೋಟಿ ರೂ. ಪರಿಹಾರವನ್ನು ಪಾವತಿಸಲಾಗಿದೆ. ಇದಲ್ಲದೇ ಕೊಪ್ಪಳ ಜಿಲ್ಲೆಯ ಗಂಗಾವತಿ ಎಪಿಎಂಸಿಯಿಂದ ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಾಣಕ್ಕೆ 2012ರಲ್ಲಿ 136 ಎಕರೆ ಭೂಸ್ವಾಧೀನ ಪ್ರಕರಣದಲ್ಲೂ ಎಪಿಎಂಸಿಗೆ ಜಯ ದೊರೆತಿದ್ದು, 12 ಕೋಟಿ ರೂ. ಪರಿಹಾರ ನೀಡಲಾಗಿದೆ,'' ಎಂದರು.



ಯಾವ ಪ್ರದೇಶ	ಭೂಸ್ವಾಧೀನ (ಎಕರೆ)	ಪರಿಹಾರ (ಕೋಟಿಗಳಲ್ಲಿ)
ಹೇರೋಹಳ್ಳಿ	272.33	186
ಗೂಳಿಮಂಗಲ	42.31	11.37
ಕಾರಟಗಿ	136	12

ಎಪಿಎಂಸಿಗೆ ಅಗತ್ಯವಿರುವ ಭೂಮಿಯ ಸ್ವಾಧೀನಕ್ಕೆ 410 ಕೋಟಿ ರೂ. ಪರಿಹಾರ ಪಾವತಿಸಲಾಗಿದೆ. ಬೆಂಗಳೂರಿನಲ್ಲಿ ಹರಿಯಾಣ ಮಾದರಿಯಲ್ಲಿ ಮೆಗಾ ಮಾರುಕಟ್ಟೆ ನಿರ್ಮಿಸಲು ಉದ್ದೇಶಿಸಲಾಗಿದೆ. **-ಶಿವಾನಂದ ಪಾಟೀಲ್** ಸಚಿವ

ಎಪಿಎಂಸಿಗೆ ಬಿಎಂಟಿಸಿ ಭೂಮಿ

''ದಾಸನಪುರ ಎಪಿಎಂಸಿ ಪಾರ್ಕಿಂಗ್ ಸೇರಿ ಇತರೆ ಸಮಸ್ಯೆ ನಿವಾರಿಸಲು ಬಿಎಂಟಿಸಿಯ 12 ಎಕರೆಯನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಿದ್ದೇವೆ. ಇದಕ್ಕೆ ಸಂಪುಟ ಸಭೆ ಅನುಮೋದನೆ ನೀಡಿದೆ. ಶೀಘ್ರವೇ ಯಶವಂತಪುರದಿಂದ ದಾಸನಪುರ ಮಾರುಕಟ್ಟೆಗೆ ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ, ಶುಂಠಿ ವಹಿವಾಟನ್ನು ಸ್ಥಳಾಂತರಿಸಲಾಗುವುದು,'' ಎಂದು ಸಚಿವರು ತಿಳಿಸಿದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು-1 ರವರ ಕಚೇರಿ, ಬೆಂಘತ್ಯಾನಿನಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560052
ಸಂಖ್ಯೆ:ಉಪ್ರವ್ಯ-1/ಬೆಂಘತ್ಯಾನಿನಿ/ಪಿಎಂಸಿ/ಟೆಂಡ್/01/2026-27 ದಿನಾಂಕ:02.05.2026
ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತದ ವ್ಯವಸ್ಥಾಪಕರು, ಬೆಂಘತ್ಯಾನಿನಿ ಬೆಂಗಳೂರಿನ ಪರವಾಗಿ ಉಪ ಪ್ರಧಾನ ವ್ಯವಸ್ಥಾಪಕರು-1, ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಸೇವೆಗಳಿಗೆ ಅರ್ಹ ಬಿಡ್ಡರ್‌ಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು	ಯೋಜನೆಯ ಮೊತ್ತ (ರೂ.ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಗುತ್ತಿಗೆ ಅವಧಿ
1	ಬ್ಯಾಟರಾಯನಪುರ ಕ್ಷೇತ್ರದಲ್ಲಿ ಬೈಯಪ್ಪನಹಳ್ಳಿ ಸರ್ವೆ ಸಂ.80 ಮತ್ತು ಬಾಗಲೂರು ಸರ್ವೆ ಸಂ.271ರಲ್ಲಿ ಲ್ಯಾಂಡ್‌ಫಿಲ್ ಸೈಟ್‌ಗೆ ವೈಜ್ಞಾನಿಕ ಅಂತಿಮ ಕ್ಲೋಷರ್ ಮತ್ತು ಕಿಣ್ವಗಳ ಸಿಂಪಡಿಕೆ ಬಳಸಿಕೊಂಡು ಕೀಟಗಳ ಹಾವಳಿ ನಿಯಂತ್ರಣ ಹಾಗೂ ಅವಶ್ಯಕ ಮೂಲಭೂತ -ಸೌಕರ್ಯಗಳನ್ನು ರಚಿಸುವುದರೊಂದಿಗೆ ಸುತ್ತಮುತ್ತಲ ಗ್ರಾಮಗಳನ್ನು ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ ಪಿಎಂಸಿ ನಿಯೋಜನೆ.	64,84,436/-	1,29,690/-	11 ತಿಂಗಳು

1) ಬಿಡ್ ಪೂರ್ವ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:11.05.2026ರಂದು 5:30 ಗಂಟೆಯವರೆಗೆ. 2) ಟೆಂಡರ್ ಪೂರ್ವ ಬಿಡ್ ಸಭೆ ದಿನಾಂಕ:12.05.2026ರಂದು ಮಧ್ಯಾಹ್ನ 3:00 ಗಂಟೆಗೆ ಮೇಲ್ಕಂಡ ಕಚೇರಿಯಲ್ಲಿ. 3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:21.05.2026 ರಂದು ಸಂಜೆ 4:30 ಗಂಟೆಯೊಳಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:22.05.2026ರಂದು ಸಂಜೆ 4:30 ಗಂಟೆಯ ನಂತರ.
ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-1,
ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು
ಡಿಐಪಿಆರ್/ಸಿಪಿ/473/ಸಿಸಿಎಲ್/2026-27

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು-1 ರವರ ಕಚೇರಿ, ಬೆಂಘತ್ಯಾನಿನಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560052
ಸಂಖ್ಯೆ:ಉಪ್ರವ್ಯ-1/ಬೆಂಘತ್ಯಾನಿನಿ/ಟೆಂಡ್/02/2026-27 ದಿನಾಂಕ:02.05.2026
ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತದ ವ್ಯವಸ್ಥಾಪಕರು, ಬೆಂಘತ್ಯಾನಿನಿ ಬೆಂಗಳೂರಿನ ಪರವಾಗಿ ಉಪ ಪ್ರಧಾನ ವ್ಯವಸ್ಥಾಪಕರು-1, ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಸೇವೆಗಳಿಗೆ ಅರ್ಹ ಬಿಡ್ಡರ್‌ಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಗುತ್ತಿಗೆ ಅವಧಿ
1	ಬ್ಯಾಟರಾಯನಪುರ ಕ್ಷೇತ್ರದಲ್ಲಿ ಬೈಯಪ್ಪನಹಳ್ಳಿ ಸರ್ವೆ ಸಂ.80 ಮತ್ತು ಬಾಗಲೂರು ಸರ್ವೆ ಸಂ.271ರಲ್ಲಿ ಲ್ಯಾಂಡ್‌ಫಿಲ್ ಸೈಟ್‌ಗೆ ವೈಜ್ಞಾನಿಕ ಅಂತಿಮ ಕ್ಲೋಷರ್ ಮತ್ತು ಕಿಣ್ವಗಳ ಸಿಂಪಡಿಕೆ ಬಳಸಿಕೊಂಡು ಕೀಟಗಳ ಹಾವಳಿ ನಿಯಂತ್ರಣ ಹಾಗೂ ಅವಶ್ಯಕ ಮೂಲಭೂತ -ಸೌಕರ್ಯಗಳನ್ನು ರಚಿಸುವುದರೊಂದಿಗೆ ಸುತ್ತಮುತ್ತಲ ಗ್ರಾಮಗಳನ್ನು ಅಭಿವೃದ್ಧಿ ಮಾಡುವ ಕಾಮಗಾರಿ.	7605.14	ರೂ.1,00,000/- ಇ-ಪಾವತಿಯ ಮೂಲಕ ಅಂದರೆ, ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ /ಓಟಿಸಿ ಹಾಗೂ ಉಳಿದ ರೂ.75,05,150/- ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	11 ತಿಂಗಳು

1) ಬಿಡ್ ಪೂರ್ವ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:11.05.2026ರಂದು 5:30 ಗಂಟೆಯವರೆಗೆ. 2) ಟೆಂಡರ್ ಪೂರ್ವ ಬಿಡ್ ಸಭೆ ದಿನಾಂಕ:12.05.2026ರಂದು ಮಧ್ಯಾಹ್ನ 3:00 ಗಂಟೆಗೆ ಮೇಲ್ಕಂಡ ಕಚೇರಿಯಲ್ಲಿ. 3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:21.05.2026 ರಂದು ಸಂಜೆ 4:30 ಗಂಟೆಯೊಳಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:22.05.2026ರಂದು ಸಂಜೆ 4:30 ಗಂಟೆಯ ನಂತರ.
ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-1,
ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು
ಡಿಐಪಿಆರ್/ಸಿಪಿ/472/ಸಿಸಿಎಲ್/2026-27

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು-2 ರವರ ಕಛೇರಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು - 560052.
ಸಂಖ್ಯೆ: ಉಪ್ರವ್ಯ-2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/03/2026-27 ದಿನಾಂಕ: 02-05-2026
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
1) ಉಪ ಪ್ರಧಾನ ವ್ಯವಸ್ಥಾಪಕರು-2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ರವರು ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ರವರ ಪರವಾಗಿ, ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಬಿಡ್ಡುದಾರರು ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ (ಅಂದರೆ https://kppp.karnataka.gov.in) ಮೂಲಕ ಕೆಳಗಿನ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು. ಬಿಡ್ಡುದಾರರು ಒಪ್ಪಂದದ ಪ್ರದಾನಕ್ಕೆ ಅರ್ಹತೆ ಪಡೆಯಲು ಬಿಡ್‌ದಾರರಿಗೆ ಸೂಚನೆಗಳ ಷರತ್ತು-3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸಲಹೆ ನೀಡಲಾಗುತ್ತದೆ.
3) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
4) ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) ಜಿಎಸ್‌ಟಿಯನ್ನು ಹೊರತುಪಡಿಸಿ	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಬಿಡ್ ಡಾಕ್ಯೂಮೆಂಟ್ ವೆಚ್ಚ	ಗುತ್ತಿಗೆ ಪೂರ್ಣಗೊಳಿಸಲು ಅವಧಿ
1	Storm Water Drain from Kannur-Chikkagubbi-Doddagubbi-Rampura Lake-Yelemale Chatty Lake and Culverts Approch Roads.	8005.49	ರೂ. 1,00,000/- ಅನ್ನು ಈ ಕೆಳಗಿನವುಗಳ ಅಡಿಯಲ್ಲಿ ಇ-ಪಾವತಿಯ ಮೂಲಕ ಅಂದರೆ ಆನ್‌ಲೈನ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಮತ್ತು ಉಳಿದ ರೂ. 79,05,490/- ಅನ್ನು ರಾಷ್ಟ್ರೀಕೃತ / ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡಲಾದ ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ಪಾವತಿಸುವುದು.	ಕೆ.ಪಿ.ಪಿ. ಪೋರ್ಟಲ್ ಅನುಸಾರ	11 ತಿಂಗಳು

1) ಬಿಡ್ ಪೂರ್ವಭಾವಿ ಸಭೆ ದಿನಾಂಕ: 12-05-2026 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ಟೆಕ್) ರವರ ಕಚೇರಿ, ಬಿಎಸ್‌ಡಬ್ಲ್ಯೂಎಂಎಲ್, ಬಿಬಿಎಂಪಿ ಕಟ್ಟಡ, 1ನೇ ಮಹಡಿ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು - 560052 ಈ ಕಚೇರಿಯಲ್ಲಿ ನಡೆಯಲಿದೆ.
2) ಟೆಂಡರ್ ಡಾಕ್ಯೂಮೆಂಟ್ ಪ್ರಕಾರ ಅಗತ್ಯ ಮಾಹಿತಿ / ದಾಖಲೆಗಳೊಂದಿಗೆ ತಾಂತ್ರಿಕ ದಾಖಲೆಗಳನ್ನು ದಿನಾಂಕ: 22-05-2026 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ ಕೆ.ಪಿ.ಪಿ. ಪೋರ್ಟಲ್ https://kppp.karnataka.gov.in ಗೆ ಅಪ್‌ಲೋಡ್ ಮಾಡಬೇಕು. ತಾಂತ್ರಿಕ ಬಿಡ್‌ನ್ನು ಹೊಂದಿರುವ ಫಸ್ಟ್ ಫೋಲ್ಡರ್‌ನ್ನು ಬಿಡ್ಡುದಾರರು ಅಥವಾ ಆರಂಭಿಕ ಪ್ರಕ್ರಿಯೆಗೆ ಹಾಜರಾಗಲು ಬಯಸುವ ಅವರ ಅಧಿಕೃತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮೂಲಕ ದಿನಾಂಕ: 25-05-2026 ರಂದು 16.30 ಗಂಟೆಯ ನಂತರ ನಿಗದಿತ ಸ್ಥಳದಲ್ಲಿ ತೆರೆಯಲಾಗುತ್ತದೆ. ನಿರ್ದಿಷ್ಟಪಡಿಸಿದಂತೆ ಟೆಂಡರ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಗೆ ರಜೆ ಇದ್ದಲ್ಲಿ, ಟೆಂಡರ್‌ಗಳನ್ನು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ತೆರೆಯಲಾಗುತ್ತದೆ.
3) ತನ್ನ ನಿಯಂತ್ರಣವನ್ನು ಮೀರಿ ಸಿಸ್ಟಮ್ ವೈಫಲ್ಯದ ಕಾರಣದಿಂದ ಯಾವುದೇ ವಿಳಂಬಗಳಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಟೆಂಡರ್‌ದಾರರಿಗೆ ತಿಳಿಸಲು ಸಿಸ್ಟಮ್ ಪ್ರಯತ್ನಿಸಿದರೂ ಸಹ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆ.ಪಿ.ಪಿ. ಪೋರ್ಟಲ್‌ನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಸಹಾಯವಾಣಿಯ ಇ-ಮೇಲ್ ವಿಳಾಸ: hphelpdesk.blr@intarvo.com ಕೆ.ಪಿ.ಪಿ. ಪೋರ್ಟಲ್ ಹೆಲ್ಪ್‌ಡೆಸ್ಕ್ ದೂರವಾಣಿ ಸಂಖ್ಯೆ: 080-22371090 / 22373788. ಟೆಂಡರ್‌ದಾರರು ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕದ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆ.ಪಿ.ಪಿ. ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ.
4) ಯಾವುದೇ ಕೊರಿಜೆಂಡಮ್/ಅಡೆಂಡಮ್ ಅನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-2
ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/462/ಅಡ್ವರ್ಟೋ/2026-27

ಭಾರತ ಭವಿಷ್ಯದ ಮೆಡಿಕಲ್ ಹಬ್

ಮಲ್ಲಾಡಿಹಳ್ಳಿಯಲ್ಲಿ ಕೇಂದ್ರ ಸಚಿವ ಜೋಶಿ ಹೇಳಿಕೆ

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕು ಮಲ್ಲಾಡಿಹಳ್ಳಿಯಲ್ಲಿ ಶನಿವಾರ ಆಯೋಜಿಸಿದ್ದ ಶ್ರೀ ರಾಘವೇಂದ್ರ ಆಯುರ್ವೇದ ಮೆಡಿಕಲ್ ಕಾಲೇಜು ಘಟಿಕೋತ್ಸವವನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಉದ್ಘಾಟಿಸಿದರು.

■ **ವಿಕ ಸುದ್ದಿಲೋಕ** ಚಿತ್ರದುರ್ಗ

''ಭವಿಷ್ಯದಲ್ಲಿ ಭಾರತ ಮೆಡಿಕಲ್ ಹಬ್ ಹಾಗೂ ವೈದ್ಯಕೀಯ ಪ್ರವಾಸೋದ್ಯಮದ ಪ್ರಮುಖ ಕೇಂದ್ರವಾಗಿ ಹೊರ ಹೊಮ್ಮಲಿದೆ,'' ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ಹೊಳಲ್ಕೆರೆ ತಾಲೂಕಿನ ಮಲ್ಲಾಡಿಹಳ್ಳಿಯ ಶ್ರೀರಾಘವೇಂದ್ರ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಘಟಿಕೋತ್ಸವದಲ್ಲಿ ವೈದ್ಯ ಪದವಿ ಪೂರ್ಣಗೊಳಿಸಿದ ರ್‍ಯಾಂಕ್ ವಿಜೇತರು, ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ, ಮಾತನಾಡಿದರು.

''ಭಾರತೀಯ ವೈದ್ಯಶಾಸ್ತ್ರದ ಪಿತಾಮಹರಾದ ಸುಶ್ರುತ, ಚರಕ ಮುಂತಾದವರ ಕಾಲದಿಂದ ಇಂದಿನವರೆಗೂ ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಬೆಳವಣಿಗೆಗಳಾಗಿವೆ. ಆಧುನಿಕ ತಂತ್ರಜ್ಞಾನ ಮತ್ತು ಸಂಶೋಧನೆಗಳ ಮೂಲಕ ವೈದ್ಯಕೀಯ ಕ್ಷೇತ್ರದ ಎಲ್ಲ ಸೇವೆಗಳನ್ನು ಒಂದೇ ಸೂರಿನಡಿ ತರಲಾಗಿದೆ. ದೇಶದ ಎಲ್ಲ ಏಮ್ಸ್‌ಗಳಲ್ಲಿ ಇತ್ತೀಚಗಷ್ಟೇ ಆಯುರ್ವೇದ ವಿಭಾಗಗಳನ್ನು ತೆರೆಯಲಾಗಿದೆ,'' ಎಂದರು.

ರಾಜ್ಯಕ್ಕೇ ಮೊದಲ ರ್‍ಯಾಂಕ್

ಮಾದರ ಚನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದರ ಚನ್ನಯ್ಯ ಸ್ವಾಮೀಜಿ, 'ಶ್ರೀ ರಾಘವೇಂದ್ರ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಗೆ ಇತಿಹಾಸದಲ್ಲೇ ಮೊದಲ ಬಾರಿಗೆ ರಾಜ್ಯ ಮಟ್ಟದ ಪ್ರಥಮ ರ್‍ಯಾಂಕ್ ಲಭಿಸಿರುವುದು ಹೆಮ್ಮೆಯ ಸಂಗತಿ. ಭವಿಷ್ಯದಲ್ಲಿ ಇನ್ನಷ್ಟು ರ್‍ಯಾಂಕ್‌ಗಳು ಬರುವ ರೀತಿಯಲ್ಲಿ ಇಲ್ಲಿನ ಬೋಧಕ ವರ್ಗ ಶ್ರಮಿಸಬೇಕು,'' ಎಂದರು.

ಹೊಳಲ್ಕೆರೆ ಶಾಸಕ ಡಾ.ಎಂ.ಚಂದ್ರಪ್ಪ, ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿ ಡಾ.ಬಿ.ಸಿ.ಭಗವಾನ್ ಮಾತನಾಡಿದರು. ಜಿಲ್ಲಾ ಆಯುಷ್ ಅಧಿಕಾರಿ ಡಾ.ಚಂದ್ರಕಾಂತ್ ನಾಗಸಮುದ್ರ, ಅನಾಥ ಸೇವಾಶ್ರಮದ ವಿಶ್ವಸ್ತ ಸಮಿತಿ ಸದಸ್ಯರು, ಕಾಲೇಜು ಪ್ರಾಚಾರ್ಯರು ಉಪಸ್ಥಿತರಿದ್ದರು.

ಹೈಕೋರ್ಟ್ ಸಂಚಾರಿ ಪೀಠ ಸ್ಥಳ ಪರಿಶೀಲನೆಗೆ ಒಪ್ಪಿಗೆ: ಐವಾನ್

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳನ್ನೊಳಗೊಂಡು ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಹಾಗೂ ಕಾಯಂ ಪೀಠ ಸ್ಥಾಪಿಸಬೇಕೆಂಬ ಹಲವು ವರ್ಷಗಳ ಬೇಡಿಕೆಗೆ ಸರಕಾರದಿಂದ ಧನಾತ್ಮಕ ಸ್ಪಂದನೆ ಸಿಕ್ಕಿದೆ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಹೇಳಿದ್ದಾರೆ. ಪಾಲಿಕೆಯ ತಮ್ಮ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು,''ಈ ಬಗ್ಗೆ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಿಗೂ ಮನವರಿಕೆಯಾಗಿದ್ದು, ಅವರು ಸ್ಥಳ ಪರಿಶೀಲನೆಗೆ ಒಪ್ಪಿ ಶೀಘ್ರವೇ ಮಂಗಳೂರಿಗೆ ಭೇಟಿ ನೀಡಲಿದ್ದಾರೆ,''ಎಂದರು.

Published for the Proprietors, Metropolitan Media Company Limited, by Lokesh K V at No.74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No.9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph:08042200500) Regd. Office: No.74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol.27 Issue No.122

ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಎಚ್.ಎನ್.ಕೃಷ್ಣ ಖುಲಾಸೆ

ಕೆಎಎಸ್ ನೇಮಕಾತಿ ಅಕ್ರಮ ಆರೋಪ ಪ್ರಕರಣ

■ **ವಿಕ ಸುದ್ದಿಲೋಕ** ಬೆಂಗಳೂರು

ಕೆಎಎಸ್ ಅಧಿಕಾರಿಗಳ ನೇಮಕದಲ್ಲಿ ಅಧಿಕಾರ ದುರುಪಯೋಗ ಸಂಬಂಧ ಸಿಐಡಿ ದಾಖಲಿಸಿದ್ದ ಪ್ರಕರಣದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಡಾ. ಎಚ್.ಎನ್. ಕೃಷ್ಣ ಸೇರಿದಂತೆ ಇತರೆ ಆರು ಮಂದಿಯನ್ನು ನ್ಯಾಯಾಲಯ ಆರೋಪ ಮುಕ್ತಗೊಳಿಸಿದೆ.

ಬೆಂಗಳೂರಿನ 1ನೇ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಏ. 30ರಂದು ಈ ಬಗ್ಗೆ ತೀರ್ಪು ನೀಡಿದ್ದು, ಆರೋಪಿಗಳ ವಿರುದ್ಧ ಪ್ರಾಸಿಕ್ಯೂಷನ್ ಮಾಡಿದ್ದ ಆರೋಪಗಳನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿದೆ ಎಂದು ನ್ಯಾಯಾಧೀಶರು ತಮ್ಮ 54 ಪುಟಗಳ ತೀರ್ಪಿನಲ್ಲಿ ತಿಳಿಸಿದ್ದಾರೆ.

1998-99ನೇ ಸಾಲಿನಲ್ಲಿ ನಡೆದ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕ ವಿಚಾರದಲ್ಲಿ ಎಚ್.ಎನ್.ಕೃಷ್ಣ ಮತ್ತಿತರರು ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆಂದು ಆರೋಪಿಸಿ ಅಪರಾಧ ತನಿಖಾ ದಳವು ಪ್ರಕರಣ ಸಂಖ್ಯೆ 400/2012ರಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿತ್ತು.

ಈ ಬಗ್ಗೆ 2012ರಿಂದ ನ್ಯಾಯಾಲಯದಲ್ಲಿ ಸುದೀರ್ಘ ವಿಚಾರಣೆ ನಡೆದಿತ್ತು. ಈ ಪ್ರಕರಣದಲ್ಲಿ ಖುಲಾಸೆಗೊಂಡಿರುವ 2 ಮತ್ತು 3ನೇ ಆರೋಪಿಗಳಾದ ಆಶಾ ಪರ್ವೀನ್ ಮತ್ತು ಸಲ್ಮಾ ಫಿರ್ದೋಸ್ ಅವರು ನಕಲಿ ದಾಖಲೆಗಳನ್ನು ಸಲ್ಲಿಸಿದ್ದಾರೆಂದು ಆರೋಪಿಸಲಾಗಿತ್ತು. ಇತರೆ ಆರೋಪಿಗಳಾದ ಕೆ.ನರಸಿಂಹ, ಪಿ.ಗೋಪಿಕೃಷ್ಣ ಮತ್ತು ಎಂ.ಬಿ.ಬಣಕಾರ್ ಲೋಕಸೇವಾ ಆಯೋಗದ ಸಿಬ್ಬಂದಿಗಳಾಗಿದ್ದು, ಅವರು ಪ್ರಕರಣದಲ್ಲಿ ಅಧ್ಯಕ್ಷರಿಗೆ ಅಪರಾಧಿಕ ಕೃತ್ಯ ಎಸಗಲು ಸಹಕರಿಸಿದ್ದಾರೆಂದು ಆರೋಪಿಸಲಾಗಿತ್ತು. ಈಗ ಎಲ್ಲಾ ಆರೋಪಗಳನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ (ಸಿಐಡಿ) ಸಂಪೂರ್ಣವಾಗಿ ವಿಫಲವಾಗಿದೆ ಎಂದು ತೀರ್ಪಿನಲ್ಲಿ ತಿಳಿಸಿರುವ ನ್ಯಾಯಾಧೀಶರು ಎಲ್ಲಾ ಆರೋಪಿಗಳನ್ನು ಖುಲಾಸೆಗೊಳಿಸಿದ್ದಾರೆ.

ಉಗ್ರ ಕೌರ್‌ಗೆ 7 ವರ್ಷ ಜೈಲು

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜಧಾನಿಯಲ್ಲಿ ಭಯೋತ್ಪಾದನಾ ಚಟುವಟಿಕೆಗಳನ್ನು ನಡೆಸಲು ಸಂಚು ರೂಪಿಸಿದ್ದ ಪ್ರಕರಣದ ಅಪರಾಧಿ ವಿಕ್ರಂ ಕೌರ್ ಅಲಿಯಾಸ್ ಚೋಟಾ ಉಸ್ಮಾನ್‌ಗೆ (25) ಏಳು ವರ್ಷಗಳ ಜೈಲು ಶಿಕ್ಷೆ ಹಾಗೂ 30 ಸಾವಿರ ರೂ. ದಂಡ ವಿಧಿಸಿ ಎನ್‌ಐಎ ವಿಶೇಷ ನ್ಯಾಯಾಲಯ ಶನಿವಾರ ಆದೇಶಿಸಿದೆ.

ಬೆಂಗಳೂರು ಸರಣಿ ಬಾಂಬ್ ಸ್ಫೋಟದ ಅಪರಾಧಿ, ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಉಗ್ರ ಟಿ.ನಾಸೀರ್ ಹಾಗೂ ಇತರರ ಜತೆ ಸೇರಿ 'ಲಷ್ಕರೆ ತಯ್ಬಾ' ಸಂಘಟನೆ ಬಲಪಡಿಸುವುದು ಹಾಗೂ ಉಗ್ರ ಚಟುವಟಿಕೆಗಳಲ್ಲಿ ಭಾಗಿಯಾಗಿ ಶಸ್ತ್ರಾಸ್ತ್ರ ಸಂಗ್ರಹ ಮಾಡಿದ ಆರೋಪ ಪ್ರಕರಣದಲ್ಲಿ ಬಿಹಾರ ಮೂಲದ ವಿಕ್ರಂ ಕೌರ್ ಕೂಡ ಬಂಧಿತನಾಗಿದ್ದ.

ಉಗ್ರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಕ್ಕೆ ನ್ಯಾಯಾಲಯದ ಮುಂದೆ ವಿಕ್ರಂ ಕೌರ್ ತಪ್ಪೊಪ್ಪಿಕೊಂಡಿದ್ದ. ಈ ನಿಟ್ಟಿನಲ್ಲಿ ಅಪರಾಧಿ ವಿಕ್ರಂ ಕೌರ್‌ಗೆ ಭಯೋತ್ಪಾದನಾ ಚಟುವಟಿಕೆಗಳ ತಡೆ ಕಾಯಿದೆ ಅಡಿ 7 ವರ್ಷ ಜೈಲು ಶಿಕ್ಷೆ ಹಾಗೂ 30 ಸಾವಿರ ರೂ. ದಂಡ ವಿಧಿಸಲಾಗಿದೆ.

ಜೈಲಿನಲ್ಲಿ ಮತಾಂತರ: 2017ರಲ್ಲಿ ಕೊಲೆ ಪ್ರಕರಣವೊಂದರಲ್ಲಿ ಜೈಲು ಸೇರಿದ್ದ ವಿಕ್ರಂ ಕೌರ್‌ಗೆ ಅಲ್ಲಿದ್ದ ಲಷ್ಕರೆ ತಯ್ಬಾ ಮುಖಂಡ ಟಿ.ನಾಸೀರ್ ಪರಿಚಯವಾಗಿದ್ದ. ನಾಸೀರ್ ಪ್ರಭಾವಕ್ಕೆ ಒಳಗಾಗಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡು ಚೋಟಾ ಉಸ್ಮಾನ್ ಆಗಿದ್ದ. ಜೈಲಿಂದ ಬಿಡುಗಡೆಯಾದ ಬಳಿಕ ಉಗ್ರ ಸಂಘಟನೆಯಲ್ಲಿ ಭಾಗಿಯಾಗಿದ್ದ. ಟಿ.ನಾಸೀರ್‌ನನ್ನು ಜೈಲಿನಿಂದ ಪಾರು ಮಾಡುವ ಸಂಚಿನಲ್ಲಿಯೂ ಭಾಗಿಯಾಗಿದ್ದ ಎಂದು ಎನ್‌ಐಎ ತಿಳಿಸಿದೆ.

ಇದೇ ಪ್ರಕರಣದಲ್ಲಿ ಟಿ.ನಾಸೀರ್ ಸೇರಿ 12 ಮಂದಿ ಆರೋಪಿಗಳ ವಿರುದ್ಧ ಎನ್‌ಐಎ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಆಂಧ್ರ ಪೊಲೀಸರ ಕಾರು ತಡೆದ ಗ್ರಾಮಸ್ಥರು

ಸುಳ್ಯ(ದ.ಕ.): ಗುತ್ತಿಗಾರಿನ ಯುವಕನೊಬ್ಬನನ್ನು ಆಂಧ್ರಪ್ರದೇಶ ಪೊಲೀಸರು ಕರೆದೊಯ್ಯುತ್ತಿದ್ದ ಕಾರನ್ನು ಗ್ರಾಮಸ್ಥರು ಬೆನ್ನಟ್ಟಿ ತಡೆದ ಘಟನೆ ಗುರುವಾರ ನಡೆದಿದೆ.

ಆನ್‌ಲೈನ್ ಬೆಟ್ಟಿಂಗ್ ಆರೋಪ, ಯುವಕನನ್ನು ಕರೆದೊಯ್ಯಲು ಯತ್ನ

ವಳಲಂಬೆಯ ಸಚಿನ್ ಮೊಟ್ಟೆಮನೆ ಎಂಬವರು ಗುರುವಾರ ಸಂಜೆ ಗುತ್ತಿಗಾರಿನಲ್ಲಿರುವಾಗ ಆಂಧ್ರಪ್ರದೇಶ ಪೊಲೀಸರು ಬಂದು ಆತನನ್ನು ಕರೆದೊಯ್ದರು. ಸಚಿನ್‌ರನ್ನು ಅಪಹರಣ ಮಾಡಿದ್ದಾರೆಂದು ತಿಳಿದ ಗ್ರಾಮಸ್ಥರು, ಅವರ ಮಾವ ಬಿಜೆಪಿ ಮಂಡಲ ಸಮಿತಿ ಅಧ್ಯಕ್ಷ ವೆಂಕಟ್ ವಳಲಂಬೆಗೆ ಮಾಹಿತಿ ನೀಡಿದರು.

ಸಚಿನ್ ಸ್ನೇಹಿತರು ಗುಂಡ್ಯ ಸಮೀಪ ಆಂಧ್ರಪ್ರದೇಶ ಪೊಲೀಸರ ವಾಹನವನ್ನು ತಡೆದು ನಿಲ್ಲಿಸಿದರು. ಸ್ಥಳದಲ್ಲಿ ಸಾರ್ವಜನಿಕರಿಗೂ, ಆಂಧ್ರಪ್ರದೇಶ ಪೊಲೀಸರಿಗೂ ಮಾತಿನ ಚಕಮಕಿ ನಡೆಯಿತು. ಕೊನೆಗೆ ಸುಬ್ರಹ್ಮಣ್ಯ ಪೊಲೀಸರು ಸ್ಥಳಕ್ಕೆ ಆಗಮಿಸಿ ಎಲ್ಲರನ್ನೂ ಠಾಣೆಗೆ ಕರೆತಂದು, ವೆಂಕಟ್ ವಳಲಂಬೆ ಉಪಸ್ಥಿತಿಯಲ್ಲಿ ಮಾತುಕತೆ ನಡೆದು, ಸಚಿನ್ ವಿಚಾರಣೆಗೆ ಬರಬೇಕೆಂಬ ಷರತ್ತು ವಿಧಿಸಿ ಆಂಧ್ರಪ್ರದೇಶ ಪೊಲೀಸರು ತೆರಳಿದರು.

ಆನ್‌ಲೈನ್ ಗೇಮಿಂಗ್ ನಡೆಸುವ ಬುಕ್ಕಿಯೊಬ್ಬನ ಫೋನ್‌ನಲ್ಲಿ ಸಚಿನ್ ಮೊಟ್ಟೆಮನೆ ಹೆಸರು ಕಂಡುಬಂದಿದ್ದರಿಂದ ಆಂಧ್ರ ಪೊಲೀಸರು ಸಚಿನನ್ನು ವಿಚಾರಣೆಗೆ ಕರೆದೊಯ್ಯಲು ಬಂದಿದ್ದರು.



ಮೇ 20ರಿಂದ ಸಾರಿಗೆ ನೌಕರರ ಮುಷ್ಕರ

ರಾಜ್ಯಾದ್ಯಂತ ಬಸ್ ಸಂಚಾರ ಸ್ಥಗಿತ ಸಾಧ್ಯತೆ

■ **ವಿಕ ಸುದ್ದಿಲೋಕ** ಬೆಂಗಳೂರು

ವೇತನ ಪರಿಷ್ಕರಣೆ, ಹಿಂಬಾಕಿ ಪಾವತಿ ಸೇರಿದಂತೆ ಸಾರಿಗೆ ನೌಕರರ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಜಂಟಿ ಕ್ರಿಯಾ ಸಮಿತಿ ಕರೆ ನೀಡಿದೆ.

ಮೇ 20ರಂದು ಬೆಳಗ್ಗೆ 6ರಿಂದಲೇ ಬಿಎಂಟಿಸಿ, ಕೆಎಸ್ಆರ್‌ಟಿಸಿ, ವಾಯವ್ಯ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನೌಕರರು ಬಸ್‌ಗಳನ್ನು ರಸ್ತೆಗಿಳಿಸದಿರಲು ನಿರ್ಧರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಬಸ್ ಸಂಚಾರ ಸ್ಥಗಿತಗೊಳ್ಳುವ ಸಾಧ್ಯತೆಗಳಿವೆ.

''2024ರ ಜನವರಿಯಿಂದ ಅನ್ವಯವಾಗುವಂತೆ ನೌಕರರ ವೇತನ ಪರಿಷ್ಕರಿಸಬೇಕು. ಶೇ.25ರಷ್ಟು ವೇತನ ಹೆಚ್ಚಿಸಬೇಕು. ಏಕಕಾಲದಲ್ಲಿ ಹಿಂಬಾಕಿ ಪಾವತಿ ಸೇರಿದಂತೆ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಸಚಿವರಿಗೆ ಮನವಿ ಮಾಡಲಾಗಿತ್ತು. ಅವರು ಶೇ.25ರ ಬದಲಿಗೆ ಶೇ. 7ರಷ್ಟು ವೇತನ ಹೆಚ್ಚಳವನ್ನು 2025ರ ಏ.1ರಿಂದ ಅನ್ವಯವಾಗುವಂತೆ ಜಾರಿಗೊಳಿಸುವುದಾಗಿ ಹೇಳಿದ್ದರು. ಹೀಗಾಗಿ, ಏ.28ರಂದು ನಡೆದ ಮಾತುಕತೆ ವಿಫಲವಾಗಿತ್ತು. ಈ ಬೆನ್ನಲ್ಲೇ ಮುಷ್ಕರ ನಡೆಸುವುದಾಗಿ ನೌಕರರು ಎಚ್ಚರಿಕೆ ನೀಡಿದ್ದರು. ಆದರೂ, ಸರಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಮುಷ್ಕರಕ್ಕೆ ಕರೆ ನೀಡಲಾಗಿದೆ,'' ಎಂದು ಕೆಎಸ್ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷೆ ಜ್ಯೋತಿ ಅನಂತ್‌ಸುಬ್ಬರಾವ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

''ಬಾಟಾ ಮತ್ತಿತರ ಭತ್ಯೆಗಳನ್ನು ಹೆಚ್ಚಿಸಬೇಕು. 26 ತಿಂಗಳ 1,272 ಕೋಟಿ ರೂ. ಬಾಕಿ ಹಣವನ್ನು ಒಂದೇ ಕಂತಿನಲ್ಲಿ ಪಾವತಿಸಬೇಕು. ಫಾರಂ-4 ಮತ್ತಿತರ ಬೇಡಿಕೆಗಳನ್ನು ಜಂಟಿ ಕ್ರಿಯಾ ಸಮಿತಿಯೊಂದಿಗೆ ಚರ್ಚಿಸಿ ಒಂದು ತಿಂಗಳಾವಧಿಯಲ್ಲಿ ಬಗೆಹರಿಸಬೇಕು. ಶೇ. 25ರಷ್ಟು ವೇತನವನ್ನು 2024ರ ಜನವರಿಗೆ ಅನ್ವಯಿಸುವಂತೆ ಹೆಚ್ಚಿಸಬೇಕು,'' ಎಂದು ಒತ್ತಾಯಿಸಿದರು.

''ಕೋವಿಡ್ ಕಾಲಘಟ್ಟದಲ್ಲಿ ಮೃತಪಟ್ಟ ನೌಕರರ ಕುಟುಂಬಗಳಿಗೆ ಇನ್ನೂ ಪರಿಹಾರ ನೀಡಿಲ್ಲ, ಈ ಬಗ್ಗೆ ರಾಜ್ಯ ಸರಕಾರಕ್ಕೆ ಸಾಕಷ್ಟು ಬಾರಿ ಮನವಿ ಸಲ್ಲಿಸಲಾಗಿತ್ತು. ಆದರೂ ಪ್ರಯೋಜನವಾಗಿಲ್ಲ. ಹೀಗಾಗಿ ಬಂದ್‌ಗೆ ಕರೆ ನೀಡಲಾಗಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾದರೆ ಅದಕ್ಕೆ ರಾಜ್ಯ ಸರಕಾರವೇ ನೇರ ಹೊಣೆ. ಯಾವುದೇ ಕಾರಣಕ್ಕೂ ಸಾರಿಗೆ ನೌಕರರು ಜವಾಬ್ದಾರರಲ್ಲ,'' ಎಂದು ಹೇಳಿದರು.

ಕೆಎಸ್ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯಭಾಸ್ಕರ್, ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾಮಂಡಳಿಯ ಮಹಾ ಪ್ರಧಾನ ಕಾರ್ಯದರ್ಶಿ ಬಿ.ಜಯದೇವರಾಜೇ ಅರಸು, ಎನ್.ಆರ್.ದೇವರಾಜೇ ಅರಸು, ರಾಜ್ಯ ಸಾರಿಗೆ ನೌಕರರ ಫೆಡರೇಷನ್‌ನ ಎಚ್.ಡಿ.ರೇವಪ್ಪ, ಎಚ್.ಎಸ್.ಮಂಜುನಾಥ ಹಾಜರಿದ್ದರು.

ದೃಶ್ಯಕಲಾ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ

■ **ವಿಕ ಸುದ್ದಿಲೋಕ** ಬೆಂಗಳೂರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಮೈಸೂರಿನ ಚಾಮರಾಜೇಂದ್ರ ಸರಕಾರಿ ದೃಶ್ಯಕಲಾ ಕಾಲೇಜಿನಲ್ಲಿ (ಕಾವಾ) ಖಾಲಿ ಇರುವ ಅತಿಥಿ ಉಪನ್ಯಾಸಕರು ಹಾಗೂ ಸಂಪನ್ಮೂಲ ವ್ಯಕ್ತಿಗಳ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದೆ.

ಅನ್ವಯ ಕಲೆ, ಚಿತ್ರಕಲೆ, ಶಿಲ್ಪಕಲೆ, ಅಚ್ಚುಕಲೆ (ಗ್ರಾಫಿಕ್ಸ್), ಛಾಯಾಚಿತ್ರ ಮತ್ತು ಪತ್ರಿಕೋದ್ಯಮ, ಕಲಾ ಇತಿಹಾಸ, ಕನ್ನಡ, ಇಂಗ್ಲಿಷ್, ಹಿಂದಿ, ಭಾರತೀಯ ಸಂವಿಧಾನ ಹಾಗೂ ಸಂವಿಧಾನದ ಮೌಲ್ಯಗಳು ಹಾಗೂ ಪರಿಸರ ಅಧ್ಯಯನ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಮೇ 15ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಮೇ 19ರಂದು 11 ಗಂಟೆಗೆ ಸಂದರ್ಶನ ನಡೆಯಲಿದೆ.

ಅಭ್ಯರ್ಥಿಯು ಪಿಎಚ್‌ಡಿ, ನೆಟ್, ಸ್ಲೆಟ್, ಎಂ.ಫಿಲ್ ವಿದ್ಯಾರ್ಹತೆ ಹೊಂದಿರಬೇಕು. ಹಿಂದಿನ ವರ್ಷಗಳಲ್ಲಿ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿರಬೇಕು. ಎರಡು ವರ್ಷ ಸ್ನಾತಕೋತ್ತರ ಪದವಿಯಲ್ಲಿ ಗಳಿಸಿರುವ ಒಟ್ಟು ಶೇ.25ರಷ್ಟು ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಅರ್ಜಿ ಸಲ್ಲಿಸಬೇಕಾದ ವಿಳಾಸ: ಚಾಮರಾಜೇಂದ್ರ ಸರಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ, ಮೈಸೂರು.

ತಂತ್ರಜ್ಞಾನ, ನಾವೀನ್ಯತೆ ಪಯಣದಲ್ಲಿ ಕರ್ನಾಟಕ ಮುಂಚೂಣಿ: ಪ್ರಿಯಾಂಕ್

ಬಾಹ್ಯಾಕಾಶ ಶ್ರೇಷ್ಠತಾ ಕೇಂದ್ರ ಅನಾವರಣ

■ **ವಿಕ ಸುದ್ದಿಲೋಕ** ಬೆಂಗಳೂರು

ದೇಶದ ತಂತ್ರಜ್ಞಾನ ಮತ್ತು ನಾವೀನ್ಯತೆಯ ಪಯಣದಲ್ಲಿ ಕರ್ನಾಟಕ ನಿರಂತರವಾಗಿ ಮುಂಚೂಣಿಯಲ್ಲಿದೆ. ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರದ ಮೂಲಕ ರಾಜ್ಯದ ನಾಯಕತ್ವವನ್ನು ಭವಿಷ್ಯದ ಅತ್ಯಂತ ಮಹತ್ವದ ಕ್ಷೇತ್ರಗಳಲ್ಲಿ ಒಂದಾಗಿರುವ ಬಾಹ್ಯಾಕಾಶ ತಂತ್ರಜ್ಞಾನಕ್ಕೆ ವಿಸ್ತರಿಸುತ್ತಿದ್ದೇವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅಭಿಪ್ರಾಯಪಟ್ಟರು.

ನಗರದಲ್ಲಿ ಸ್ಥಾಪಿಸಲಾಗಿರುವ ರಾಜ್ಯ ಸರಕಾರದ ನೇತೃತ್ವದ ಮೊದಲ ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

''ಸಂಶೋಧನೆಗಳನ್ನು ಮುಂದುವರಿಸುವುದರ ಬಗ್ಗೆ ಮಾತ್ರ ಗಮನ ಕೇಂದ್ರೀಕರಿಸಿಲ್ಲ, ವಾಸ್ತವ ಬದುಕಿಗೆ ನಾವೀನ್ಯತೆ ಪ್ರಯೋಜನಕ್ಕೆ ಬರುವ ರೀತಿಯಲ್ಲಿ, ಆರ್ಥಿಕ ಬೆಳವಣಿಗೆಗೆ ನೆರವಾಗುವ ಮತ್ತು ಉತ್ತಮ ಗುಣಮಟ್ಟದ ಉದ್ಯೋಗಗಳಾಗಿ ಪರಿವರ್ತಿಸಬಹುದಾದ ಪೂರಕ ವ್ಯವಸ್ಥೆ ನಿರ್ಮಾಣ ಮಾಡುವುದಕ್ಕೆ ಗಮನ ಕೇಂದ್ರೀಕರಿಸಲಾಗಿದೆ. ಅಲ್ಲದೇ, ಈ ಕೇಂದ್ರ ಕರ್ನಾಟಕವನ್ನು ಭಾರತದ ಬಾಹ್ಯಾಕಾಶ ಆರ್ಥಿಕತೆಯ ಪ್ರಮುಖ ಚಾಲಕನ ಸ್ಥಾನದಲ್ಲಿ ಇರಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ,'' ಎಂದು ಹೇಳಿದರು.

ಸಮನ್ವಯದ ವೇದಿಕೆಯಾಗಿ ಕಾರ್ಯ: ರಾಜ್ಯದ ಐಟಿ, ಬಿಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ. ಮಂಜುಳಾ ಎನ್. ಮಾತನಾಡಿ, ''ಸರಕಾರ, ಕೈಗಾರಿಕೆ, ನವೋದ್ಯಮಗಳು ಮತ್ತು ಶೈಕ್ಷಣಿಕ ವಲಯಗಳು ಸಮನ್ವಯದ ವೇದಿಕೆಯಾಗಿ ಕಾರ್ಯ ನಿರ್ವಹಿಸುವ ರೀತಿಯಲ್ಲಿ ಈ ಶ್ರೇಷ್ಠತಾ ಕೇಂದ್ರವನ್ನು ವಿನ್ಯಾಸಗೊಳಿಸಲಾಗಿದೆ. ಕುಶಲ ಮಾನವ ಸಂಪನ್ಮೂಲ ಅಭಿವೃದ್ಧಿ, ಅನ್ವಯಿಕ ಸಂಶೋಧನೆ ಮತ್ತು ಪೂರಕ ವ್ಯವಸ್ಥೆಯ ನಿರ್ಮಾಣದ ಮೇಲೆ ಗಮನ ಕೇಂದ್ರೀಕರಿಸುವ ಮೂಲಕ ಕಾರ್ಯಸಾಧ್ಯವಾದ ಮತ್ತು ಸುಸ್ಥಿರ ಸ್ವರೂಪದ ನಾವೀನ್ಯತೆಯ ಅವಕಾಶಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದ್ದೇವೆ,'' ಎಂದರು.

''ಈ ಉಪಕ್ರಮವು ಡೀಪ್‌ಟೆಕ್ ವಲಯಗಳು ಕಾರ್ಯನಿರ್ವಹಿಸಲು ಮತ್ತು ಜಾಗತಿಕ ಬಾಹ್ಯಾಕಾಶ ವಲಯದಲ್ಲಿ ಭಾರತದ ಸ್ಥಾನವನ್ನು ಬಲಪಡಿಸಲು ಕರ್ನಾಟಕದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ,'' ಎಂದು ಅವರು ಅಭಿಪ್ರಾಯಪಟ್ಟರು.

ಜಾಗತಿಕ ಕೇಂದ್ರವಾಗಿ ಅಭಿವೃದ್ಧಿ: ''ಬಾಹ್ಯಾಕಾಶ ತಂತ್ರಜ್ಞಾನ ಸಮಾಜದ ಒಳಿತಿಗೆ ಬಳಸಿಕೊಳ್ಳುವ ಮುಖ್ಯ ಆಶಯ ಆಧರಿಸಿ, ವಿವಿಧ ಕ್ಷೇತ್ರಗಳ ಸವಾಲುಗಳನ್ನು ಪರಿಹರಿಸುವುದು ನಮ್ಮ ಉದ್ದೇಶವಾಗಿದೆ. ಕೃಷಿ, ಹವಾಮಾನ, ನೈಸರ್ಗಿಕ ವಿಪತ್ತು ನಿರ್ವಹಣೆ, ಸಂವಹನ, ಔಷಧ, ಜೀವವಿಜ್ಞಾನ ಮತ್ತು ರಾಷ್ಟ್ರೀಯ ಸುರಕ್ಷತೆಯಂತಹ ಕ್ಷೇತ್ರಗಳಲ್ಲಿನ ಸವಾಲುಗಳನ್ನು ಎದುರಿಸಲು ನಾವು ಬಾಹ್ಯಾಕಾಶ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ಗುರಿ ಹಾಕಿಕೊಂಡಿದ್ದೇವೆ. ಪ್ರತಿಭಾನ್ವಿತರ ಲಭ್ಯತೆ, ನಾವೀನ್ಯತೆ, ನವೋದ್ಯಮಗಳಿಗೆ ನೆರವು ವ್ಯವಸ್ಥೆ ಮತ್ತು ಸಹಯೋಗದ ಮೂಲಕ ಕರ್ನಾಟಕವನ್ನು ಬಾಹ್ಯಾಕಾಶ ತಂತ್ರಜ್ಞಾನದ ಜಾಗತಿಕ ಕೇಂದ್ರವಾಗಿ ಅಭಿವೃದ್ಧಿಪಡಿಸುವುದು ನಮ್ಮ ಆಶಯವಾಗಿದೆ'' ಎಂದು ಸ್ಪೇಸ್‌ಟೆಕ್ ಫೌಂಡೇಷನ್ ಸಿಒಇ ನಿರ್ದೇಶಕ ಗೋವಿಂದರಾಜನ್ ಹೇಳಿದರು.

ಎಸ್‌ಐಎ ಇಂಡಿಯಾದ ಮಹಾನಿರ್ದೇಶಕ ಅನಿಲ್ ಪ್ರಕಾಶ್ ಮಾತನಾಡಿ, ''ಬಾಹ್ಯಾಕಾಶ ತಂತ್ರಜ್ಞಾನಗಳು ವಿಭಿನ್ನ ವಲಯಗಳಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿದ್ದಂತೆ ಕಾರ್ಯಸಾಧ್ಯವಾದ ಮತ್ತು ವಿಶ್ವಾಸಾರ್ಹ ಪರಿಹಾರಗಳಿಗೆ ಬೇಡಿಕೆ ತ್ವರಿತವಾಗಿ ಹೆಚ್ಚುತ್ತಿದೆ. ದೊಡ್ಡ ಪ್ರಮಾಣದಲ್ಲಿ ನಾವೀನ್ಯತೆ ಬೆಂಬಲಿಸುವ ಮಹತ್ವದ ಸಾಂಸ್ಥಿಕ ಹೆಜ್ಜೆಯನ್ನು ಈ ಕೇಂದ್ರವು ಪ್ರತಿನಿಧಿಸುತ್ತದೆ. ಈ ಪ್ರಯತ್ನದಲ್ಲಿ ಪಾಲುದಾರರಾಗಲು ಎಸ್‌ಐಎ-ಇಂಡಿಯಾ ಹೆಮ್ಮೆಪಡುತ್ತದೆ. ಈ ಉಪಕ್ರಮದ ದೀರ್ಘಕಾಲೀನ ಯಶಸ್ಸಿಗೆ ಬದ್ಧವಾಗಿದೆ,'' ಎಂದರು.

ಇದೇ ವೇಳೆ ಶ್ರೇಷ್ಠತಾ ಕೇಂದ್ರದ ಕಾರ್ಯವಿಧಾನ ಬಲಪಡಿಸುವುದಕ್ಕೆ ನೆರವಾಗಲು ಅಮೆರಿಕದ ಹೆಲೋಜೆನ್ ಕಾರ್ಪೊರೇಷನ್ ಸೇರಿದಂತೆ ಐದು ಒಪ್ಪಂದಗಳಿಗೆ ಅಂಕಿತ ಹಾಕಲಾಯಿತು. ಎಸ್‌ಐಎ-ಇಂಡಿಯಾ ಅಧ್ಯಕ್ಷ ಸುಬ್ಬರಾವ್ ಪವುಲೂರಿ, ಸರಕಾರದ ಉನ್ನತಾಧಿಕಾರಿಗಳು, ಉದ್ಯಮ ಮುಖಂಡರು ಉಪಸ್ಥಿತರಿದ್ದರು.

ಎಸ್ಸೆಸ್ಸೆಲ್ಸಿ ಪಾಸಾದವರಿಗೂ ಪ್ಯಾರಾ ಮೆಡಿಕಲ್ ಸೇರಲು ಅವಕಾಶ

■ **ವಿಕ ಸುದ್ದಿಲೋಕ** ಬೆಂಗಳೂರು

2026-27ನೇ ಶೈಕ್ಷಣಿಕ ವರ್ಷದಲ್ಲಿ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅರೆ ವೈದ್ಯಕೀಯ (ಪ್ಯಾರಾ ಮೆಡಿಕಲ್) ಸಂಸ್ಥೆಗಳಲ್ಲಿ ಕೆಲವು ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಿ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ರಾಜ್ಯದಲ್ಲಿ ಸುಮಾರು 640 ಕಾಲೇಜುಗಳನ್ನು ಹೊಂದಿರುವ ಕರ್ನಾಟಕ ಅರೆ ವೈದ್ಯಕೀಯ ಸಂಸ್ಥೆಗಳ ನಿರ್ವಹಣಾ ಸಂಘ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ಪೀಠ ಈ ಮಧ್ಯಂತರ ಆದೇಶ ನೀಡಿದೆ.

2026-27ರ ಶೈಕ್ಷಣಿಕ ವರ್ಷದಲ್ಲಿ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ಯಾರಾ ಮೆಡಿಕಲ್‌ನ ಕೋರ್ಸ್‌ಗಳಾದ ಪ್ರಯೋಗಾಲಯ ತಂತ್ರಜ್ಞಾನ, ಅಪ್ಟೋಮೆಟ್ರಿ ತಂತ್ರಜ್ಞಾನ, ಡಿಪ್ಲೊಮಾ ಇನ್ ಹೆಲ್ತ್ ಇನ್‌ಸ್ಪೆಕ್ಟರ್ ಮತ್ತು ಇಮೇಜಿಂಗ್ ತಂತ್ರಜ್ಞಾನ ಸೇರಿ ವಿವಿಧ ಕೋರ್ಸ್‌ಗಳಿಗೆ ಸೇರಿಸಿಕೊಳ್ಳಬಹುದಾಗಿದೆ ಎಂದು ಆದೇಶಿಸಿದೆ.

ಅರ್ಜಿದಾರರ ಪರ ವಕೀಲರು, ''ರಾಷ್ಟ್ರೀಯ ಆರೋಗ್ಯ ವೃತ್ತಿಪರರ ಸಂಬಂಧ ಕಾಯಿದೆ 2021ರಲ್ಲಿ (ಎನ್‌ಸಿಎಎಚ್‌ಪಿ) ಕಾಯಿದೆ ಜಾರಿ ಮಾಡಿದ್ದು, ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಪದವಿ ಪೂರ್ವ ಶಿಕ್ಷಣದಲ್ಲಿ ವಿಜ್ಞಾನ ವಿಭಾಗದಲ್ಲಿ ಅಧ್ಯಯನ ಮಾಡಿರಬೇಕು ಎಂದು ತಿಳಿಸಿತ್ತು. 2021ರಲ್ಲಿ ಕಾಯಿದೆ ಜಾರಿ ಮಾಡಿದ್ದರೂ, ಅದನ್ನು ಹಂತ ಹಂತವಾಗಿ ಅನುಷ್ಠಾನ ಮಾಡಲಾಗುತ್ತಿತ್ತು. ಈವರೆಗೂ ಪಠ್ಯಕ್ರಮದಲ್ಲಿ ಬದಲಾವಣೆ ಮಾಡಲಾಗುತ್ತಿತ್ತು. ಪ್ರಸಕ್ತ ವರ್ಷದಿಂದ ಪ್ಯಾರಾ ಮೆಡಿಕಲ್‌ಗೆ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾಗಿರಬೇಕೆಂದು ತಿಳಿಸಲಾಗಿದೆ. ಆದ್ದರಿಂದ ಈ ಹಿಂದಿನ ನಿಯಮಗಳಂತೆ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೂ ಅವಕಾಶ ನೀಡಬೇಕು,'' ಎಂದು ನ್ಯಾಯಪೀಠವನ್ನು ಕೋರಿದರು.

ನಕಲಿ ನೇಮಕ ಆಯ್ಕೆ ಪಟ್ಟಿ ನಂಬಬೇಡಿ

ಬೆಂಗಳೂರು: ಆರೋಗ್ಯ ಇಲಾಖೆಯ ವಿಶೇಷ ನೇಮಕಾತಿ ಸಮಿತಿ ಹೆಸರಲ್ಲಿ ಪ್ರಥಮ, ದ್ವಿತೀಯ ದರ್ಜೆ ಸಹಾಯಕರ ನೇಮಕಾತಿಯ ತಾತ್ಕಾಲಿಕ ಆಯ್ಕೆಯ ನಕಲಿ ಪಟ್ಟಿಯು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇದನ್ನು ಅಭ್ಯರ್ಥಿಗಳು ನಂಬಬಾರದು ಎಂದು ಇಲಾಖೆಯು ಸೂಚಿಸಿದೆ.

ಇಲಾಖೆಯಿಂದ ಕಲ್ಯಾಣ ಕರ್ನಾಟಕ ಮತ್ತು ಉಳಿದ ವೃಂದದ ಅರೆವೈದ್ಯಕೀಯ ಹುದ್ದೆಗಳ ನೇರ ನೇಮಕಾತಿಗಾಗಿ 2022ರಲ್ಲೇ ಅಧಿಸೂಚನೆ ಹೊರಡಿಸಿ ನೇಮಕಾತಿ ಆದೇಶಗಳನ್ನು ಹೊರಡಿಸಲಾಗಿದೆ. ವಾಟ್ಸ್ಆ್ಯಪ್‌ನಲ್ಲಿ ಹರಿಬಿಟ್ಟಿರುವ ಪ್ರಥಮ, ದ್ವಿತೀಯ ದರ್ಜೆ ಸಹಾಯಕರ ನೇಮಕಾತಿ ತಾತ್ಕಾಲಿಕ ಆಯ್ಕೆ ಪಟ್ಟಿ, ಅದಕ್ಕೆ ಆಕ್ಷೇಪಣೆ ಸಲ್ಲಿಸುವಂತೆ ಹರಿದಾಡುತ್ತಿರುವ ಸುತ್ತೋಲೆಯು ನಕಲಿ ಎಂದು ಇಲಾಖೆಯು ತಿಳಿಸಿದೆ.

ತ್ವರಿತ ವಿಪತ್ತು ಮುನ್ನೆಚ್ಚರಿಕೆ ಸೇವೆ

ವಿಕ ಜಾಣ ತಾಣ

ಶನಿವಾರ ದೇಶಾದ್ಯಂತ ಮೊಬೈಲ್ ಬಳಕೆದಾರರಿಗೆ ವಿಪತ್ತು ಮುನ್ನೆಚ್ಚರಿಕಾ ಸೇವೆ (Instant Disaster Warning Service) ಪರಿಣಾಮಕಾರಿಯಾಗಿ ಎಚ್ಚರಿಕೆಯ ಸಂದೇಶವನ್ನು ರವಾನಿಸಲಾಗಿತ್ತು. ತುರ್ತು ಸಂದರ್ಭಗಳಲ್ಲಿ ಕೋಟ್ಯಂತರ ಜನರಿಗೆ ಏಕಕಾಲದಲ್ಲಿ ಮಾಹಿತಿ ಅಥವಾ ಎಚ್ಚರಿಕೆಯ ಸಂದೇಶ ರವಾನಿಸಿ ಅವರ ಜೀವ ರಕ್ಷಿಸುವ ವ್ಯವಸ್ಥೆ ಇದಾಗಿದೆ.

ಭೂಕಂಪ, ಪ್ರವಾಹ ಅಥವಾ ಚಂಡಮಾರುತದಂತಹ ವಿಪತ್ತುಗಳು ಸಂಭವಿಸಿದಾಗ ಅಥವಾ ಸಂಭವಿಸುವುದಕ್ಕೂ ಮುನ್ನ, ಈ ಸೇವೆಯು ಮೊಬೈಲ್ ಬಳಕೆದಾರರಿಗೆ ಎಚ್ಚರಿಕೆ ನೀಡುತ್ತದೆ. ಈ ವೇಳೆ ಫೋನ್ 'ಸೈಲೆಂಟ್' ಮೋಡ್‌ನಲ್ಲಿದ್ದರೂ ದೊಡ್ಡ ಶಬ್ದ ಮತ್ತು ವೈಬ್ರೇಷನ್ ಅನ್ನು ಹೊರಡಿಸುತ್ತದೆ. ಇದು ಜನರು ತಕ್ಷಣವೇ ಸುರಕ್ಷಿತ ಸ್ಥಳಕ್ಕೆ ತೆರಳಲು ಮತ್ತು ಅಗತ್ಯ ಕ್ರಮ ಕೈಗೊಳ್ಳಲು ಸಮಯಾವಕಾಶ ನೀಡುತ್ತದೆ. ಈ ನೂತನ ವಿಪತ್ತು ಮುನ್ನೆಚ್ಚರಿಕಾ ವ್ಯವಸ್ಥೆಯನ್ನು ಅಂತಾರಾಷ್ಟ್ರೀಯ ಮಾನದಂಡದ ಅನುಸಾರ 'ಸಚೇತ್' ಎಂಬ ವೇದಿಕೆಯಡಿ ರೂಪಿಸಲಾಗಿದೆ. 'ಸಚೇತ್' ಅಭಿವೃದ್ಧಿಯಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ದೂರಸಂಪರ್ಕ ಇಲಾಖೆ ಮತ್ತು ಸಿ-ಡಾಟ್ ಸಂಸ್ಥೆಗಳು ಕೈಜೋಡಿಸಿವೆ.

ಈ ಹಿಂದಿನ ಎಸ್ಎಂಎಸ್ ಆಧಾರಿತ ಮುನ್ನೆಚ್ಚರಿಕಾ ವ್ಯವಸ್ಥೆಯಲ್ಲಿ ಸಂದೇಶವು ಬಳಕೆದಾರರಿಂದ ಬಳಕೆದಾರರಿಗೆ ಹೋಗುತ್ತದೆ. ಈ ವೇಳೆ ನೆಟ್‌ವರ್ಕ್ ದಟ್ಟಣೆ ಇದ್ದರೆ ತಡವೂ ಆಗಬಹುದು. ಆದರೆ 'ಸಚೇತ್', ಸೆಲ್ ಬ್ರಾಡ್‌ಕಾಸ್ಟ್ ತಂತ್ರಜ್ಞಾನ ಆಧರಿಸಿ ಒಂದು ನಿರ್ದಿಷ್ಟ ಪ್ರದೇಶದ ಎಲ್ಲ ಮೊಬೈಲ್‌ಗಳಿಗೆ ಏಕಕಾಲದಲ್ಲಿ ಸಂದೇಶ ತಲುಪಿಸುತ್ತದೆ. ಮೊಬೈಲ್ ಸಂಖ್ಯೆಯ ಅಗತ್ಯ ಇಲ್ಲದಿರುವುದರಿಂದ ನೆಟ್‌ವರ್ಕ್ ಜಾಮ್ ಆಗಿದ್ದರೂ ನೂತನ ವ್ಯವಸ್ಥೆ ಕೆಲಸ ಮಾಡುತ್ತದೆ. ಮುನ್ನೆಚ್ಚರಿಕೆ ಸಂದೇಶವು ಫೋನ್ ಪರದೆಯ ಮೇಲೆ ನೇರವಾಗಿ ಮೂಡುತ್ತದೆ. ಬಳಕೆದಾರರು ಸಂದೇಶಕ್ಕೆ ಪ್ರತಿಕ್ರಿಯಿಸುವ ತನಕವೂ ಮೊಬೈಲ್ ವೈಬ್ರೇಟ್ ಆಗುತ್ತಾ ಸದ್ದು ಮಾಡುತ್ತಲೇ ಇರುತ್ತದೆ. ಇದರಿಂದ ಸಂದೇಶ ನಿರ್ಲಕ್ಷ್ಯಕ್ಕೆ ಒಳಗಾಗುವ ಸಾಧ್ಯತೆ ತುಂಬಾ ಕಡಿಮೆ.

ನಾಳೆ ಎರಡು ಕ್ಷೇತ್ರಗಳ ಮತ ಎಣಿಕೆ | 11 ಗಂಟೆಗೆ ಟ್ರೆಂಡ್ ಬಯಲು | ಮಧ್ಯಾಹ್ನದ ಹೊತ್ತಿಗೆ ಪೂರ್ಣ ಚಿತ್ರಣ

ಯಾರಿಗೆ ಒಲಿಯಲಿದೆ ವಿಜಯಲಕ್ಷ್ಮಿ?

ಈಗ ಫಲಿತಾಂಶ ಕುತೂಹಲ | ಬೆಳಗ್ಗೆ 8ಕ್ಕೆ ಪೋಸ್ಟಲ್ ವೋಟ್‌ನ ಎಣಿಕೆ | 8.30ರಿಂದ ಮತಯಂತ್ರಗಳ ಮತ ಎಣಿಕೆ ಆರಂಭ | ಮಧ್ಯಾಹ್ನ 12 ಗಂಟೆ ಹೊತ್ತಿಗೆ ಫಲಿತಾಂಶದ ಪೂರ್ಣ ಚಿತ್ರಣ

■ **ಯಳನಾಡು ಮಂಜು** ದಾವಣಗೆರೆ
manjunath.lokanath@timesofindia.com

ತೀವ್ರ ಜಿದ್ದಾಜಿದ್ದಿನಿಂದ ನಡೆದ ದಾವಣಗೆರೆ ದಕ್ಷಿಣ ಕ್ಷೇತ್ರ ಮತ್ತು ಬಾಗಲಕೋಟೆ ಉಪಚುನಾವಣೆ ಫಲಿತಾಂಶದ ಬಗ್ಗೆ ಜನರ ಕುತೂಹಲ ನೂರ್ಮಡಿಯಾಗಿತ್ತು. ಈಗ ಮತದಾನ ನಡೆದು 25 ದಿನಗಳ ನಂತರ ಫಲಿತಾಂಶ ಹೊರಬೀಳಲು ಕ್ಷಣಗಣನೆ ಆರಂಭವಾಗಿದ್ದು, ಯಾರಿಗೆ ಒಲಿಯಲಿದೆ ವಿಜಯಲಕ್ಷ್ಮಿ ಎಂಬುದು ತಿಳಿಯಲು ಇನ್ನು ಕೆಲವೇ ಗಂಟೆ ಕಾಯಬೇಕಿದೆ.

ದಾವಣಗೆರೆ ನೇತಾರ ಎಂದೇ ಹೆಸರಾಗಿದ್ದ ಶಾಮನೂರು ಶಿವಶಂಕರಪ್ಪನಿಧನದ ನಂತರ ಆ ಸ್ಥಾನಕ್ಕೆ ಇದುವರೆಗಿನ ಚುನಾವಣೆಗಳಲ್ಲಿ ಎಸ್ಎಸ್ ಇರುವವರೆಗೂ ಅನಾಯಾಸವಾಗಿ ಕಾಂಗ್ರೆಸ್ ಗೆದ್ದು ಬರುತ್ತಿತ್ತು, ಕೋಟೆಯನ್ನೇ ಕಟ್ಟಲಾಗಿತ್ತು. ಈ ಕೋಟೆಯನ್ನು ಉಳಿಸಿಕೊಳ್ಳಲು ನಾನಾ ಕಸರತ್ತು ನಡೆಸಿ ಮೊಮ್ಮಗ ಸಮರ್ಥ್ ಶಾಮನೂರು ಅವರಿಗೆ ಟಿಕೆಟ್ ಪಡೆಯಲು ಕುಟುಂಬ ಯಶಸ್ವಿಯಾಗಿತ್ತು.

ಇನ್ನೊಂದೆಡೆ ಈ ಕ್ಷೇತ್ರ ಹುಟ್ಟಿದ್ದಾಗಿನಿಂದ ಖಾತೆಯನ್ನೇ ತೆರೆಯದ ಬಿಜೆಪಿ, ಸಾಮಾನ್ಯ ಕ್ಷೇತ್ರದಲ್ಲಿ ಎಸ್‌ಸಿ ಸಮುದಾಯಕ್ಕೆ ಸೇರಿದ ಸಾಮಾನ್ಯ ವ್ಯಕ್ತಿಯನ್ನು ಕಣಕ್ಕಿಳಿಸಿ ಪ್ರಯೋಗಕ್ಕೆ ಇಳಿದಿದೆ. ಹಿಂದುಳಿದ ವರ್ಗಗಳ ಮತಗಳ ಮೇಲೆ ಕಣ್ಣಿಟ್ಟು ಕೋಟೆಯಲ್ಲಿ ಕಮಲ ಅರಳಿಸಲು ನಡೆಸಿದ ಪ್ರಯೋಗ ದೊಡ್ಡ ಸದ್ದು ಮಾಡಿ, ಮೊದಲ ಬಾರಿ ಕಾಂಗ್ರೆಸ್ ಪಕ್ಷವನ್ನು ಮತ್ತು ಅಭ್ಯರ್ಥಿಯನ್ನು ತುದಿಗಾಲ ಮೇಲೆ ನಿಲ್ಲಿಸಿತ್ತು.

ಬೆವರು ಬಸಿದ ಕಾಂಗ್ರೆಸ್: 'ಮುಸ್ಲಿಂ, ಹಿಂದುಳಿದ ವರ್ಗಗಳಿಗೆ ಕಾಂಗ್ರೆಸ್ ಟಿಕೆಟ್ ನೀಡಬೇಕು' ಎಂಬ ಒತ್ತಾಯ ಇದೇ ಮೊದಲ ಬಾರಿ ಕಾಂಗ್ರೆಸ್‌ನಲ್ಲಿ ನಡೆದು, ಇದು ಬಂಡಾಯದ ಕಹಳೆಯೂದಿಸಲಾಗಿತ್ತು. ನಂತರ ವರಿಷ್ಠರ ಸಂಧಾನದಿಂದ ಮುಸ್ಲಿಂ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಕಣದಿಂದ ಹಿಂದೆ ಸರಿದರು. ಆದರೆ ಎಸ್‌ಡಿಪಿಐ ಸೇರಿ ಇನ್ನುಳಿದ ಮುಸ್ಲಿಂ ಅಭ್ಯರ್ಥಿಗಳು ಕಣದಲ್ಲಿ ಉಳಿದರು. ಕಾಂಗ್ರೆಸ್‌ನ ಶಕ್ತಿಯಾದ ಮುಸ್ಲಿಂ ಮತಗಳು ಇಲ್ಲಿ ಹೆಚ್ಚಿದ್ದು ಈ ಮತಗಳು ವಿಭಜನೆಯಾದರೆ, ಹಿಂದುಳಿದ ವರ್ಗಗಳು ಒಗ್ಗೂಡಿದರೆ ಕಾಂಗ್ರೆಸ್ ಕಷ್ಟ ಆಗಲಿದೆ ಎಂಬ ಲೆಕ್ಕಾಚಾರ ನಡೆದಿತ್ತು.

ಸಮರ್ಥ ಶ್ಯಾಮನೂರು | ಶ್ರೀನಿವಾಸ್ ದಾಸಕರಿಯಪ್ಪ

ಕುತೂಹಲ ಹುಟ್ಟಿಸಿದ ಉಚ್ಚಾಟನೆ ಪರ್ವ

ಕುತೂಹಲ ಹುಟ್ಟಿಸಿದ ಉಚ್ಚಾಟನೆ ಪರ್ವ ಫಲಿತಾಂಶದ ಹೊರ ಬೀಳುವ ಮುನ್ನವೇ ಪಕ್ಷ ವಿರೋಧಿ ಚಟುವಟಿಕೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ನಡೆದ ಮುಸ್ಲಿಂ ನಾಯಕರ ಉಚ್ಚಾಟನೆ ಪರ್ವವು ಫಲಿತಾಂಶದ ಬಗ್ಗೆ ಇನ್ನಷ್ಟು ಕುತೂಹಲ ಹೆಚ್ಚಿಸಿದೆ. ಈ ಉಚ್ಚಾಟನೆ ಏನನ್ನು ಸೂಚಿಸುತ್ತದೆ, ಕಾಂಗ್ರೆಸ್ ಪಕ್ಷಕ್ಕೆ ಅವ್ಯಕ್ತ ಭೀತಿ ಕಾಡುತ್ತಿದೆಯೇ ಎಂಬ ಪ್ರಶ್ನೆಯನ್ನೂ ಹುಟ್ಟುಹಾಕಿದೆ.

ಹಾಗಾಗಿ ಇದೇ ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷ ಕಣದಲ್ಲಿ ಬೆವರು ಹರಿಸುವ ಸ್ಥಿತಿ ನಿರ್ಮಾಣ ಆಗಿತ್ತು. ರಾಜ್ಯದ ಸಿಎಂ, ಡಿಸಿಎಂ, ಸಚಿವರು, ಶಾಸಕರು ಹೀಗೆ ಅರ್ಧ ಸರಕಾರವೇ ಇಲ್ಲಿ ತಳವೂರಿ ಕೆಲಸ ಮಾಡಿತ್ತು. ಇನ್ನೊಂದೆಡೆ ಬಿಜೆಪಿಯಲ್ಲೂ ಮಾಜಿ ಸಿಎಂಗಳು, ಕೇಂದ್ರದ ಮಂತ್ರಿಗಳು ರಾಜ್ಯ ನಾಯಕರು ಕೂಡ ಪ್ರಚಾರ ಮಾಡಿದ್ದರು. ಎರಡೂ ಪಕ್ಷಗಳ ನಾಯಕರು ಹರಿಸಿದ ಬೆವರಿನ ಫಲ ಹೊರ ಬೀಳಲು ಕ್ಷಣ ಗಣನೆ ಆರಂಭವಾಗಿ ಕುತೂಹಲ ಹೆಚ್ಚಿದೆ. ಹಾಗಾಗಿಯೇ ಗೆಲುವ ಸೋಲಿನ ಬೆಟ್ಟಿಂಗ್ ಸದ್ದು ಕೂಡ ಜೋರಿತ್ತು.

ಕಾಂಗ್ರೆಸ್ ವೋಟ್ ಬ್ಯಾಂಕ್ ಆದ ಮುಸ್ಲಿಂ ಮತಗಳು ಹೆಚ್ಚು ವಿಭಜನೆಯಾಗಿದ್ದರೆ ಇಲ್ಲಿ ಮೊದಲ ಬಾರಿ ಬಿಜೆಪಿ ಖಾತೆ ತೆರೆಯಲು ಅವಕಾಶ ಆಗಲಿದೆ. ಈ ಲೆಕ್ಕಾಚಾರ ತಪ್ಪಿದರೆ ಎಂದಿನಂತೆ ಕಾಂಗ್ರೆಸ್ ವಿಜಯದ ಮಾಲೆ ಧರಿಸಲಿದೆ. ಮತದಾರರ ತೀರ್ಮಾನಕ್ಕೆ ಸೋಮವಾರ ಮಧ್ಯಾಹ್ನದವರೆಗೂ ಕಾಯಬೇಕಿದೆ.

ಮೂರು ಹಂತದ ಭದ್ರತೆ: ಮತ ಎಣಿಕೆ ಕೇಂದ್ರದ ಸುತ್ತಲಿನ 100 ಮೀಟರ್ ಪ್ರದೇಶವನ್ನು 'ವಾಹನ ಮುಕ್ತ ವಲಯ' ಎಂದು ಘೋಷಿಸಲಾಗಿದೆ. ಎಣಿಕೆ ಕೇಂದ್ರದ ಗೇಟ್‌ನಿಂದ ಸುತ್ತಲಿನ 100 ಮೀಟರ್ ವ್ಯಾಪ್ತಿಯನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ.

ಪ್ರತಿಷ್ಠೆ, ಪ್ರಾಬಲ್ಯ, ಗೆಲುವು ಯಾರಿಗೆ?

ಬಾಗಲಕೋಟೆ: ಬೈ ಎಲೆಕ್ಷನ್ ಮೂಲಕವೇ ಬಾಗಲಕೋಟೆ ಕ್ಷೇತ್ರವನ್ನು ಬಿಜೆಪಿಯ ಭದ್ರಕೋಟೆಯನ್ನಾಗಿ ಮಾಡಿಕೊಂಡಿದ್ದ ಕಮಲ ಪಕ್ಷ ಈಗ ಮತ್ತೆ ಬೈ ಎಲೆಕ್ಷನ್ ಮೂಲಕವೇ ಕೋಟೆ ವಶಪಡಿಸಿಕೊಳ್ಳುತ್ತಾ? ಅಥವಾ ತಮ್ಮ ತಂದೆಯ ಅಕಾಲಿಕ ನಿಧನದಿಂದ ತೆರವಾದ ಶಾಸಕ ಸ್ಥಾನವನ್ನು ತಮ್ಮದಾಗಿಸಿಕೊಂಡು, ಪುತ್ರ, ಕಾಂಗ್ರೆಸ್‌ನ ಉಮೇಶ ಮೇಟಿ ತುಂಬುವರೇ? ಎಂಬ ಕುತೂಹಲಕ್ಕೆ ತೆರೆಬೀಳಲು ಕೆಲವೇ ಗಂಟೆಗಳ ಬಾಕಿ ಉಳಿದಿದೆ.

ಶಾಸಕರಾಗಿದ್ದ ಎಚ್.ವೈ.ಮೇಟಿ ಅವರ ನಿಧನದಿಂದ ತೆರವಾದ ಸ್ಥಾನಕ್ಕೆ ಏ.9 ರಂದೇ ಮತದಾನ ನಡೆದಿತ್ತು. ಆದರೆ ಪಂಚ ರಾಜ್ಯಗಳ ಚುನಾವಣೆ ಹಿನ್ನೆಲೆಯಲ್ಲಿ ಫಲಿತಾಂಶ ಮೇ 4 ರಂದು ಹೊರಬೀಳಲಿದೆ.

ಉಪಚುನಾವಣೆಯಲ್ಲಿ ಮೇಟಿ ಅವರ ಕುಟುಂಬಕ್ಕೆ ಕಾಂಗ್ರೆಸ್‌ನಿಂದ ಟಿಕೆಟ್ ನೀಡಲಾಗಿತ್ತು. ಪಕ್ಷದ ಅಭ್ಯರ್ಥಿ ಗೆಲ್ಲಲೇಬೇಕು ಎಂದು ಪಣ ತೊಟ್ಟು ಸಿಎಂ ಸಿದ್ದರಾಮಯ್ಯ ಕ್ಷೇತ್ರದಲ್ಲಿ ವ್ಯಾಪಕ ಪ್ರಚಾರ ನಡೆಸಿದ್ದರು. ಸಚಿವರ ದಂಡೇ ಬಾಗಲಕೋಟೆಗೆ ಬಂದಿಳಿದಿತ್ತು. ಜತೆಗೆ ಪ್ರಬಲವಾಗಿರುವ ಬಿಜೆಪಿ ಮಣಿಸಲು ನಾನಾ ತಂತ್ರಗಾರಿಕೆಯನ್ನೂ ಹೆಣೆಯಲಾಗಿತ್ತು. ತಮ್ಮ ಭದ್ರಕೋಟೆಯಲ್ಲಿ ಗೆಲ್ಲಲೇಬೇಕು ಎಂಬ ಛಲದೊಂದಿಗೆ ಬಿಜೆಪಿ ತನ್ನೆಲ್ಲ ತಂತ್ರಗಾರಿಕೆಯನ್ನು ಬಳಸಿ ಹೋರಾಟ ನಡೆಸಿತ್ತು. ಮಾಜಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಿಎಂ ಯಡಿಯೂರಪ್ಪ, ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಮಾಜಿ ಸಿಎಂಗಳು, ಕೇಂದ್ರ ಮಂತ್ರಿಗಳು ಪ್ರಚಾರದಲ್ಲಿ ತೊಡಗಿದ್ದರು.

ಯಾರಿಗೆ ಪ್ಲಸ್? ಆಡಳಿತಾರೂಢ ಕಾಂಗ್ರೆಸ್ ಪಾಲಿಗೆ ಉಪಚುನಾವಣೆ ಅಗ್ನಿಪರೀಕ್ಷೆಯಿದ್ದಂತೆ. ಕುರ್ಚಿ ಕಾದಾಟ ಜೋರಾಗಿರುವ ಸಂದರ್ಭದಲ್ಲಿ ಗೆಲುವು ಪಡೆದರೆ ಸಿಎಂ ಸಿದ್ದರಾಮಯ್ಯ ಅವರಿಗೆ ಪ್ಲಸ್ ಪಾಯಿಂಟ್. ಜತೆಗೆ ಉತ್ತರ ಕರ್ನಾಟಕದಲ್ಲಿ ತಾವು ಬಲಾಢ್ಯ ನಾಯಕ ಎಂದು ಬಿಂಬಿಸಿದಂತಾಗುತ್ತದೆ. ಕಾಂಗ್ರೆಸ್ ತೆಕ್ಕೆಯಲ್ಲಿರುವ ಕ್ಷೇತ್ರ ಕಮಲದ ತೆಕ್ಕೆಗೆ ಜಾರಿದರೆ ಬಿಜೆಪಿಗೆ 2028ರ ಚುನಾವಣೆಗೆ ಗೆಲುವಿನ ಟಾನಿಕ್ ದೊರಕಿದಂತೆ ಆಗುತ್ತದೆ.

ಅಪ್ಪನ ಕ್ಷೇತ್ರ ಉಳಿಸಿಕೊಳ್ಳುವರೇ ಸಿಎಂ?

ವರ್ಕ್‌ಔಟ್ ಆಗುವುದೇ ಯತ್ನಾಳ ಪ್ರಚಾರ?



ಉಮೇಶ್ ಮೇಟಿ | ವೀರಣ್ಣ ಚರಂತಿಮಠ

ನದಿಯಲ್ಲಿ ಮುಳುಗಿ ಬಾಲಕ ಸಾವು

■ **ವಿಕ ಸುದ್ದಿಲೋಕ** ಹೂವಿನಹಡಗಲಿ(ವಿಜಯನಗರ)

ತಾಲೂಕಿನ ಮದಲಗಟ್ಟಿ ಬಳಿಯ ತುಂಗಭದ್ರಾ ನದಿಗೆ ಸ್ನಾನಕ್ಕೆಂದು ಇಳಿದಿದ್ದ ಬಾಲಕನೊಬ್ಬ ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ, ಶನಿವಾರ ನಡೆದಿದೆ.

ಕೊಟ್ಟೂರು ತಾಲೂಕಿನ ತೂಲಹಳ್ಳಿಯ ಜೀವನ್(16) ಮೃತ. ತನ್ನ ಕುಟುಂಬಸ್ಥರೊಂದಿಗೆ ಸುಕ್ಷೇತ್ರ ಮದಲಗಟ್ಟಿಯ ಪ್ರಾಣ ದೇವರು (ಆಂಜನೇಯ) ಸ್ವಾಮಿ ದೇಗುಲಕ್ಕೆ ಆಗಮಿಸಿದ್ದ ಈ ಬಾಲಕ ಸ್ನಾನಕ್ಕೆಂದು ನದಿಗೆ ಇಳಿದಿದ್ದ. ನೀರಿನ ಆಳ ಅರಿಯದೇ ಸೆಳವಿಗೆ ಸಿಲುಕಿ ಗುಂಡಿಯಲ್ಲಿ ಮುಳಗಿದ್ದ. ಸ್ಥಳೀಯರು ಆತನನ್ನು ರಕ್ಷಿಸಲು ನಡೆಸಿದ ಯತ್ನ ಫಲನೀಡಲಿಲ್ಲ. ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಪೊಲೀಸರು ಕಾರ್ಯಾಚರಣೆ ನಡೆಸಿ ಬಾಲಕನ ಶವವನ್ನು ಹೊರತೆಗೆದಿದ್ದಾರೆ. ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಾವಂತ ವಿದ್ಯಾರ್ಥಿ: ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಅಭ್ಯಾಸ ಮಾಡಿದ್ದ ಈ ಬಾಲಕ ಇತ್ತೀಚೆಗಷ್ಟೆ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.91ರಷ್ಟು ಅಂಕ ಗಳಿಸಿ ಗಮನಸೆಳೆದಿದ್ದ. ಪಿಯುಸಿ ಪ್ರವೇಶಕ್ಕೆ ತಯಾರಿ ನಡೆಸಿದ್ದ. ಈತನ ತಂದೆ ಬಸವರಾಜಪ್ಪ 8 ವರ್ಷಗಳ ಹಿಂದೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಒಂಟಿಯಾಗಿ ಜೀವನ ನಡೆಸುವುದು ಕಷ್ಟವಾದಾಗ ತಾಯಿ ಕೊಟ್ರಮ್ಮ ತನ್ನ ತವರಿಗೆ ತೆರಳಿದ್ದರು. ಅಲ್ಲಿ ಟೈಲರಿಂಗ್ ಉದ್ಯೋಗ ನಂಬಿ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದರು.

ಗಾಜಿನ ಚೂರುಗಳಿಂದಲೂ ಮರಳು ತಯಾರಿಕೆ

■ **ವಿಕ ಸುದ್ದಿಲೋಕ** ಪುತ್ತೂರು(ದ.ಕ.)

ಒಡೆದು ಹೋದ ಬಾಟಲಿ ಸೇರಿದಂತೆ ನಿರುಪಯುಕ್ತ ಗಾಜುಗಳನ್ನು ಬಳಸಿಕೊಂಡು ಅದರಲ್ಲಿ ಮರಳು ತಯಾರಿಸುವ ಹೊಸ ಮಾದರಿಯೊಂದನ್ನು ಪುತ್ತೂರು ತಾಲೂಕಿನ ಆರ್ಯಾಪು ಗ್ರಾಪಂ ಆರಂಭಿಸಿದೆ. ಈ ಮೂಲಕ ಕಸದಿಂದ ರಸ ತೆಗೆಯುವ ಮಾದರಿಯೊಂದನ್ನು ಸಮಾಜಕ್ಕೆ ಪರಿಚಯಿಸಲು ಮುಂದಾಗಿದೆ.

ಒಂದು ಕಡೆ ಸ್ವಚ್ಛ ಭಾರತ್ ಮಿಷನ್‌ನಡಿಯಲ್ಲಿ ಸ್ವಚ್ಛತೆಗಾಗಿ ನಾನಾ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ. ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ, ಎಂಆರ್‌ಎಫ್ ಘಟಕ ಸ್ಥಾಪನೆ, ಸ್ವಚ್ಛವಾಹಿನಿಗಳ ಮೂಲಕ ಕಸ ಸಂಗ್ರಹ, ನಿರಂತರ ಕಸ ಹೆಕ್ಕುವ ಚಳವಳಿ ಯಶಸ್ವಿಯಾಗಿ ನಡೆಯುತ್ತಿವೆ.

ಗಾಜನ್ನು ಮರಳಾಗಿ ಪರಿವರ್ತಿಸುತ್ತಿರುವ ಯಂತ್ರ.

ಈ ಎಲ್ಲ ಬೆಳವಣಿಗೆಗಳ ನಡುವೆ ಗ್ರಾಪಂ ಮೂಲಕ ಗಾಜಿನಿಂದ ಮರಳು ತಯಾರಿಸುವ ಪ್ರಯೋಗ ನಡೆದಿದೆ. ಎಲ್ಲೆಂದರಲ್ಲಿ ಎಸೆಯುವ ಬಾಟಲಿಗಳು, ಒಡೆದ ಬಾಟಲಿಗಳು, ಗಾಜುಗಳೇ ಇಲ್ಲಿ ಮೂಲವಸ್ತು. ಮನೆಮನೆಗಳಿಂದ ಕಸ ಸಂಗ್ರಹಿಸುವ ಸಂದರ್ಭ ಸಿಗುವ ಗಾಜುಗಳಿಗೆ ಮರಳಿನ ರೂಪ ನೀಡುವುದು ಈ ಯೋಜನೆಯ ಉದ್ದೇಶ.

ಸಾಮಾಜಿಕ ಜಾಲತಾಣದಲ್ಲಿ ಗಾಜಿನ ಬಾಟಲಿಗಳನ್ನು ಹುಡಿ ಮಾಡುವ ಯಂತ್ರದ ಬಗ್ಗೆ ತಿಳಿದುಕೊಂಡ ಆರ್ಯಾಪು ಗ್ರಾಪಂ ಪಿಡಿಒ ನಾಗೇಶ್ ಅವರು ಕೆನರಾ ಬ್ಯಾಂಕ್‌ನ ಆರ್ಥಿಕ ಸಹಕಾರದಿಂದ 4.25 ಲಕ್ಷ ರೂ. ಮೊತ್ತದ ಯಂತ್ರವನ್ನು ಪಂಚಾಯಿತಿಗೆ ಖರೀದಿಸಿದ್ದಾರೆ. ಈ ಯಂತ್ರದ ಮೂಲಕ ಗಾಜುಗಳನ್ನು ಪುಡಿ ಮಾಡಿ ಮರಳು ತಯಾರಿಸಲಾಗುತ್ತಿದೆ. ಈ ಮರಳು ಗಾರೆ ಕೆಲಸಕ್ಕೆ ಬಳಸಲು ಅರ್ಹವಾಗಿದೆ ಎನ್ನುತ್ತಾರೆ ಅವರು.

ಆರಂಭಿಕ ಹಂತದಲ್ಲಿ ಆರ್ಯಾಪು ಗ್ರಾಪಂ ವ್ಯಾಪ್ತಿಯಲ್ಲಿ ಸಿಗುವ ಗಾಜುಗಳನ್ನು ಸಂಗ್ರಹಿಸಿ ಮರಳು ತಯಾರಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಪುತ್ತೂರು, ಕಡಬ, ಸುಳ್ಯ ತಾಲೂಕುಗಳ ಗ್ರಾಪಂಗಳಿಂದಲೂ ಗಾಜು ಸಂಗ್ರಹಿಸಲು ಉದ್ದೇಶಿಸಿದೆ. ಗಾಜು ಯಾವ ಬಣ್ಣದಲ್ಲಿದೆಯೋ ಮರಳು ಕೂಡ ಅದೇ ಬಣ್ಣದಲ್ಲಿ ಸಿಗುತ್ತಿದೆ.

ಎಚ್.ಮಲ್ಲಿಕಾರ್ಜುನ

ನೀರು ಕುಡಿಯಲು ಬಂದ ಹಕ್ಕಿ ಬಳಗ

ವಿಜಯನಗರ ಜಿಲ್ಲೆ ಹರಪನಹಳ್ಳಿಯ ಉದ್ಯಾನದಲ್ಲಿ ಇಟ್ಟಿರುವ ಮಡಕೆಯ ನೀರು ಕುಡಿಯಲು ಬಂದ ಗುಬ್ಬಚ್ಚಿ ಬಳಗ. ಜಿಲ್ಲೆಯಲ್ಲಿ ಬಿಸಿಲಿನ ಪ್ರತಾಪ ಹೆಚ್ಚಿದ್ದು, ಕೆರೆಕಟ್ಟೆಗಳು ಒಣಗಿ ಹೋಗಿವೆ. ಇದರಿಂದ ಪಶುಪಕ್ಷಿಗಳಿಗೆ ಕುಡಿಯುವ ನೀರಿನ ಕೊರತೆ ತಲೆದೋರಿದೆ.

ಹಾವು ಕಚ್ಚಿ ಗರ್ಭಿಣಿ ಸಾವು

ಆನಂದಪುರಂ(ಶಿವಮೊಗ್ಗ): ಸಮೀಪದ ಸುಳಗೋಡು ಗ್ರಾಮದ ಎಸ್‌ಸಿ ಕಾಲೊನಿಯ ವಾಸಿ ಭದ್ರ ಎಂಬುವರ ಪತ್ನಿ 6 ತಿಂಗಳ ಗರ್ಭಿಣಿ ಸ್ವಾತಿ(26) ಶನಿವಾರ ಹಾವು ಕಚ್ಚಿ ಮೃತಪಟ್ಟಿದ್ದಾರೆ.

ಇವರು ಹೊಲದಲ್ಲಿ ಕೃಷಿ ಕಾರ್ಯದಲ್ಲಿ ನಿರತರಾಗಿದ್ದ ಸಂದರ್ಭ ಹಾವು ಕಚ್ಚಿದ್ದು, ತಕ್ಷಣ ಆಸ್ಪತ್ರೆಗೆ ಸಾಗಿಸಲಾಯಿತು. ವಿಷವೇರಿದ ಕಾರಣ ಮೃತಪಟ್ಟಿದ್ದಾರೆ. ಯಡೇಹಳ್ಳಿಯಲ್ಲಿ ತವರು ಮನೆ ಹೊಂದಿದ್ದ ಸ್ವಾತಿ ಅವರಿಗೆ ವಿವಾಹವಾಗಿ ಮೂರು ವರ್ಷವಾಗಿದ್ದು, ಚೊಚ್ಚಲ ಗರ್ಭಿಣಿಯಾಗಿದ್ದರು. ಸ್ಥಳೀಯ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಪೊಲೀಸರ ಮೇಲೆ ಅಂತಾರಾಜ್ಯ ಆರೋಪಿಗಳಿಂದ ಹಲ್ಲೆ ಯತ್ನ | ಗಡಿ ಜಿಲ್ಲೆಗಳ 'ವಾರಂಟ್ ಹವಾಲ್ದಾರ್'ಗಳಿಗೆ ಹೆಚ್ಚಿದ ಅಪಾಯ

ಹೊರರಾಜ್ಯ ಕಾರ್ಯಾಚರಣೆಯ ಆರಕ್ಷಕರಿಗೆ ಬೇಕಿದೆ ರಕ್ಷಣೆ

■ **ರವಿಭಾರತಿ ಗೋಸಾವಿ** ಬೆಳಗಾವಿ
ravi.gosavi@timesofindia.com

ಆರೋಪಿಗಳ ಬೆನ್ನತ್ತಿ ಅನ್ಯ ರಾಜ್ಯಗಳಿಗೆ ತೆರಳುವ 'ವಾರಂಟ್ ಹವಾಲ್ದಾರ್'ಗಳ ಮೇಲೆ ಹಲ್ಲೆ ಘಟನೆಗಳಿಂದ ಅಂತಾರಾಜ್ಯ ಅಪರಾಧ ತನಿಖೆಗೆ ಅಡ್ಡಿಯಾಗುತ್ತಿದ್ದು, ಬಾಕಿ ಕೇಸ್ ಫೈಲ್‌ಗಳೂ ಹೆಚ್ಚುವಂತಾಗಿದೆ.

ಈಚೆಗೆ ಒಂದು ರಾಜ್ಯದಲ್ಲಿ ಅಪರಾಧ ಎಸಗಿ ಮತ್ತೊಂದು ರಾಜ್ಯಕ್ಕೆ ಪರಾರಿಯಾಗುವುದು, ಅಲ್ಲಿ ಸ್ಥಳೀಯರ ಸಹಕಾರದಿಂದ ರಕ್ಷಣೆ ಪಡೆಯುವುದು ಸಾಮಾನ್ಯವಾಗುತ್ತಿದೆ. ಇದರಿಂದ ಅಂತಾರಾಜ್ಯ ಕಾರ್ಯಾಚರಣೆ ಪೊಲೀಸ್ ಸಿಬ್ಬಂದಿಗೆ ಅಪಾಯ ಎದುರಾಗುತ್ತಿದೆ. ಎಎಸ್‌ಐ, ಪಿಎಸ್‌ಐ ಇಲ್ಲವೇ ಸ್ವತಃ ಇನ್‌ಸ್ಪೆಕ್ಟರ್ ಹೋದರೂ, ಸ್ಥಳೀಯರ ಪ್ರತಿರೋಧದಿಂದ ಬರಿಗೈಯಲ್ಲಿ ಹಿಂದಿರುಗುವಂತಾಗಿದೆ. ಇತ್ತೀಚೆಗೆ ಬೆಳಗಾವಿಯ ಹಾರೂಗೇರಿ ಠಾಣೆ ಪಿಎಸ್‌ಐ ಕಳ್ಳನನ್ನು ಬಂಧಿಸಲು ಹೋದಾಗ ಅವರ ಮೇಲೆ ಕಲ್ಲು ತೂರಾಟ ನಡೆದಿದೆ. ಸದಲಗಾ ಪೊಲೀಸರು ಮಹಾರಾಷ್ಟ್ರದಲ್ಲಿ ಸ್ಥಳ ಮಹಜರು ನಡೆಸುವಾಗ ಹಲ್ಲೆ ಯತ್ನವಾಗಿದೆ.

ಗಡಿ ಜಿಲ್ಲೆಗಳ ಪೊಲೀಸರಿಗೆ ಅಪಾಯ: ಬೆಳಗಾವಿ ಪೊಲೀಸರಿಗೆ ಮಾತ್ರವಲ್ಲದೇ ವಿಜಯಪುರ, ಬೀದರ್, ಕಲಬುರಗಿ, ದಕ್ಷಿಣ ಕನ್ನಡ, ಬೆಂಗಳೂರು, ಮಂಗಳೂರು ಸೇರಿದಂತೆ ರಾಜ್ಯದ ಗಡಿಭಾಗದ ಬಹುತೇಕ ಎಲ್ಲ ಜಿಲ್ಲೆಗಳ ಪೊಲೀಸರಿಗೂ ಇಂಥ ಅನುಭವ ಆಗಿದೆ. ಅದರಲ್ಲೂ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಆಸ್ಸಾಂ, ಉತ್ತರ ಪ್ರದೇಶ, ಹರಿಯಾಣ ರಾಜ್ಯಗಳಲ್ಲಿ ಕಾರ್ಯಾಚರಣೆ ವೇಳೆ ಇಂಥ ಸವಾಲು ಎದುರಾಗುತ್ತಿದೆ.

ಗೌರವ ಉಳಿಸಿಕೊಳ್ಳುವ ಸವಾಲು: ಈ ಬಗ್ಗೆ 'ವಿಕ'ಕ್ಕೆ ಪ್ರತಿಕ್ರಿಯಿಸಿದ ವಾರಟ್ ಹವಾಲ್ದಾರ್‌ರೊಬ್ಬರು, ''ನಾವು ಹೋಗೋದು ಇಬ್ಬರು, ಹೆಚ್ಚೆಂದರೆ ಮೂವರು ಮಾತ್ರ. ಕೆಲವೊಮ್ಮೆ ಎಎಸ್‌ಐ ಜತೆಗೆ ಇರುತ್ತಾರೆ. ಭೇಟಿ ನೀಡುವ ಪ್ರದೇಶ, ಭಾಷೆ ಗೊತ್ತಿರುವುದಿಲ್ಲ. ಆರೋಪಿಗಳು ಗುಂಪಾಗಿ ಎದುರಾದರೆ ಪರಿಸ್ಥಿತಿ ನಿಯಂತ್ರಣ ತಪ್ಪುತ್ತದೆ. ಕೆಲವೆಡೆ ಸ್ಥಳೀಯ ಪೊಲೀಸರ ಸಹಾಯ ಸಿಗುವುದೂ ತಡವಾಗುತ್ತದೆ. ಆಗ ಅಲ್ಲಿನ ಜನ ನಾವೇ ತಪ್ಪಿತಸ್ಥರು ಎಂಬಂತೆ ರಾದ್ಧಾಂತ ಮಾಡುತ್ತಾರೆ. ಇಂಥ ಸನ್ನಿವೇಶದಲ್ಲಿ ದೈಹಿಕ ಹಲ್ಲೆಯಿಂದ ತಪ್ಪಿಸಿಕೊಳ್ಳುವುದು ಮಾತ್ರವಲ್ಲದೆ, ಗೌರವ ಉಳಿಸಿಕೊಂಡು ಬರುವುದೇ ಸವಾಲಿನ ಕೆಲಸ,'' ಎಂದರು.

ಹವಾಲ್ದಾರ್ ಬಳಿ ರಿವಾಲ್ವಾರ್ ಇರುವುದಿಲ್ಲ, ಗೊತ್ತಿಲ್ಲದ ಹೊರ ರಾಜ್ಯಕ್ಕೆ ತೆರಳುವಾಗ ಸಮವಸ್ತ್ರ, ಲಾಠಿ ಸಾಕು ಎಂದು ಹೊರಡುತ್ತಾರೆ. ಇಂತಹ ಸಂದರ್ಭದಲ್ಲಿ ಸ್ಥಳಕ್ಕೆ ತೆರಳಿ, ಮಾಹಿತಿ ಸೋರಿಕೆಯಾಗಿ ಅಪರಾಧಿಗಳು ಪರಾರಿಯಾಗುವ ಸಾಧ್ಯತೆಯೂ ಇರುತ್ತದೆ. ಹೀಗಾಗಿ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡದೇ ನೇರ ಕಾರ್ಯಾಚರಣೆಗಿಳಿದಾಗ ಅನಿರೀಕ್ಷಿತ ಸವಾಲು ಎದುರಾಗುತ್ತಿವೆ.

''ಕೆಲ ಸಂದರ್ಭದಲ್ಲಿ ಆಯಾ ಪ್ರದೇಶದ ಪೊಲೀಸರ ತ್ವರಿತ ಸಹಕಾರ ಸಿಗದೇ ಇರುವುದು, ಭೌಗೋಳಿಕ ಅರಿವು ಮತ್ತು ಸಂವಹನ ಕೊರತೆಯಿಂದ ಹಲವು ಪ್ರಕರಣಗಳಲ್ಲಿ ಆರೋಪಿಗಳನ್ನು ಹಿಡಿಯುವ ಕಾರ್ಯಾಚರಣೆ ಮುಂದೂಡಲ್ಪಡುತ್ತದೆ. ಇದರಿಂದ ಲಾಂಗ್ ಪೆಂಡಿಂಗ್ ಕೇಸ್ ಸಂಖ್ಯೆ ಹೆಚ್ಚುವಂತಾಗಿದೆ. ಒಂದೇ ಪ್ರಕರಣ ಹಲವು ತಿಂಗಳು ಅಥವಾ ವರ್ಷಗಳವರೆಗೆ ಮುಂದುವರಿಯುವಂಥ ಸ್ಥಿತಿ ನಿರ್ಮಾಣವಾಗಿ ತನಿಖೆಗೂ ಹಿನ್ನಡೆ ಉಂಟಾಗುತ್ತಿದೆ,'' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ಖಾಕಿ ಭಯ ಕುಗ್ಗಿದೆಯೇ?

ಸೈಬರ್ ವಂಚನೆ, ದರೋಡೆ ಹಾಗೂ ಕಳ್ಳತನ ಪ್ರಕರಣಗಳಲ್ಲಿ ಬಹುರಾಜ್ಯ ಸಂಪರ್ಕ ಇರುತ್ತದೆ. ಹಣದ ವಂಚನೆ ಒಂದೆಡೆಯಾದರೆ, ಆರೋಪಿಗಳ ಅಡಗುತಾಣ ಇನ್ನೊಂದೆಡೆ ಇರುತ್ತದೆ. ಇಂಥ ಸಂಗತಿಗಳು ಪ್ರಕರಣ ಭೇದಿಸಲು ಕ್ಲಿಷ್ಟಕರವಾಗುತ್ತಿವೆ. ಇದಕ್ಕೆ ಪೂರಕವಾಗಿ ಕಾನೂನು ಪ್ರಕ್ರಿಯೆ ನಿಧಾನಗತಿ, ಶಿಕ್ಷೆ ವಿಳಂಬ, ಸುಲಭ ಜಾಮೀನು ಲಭ್ಯತೆ ಹಾಗೂ ಸಂಘಟಿತ ಗುಂಪುಗಳ ಬೆಂಬಲದಿಂದ ಆರೋಪಿಗಳಲ್ಲಿ ಕಾನೂನು ಮತ್ತು ಪೊಲೀಸರ ಬಗ್ಗೆ ಭಯ ಕುಗ್ಗುವಂತೆ ಮಾಡಿದೆ. ಪರಿಣಾಮ ಪೊಲೀಸರ ವಿರುದ್ಧವೇ ಪ್ರತಿರೋಧದ ಭಂಡ ಧೈರ್ಯವೂ ಹೆಚ್ಚುತ್ತಿದೆ. ಕೆಲ ಸಂದರ್ಭದಲ್ಲಿ ಕರ್ತವ್ಯಕ್ಕೆ ಅಡ್ಡಿ ಎಂದು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗುತ್ತದೆ. ಆದರೆ, ಬಹುತೇಕ ಪ್ರಕರಣಗಳಲ್ಲಿ ಹೊರರಾಜ್ಯಕ್ಕೆ ಅಲೆಯುವ ಉಸಾಬರಿಯೇ ಬೇಡ ಎಂದು ಸುಮ್ಮನಾಗುವ ಸಂದರ್ಭವೂ ಇದೆ.



ಯಾರಿದು ವಾರಂಟ್ ಹವಾಲ್ದಾರ್?

ಪೊಲೀಸ್ ಕಾರ್ಯಾಚರಣೆಯಲ್ಲಿ ಮುಂಚೂಣಿಯಲ್ಲಿ ಇರುವವರೇ ವಾರಂಟ್ ಹವಾಲ್ದಾರರು. ಪ್ರತಿ ಠಾಣೆಗೆ ಒಬ್ಬರಂತೆ ಇರುವ ಇವರು ಹೊರ ಜಿಲ್ಲೆ ಮತ್ತು ಹೊರ ರಾಜ್ಯದ ಅಪರಾಧಿಗಳ ಬಂಧನಕ್ಕೆ ತೆರಳುತ್ತಾರೆ. ಅತಿ ಕಡಿಮೆ ಸುರಕ್ಷತಾ ಸೌಲಭ್ಯಗಳೊಂದಿಗೆ ಕರ್ತವ್ಯ ನಿರ್ವಹಿಸುವ ಅನಿವಾರ್ಯತೆ ಇವರದ್ದು.

ಮಹಾರಾಷ್ಟ್ರ ಸೇರಿದಂತೆ ಉತ್ತರದ ಕೆಲವು ರಾಜ್ಯಗಳ ಅಪರಾಧಿಗಳ ಬಂಧನ, ಸ್ಥಳ ಮಹಜರು, ಸ್ವತ್ತು ಜಪ್ತಿಗೆ ತೆರಳಿದಾಗ ಪೊಲೀಸ್ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಘಟನೆಗಳು ನಡೆದಿವೆ. ಕೂಡಲೇ ಸ್ಥಳೀಯ ಪೊಲೀಸರಿಗೆ ಈ ಕುರಿತು ದೂರು ನೀಡಿ ಕಾನೂನು ಕ್ರಮಕ್ಕೆ ಒತ್ತಾಯಿಸಲಾಗುತ್ತಿದೆ.
ಕೆ.ರಾಮರಾಜನ್ ಪೊಲೀಸ್ ವರಿಷ್ಠಾಧಿಕಾರಿ, ಬೆಳಗಾವಿ

ಕೈರುಚಿ ಇದ್ದರೆ ಕೋಟಿ ರೂ. ಪ್ಯಾಕೇಜ್: ಬಾಣಸಿಗರಿಗೂ ವಿದೇಶದಲ್ಲಿ ರಾಜಾತಿಥ್ಯ

ವಿದೇಶದಲ್ಲಿ ಜಾಬ್ ಪಡೆಯಲು ಡಿಗ್ರಿಗಳೇ ಬೇಕಿಲ್ಲ

■ **ಬಿ.ಸೋಮಶೇಖರ್**
somashekar.b@timesofindia.com

ವಿದೇಶದಲ್ಲಿ ಉದ್ಯೋಗ ಪಡೆಯಲು ಐಐಟಿ, ಐಐಎಂಗಳಲ್ಲಿಯೇ ಪದವಿ ಪಡೆದಿರಬೇಕು. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಅಮೆರಿಕ, ಬ್ರಿಟನ್‌ನ ಖ್ಯಾತ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿರಬೇಕು. ಹೀಗಿದ್ದರೆ ಮಾತ್ರ ವಿದೇಶದಲ್ಲಿ ಜಾಬ್ ಪಡೆಯಲು ಸಾಧ್ಯ ಎಂಬ ಪರಿಸ್ಥಿತಿ ಈಗಿಲ್ಲ. ಡಿಗ್ರಿಗಳೇ ಇಲ್ಲದೆ, ಖ್ಯಾತ ವಿವಿಗಳಲ್ಲಿ ಓದಿದ ಪ್ರಮಾಣಪತ್ರಗಳೇ ಇಲ್ಲದೆ ಈಗ ಬೇರೆ ದೇಶಗಳಲ್ಲಿ ಉದ್ಯೋಗ ಪಡೆಯಬಹುದು. ಹೆಚ್ಚು ಸಂಬಳವೂ ಸಿಗುತ್ತದೆ. ಹೇಗೆ ಅಂತೀರಾ? ಮುಂದೆ ಓದಿ.

ಫಾರಿನ್ ಜಾಬ್ ಎಂಬುದು ಭಾರತೀಯರಿಗೆ ಈಗ ಗಗನ ಕುಸುಮವಲ್ಲ. ಅದರಲ್ಲೂ, ಸಾಫ್ಟ್‌ವೇರ್, ಮೆಡಿಕಲ್ ಸೇರಿ ಯಾವುದೇ ಪ್ರತಿಷ್ಠಿತ ವೃತ್ತಿಪರ ಕೋರ್ಸ್ ಮುಗಿಸದೆಯೂ, ಆಕ್ಸ್‌ಫರ್ಡ್ ಸೇರಿ ಯಾವುದೇ ದೊಡ್ಡ ವಿಶ್ವವಿದ್ಯಾಲಯದಲ್ಲಿ ಡಿಗ್ರಿ, ಮಾಸ್ಟರ್ ಡಿಗ್ರಿ ಪಡೆಯದೆಯೂ ಉದ್ಯೋಗ ಗಿಟ್ಟಿಸಿಕೊಳ್ಳಬಹುದು.

ಆಸ್ಟ್ರೇಲಿಯಾ, ಕೆನಡಾ, ಜರ್ಮನಿ ಸೇರಿ ಹಲವು ದೇಶಗಳು ಕೌಶಲ ಆಧಾರಿತ ಉದ್ಯೋಗಗಳಲ್ಲಿ ಡಿಗ್ರಿ ಹೊಂದಿರಬೇಕು ಎಂಬ ಮಾನದಂಡವನ್ನೇ ತೆಗೆದುಹಾಕಿವೆ. ಟೆಕ್ನಿಕಲ್, ಕಟ್ಟಡ ನಿರ್ಮಾಣ, ಹೋಟೆಲ್ ಉದ್ಯಮ ಸೇರಿ ಹತ್ತಾರು ಕ್ಷೇತ್ರಗಳಲ್ಲಿ ಭಾರತೀಯರಿಗೆ ಕಾರ್ಯಾನುಭವ ಇದ್ದರೆ ಸಾಕು, ಅವರನ್ನು ನಾವು ನೇಮಕ ಮಾಡಿಕೊಳ್ಳುತ್ತೇವೆ ಎಂದು ವಿವಿಧ ದೇಶಗಳು ಮುಂದೆಬರುತ್ತಿವೆ. ಇಂತಹ ಬೆಳವಣಿಗೆಗಳು ಭಾರತೀಯರಿಗೆ ಹತ್ತಾರು ಅವಕಾಶಗಳ ಬಾಗಿಲುಗಳನ್ನು ತೆರೆದಿವೆ.

ಬಾಣಸಿಗನಾಗಲು ಅನುಭವ ಇದ್ದರೆ ಸಾಕು

ಹೋಟೆಲ್ ಉದ್ಯಮವು ಏಳಿಗೆ ಹೊಂದುತ್ತಿರುವ ಹೊತ್ತಿನಲ್ಲಿ ಜಗತ್ತಿನ ಹತ್ತಾರು ದೇಶಗಳು ಪದವಿಗಳನ್ನೇ ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ನೀವು ಭಾರತದ ಹೋಟೆಲ್‌ಗಳ ಕಿಚನ್‌ನಲ್ಲಿ ಐದಾರು ವರ್ಷ ಪಳಗಿದ್ದರೆ ಸಾಕು, ಲಕ್ಷಾಂತರ ರೂ. ಸಂಬಳದ ಉದ್ಯೋಗ ನೀಡಲು ವಿವಿಧ ದೇಶಗಳು ಮುಂದಾಗಿರುತ್ತವೆ.

ಎಕ್ಸಿಕ್ಯೂಟಿವ್ ಶೆಫ್ ಹುದ್ದೆಗೆ ಯುಎಇಯಲ್ಲಿ ವರ್ಷಕ್ಕೆ 75-80 ಲಕ್ಷ ರೂ. ಪ್ಯಾಕೇಜ್ ಸಿಗುತ್ತದೆ. ಸ್ವಿಟ್ಜರ್‌ಲೆಂಡ್‌ನಲ್ಲಿ 80-85 ಲಕ್ಷ ರೂ., ಆಸ್ಟ್ರೇಲಿಯಾದಲ್ಲಿ 60-70 ಲಕ್ಷ ರೂ., ಸಿಂಗಾಪುರದಲ್ಲಿ 50-60 ಲಕ್ಷ ರೂ. ಪ್ಯಾಕೇಜ್ ದೊರೆಯುತ್ತದೆ. ಹೋಟೆಲ್ ಮ್ಯಾನೇಜ್‌ಮೆಂಟ್ ಸರ್ಟಿಫಿಕೇಟ್‌ಗಿಂತ, ಕೈರುಚಿ ಚೆನ್ನಾಗಿದ್ದರೆ ಸಾಕು. ಯುಎಇಯಲ್ಲಿ ಬಾಣಸಿಗರಿಗೆ ಹೋಟೆಲ್‌ಗಳೇ ವೀಸಾ ವ್ಯವಸ್ಥೆ ಮಾಡುತ್ತವೆ. ಆಸ್ಟ್ರೇಲಿಯಾ ಕೂಡ ಇದೇ ಮಾದರಿ ಅನುಸರಿಸುತ್ತಿದೆ. ಜರ್ಮನಿಯಲ್ಲಿ ಕೆಲಸ ಮಾಡಲು ಸ್ಪೆಷಲಿಸ್ಟ್ ವೀಸಾ ಇದ್ದರೆ ಸಾಕು.

ವಿಕ ಗ್ಲೋಬಲ್ ಜಾಬ್ ಮಾರ್ಕೆಟ್

ಐಟಿಐ ಪಾಸಾದವರಿಗೂ ಲಕ್ಷ ಲಕ್ಷ ಸಂಬಳ

ಎಂಜಿನಿಯರಿಂಗ್ ಸೇರಿ ಯಾವುದೇ ವೃತ್ತಿಪರ ಕೋರ್ಸ್ ಮುಗಿಸದಿದ್ದವರು, ಪ್ರತಿಷ್ಠಿತ ವಿವಿಗಳಲ್ಲಿ ಅಧ್ಯಯನ ಮಾಡದೆ ಬರೀ ಐಟಿಐ ಮುಗಿಸಿದವರಿಗೂ ವಿದೇಶದಲ್ಲಿ ಉದ್ಯೋಗಗಳು ಲಭಿಸುತ್ತವೆ. ಲಕ್ಷ ಲಕ್ಷ ರೂಪಾಯಿ ಸಂಬಳವನ್ನೂ ಕೊಡುತ್ತವೆ.

ಭಾರತದಲ್ಲಿ ಐಟಿಐ ಮುಗಿಸಿ, ಮೂರು ವರ್ಷ ಕೆಲಸ ಮಾಡಿದ ಅನುಭವ ಇದ್ದರೆ ಕೆನಡಾದ ಫೆಡರಲ್ ಸ್ಕಿಲ್ಡ್ ಟ್ರೇಡ್ಸ್ ಪ್ರೋಗ್ರಾಂ ಅನ್ವಯ ಅಲ್ಲಿಯೇ ಉದ್ಯೋಗ ಪಡೆಯಬಹುದು. ಕೆಲಸಕ್ಕೆ ಆಯ್ಕೆಯಾದವರಿಗೆ 35-65 ಲಕ್ಷ ರೂ. ಸಂಬಳ ದೊರೆಯುತ್ತದೆ. ಅದೇ ರೀತಿ, ಆಸ್ಟ್ರೇಲಿಯಾದಲ್ಲೂ ಸಬ್‌ಕ್ಲಾಸ್ 491/190 ಯೋಜನೆ ಅಡಿಯಲ್ಲಿ ಉದ್ಯೋಗ ಪಡೆಯಬಹುದು. ಇದರ ಅನ್ವಯ ಉದ್ಯೋಗ ಪಡೆದರೆ ಆಸ್ಟ್ರೇಲಿಯಾದಲ್ಲಿ ಕಾಯಂ ಆಗಿ ನೆಲೆಸಲು ಅವಕಾಶ ಕೂಡ ಸಿಗುತ್ತದೆ ಎಂಬುದು ಗಮನಾರ್ಹ.

ಪರಿಣತಿ ಇದ್ದರೆ ರೆಡ್ ಕಾರ್ಪೆಟ್

ಉದ್ಯೋಗ ಮಾದರಿ	ಟಾಪ್ ದೇಶಗಳು	ವಾರ್ಷಿಕ ಸಂಬಳದ ಪ್ಯಾಕೇಜ್
ಎಚ್‌ವಿಎಸಿ ಟೆಕ್ನಿಶಿಯನ್	ಯುಎಇ, ಕೆನಡಾ, ಆಸ್ಟ್ರೇಲಿಯಾ	₹45-70 ಲಕ್ಷ
ಸಿಎನ್‌ಸಿ ಆಪರೇಟರ್	ಜರ್ಮನಿ, ಸಿಂಗಾಪುರ, ಜಪಾನ್	₹25-45 ಲಕ್ಷ
ಎಲೆಕ್ಟ್ರಿಶಿಯನ್	ಆಸ್ಟ್ರೇಲಿಯಾ, ನಾರ್ವೆ, ಬ್ರಿಟನ್	₹45-70 ಲಕ್ಷ
ಫಿಟ್ಟರ್	ಕೆನಡಾ, ಜರ್ಮನಿ, ರೊಮಾನಿಯಾ	₹35-55 ಲಕ್ಷ
ಪ್ಲಂಬರ್	ಅಮೆರಿಕ, ನ್ಯೂಜಿಲೆಂಡ್, ನೆದರ್ಲೆಂಡ್ಸ್	₹40&65 ಲಕ್ಷ

ಕೆಲ ಸರ್ಟಿಫಿಕೇಟ್ ಇದ್ದರೆ ಡಿಗ್ರಿ ಬೇಕಿಲ್ಲ

ಮಾಹಿತಿ ತಂತ್ರಜ್ಞಾನ (ಐಟಿ), ಎಐ ಸೇರಿ ಟ್ರೆಂಡಿಂಗ್ ಇರುವ ಕ್ಷೇತ್ರಗಳಲ್ಲೂ ಡಿಗ್ರಿಗಳು ಇಲ್ಲದೆ ಉದ್ಯೋಗ ಪಡೆಯಬಹುದು. ಅಮೆಜಾನ್ ವೆಬ್ ಸರ್ವಿಸಸ್ (ಎಡಬ್ಲ್ಯೂಎಸ್) ಸರ್ಟಿಫಿಕೇಟ್ ಇದ್ದರೆ ಕ್ಲೌಡ್ ಹೈರಿಂಗ್ ವಿಭಾಗದಲ್ಲಿ ಅಮೆರಿಕ, ಬ್ರಿಟನ್ ಸೇರಿ ಹಲವು ದೇಶಗಳಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಬಹುದು.

ಇದೇ ರೀತಿ, ಗೂಗಲ್ ಕ್ಲೌಡ್ ಪ್ಲಾಟ್‌ಫಾರ್ಮ್ ಸರ್ಟಿಫಿಕೇಟ್ ಹೊಂದಿದ್ದರೆ, ಡೇಟಾ ಎಂಜಿನಿಯರ್ ಅಥವಾ ಕ್ಲೌಡ್ ಆರ್ಕಿಟೆಕ್ಟ್ ಹುದ್ದೆಗಳನ್ನು ಪಡೆಯಬಹುದು. ಈ ಪ್ರಮಾಣಪತ್ರ ಇದ್ದರೆ ಅಮೆರಿಕ, ಕೆನಡಾ, ಸಿಂಗಾಪುರದಲ್ಲಿ ಕೋಟಿ ರೂಪಾಯಿವರೆಗೆ ಪ್ಯಾಕೇಜ್ ಲಭಿಸುತ್ತದೆ.

ಯಾವ ದೇಶಗಳಲ್ಲಿ ಹೇಗೆ ಅವಕಾಶ?

- ಜರ್ಮನಿಯು ಪದವಿ ಇಲ್ಲದಿದ್ದರೂ ಆಕಾಂಕ್ಷಿಗಳಿಗೆ ಒಂದು ವರ್ಷದ ಅವಧಿಗೆ ಆಪರ್ಚುನಿಟಿ ಕಾರ್ಡ್ ನೀಡುತ್ತದೆ. ಅಂದರೆ, ಡಿಗ್ರಿಯೇ ಇಲ್ಲದವರು ಜರ್ಮನಿಯಲ್ಲಿ ಒಂದು ವರ್ಷದವರೆಗೆ ನೆಲೆಸಿ, ಉದ್ಯೋಗ ಹುಡುಕಬಹುದು.
- ಕಟ್ಟಡ ನಿರ್ಮಾಣದಲ್ಲಿ ಅಗಾಧವಾದುದನ್ನು ಸಾಧಿಸಲು ಸೌದಿ ಅರೇಬಿಯಾವು NEOM ಎಂಬ ಯೋಜನೆ ಜಾರಿಗೊಳಿಸಿದೆ. ಕಟ್ಟಡ ನಿರ್ಮಾಣಕ್ಕಾಗಿ ಕಾರ್ಮಿಕರು, ಎಂಜಿನಿಯರ್‌ಗಳು, ಎಕ್ಸ್‌ಕಾವೇಟರ್‌ಗಳು ಸೇರಿ ಹಲವರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಇದಕ್ಕಾಗಿ ಪದವಿಯ ಗೊಡವೆ ಇಲ್ಲ.
- ರೊಮಾನಿಯಾ, ಕ್ರೊವೇಶಿಯಾ ಹಾಗೂ ಹಂಗೇರಿಯಂತಹ ದೇಶಗಳಲ್ಲಿ ನಿರ್ಮಾಣ, ಆತಿಥ್ಯ ಹಾಗೂ ಕೃಷಿ ಕ್ಷೇತ್ರದಲ್ಲಿ ಕೌಶಲ ಇರುವವರಿಗೆ ಹೆಚ್ಚಿನ ಆದ್ಯತೆ ಹಾಗೂ ಸಂಬಳ ನೀಡಲಾಗುತ್ತದೆ. ಇಂತಹ ದೇಶಗಳಲ್ಲಿ ಬಿ.ಟೆಕ್, ಎಂಬಿಎಗಿಂತ ಪಾಸ್‌ಪೋರ್ಟ್ ಹಾಗೂ ದೈಹಿಕ ಫಿಟ್‌ನೆಸ್ ಇದ್ದರೆ ಸುಲಭವಾಗಿ ಉದ್ಯೋಗ ಪಡೆಯಬಹುದು.

ಕಾಶ್ಮೀರದಲ್ಲಿ ಭಾರಿ ದಾಳಿಗೆ ಪಾಕ್ ಸಂಚು

ಹೊಸದಿಲ್ಲಿ: ಅಮೆರಿಕ-ಇರಾನ್ ನಡುವೆ ಸಂಧಾನ ಯತ್ನ ವಿಫಲವಾಗಿದ್ದರಿಂದ ಹತಾಶೆಗೆ ಒಳಗಾಗಿರುವ ಪಾಕಿಸ್ತಾನದ ಸಶಸ್ತ್ರ ಪಡೆಗಳ ಮುಖ್ಯಸ್ಥ ಆಸೀಂ ಮುನೀರ್, ತನ್ನ ಪ್ರಭಾವ ಹೆಚ್ಚಿಸಿಕೊಂಡು ಸರಕಾರವನ್ನು ಹಿಡಿತದಲ್ಲಿ ಇರಿಸಿಕೊಳ್ಳುವ ತಂತ್ರದ ಭಾಗವಾಗಿ ಕಾಶ್ಮೀರದಲ್ಲಿ ಮತ್ತೊಂದು ದಾಳಿಗೆ ಸಂಚು ರೂಪಿಸಿದ್ದಾರೆ. ಅಲ್ಲದೇ, ಪರ್ವೇಜ್ ಮುಷರಫ್ ಮಾದರಿಯಲ್ಲಿ ಪಾಕಿಸ್ತಾನದ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಮುನೀರ್, ಪಾಕಿಸ್ತಾನ ಪೋಷಿತ ಉಗ್ರಜಾಲವನ್ನು ಮತ್ತಷ್ಟು ಬಲಪಡಿಸಲು ಕೂಡ ಸಿದ್ಧತೆ ನಡೆಸಿದ್ದಾರೆ ಎಂದು ಭದ್ರತಾ ಪಡೆಗಳು ಇತ್ತೀಚಿನ ಗುಪ್ತಚರ ವರದಿಯಲ್ಲಿ ಎಚ್ಚರಿಸಿವೆ.

ಈಗಾಗಲೇ ಅಮೆರಿಕ-ಇರಾನ್ ಯುದ್ಧ ನಿಲ್ಲಿಸಲು ಮಧ್ಯಸ್ಥಿಕೆ ವಹಿಸುತ್ತಿರುವ ಪಾಕ್, ಎರಡು ಬಾರಿ ವೈಫಲ್ಯ ಕಂಡು ಕಂಗಾಲಾಗಿದೆ. ಜತೆಗೆ, ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್, ದೇಶವು ಇಂಧನ ಬಿಕ್ಕಟ್ಟಿನಿಂದ ತತ್ತರಿಸುತ್ತಿದೆ ಎಂದು ಸಾರ್ವಜನಿಕವಾಗಿ ಆತಂಕ ಹೊರಹಾಕಿದ್ದಾರೆ. ಹಾಗಾಗಿ ಕಾಶ್ಮೀರ ವಿಷಯವನ್ನು ಮತ್ತೆ ಮುನ್ನೆಲೆಗೆ ತಂದು, ಅಮೆರಿಕದ ಗಮನ ಸೆಳೆಯಲು ಪಾಕ್ ಪ್ರಧಾನಿ ಹಾಗೂ ಮುನೀರ್ ತಂತ್ರ ಹೆಣೆದಿದ್ದಾರೆ. ಈ ಮೂಲಕ ಅಮೆರಿಕ ಜತೆಗಿನ ಸಂಬಂಧವನ್ನು ಮತ್ತಷ್ಟು ಬಲಗೊಳಿಸುವುದು ಮುನೀರ್ ಲೆಕ್ಕಾಚಾರವಾಗಿದೆ ಎಂದು ಗುಪ್ತಚರ ಸಂಸ್ಥೆಗಳು ಎಚ್ಚರಿಸಿವೆ.

ಇದಕ್ಕಾಗಿ ಪಾಕ್ ಎರಡು ಯೋಜನೆ ಸಿದ್ಧಪಡಿಸಿದೆ. ಒಂದು, ಸ್ಥಳೀಯ ಭಯೋತ್ಪಾದಕ ಜಾಲವನ್ನು ಸಕ್ರಿಯಗೊಳಿಸುವ ಮೂಲಕ ಭಾರತದ ಪ್ರವಾಸೋದ್ಯಮ ನೆಲಕಚ್ಚಿಸುವುದು ಹಾಗೂ ಭದ್ರತಾ ಪಡೆಗಳು ಚದುರುವಂತೆ ಮಾಡುವುದು. ಎರಡನೇಯದು, ಪಾಕಿಸ್ತಾನಿ ಉಗ್ರರನ್ನು ಬಳಸಿ ಗಡಿಯಾಚೆಯಿಂದ ದಾಳಿ ನಡೆಸುವುದು ಆ ಎರಡು ಯೋಜನೆಗಳಾಗಿವೆ.

ಅಧ್ಯಕ್ಷ ಗಾದಿ ಮೇಲೆ ಕಣ್ಣಿಟ್ಟಿರುವ ಸೇನಾ ಮುಖ್ಯಸ್ಥ ಮುನೀರ್ ಯೋಜನೆ




ರಾಜಕೀಯ ಮಹತ್ವಾಕಾಂಕ್ಷೆ: ಆಸೀಂ ಮುನೀರ್‌ಗೆ ಪಾಕಿಸ್ತಾನದಲ್ಲಿ ಅತ್ಯುನ್ನತ ಹುದ್ದೆಯಲ್ಲಿ ಕೂರುವುದು ವೈಯಕ್ತಿಕ ಮತ್ತು ರಾಜಕೀಯ ಪ್ರತಿಷ್ಠೆಯ ವಿಷಯವಾಗಿದೆ. 2001ರಿಂದ 2008ರವರೆಗೆ ಪರ್ವೇಜ್ ಮುಷರಫ್ ಪಾಕಿಸ್ತಾನವನ್ನು ಸೇನಾಬಲದೊಂದಿಗೆ ತಮ್ಮ ಹಿಡಿತದಲ್ಲಿ ಇರಿಸಿಕೊಂಡಂತೆ ಮುನೀರ್ ಕೂಡ ಹೊಂಚು ಹಾಕಿದ್ದಾನೆ. ಇತ್ತೀಚೆಗೆ ಅವರು ಅಮೆರಿಕ-ಇರಾನ್ ಶಾಂತಿ ಒಪ್ಪಂದಕ್ಕಾಗಿ ಶ್ರಮಿಸಿದ್ದರು. ಆದರೆ ಅದು ವಿಫಲವಾಗಿದೆ. ಇದರಿಂದ ಅವರ 'ಜಾಗತಿಕ ರಾಜನೀತಿಜ್ಞ' ಎಂಬ ಇಮೇಜ್‌ಗೆ ಧಕ್ಕೆ ಬಂದಿದೆ. ಈ ನಡುವೆ ಅವರು ಪಾಕಿಸ್ತಾನದ ಅಧ್ಯಕ್ಷ ಸ್ಥಾನಕ್ಕೆ ಕಣ್ಣು ಹಾಕಿದ್ದಾರೆ. ಹಾಗಾಗಿ ಕಾಶ್ಮೀರ ವಿಷಯವನ್ನು ಅಂತಾರಾಷ್ಟ್ರೀಯಗೊಳಿಸುವ ಮೂಲಕ ತಮ್ಮ ಇಮೇಜ್ ಅನ್ನು ಭದ್ರಪಡಿಸಿಕೊಳ್ಳಲು ಮತ್ತು ಅಧ್ಯಕ್ಷ ಪಟ್ಟವೇರಲು ಹಾದಿ ಸುಗಮಗೊಳಿಸಿಕೊಳ್ಳಲು ಮುಂದಾಗಿದ್ದಾರೆ ಎಂದು ವರದಿಯಾಗಿದೆ.

ಚಾಮರಾಜನಗರ, ತುಮಕೂರು ಜಿಲ್ಲೆ ವಿಕ ಸೂಪರ್ ಸ್ಟಾರ್ ರೈತರು

ಚಾಮರಾಜನಗರ ಜಿಲ್ಲೆ ಹನೂರಿನಲ್ಲಿ ಶನಿವಾರ ನಡೆದ ಜಿಲ್ಲಾ ಮಟ್ಟದ 'ವಿಕ ಸೂಪರ್ ಸ್ಟಾರ್ ರೈತ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಚಾಮರಾಜನಗರ ತಾಲೂಕಿನ ದಿಲೀಪ್‌ಕುಮಾರ್, ಯಳಂದೂರು ತಾಲೂಕಿನ ಪ್ರಸನ್ನ, ಕೊಳ್ಳೇಗಾಲ ತಾಲೂಕಿನ ಭವಾನಿ ಲೋಕೇಶ್, ಗುಂಡ್ಲುಪೇಟೆ ತಾಲೂಕಿನ ಶಾಂತಪ್ಪ, ಹನೂರು ತಾಲೂಕಿನ ಪ್ರಕಾಶ್ ನಾಯ್ಡು ಅವರಿಗೆ ಸೂಪರ್ ಸ್ಟಾರ್ ರೈತ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ನಂಜುಂಡಸ್ವಾಮಿ, ಚಾಮುಂಡೇಶ್ವರಿ ಟ್ರೇಡರ್ಸ್ ಮಾಲೀಕ ಐ.ಜೆ.ಚಂದ್ರಶೇಖರ್, ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಸುಷ್ಮಾ, ಚಾಮುಲ್ ನಿರ್ದೇಶಕ ಉದ್ದನೂರು ಪ್ರಸಾದ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಜಿಲ್ಲಾ ನಿರ್ದೇಶಕ ದಿನೇಶ್ ಹಾಜರಿದ್ದರು.

ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನ ಸಿದ್ದರಬೆಟ್ಟದಲ್ಲಿ ಶುಕ್ರವಾರ ವಿಕ ಸೂಪರ್ ಸ್ಟಾರ್ ರೈತ ಪ್ರಶಸ್ತಿ ಪ್ರದಾನ ಸಮಾರಂಭ ನೆರವೇರಿತು. ಬಿ.ಪಿ.ಶಿವಕುಮಾರ್ (ಕೊರಟಗೆರೆ), ಹರೀಶ್ ವೈ.ಎಸ್. (ಮಧುಗಿರಿ), ಗೋವರ್ಧನ್ ಎನ್. (ಚಿಕ್ಕನಾಯಕನಹಳ್ಳಿ), ಚಿಕ್ಕಮ್ಮ (ಪಾವಗಡ), ಪದ್ಮ ಎನ್.ಎಸ್. (ಕುಣಿಗಲ್), ಮಮತ (ತುರುವೇಕೆರೆ), ಶ್ರುತಿ ಟಿ.ಎಸ್. (ತುಮಕೂರು), ಬಿ.ರಾಜಶೇಖರಯ್ಯ (ತಿಪಟೂರು), ಚಂದನ್ ಬಿ.ಸಿ., (ಗುಬ್ಬಿ) ಮತ್ತು ಮಂಜುಜಾಥ್ ಪಿ. (ಶಿರಾ) ಅವರಿಗೆ ವಿಕ ಸೂಪರ್ ಸ್ಟಾರ್ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಪ್ರಗತಿಪರ ರೈತ ಮಹಿಳೆ ರಾಯಚೂರಿನ ಡಾ.ಕವಿತಾ ಮಿಶ್ರಾ, ಬಾಳೆಹೊನ್ನೂರು ಖಾಸಾ ಶಾಖಾ ಮಠ ಸಿದ್ದರಬೆಟ್ಟದ ಮಠಾಧ್ಯಕ್ಷ ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಹಾಲಪ್ಪ ಪ್ರತಿಷ್ಠಾನದ ಅಧ್ಯಕ್ಷ ಮುರಳೀಧರ ಹಾಲಪ್ಪ, ರೈತ ಸಂಘದ ರಾಜ್ಯ ಸಂಚಾಲಕ ಆನಂದ ಪಟೇಲ್, ಸಮಾಜ ಸೇವಕ ಎಚ್.ಕೆ.ಮಹಾಲಿಂಗಪ್ಪ, ತಹಸೀಲ್ದಾರ್ ಮಂಜುನಾಥ್ ಕೆ., ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕಿ ಶಾರದಮ್ಮ, ರೇಷ್ಮೆ ಇಲಾಖೆ ಡಿಡಿ ಲಕ್ಷ್ಮೀನರಸಯ್ಯ ಟಿ., ಪಶುಸಂಗೋಪನಾ ಇಲಾಖೆ ಡಿಡಿ ಡಾ.ಶಿವಪ್ರಸಾದ್, ಹಿರೇಹಳ್ಳಿ ಕೆವಿಕೆ ಮುಖ್ಯಸ್ಥ ಡಾ.ಲೋಗಾನಂದನ್ ಎನ್., ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಚ.ನ.ಅಶೋಕ್, 'ವಿಜಯ ಕರ್ನಾಟಕ' ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ ಇದ್ದರು.

ಎಂಆರ್‌ಪಿಎಲ್‌ಗೆ ಪ್ರಶಸ್ತಿ

ಮಂಗಳೂರು: ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ಸಂಸ್ಥೆಗೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದಿಂದ 2023 ಮತ್ತು 2024ನೇ ವರ್ಷ ಸ್ವಚ್ಛತಾ ಪಖ್ವಾಡಾ ಪ್ರಶಸ್ತಿ ಲಭಿಸಿದೆ.

ಪ್ರಶಸ್ತಿಯನ್ನು ಎಂಆರ್‌ಪಿಎಲ್ ಪರವಾಗಿ ಸಂಸ್ಥೆಯ ಎಚ್‌ಆರ್‌ನ ಜಿಎಂ ಪ್ಯಾಟ್ರಿಕ್ ರಾಜೇಶ್ ಮಿನ್ಜ್ ಮತ್ತು ಸೀನಿಯರ್ ಮ್ಯಾನೇಜರ್ ಎ.ಕೆ.ಮಿಶ್ರಾ ಅವರು ಏ.28ರಂದು ಸ್ವೀಕರಿಸಿದರು.

ಎಂಆರ್‌ಪಿಎಲ್ 2023ರಲ್ಲಿ ಕೆಟಗರಿ ಬಿ ಅಡಿಯಲ್ಲಿ ದ್ವಿತೀಯ ಬಹುಮಾನ ಗಳಿಸಿದ್ದು, 2024ರಲ್ಲಿ ಸಮಾಧಾನಕರ ಬಹುಮಾನವನ್ನು ಪಡೆದಿದೆ. ಎಂಆರ್‌ಪಿಎಲ್ ಸಂಸ್ಥೆಯು ಸುತ್ತಮುತ್ತಲಿನ ಸಮುದಾಯಗಳಲ್ಲಿ ಸ್ವಚ್ಛತೆ ಮತ್ತು ಸಾರ್ವಜನಿಕ ಜಾಗೃತಿ ಕಾರ್ಯಕ್ರಮ ಹಿನ್ನೆಲೆಯಲ್ಲಿ ಸಚಿವಾಲಯದಿಂದ ಶ್ಲಾಘನೆಗೂ ಪಾತ್ರವಾಗಿದೆ. ಸ್ವಚ್ಛತಾ ಪಖ್ವಾಡಾ ಪ್ರತಿ ವರ್ಷ ಜುಲೈ 1ರಿಂದ 15ರ ವರೆಗೆ ಎಂಒಪಿಎನ್‌ಜಿ ಮಾರ್ಗದರ್ಶನದಲ್ಲಿ ನಡೆಯುತ್ತಿದೆ. ಇದು ಸ್ವಚ್ಛ ಭಾರತ ಅಭಿಯಾನಕ್ಕೆ ಹೊಂದಿಕೊಂಡ ಸ್ವಚ್ಛತಾ ಅಭಿಯಾನಗಳು ಮತ್ತು ಜಾಗೃತಿ ಕಾರ್ಯಕ್ರಮಗಳ ಮೇಲೆ ಕೇಂದ್ರೀಕರಿಸುತ್ತದೆ. ಎಂಆರ್‌ಪಿಎಲ್ ಇದಕ್ಕೂ ಮೊದಲು ಸ್ವಚ್ಛ ಭಾರತ ಪಖ್ವಾಡಾ 2022ರಲ್ಲಿ 4ನೇ ಬಹುಮಾನ ಗೆದ್ದಿತ್ತು.

ಪಿಜಿ ಪಾಳ್ಯದಲ್ಲಿ ಬಿಳಿ ಜಿಂಕೆ ಪ್ರತ್ಯಕ್ಷ

■ **ವಿಕ ಸುದ್ದಿಲೋಕ** ಹನೂರು (ಚಾಮರಾಜನಗರ)

ಜಿಲ್ಲೆಯ ಹನೂರು ತಾಲೂಕಿನ ಪಿ.ಜಿ.ಪಾಳ್ಯ ಅರಣ್ಯ ವ್ಯಾಪ್ತಿಯ ಸಫಾರಿಯಲ್ಲಿ ಮೂರು ಮರಿಗಳೊಂದಿಗೆ ತಾಯಿ ಹುಲಿ ಹಾಗೂ ಬಿಳಿ ಜಿಂಕೆ ಕಂಡು ಶನಿವಾರ ಪ್ರವಾಸಿಗರು ಸಂತಸಗೊಂಡಿದ್ದಾರೆ.

ವಾರಾಂತ್ಯ ಶನಿವಾರ ಸಂಜೆ ಸಫಾರಿಯಲ್ಲಿ ಮೊದಲಿಗೆ ಮೂರು ಮರಿಗಳೊಂದಿಗೆ ತಾಯಿ ಹುಲಿ ಹೆಜ್ಜೆ ಹಾಕುತ್ತಿರುವ ದೃಶ್ಯವನ್ನು ಕಣ್ತುಂಬಿಕೊಂಡ ಪ್ರವಾಸಿಗರು, ಇದೇ ಸಫಾರಿಯಲ್ಲಿ ಬಿಳಿ ಜಿಂಕೆಯನ್ನೂ ಕಂಡು ಪುಳಕಿತರಾದರು. ಒಂದೇ ದಿನ ಈ ರೀತಿಯ ಅಪರೂಪದ 'ದರ್ಶನ' ವನ್ಯಜೀವಿ ಪ್ರಿಯರಲ್ಲಿ ಹರ್ಷ ಮೂಡಿಸಿದೆ.

ಸಾಮಾನ್ಯವಾಗಿ ಕಾಣಿಸಿಕೊಳ್ಳದ ಈ ವಿಶಿಷ್ಟ ಜಿಂಕೆ, ಸಫಾರಿಗೆ ತೆರಳಿದ ಪ್ರವಾಸಿಗರ ಕಣ್ಣಿಗೆ ಬಿದ್ದಿದೆ. ಅರಣ್ಯ ಇಲಾಖೆ ಅಧಿಕಾರಿಗಳ ಪ್ರಕಾರ, ಇಂತಹ ಬಿಳಿ ಬಣ್ಣದ ಜಿಂಕೆ ಪ್ರಕೃತಿಯಲ್ಲಿ ಅತ್ಯಂತ ವಿರಳ. ಈ ದರ್ಶನವು ಆ ಪ್ರದೇಶದ ಸಮೃದ್ಧ ಜೀವ ವೈವಿಧ್ಯತೆಯನ್ನು ಸೂಚಿಸುವುದರ ಜತೆಗೆ, ವನ್ಯಜೀವಿ ಸಂರಕ್ಷಣೆಯ ಮಹತ್ವವನ್ನೂ ಒತ್ತಿ ಹೇಳುತ್ತದೆ. ಸಫಾರಿಯಲ್ಲಿದ್ದ ಪ್ರವಾಸಿಗರು ''ಜೀವನದಲ್ಲೇ ಮರೆಯಲಾಗದ ಅನುಭವ,'' ಎಂದು ಹೇಳಿದ್ದಾರೆ.

ಪಿ.ಜಿ.ಪಾಳ ಅರಣ್ಯ ಪ್ರದೇಶದಲ್ಲಿ ಶನಿವಾರ ಸಫಾರಿಗೆ ತೆರಳಿದ್ದವರಿಗೆ ಮೂರು ಮರಿಗಳೊಂದಿಗೆ ತಾಯಿ ಹುಲಿ ಹಾಗೂ ಬಿಳಿ ಜಿಂಕೆ ಕಂಡು ಬಂದಿದ್ದು, ಪ್ರವಾಸಿಗರಲ್ಲಿ ಸಂತಸವನ್ನುಂಟು ಮಾಡಿದೆ. ಕಳೆದ ವಾರ ಇದೇ ವ್ಯಾಪ್ತಿಯಲ್ಲಿ ಕರಿ ಚಿರತೆ ಕಾಣಿಸಿಕೊಂಡಿತ್ತು.

-**ಪುಟ್ಟರಾಜು** ವಲಯ ಅರಣ್ಯಾಧಿಕಾರಿ, ಪಿ.ಜಿ.ಪಾಳ್ಯ ವಲಯ

ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಪಿ.ಜಿ. ಪಾಳ್ಯ ಅರಣ್ಯದ ಸಫಾರಿ ಮಾರ್ಗದಲ್ಲಿ ಪ್ರವಾಸಿಗರಿಗೆ ಮೂರು ಮರಿಗಳೊಂದಿಗೆ ತಾಯಿ ಹುಲಿ ಕಾಣಿಸಿಕೊಂಡಿದೆ.

ಪೊಲೀಸ್ ಶ್ವಾನಗಳಿಗೆ ಕೂಲರ್ ಭಾಗ್ಯ!

ಉತ್ತರ ಕರ್ನಾಟಕದಲ್ಲಿ ಹೆಚ್ಚಿದ ಉಷ್ಣಾಂಶ | ನಾಯಿಗಳ ಆಹಾರದ ಮೆನು ಬದಲು

■ **ರವಿರಾಜ್ ಆರ್.ಗಲಗಲಿ** ಬಾಗಲಕೋಟೆ
raviraj.galagali@timesofindia.com
■ **ಮಂಜುನಾಥ ಸಾಲಿ** ರಾಯಚೂರು
manjunath.sali@timesofindia.com

ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳೂ ಸೇರಿ ಉತ್ತರ ಕರ್ನಾಟಕದ ಇತರ ಜಿಲ್ಲೆಗಳಲ್ಲಿ ಬಿರುಬಿಸಿಲು ತಾಂಡವವಾಡುತ್ತಿದ್ದು, ಪೊಲೀಸ್ ಶ್ವಾನದಳದ ನಾಯಿಗಳಿರುವ ಕೊಠಡಿಗಳಿಗೆ ಕೂಲರ್ ಸೌಲಭ್ಯ ಕಲ್ಪಿಸಿರುವ ಜತೆಗೆ ಆಹಾರ ಪದ್ಧತಿಯಲ್ಲೂ ಬದಲಾವಣೆ ತರಲಾಗಿದೆ.

ಬೇಸಿಗೆಯ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ತಲುಪುತ್ತಿದ್ದಂತೆ ಪ್ರಾಣಿಗಳೂ ಹೈರಾಣಾಗಿವೆ. ಪೊಲೀಸ್ ಶ್ವಾನ ದಳದ ನಾಯಿಗಳು ತಂಪಾಗಿರಲು ಕೂಲರ್ ವ್ಯವಸ್ಥೆ ಕಲ್ಪಿಸಲಾಗಿದೆ. ಬಾಗಲಕೋಟೆ ಪೊಲೀಸ್ ಶ್ವಾನದಳದಲ್ಲಿ ಕಾನ್‌ಸ್ಟೆಬಲ್ ಹುದ್ದೆಯಲ್ಲಿರುವ ಮಾರ್ಕೋ, ನಿಧಿ, ಸಾಕ್ಷಿ, ಸಾನ್ವಿ ಹಾಗೂ ಕೃಷ್ ನಾಯಿಗಳನ್ನು ಕೂಲರ್ ಮೂಲಕ ತಂಪಾಗಿಡಲು ಪ್ರತಿ ಕೋಣೆಯಲ್ಲಿ ಕೂಲರ್ ಅಳವಡಿಕೆಯಾಗಿದೆ.

ರಾಜ್ಯದಲ್ಲಿ 270 ಪೊಲೀಸ್ ಶ್ವಾನಗಳು: ಬಳ್ಳಾರಿಯಲ್ಲಿ 6, ಬೀದರ್ 4, ವಿಜಯನಗರ 2, ಕೊಪ್ಪಳ 4, ಕಲಬುರಗಿ 5, ರಾಯಚೂರಿನಲ್ಲಿ 5 ಸೇರಿ ರಾಜ್ಯದ ನಾನಾ ಜಿಲ್ಲೆಗಳ ಶ್ವಾನದಳದಲ್ಲಿ 270 ನಾಯಿಗಳಿವೆ. ಈ ಪೈಕಿ ಲ್ಯಾಬ್ರಡಾರ್ 98, ಬೆಲ್ಜಿಯಂ ಮೆಲೋನಿಸ್ 74, ಡಾಬರ್‌ಮನ್ 61 ಮತ್ತು ಜರ್ಮನ್ ಶೆಫರ್ಡ್ 37 ನಾಯಿಗಳಿವೆ. ಅಪರಾಧಿಗಳನ್ನು ಪತ್ತೆ ಹಚ್ಚುವಲ್ಲಿ ಪೊಲೀಸ್ ಇಲಾಖೆಗೆ ನೆರವಾಗುವ ಈ ನಾಯಿಗಳ ಆರೋಗ್ಯ ಕಾಪಾಡಲು ಪೊಲೀಸ್ ಇಲಾಖೆ ಈ ಬಾರಿ ತುಸು ಹೆಚ್ಚು ಮುತುವರ್ಜಿ ವಹಿಸಿದೆ.

ರಾಯಚೂರು ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಶ್ವಾನದಳದಲ್ಲಿರುವ ನಾಯಿಗಳ ಕೊಠಡಿಗಳಿಗೆ ಕೂಲರ್ ಅಳವಡಿಸಲಾಗಿದೆ.

ಲ್ಯಾಬ್ರಡಾರ್ ಬಲು ಸೂಕ್ಷ್ಮ: ಶ್ವಾನದಳಗಳಲ್ಲಿ ಡಾಬರ್‌ಮನ್, ಲ್ಯಾಬ್ರಡಾರ್, ಜರ್ಮನ್ ಶೆಫರ್ಡ್, ಗೋಲ್ಡನ್ ರಿಟ್ರೀವರ್ ತಳಿ ಸೇರಿ ಇತರ ನಾಯಿಗಳಿವೆ. ಲ್ಯಾಬ್ರಡಾರ್ ತಳಿ ಹೆಚ್ಚು ಉಷ್ಣಾಂಶ ತಡೆದುಕೊಳ್ಳದಷ್ಟು ಸೂಕ್ಷ್ಮವಾಗಿದೆ. ಲ್ಯಾಬ್ರಡಾರ್ ಸೇರಿ ಇತರ ನಾಯಿಗಳ ಆರೋಗ್ಯ ಕಾಪಾಡಲು ಕೂಲರ್ ಅಳವಡಿಸಿ, ದೇಹ ತಂಪುಗೊಳಿಸಲಾಗುತ್ತಿದೆ. ಮತ್ತೊಂದೆಡೆ ಸುಲಭವಾಗಿ ಜೀರ್ಣವಾಗುವ ಮತ್ತು ಹೆಚ್ಚು ನೀರಿನಾಂಶ ಇರುವ ಆಹಾರ ಕೊಡಲಾಗುತ್ತಿದೆ. ರಾಗಿ ಗಂಜಿ, ಮಜ್ಜಿಗೆ, ಎಳನೀರು, ಕೆಲವೆಡೆ ಸಬ್ಬಕ್ಕಿ, ಶ್ಯಾವಿಗೆ ಪಾಯಸ ನೀಡಲಾಗುತ್ತಿದೆ. ಬಿರುಬೇಸಿಗೆ ಹಿನ್ನೆಲೆಯಲ್ಲಿ ಆಹಾರ ಮೆನುವಿನಲ್ಲಿ ಮಟನ್ ಪ್ರಮಾಣ ತಗ್ಗಿಸಲಾಗಿದೆ. ಪಶುವೈದ್ಯರ ಸಲಹೆ ಮೇರೆಗೆ ತಣ್ಣೀರಿನಲ್ಲೇ ಸ್ನಾನ ಮಾಡಿಸಲಾಗುತ್ತಿದೆ.

ಈಜುಕೊಳ ನಿರ್ಮಾಣ: ರಾಯಚೂರಿನ ಸಶಸ್ತ್ರ ಮೀಸಲು ಪಡೆ ಕಟ್ಟಡ ಮುಂಭಾಗದಲ್ಲಿ ಶ್ವಾನದಳದ ನಾಯಿಗಳಿಗೆಂದೇ 3 ಅಡಿ ಆಳ ಮತ್ತು 10 ಅಡಿ ಉದ್ದದ ಈಜುಕೊಳ ನಿರ್ಮಿಸಲಾಗುತ್ತಿದ್ದು, ಶೀಘ್ರ ಆರಂಭವಾಗಲಿದೆ. ಈ ಮೂಲಕ ನಾಯಿಗಳ ಆರೋಗ್ಯದತ್ತ ಕಾಳಜಿ ವಹಿಸಲಾಗುತ್ತಿದೆ.

ಬೇಸಿಗೆಯಲ್ಲಿ ಸಾಕು ಪ್ರಾಣಿಗಳಿಗೆ ಕಾಯಿಲೆಗಳ ಅಪಾಯ ಹೆಚ್ಚು, ಹೀಗಾಗಿ ನಿಗದಿತವಾಗಿ ವ್ಯಾಕ್ಸಿನ್ ಹಾಕಿಸಬೇಕು. ಮಜ್ಜಿಗೆ, ಹಣ್ಣು ಸೇರಿದಂತೆ ನೀರಿನ ಅಂಶ ಹೆಚ್ಚಾಗಿರುವ ಆಹಾರ ನೀಡಬೇಕು.

-**ಚೈತ್ರಾ ಪೋಲೇಶಿ** ಶ್ವಾನ ಪ್ರೇಮಿ, ಬಾಗಲಕೋಟೆ

ಶ್ವಾನದಳದ ನಾಯಿಗಳ ಆರೋಗ್ಯ ಕಾಪಾಡಲು ಕೂಲರ್ ವ್ಯವಸ್ಥೆ ಕಲ್ಪಿಸಲಾಗಿದೆ. ನೀರಿನಾಂಶ ಹೆಚ್ಚಾಗಿರುವ ಆಹಾರ ಒದಗಿಸಲಾಗುತ್ತಿದೆ. ಆಯಾಸವಾಗಬಾರದು ಎಂಬ ಕಾರಣಕ್ಕೆ ಬೆಳಗ್ಗೆ ಮಾತ್ರ ವ್ಯಾಯಾಮ ಮಾಡಿಸಲಾಗುತ್ತಿದೆ.

-**ಮುರಗೇಶ ಉಪಾಸೆ** ಡಿಎಸ್‌ಪಿ, ಸಶಸ್ತ್ರ ಮೀಸಲು ಪಡೆ, ಬಾಗಲಕೋಟೆ

ಜಿಲ್ಲೆಯಲ್ಲಿ ಈ ಬಾರಿ ಹೆಚ್ಚು ಉಷ್ಣಾಂಶ ದಾಖಲಾಗುತ್ತಿರುವುದರಿಂದ ಶ್ವಾನದಳದ ನಾಯಿಗಳ ಆರೋಗ್ಯ ಕಾಪಾಡಲು ಆದ್ಯತೆ ನೀಡಲಾಗಿದೆ. 5 ನಾಯಿಗಳಿರುವ ಕೋಣೆಗಳಿಗೆ ಪ್ರತ್ಯೇಕ ಕೂಲರ್ ಅಳವಡಿಸಲಾಗಿದೆ.

-**ಅರುಣಾಂಗ್ಶು ಗಿರಿ** ಎಸ್ಪಿ, ರಾಯಚೂರು

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1250/304/PR/251024/007179 G+14 WHITEFIELD 10 MINS. HOPEFARM METRO ₹ 72.86 L - 1.32 Cr* 8880 461 461	PRM/KA/RERA/1251/310/PR/210324/006724 G+14 SILKBOARD NEAR SINGASANDRA METRO STN. ₹ 91.27 L - 1.47 Cr* 8880 013 310	PRM/KA/RERA/1251/308/PR/291225/008366 G+22 HOSUR ROAD 10 MINS. ELECTRONIC CITY ₹ 62.71 L - 1.01 Cr* 8880 003 003	PRM/KA/RERA/1251/310/PR/150223/005721 G+14 MYSORE ROAD NEAR CHALLAGHATTA METRO STN. ₹ 75.00 L - 1.06 Cr* 8880 461 461	PRM/KA/RERA/1251/308/PR/281125/008287 G+14 JIGANI 5 MINS. APC CIRCLE ₹ 60.78 - 95.35 Lakhs* 8880 003 003	PRM/KA/RERA/1251/310/PR/151223/006489 G+3 BANASHANKARI OPP. NPS SCHOOL (3 & 4-BHK) ₹ 1.45 - 2.17 Cr* 8880 461 461
PRM/KA/RERA/1250/301/PR/251024/007178 G+14 YELAHANKA 5 MINS. RAJANUKUNTE ₹ 54.85 - 97.21 Lakhs* 8880 465 465	PRM/KA/RERA/1251/308/PR/160824/006973 G+14 BANNERGHATTA RD. NEAR KOPPA GATE ₹ 59.86 - 85.23 Lakhs* 8880 013 310	PRM/KA/RERA/1251/308/PR/230126/008427 G+4 SARJAPURA SARJAPUR - ATTIBELE ROAD ₹ 60.01 - 83.25 Lakhs* 8880 003 003	PRM/KA/RERA/1251/308/PR/160824/006972 G+4 HOSA ROAD METRO NEAR ELECTRONIC CITY ₹ 80.01 L - 1.44 Cr* 8880 013 310	PRM/KA/RERA/1251/446/PR/190301/002464 G+4 WHITEFIELD 5 MINS. KADUGODI METRO ₹ 72.00 - 86.88 Lakhs* 8880 461 461	Visit our website or talk to our advisors for the complete portfolio

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit: www.rera.karnataka.gov.in *T & C Apply

TIMES interact

Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ACADEMIC

TEACHER

SREE VENKATESHWARA English School, #1, V.S Layout, KR Puram, Bangalore- 560036 WANTED: TEACHERS PRIMARY - B.A B.Ed Social, English and Hindi Teacher. Attractive salary, Attend with Original certificates. Contact: 080 25611873, 7411135627. Email- svs.krp.bangalore@gmail.com

PREMIER HIGH SCHOOL, Srirampuram (Nr Mantri Mall) Requires Experienced Female Teachers for Nursery, Social Science, Hindi (Primary), Drawing, Craft & PE. Contact: 9538836721, 080-23421020

SUNRISE SCHOOL Requires Experienced Lady Teachers for Nursery, Primary & High School for-all Subjects (P.E Male) Coffee Board Layout, Hebbal, Call: 9008981637 Email id:- svsres21@gmail.com

WANTED Teachers : Nursery, Primary and High School Classes for all the Subjects including Computer. "SRI VIDYA KENDRA", Peenya 1st stage, Bangalore-58. Ph- 9900708182, 28398833, 41179155.

ADMINISTRATION

EXECUTIVES

30 ವರ್ಷ ಮೇಲ್ಪಟ್ಟವರು 2ನೇ ಆದಾಯ ಬಯಸುವ, ಪಾರ್ಟ್ ಟೈಮ್ನಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಪ್ರತಿದಿನ 500ಕ್ಕೂ ಹೆಚ್ಚು ಸಂಪಾದನೆ ಮಾಡುವ ಅವಕಾಶವಿದೆ.9743309498

PURCHASE

FACILITIES MANAGER- Serviced Apartments/Hotels. MG Road Area. Responsible for Purchases, Installation, Setup, R&M, etc. Coordinate with Architects, Masons, Plumbers, Electricians, etc. Knowledge of MS Office is must. Rs.25-35K. Send Resume by WA only (DONT CALL) to 7899612345

MANAGERS

ಕೃಷಿ ಜಮೀನಿಗೆ ಮ್ಯಾನೇಜರ್ ಬೇಕು. ನಿವೃತ್ತ ಪೊಲೀಸ್ / ಸೈನ್ಯ ಅಥವಾ ಕೃಷಿ ಪದವೀಧರರು. @ ಹಿರಿಯೂರು ಹತ್ತಿರ, ಚಿತ್ರದುರ್ಗ ಜಿಲ್ಲೆ, ವೇತನ ರೂ. 20,000. ಸಂಪರ್ಕಿಸಿ : 9717728402

OTHER VACANCIES

GENERAL

ಬೇಕಾಗಿದ್ದಾರೆ: ಜನೋದಯ ಸಂಸ್ಥೆಯ ವಸತಿಗೃಹಗಳನ್ನು ನಿರ್ವಹಿಸಲು SSLC / PUC / Degree / GNM ಆಗಿರುವ, ಹಿಂದಿ, ಕನ್ನಡ ಭಾಷೆ ಬಲ್ಲವರು, ಬೆಂಗಳೂರು ನಗರದಲ್ಲಿ ವಾರ್ಡನ್ / ನರ್ಸ್ / ಸಂಯೋಜಕರಾಗಿ ಕೆಲಸ ನಿರ್ವಹಿಸಲು ಮಹಿಳಾ / ಪುರುಷ ಸಿಬ್ಬಂದಿಗಳು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ - 99020 27928, 81509 79037.

ಜಾಬ್! ಜಾಬ್!! ಜಾಬ್!!! ಹೌಸ್‌ಕೀಪಿಂಗ್ ಸಿಬ್ಬಂದಿಗಳು ಮತ್ತು ಸೂಪರ್ವೈಸರ್ ಪ್ರಸಿದ್ಧ ಆಸ್ಪತ್ರೆಯಲ್ಲಿ ತುರ್ತಾಗಿ ಅಗತ್ಯವಿದೆ. ಬೆಂಗಳೂರು ಕಲ್ಯಾಣ ನಗರದಲ್ಲಿ, ಸಂಬಳ: ಸಿಬ್ಬಂದಿ ರೂ. 19,300/-, ಸೂಪರ್ವೈಸರ್ ರೂ. 23,000/-, ವಯಸ್ಸು: 18 ರಿಂದ 39 ವರ್ಷಗಳು ಕರೆ ಮಾಡಿ: 9250073007 / 9945779607

ಚಿತ್ರದುರ್ಗ ಜಿಲ್ಲೆ , ಹಿರಿಯೂರು ಸಮೀಪದ ಕೃಷಿ ಭೂಮಿಗೆ ನೋಡಿಕೊಳ್ಳಲು ಕುಟುಂಬ ಬೇಕು. ವಾಸದ ವ್ಯವಸ್ಥೆ ಪೂರೈಸಲಾಗುತ್ತದೆ. ತಿಂಗಳಿಗೆ ರೂ. 20000/- ನೀಡಲಾಗುತ್ತದೆ. ಸಂ : 9717728402

WANTED Experienced Salesman for whole Sale textiles Distributor Shop to tour Kerala/ Karnataka /Bangalore local /Tamilnadu. good salary will be given Contact : 9008490085.

MULTIPLE VACANCIES

WANTED URGENTLY ALUMINIUM FABRICATOR FITTER & HELPER. Required for BANGALORE. Contact : 93421 29815

PART TIME JOBS

CAREER OFFER For Retd Govt officials, Self Employed, Banker, Profsnls, home makers Residing in/around Bangalore only call for Regtrn 98403-64426

SECURITY

ಸೆಕ್ಯೂರಿಟಿ ಫೀಲ್ಡ್ ಆಫೀಸರ್ಸ್ Required ಹೊಸಕೋಟೆ, ಸಾಲರೀ ASS per ಕಂಪನಿ ಪಾಲಿಸಿ .ಫೋನ್ ನೋ: 6360141745

TECHNICAL

ENGINEERS

AEROSPACE Component Mfg Company requires (1).VMC Programmer (Autodesk Powermill/ Solidcam/ Mastercam) (2).Quality control Engineers Qualification: ITI/ Diploma/ B.E. "MAP SYSTEM (I) PVT LTD" Peenya Ind. Area. Contact: 831041192

SITUATION VACANT

WANTED Sales Exec for Waterproofing chemical company for Bangalore. Must own 2 wheeler, fluency in Kannada, English. Salary: 20K + Attractive incentives. Call +91 7483404532.

ಆಸ್ತಿಗಳು PROPERTY

LAND FOR SALE

FOR sale One Acre Plots on 4 lane Bengalaru - Gokarna Highway For Eco stays and resort 12 Km To Nirvana beach 20 Km to Gokarna Contact number - 6353237838

LAND FOR SALE TIRUPATI - CHENNAI HIGHWAY (Near TIRUPATI-A.P.)
11 ACRES HIGHWAY / EAST FACING (Vadamalpeta Junction)
SUITABLE FOR: ●Hotel/Resorts ●Convention Centers ●Educational Institutions ●Warehouses ●Corporate Institutions ●Villas/Residential Layouts
HIGHLIGHTS: ●Excellent Highway Frontage & Connectivity ●Rapidly Developing Commercial Zone ●24 Hours Water Facility ●Clear Title ●Single Owner
88861 17172 96768 47963

BANGALORE PROPERTIES

BTM LAYOUT

SALE: Park Facing Semi Comml BDA Plot, MICO Layout (2nd Stage BTM), G+1 Demolition house 1650 sft (30'X55') NF, 30ft Rd, Rs34,800/- per sft (5.75Cr nego), 9880075949, 7026001122, AgarwalEstates.Com

MYSORE ROAD

2 Bhk Dupliex House For Rent SLN Palmgroove Near Ramohalli, Car & Two Wheeler Parking, 24 Hours Water, Semi Furnished - Rent RS.20000 Negotiable Vegetarian Prefered Contact 9110464945/9844956610

ESTATE & PROPERTIES

NELAMANAGALA Residential site for sale 5.30x27.67 Mtrs clear Title Brahmin Street, Opp Raghavendra swamy Temple Contact- 9341299950

TIMES TRIBUTE PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ / ಇಮೇಲ್ / ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ / ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ / ಎನ್‌ಇಎಫ್‌ಟಿ / ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

OUTSIDE BANGALORE

TUMKUR

READY FOR BUILT TO SUIT Prime Vacant Land Near Tumkur Railway Station Measuring 43,834 sqft Warehouse/ Godowns Car Showrooms/ Service Centers, Hospitals etc. For more Details Please Contact 9108368836/ 9845077049

ಪ್ರವಾಸ TRAVEL

PACKAGE TOURS

20.5.26 ರಿಂದ ಹಡಗು ಮತ್ತು ವಿಮಾನದಲ್ಲಿ ಅಂಡಮಾನ್ 9 ದಿನಗಳು 10.7.26 ರಿಂದ ಅಮರನಾಥ್ ಯಾತ್ರೆ 12 ದಿನಗಳು, ಯಾತ್ರಾ ಪರ್ಮಿಟ್ ಗಾಗಿ ಈಗಲೇ ಬುಕಿಂಗ್ ಪ್ರಾರಂಭವಾಗಿದೆ. ಶ್ರೀಗಂಗಾ ಟೂರಿಸ್ಟ್ 94802 53807, 81055 22123.

9.5.2026, 2 ದಿನ ಯಾಣ, ಸಿರ್ಸಿಮಾರಿ ಕಾಂಬ, ಬನವಾಸಿ, ಗೂರವನಹಳ್ಳಿ, ಹಾಲುರಾಮೇಶ್ವರ ಇತ್ಯಾದಿ. 14.6.26 & 17.6.26, 1ದಿನ ಕೇರಳ ಕೊಟ್ಟಿಯಾರು ಮಹದೇವ 94814 33157.

ಸೇವೆಗಳು SERVICES

REPAIRS/ WATERPROOFING

WATER PROOFING HERE IS THE SOLUTION FOR LEAKAGE ... LEAKAGE ...
OLD/NEW BUILDING, Sump, Bathroom, Terrace Wallcrack Skylight, Water proofing done by New Technology. Ph: 9880916988

CAUTION NOTICE

Publication reserves the right to withhold / cancel ads without prior notice and / or assigning any reason. Refund (if any) against such unpublished ads must be claimed at the booking offices.

ಎಚ್ಚರಿಕೆ ನೋಟೀಸು

ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು / ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳ (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

More Classifieds on Page 8

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

GALLERIA

BHARATH EDUCATION SOCIETY®
BES Pre-University College of Science, Commerce & Arts
27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011
Email: principalas018@gmail.com
Website: www.besinstitutions.com
080-26637018 / 98863 52466
Free Integrated Course NEET, JEE, K-CET, COMED-K
Affordable Fee for I & II PUC Science

Sahakara Rathna B.L. Lakke Gowda
Founder
B.E.S Institutions

Sri S.T. Somashekhar
Hon. President, Bharath Education Society
MLA, Yeshwanthpura Constituency,
Former Minister, Govt of Karnataka

COURSES OFFERED FOR : 2026-27
PUC: PCMB | PCMC | HEBA | SEBA | CEBA | HEPS
Languages Offered: English, Kannada, Hindi & Sanskrit
BES EVENING PU COLLEGE OF COMMERCE & ARTS
080-26533736 / 95387 98956 Email: beseveningpucollege@gmail.com
PUC: HEBA | HEPS
Sri Nirmal Kumar K.R., President, Bharath Education Society | Prof N.S. Vijaya, Secretary, Bharath Education Society | Prof Srinivasa C., Principal, BES PU College | Sri Suresh, Principal, BES Evening PU College
BES-26708

REPCO BANK
57
Intant Property Loan / Housing Loan (For A khatha and B Khatha)



Instant Gold Loan upto 10400/- per Gram
LOCKERS AVAILABLE
*Transaction with members only
* T&C Apply
CONTACT
Yelahanka Branch - 9449803165

Celebrating Success

BNM PUBLIC SCHOOL
Affiliated to CISCE Board, New Delhi Code - KA150
12th Main, 27th Cross, BSK 2nd Stage, Bengaluru - 560070
Phone no- 080 - 26713243 | 26710873 | 26714440 Web: www.bnmps.org
Celebrating 25 Glorious Years
'17 GLORIOUS YEARS of Securing Distinction &100% First class'
The remarkable achievement stands as a testament to our consistent dedication, discipline, learning environment, and pursuit of excellence.
The Management, Principal, and Staff of BNM Public School Congratulate the following students on their excellent performance in the CISCE Board Examination of March 2026.
Remember, behind every high achiever is a story of hard work and countless study sessions. Be the author of your success.



Poorvi Madhusudhan 96.4% | Shreesha Bhat A S 94.4% | Varshitha R 94.2% | Abhishek Agarwal 94%
Swara Morajkar 91.2% | Piyush Patel 91% | Gargi Purba 89.6% | V S Tharun Reddy 89.2%
Rithvek Aditya M 89% | Zoha Shariff 89% | Hema Shree R 87.2% | Ishaan Batabyal 87.2%
Mokshith S 87% | Lia P Gowda 86.4% | Prajana Nadig 85.8% | Sidhikshaa V 84.8%

Sri. Ashok R. Maanay, Trustee & Joint Secretary, BNMEI, Vice - President, Governing Council, BNM Public School
Admissions open for CISCE Stds I to VIII and ISC XI & XII
Ms. Philomena Kenneth, Principal, BNM Public School

GET NOTICED

ಪ್ರವೇಶ ಟಿಕೆಟ್ Rs. 100/-
ಟಿಕೆಟ್ ಸ್ಥಳದಲ್ಲೇ ಲಭ್ಯ.
ಹಾಗೂ bookmyshow district ನಲ್ಲೂ ಲಭ್ಯ

THE INDIAN ARTISANS HAAT (TIAH)
ಹ್ಯಾಂಡ್‌ಲೂಮ್ಸ್ ಹ್ಯಾಂಡಿಕ್ರಾಫ್ಟ್ಸ್, ಆಂಟಿಕ್ಸ್ ಆರ್ಟಿಫ್ಯಾಕ್ಟ್ಸ್, ಹ್ಯಾಂಡ್‌ಮೇಡ್ & ಸಸ್ಟೇನಬಲ್ ಕ್ರಾಫ್ಟ್ ಎಕ್ಸ್‌ಪೋ
150+ ಪರಂಪರೆಯ ಹಾಗೂ ಪ್ರಶಸ್ತಿ ವಿಜೇತ ಕುಶಲಕರ್ಮಿಗಳಿಂದ ಪ್ರದರ್ಶನ
ಮೇ 1 ರಿಂದ 10, 2026 | ಬೆಳಗ್ಗೆ 10.30 ರಿಂದ ರಾತ್ರಿ 8.30ರವರೆಗೆ
ಜಯಮಹಲ್ ಪ್ಯಾಲೇಸ್ ಹೋಟೆಲ್, ನಂದಿದುರ್ಗ ರಸ್ತೆ, ಜಯಮಹಲ್, ಬೆಂಗಳೂರು - 560046
ಲೈವ್ ಆಕ್ಟಿವ್ ಖಾನ್ ಅವರಿಂದ 10 ದಿನಗಳವರೆಗೆ ಜನಪ್ರಿಯ ಸಂಗೀತ ಕಾರ್ಯಕ್ರಮ | ಭಾರತೀಯ ವಿಭಿನ್ನ ಭಾಗಗಳ ರುಚಿಕರ ಆಹಾರ ಮತ್ತು ತಿಂಡಿಗಳಿಗಳು

ವಾಹನ ನಿಲುಗಡೆ ಸೌಲಭ್ಯ ಲಭ್ಯ | +91 96200 26044 / 9880331685

JNANAPEETA EDUCATIONAL TRUST (R)
JNANAVAHINI PUBLIC SCHOOL
5th Main Road, 3rd Block, Nandini Layout, Opp. to Dr. Raj Punya Bhumi, Ring Road, Bangalore-96.
VAANI INTERNATIONAL PUBLIC SCHOOL
No. 10, 1st Main Road, Vidhana Soudha Layout, Lakshmidevinagar, Bangalore-560 058.
WE CONGRATULATE S.S.L.C TOPPERS 2025-26
ADMISSIONS OPEN FOR 2026-27

RAKSHA .S 609/97.44% | SAMSKRUTHI 608/97.28% | VARSHA .R 606/97 | PUNITH .J.K 604/97% | SANJEEV .M 602/96.32%
CHETHAN .A.B 594/95.04% | THANUSHREE .B 594/95.04% | AKRITI SHUKLA .A 593/95.00% | TANMAYEN .D 592/95.00% | THEJAS .A.K 592/95.00% | CHAITHANYA .H 591/95.00% | MANASA .T 590/94.40% | CHANDUSHREE .S 589/94.24% | 589/94.24% | KEERTHI .M.S 587/94.00%
JHANAVI .K 586/94.00% | KRUTHI .K 586/94.00% | SHREYA .H.M 586/94.00% | 584/93.44% | 579/93.00% | SRUSTI .H 575/92.00% | NANDHITHA .M 567/91.00% | SINCHANA .P 567/91.00% | PRIYA .M 565/90.40% | SAIRA BEE BEE 561/90.00%
MANASA .B 559/89.44% | LAKSHMI .G.K 557/89.12% | TRISHANTH .H 554/89.00% | PRAJWAL .L 553/88.48% | JEEVITHA .K.M 547/88.00% | VARSHA .M 539/86.24% | MOHAN GOWDA .H.S 532/85.12% | 531/85.00% | 531/85.00% | GAGAN RAJ .D 530/85.00%

HERITAGE PUBLIC SCHOOL
ಹೆರಿಟೇಜ್ ಪಬ್ಲಿಕ್ ಸ್ಕೂಲ್
ಶ್ರೀನಿಧಿ ಲೇಔಟ್, 7 ನೇ ಹಂತ, ಜೆ.ಪಿ. ನಗರ, ಕೋಣನಕುಂಟೆ, ಬೆಂಗಳೂರು – 560 062

Heartiest Congratulations to the Toppers of SSLC Exam 2025-26
99.04% 619/625 State 7th Rank

ಜೀವನ ಸಂಗಾತಿ

Love finds it's match.

WANTED BRIDES

ವೈವಾಹಿಕ MATRIMONIALS

WANTED BRIDES

BY CASTE

BRAHMIN

SUITABLE Match for Boy, sept 91, 5'10", Never Married, BBA, Gaur Brahmin, Own Transport Business, Mumbai, 9820101342

ಮದುವೆ–ಪುನರ್ವಿವಾಹ 37 ವರ್ಷ, 5'6", ಎಂ.ಬಿ.ಎ (MBA) ಪದವೀಧರ ಬ್ರಾಹ್ಮಣ ವರ, ವಿಚ್ಛೇದಿತ (ಸಂತಾನ ಇಲ್ಲ), ಮಂಗಳೂರಿನಲ್ಲಿ ಕೇಂದ್ರ ಸರ್ಕಾರದ ಕಂದಾಯ ಇಲಾಖೆಯಲ್ಲಿ ಸ್ಥಿರ ಉದ್ಯೋಗದಲ್ಲಿರುವವರು. ಪುನರ್ವಿವಾಹಕ್ಕಾಗಿ ಸಮಸ್ಯೆಗಳಿಲ್ಲದೆ 1990-1995ರೊಳಗಿನ ಜನನದ ಯಾವುದೇ ಪಂಗಡ ಸೂಕ್ತವಾದ ಬ್ರಾಹ್ಮಣ ವಧು ಬೇಕಾಗಿದೆ. ವಧು ಪದವೀಧರ/ಸ್ನಾತಕೋತ್ತರ, ಸಂಸ್ಕೃತಿಯುತ ಉತ್ತಮ ಗುಣ ಸ್ವಭಾವ ಹೊಂದಿರುವ ಹಾಗೂ ಕುಟುಂಬ ಮೌಲ್ಯಗಳನ್ನು ಗೌರವಿಸುವವರಾಗಿರಬೇಕು. ಮಂಗಳೂರಿನಲ್ಲಿ ನೆಲೆಸಲು/ಸ್ಥಳಾಂತರಗೊಳ್ಳಲು ಸಿದ್ಧರಾಗಿರುವವರಿಗೆ ಆದ್ಯತೆ ನೀಡಲಾಗುತ್ತದೆ. ಸಂಪರ್ಕ: 8762185170 (ಬ್ರೋಕರ್‌ಗಳು ದಯವಿಟ್ಟು ಸಂಪರ್ಕಿಸಬೇಡಿ)

KSHATRIYA

SOLANKI Rajput H'sm NM. boy 97/183cm BLR MNC 36LPA G.noida Seeks b'ful cultured &virtuous equivalent Wkg girl 9873250498(F)

BY RELIGION

CHRISTIAN

SYRIAN Catholic bridegroom, 1986, 174 cm fair, B.Tech MBA, MNC Bangalore. A fair good-looking qualified bride needed. 99720 05190.

HINDU

WANTED -BRIDE: For a Well Settled Business Man Based in Mangalore, NEVER MARRIED Hindu Brahmin , Aged: 50/ 5'11", Seeks suitable bride, 34-39 years. Caste No Bar.WhatsApp/call:7975425487

BY LANGUAGE

PUNJABI

SM4, Khatri, 21.5.95 / 11:07 PM/5'2", MSc (HM) Pusa, Sales/Mktg Mngr MNC B'lore, 15 LPA. Seeks edu. wkg bride. GGN based family. 9810975210

NM, PQM for H'Som Veg, NM, Bahl Boy, Mar'97/ 5'9, B.Tech, Del, MBA (NMIMS-Bom), Wrkg Tata Grp, Blr, 33 LPA # 9899112611/ 9811765551

MARRIAGE BUREAUS

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧು-ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
ಡಾ. ಹಿರೇಮಠ್ ಗುರೂಜಿ
94482 29184
78996 25268

ಸುಮಧ್ವ ಮ್ಯಾಟ್ರಿಮೊನಿ
www.sumadwamatrimony.com
Shakambari Nagar, Bengaluru
ಬ್ರಾಹ್ಮಣ ವಧೂ ವರಾನ್ವೇಷಣೆ
ಭಾರತ ಮತ್ತು ವಿದೇಶದಲ್ಲಿರುವ/ Abroad /PG/Doctors/ Business/Software/ Government job ಮುಂತಾದ ವರಕನ್ಯೆಯರಿದ್ದಾರೆ.
ಕಡಿಮೆ ವ್ಯಾಸಂಗ ಮಾಡಿರುವ ಬ್ರಾಹ್ಮಣ ಕನ್ಯೆಯರೂ ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : ನರಹರಿ ಸುಮಧ್ವ
9042729165/7975950334

ಮದುವೆಯಾಗಲಿಲ್ಲವೇ? ವಧು–ವರರ ಹುಡುಕಾಟದಲ್ಲಿದ್ದೀರಾ? ಶೀಘ್ರ ವಿವಾಹಕ್ಕಾಗಿ ಎಲ್ಲಾ ಜಾತಿಯ ವಧು–ವರರಿಗಾಗಿ ಸಂಪರ್ಕಿಸಿ. (ಎರಡನೇ ವಿವಾಹಕ್ಕಾಗಿಯೂ) ವಿಧವೆ, ವಿಧುರ, ವಿಚ್ಛೇದಿತರು, ಜಾತಿಯ ಅಭ್ಯಂತರವಿಲ್ಲದವರು ಸಂಪರ್ಕಿಸಬಹುದು. (ಮ್ಯಾರೇಜ್ ಬ್ಯೂರೋ) (M) 9483385177.

WANTED GROOMS

BY CASTE

BRAHMIN

(ಬ್ರಾಹ್ಮಣ): ವಯಸ್ಸು 18 ರಿಂದ 50 ವರ್ಷದೊಳಗಿನ PUC, Diploma, Degree ಕಲಿತಿರುವ ಮಧ್ಯಮ ಕುಟುಂಬದ ವಧುಗಳಿಗೆ ವರಗಳು ಬೇಕಾಗಿದ್ದಾರೆ. ಯಾವುದೇ ಉದ್ಯೋಗ, Business, ಪುರೋಹಿತರು ಅಭ್ಯಂತರವಿಲ್ಲ . (ಸಪ್ತಪದಿ ಬ್ರಾಹ್ಮಣ ವಧು – ವರ ವಿವಾಹ ವೇದಿಕೆ)-8884794406.

BY COMMUNITY

NORTH INDIAN

BEAUTIFUL & Fair Brahmin girl working at Tier-1 US MNC, 45-50LPA, 30yrs, 5'6". Affluent family settled in Bangalore. Looking for a handsome boy 5'10" & above working in good company. M:9419181698

GENERAL

CASTE NO BAR

OXFORD UK PhD 90/5'6" Girl, English professor in Bengaluru. Never married,Fair and slim. Father a Doctor Bengaluru native Seeks suitable well settled professional, businessmen. Preferably Bengaluru based HINDU family 8762014060, 6364741074

SLIM, Fair, B'ful, Never Married, Punjabi girl, 37, 5'3", born & brought up in Delhi. Working as Strategy Director in MNC in Bangalore, (Rs.60 LPA). Seeks smart, well-settled match based in Bangalore. Contact: 7837483747

WANTED BRIDE

ವಧು ಬೇಕಾಗಿದ್ದಾಳೆ
ಧಾರವಾಡ ಮೂಲದ ಲಿಂಗಾಯತ – ಬಣಜಿಗ 34 ವಯಸ್ಸು – ಪ್ರತಿಷ್ಠಿತ ಕಂಪನಿಯಲ್ಲಿ ಮ್ಯಾನೇಜರ್ ಹುದ್ದೆ / ವಾರ್ಷಿಕ ಸಂಬಳ : 10 ಲಕ್ಷ / ಎತ್ತರ 5.6 / ಸ್ನಾತಕ ಪದವೀಧರ / ಸ್ವಂತ ಮನೆ ಹಾಗೂ ಕಾರು / ಸುಸಂಸ್ಕೃತ ವರನಿಗೆ ಸ್ವಜಾತೀಯ, ಪದವೀಧರೆ ಹಾಗೂ ಉತ್ತಮ ಕುಟುಂಬದ ವಧು ಬೇಕಾಗಿದ್ದಾಳೆ.
(ಮದುವೆ ಬ್ರೋಕರ್‌ಗಳಿಗೆ ಅವಕಾಶ ಇಲ್ಲ)
ಆಸಕ್ತ ಪಾಲಕರು ಸಂಪರ್ಕಿಸಿ
9449858915

CAUTION
This newspaper does not vouch or subscribe to the claims and representations made by the advertisers regarding the particulars of status, age and income of the brides/ bridegrooms.
ADVERTISEMENT MANAGER

CAUTION
This newspaper does not vouch or subscribe to the claims and representations made by the advertisers regarding the particulars of status, age and income of the brides/ bridegrooms.
ADVERTISEMENT MANAGER

ಲಕ್ಕುಂಡಿ: 400 ಪ್ರಾಚ್ಯಾವಶೇಷ ಪತ್ತೆ

ಪ್ರಾಚ್ಯಾವಶೇಷಗಳ ಅನ್ವೇಷಣೆ ಸಪ್ತಾಹಕ್ಕೆ ಚಾಲನೆ | ಪುರಾತತ್ವ ಕೇಂದ್ರವಾಗಿಸಲು ಯೋಜನೆ

■ **ವಿಕ ಸುದ್ದಿಲೋಕ ಲಕ್ಕುಂಡಿ** (ಗದಗ)

ನೂರೊಂದು ಗುಡಿ, ನೂರೊಂದು ಬಾವಿ ಪತ್ತೆಹಚ್ಚಿ ವಿಶ್ವ ಪರಂಪರೆ ಪಟ್ಟಿಗೆ ಸೇರಿಸುವ ಪ್ರಯತ್ನವಾಗಿ ಗ್ರಾಮದ ದಂಡಿನ ದುರ್ಗಾದೇವಿ ಕೆರೆಯಲ್ಲಿ ಪತ್ತೆಯಾಗಿರುವ 400ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಸ್ಥಳಾಂತರ ಮಾಡುವುದರೊಂದಿಗೆ ಪ್ರಾಚ್ಯಾವಶೇಷಗಳ ಅನ್ವೇಷಣೆ ಸಪ್ತಾಹಕ್ಕೆ ವಿಧ್ಯುಕ್ತವಾಗಿ ಶನಿವಾರ ಚಾಲನೆ ನೀಡಲಾಯಿತು.

ಸುಮಾರು 14 ಎಕರೆ ಪ್ರದೇಶದ ಕೆರೆ ಸುತ್ತಲೂ ಮಹತ್ವದ ಪ್ರಾಚ್ಯಾವಶೇಷಗಳನ್ನು ನೂರಾರು ವರ್ಷಗಳ ಹಿಂದೆಯೇ ಮೆಟ್ಟಿಲುಗಳನ್ನಾಗಿ ಜೋಡಿಸಲಾಗಿತ್ತು. ಇವುಗಳನ್ನು ಪತ್ತೆಹಚ್ಚಿರುವ ಲಕ್ಕುಂಡಿ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರವು ವಾರದಿಂದ ಮಟ್ಟಿಲುಗಳ ಮೇಲೆ ಹಾಕಿದ್ದ ಮಣ್ಣು ಸ್ವಚ್ಛಗೊಳಿಸಿ ಪ್ರತ್ಯೇಕಗೊಳಿಸಿ ಸಂಖ್ಯೆ ಹಾಕಿದೆ. ದೊಡ್ಡ ಗಾತ್ರದ ಪ್ರಾಚ್ಯಾವಶೇಷಗಳು ಕ್ರೇನ್ ಮೂಲಕ ಎತ್ತಿ ಬಯಲು ವಸ್ತುಸಂಗ್ರಹಾಲಯಕ್ಕೆ ಸಾಗಿಸಲಾಗುತ್ತಿದೆ. ದಶ ದೇವಾಲಯ ಮತ್ತು ದಶ ಬಾವಿಗಳ ಅನಾವರಣ ಮತ್ತು ಪ್ರಾಚ್ಯಾವಶೇಷಗಳ ಅನ್ವೇಷಣೆ ಸಪ್ತಾಹ ಕಾರ್ಯಕ್ರಮಕ್ಕೆ ಆಗಮಿಸಿದ್ದ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್, ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ಸಿ.ಸಿ.ಪಾಟೀಲ್ ಅವರು ಪ್ರಾಚ್ಯಾವಶೇಷಗಳಿಗೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ನಂತರ ಕವಲೂರು ಎಂಬ ರೈತರ ಜಮೀನಿಗೆ ತೆರಳಿ ಅವರ ಜಮೀನಿಗೆ ಒಡ್ಡು ಹಾಕಿದ ಸ್ಥಳದಲ್ಲಿ ಪತ್ತೆಯಾಗಿರುವ 50ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಎಚ್.ಕೆ.ಪಾಟೀಲ್, ''ಕೆರೆ ಸುತ್ತಲೂ ಸುಂದರ ಪ್ರಾಚ್ಯಾವಶೇಷಗಳು ಪತ್ತೆಯಾಗಿವೆ. ಇವುಗಳು ಕಲ್ಯಾಣ ಚಾಲಕ್ಯ, ಹೊಯ್ಸಳ, ರಾಷ್ಟ್ರಕೂಟರ, ವಿಜಯನಗರ ಅರಸರ ಕಾಲಕ್ಕೆ ಸೇರಿದ್ದಾಗಿರಬಹುದು. ಮೊದಲ ಹಂತದ ಅನ್ವೇಷಣೆ ಕಾರ್ಯದಲ್ಲಿ 1,500ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳು ಪತ್ತೆಯಾಗಿ ಲಕ್ಕುಂಡಿ ಇತಿಹಾಸದ ಮೇಲೆ ಬೆಳಕು ಚೆಲ್ಲಿತ್ತು. ಈಗ 2ನೇ ಹಂತದ ಕಾರ್ಯಾಚರಣೆಯಲ್ಲಿ ಕೆರೆಯಲ್ಲಿ 400ಕ್ಕೂ ಹೆಚ್ಚು ಮಹತ್ವದ ಪ್ರಾಚ್ಯಾವಶೇಷಗಳು ಪತ್ತೆಯಾಗಿವೆ,'' ಎಂದರು.

''ಗ್ರಾಮದ 40 ಕಡೆ ಇಂತಹ ಪ್ರಾಚ್ಯಾವಶೇಷಗಳು ಇವೆ ಎನ್ನಲಾಗಿದ್ದು, ಇದರಲ್ಲಿ 25 ಸ್ಥಳಗಳನ್ನು ಗುರುತಿಸಲಾಗಿದೆ. ಇನ್ನೂ 15 ಕಡೆ ಗುರುತಿಸುವ ಕಾರ್ಯ ಸಾಗಿದೆ. ಮಣ್ಣಿನಲ್ಲಿ, ಮುಳ್ಳುಕೊಂಪಿಗಳಲ್ಲಿ ಮರೆಯಾಗಿದ್ದ, 10 ಗುಡಿಗಳು ಮತ್ತು 10 ಬಾವಿಗಳನ್ನು ಇಂದು ಅನಾವರಣ ಮಾಡಲಾಗಿದೆ. ಈಗಾಗಲೇ ಯುನೆಸ್ಕೊ ಪಟ್ಟಿಗೆ ಸೇರಿಸಲು ರಾಜ್ಯ ಸರಕಾರ ಪ್ರಸ್ತಾವನೆಗೆ ತಯಾರಿ ಮಾಡಿಕೊಳ್ಳುತ್ತಿದೆ. ಶೀಘ್ರದಲ್ಲಿ ಕೇಂದ್ರ ಸರಕಾರಕ್ಕೆ ಸಲ್ಲಿಸಲಾಗುತ್ತದೆ,'' ಎಂದು ತಿಳಿಸಿದರು.

''ಬಂಗಾರದ ನಾಣ್ಯಗಳಂತಹ ಅಮೂಲ್ಯ ವಸ್ತುಗಳನ್ನು ಸರಕಾರಕ್ಕೆ ಒಪ್ಪಿಸುತ್ತಿರುವ ಲಕ್ಕುಂಡಿ ಜನರ ಪ್ರಾಮಾಣಿಕತೆ ಮೆಚ್ಚುವಂತಹದ್ದು. ಲಕ್ಕುಂಡಿಯನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಬಹುದಾದ ಪುರಾತತ್ವ ಕೇಂದ್ರವನ್ನಾಗಿ ರೂಪಿಸಲು ಸರಕಾರ ಬದ್ಧವಾಗಿದೆ,'' ಎಂದರು.

ಇದೇ ಸಂದರ್ಭದಲ್ಲಿ ಶಿಲಾಯುಗದ ಕಲ್ಲಿನ ಆಯುಧಗಳು, ಮುತ್ತು, ರತ್ನ, ಹವಳ, ಹಳೆಯ ಕಾಲದ ನಾಣ್ಯಗಳನ್ನು ಸಚಿವ ಎಚ್.ಕೆ.ಪಾಟೀಲ್ ಅವರಿಗೆ ನೀಡಿದ ಬಸವರಾಜ ಹಡಗಲಿ, ವಿರೂಪಾಕ್ಷಪ್ಪ ಕಲಕೇರಿ, ಬಸಪ್ಪ ಬಡಿಗೇರ ಅವರನ್ನು ಸನ್ಮಾನಿಸಲಾಯಿತು.

ಲಕ್ಕುಂಡಿ ದುರ್ಗಾದೇವಿ ಕೆರೆಯಲ್ಲಿ ಪತ್ತೆಯಾಗಿರುವ ಪ್ರಾಚ್ಯಾವಶೇಷಗಳನ್ನು ಸಚಿವ ಎಚ್.ಕೆ.ಪಾಟೀಲ್, ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ಸಿ.ಸಿ.ಪಾಟೀಲ್ ವೀಕ್ಷಿಸಿದರು.

> ಲಕ್ಕುಂಡಿಯನ್ನು ರಾಷ್ಟ್ರಮಟ್ಟದಲ್ಲಿ ಅಗ್ರ ಪುರಾತತ್ವ ಕೇಂದ್ರವನ್ನಾಗಿ ರೂಪಿಸಲು ರಾಜ್ಯ ಸರಕಾರ ಸಮಗ್ರ ಯೋಜನೆ ರೂಪಿಸುತ್ತಿದೆ. ಮುಂದಿನ ಒಂದು ವರ್ಷದಲ್ಲಿ 100ಕ್ಕೂ ಹೆಚ್ಚು ದೇವಾಲಯ ಮತ್ತು ಬಾವಿಗಳನ್ನು ಅನಾವರಣಗೊಳಿಸುವ ಗುರಿ ಹೊಂದಲಾಗಿದೆ
>
> **-ಎಚ್.ಕೆ. ಪಾಟೀಲ್**
> ಪ್ರವಾಸೋದ್ಯಮ ಸಚಿವ

ಶಿವಮೊಗ್ಗ ಏರ್‌ಪೋರ್ಟ್ ಜೂನ್ 2ನೇ ವಾರದಲ್ಲಿ ಡಿವಿಒಆರ್ ಪೂರ್ಣ

ಶಿವಮೊಗ್ಗ: ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಪ್ರಗತಿಯಲ್ಲಿರುವ ದಿಕ್ಸೂಚಿ ಯಾಂತ್ರಿಕ ವ್ಯವಸ್ಥೆ(ಡಿವಿಒಆರ್) ಕಾಮಗಾರಿಯು ಜೂನ್ 2ನೇ ವಾರದಲ್ಲಿ ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಲು ಗಡುವು ನೀಡಲಾಗಿದೆ.

ರಾಜ್ಯ ಕೈಗಾರಿಕೆ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಜಿ.ನಂಜಯ್ಯನ ಮಠ ಅವರು ವಿಮಾನ ನಿಲ್ದಾಣಕ್ಕೆ ಶನಿವಾರ ಭೇಟಿ ನೀಡಿ ಡಿವಿಒಆರ್ ಕಾಮಗಾರಿ ಪರಿಶೀಲಿಸಿದ ಬಳಿಕ ಗುತ್ತಿಗೆದಾರರು ಮತ್ತು ಅಧಿಕಾರಿಗಳಿಗೆ ಈ ಸೂಚನೆ ನೀಡಿದರು.

''ಜೂನ್ ಮೊದಲ ವಾರ ಮತ್ತೊಮ್ಮೆ ಭೇಟಿ ನೀಡುತ್ತೇನೆ. ಅಷ್ಟರೊಳಗೆ ಕಾಮಗಾರಿ ಪೂರ್ಣಗೊಳಿಸಿರಬೇಕು. ಜೂನ್ 2ನೇ ವಾರದಿಂದ ರಾತ್ರಿ ವೇಳೆಯೂ ವಿಮಾನ ಇಳಿಯುವ ಮತ್ತು ಟೇಕ್ ಆಫ್ ಸೌಲಭ್ಯಕ್ಕೆ ಶಿವಮೊಗ್ಗ ವಿಮಾನ ನಿಲ್ದಾಣ ಸಿದ್ಧವಾಗಿರಬೇಕು,'' ಎಂದು ನಿರ್ದೇಶನ ನೀಡಿದರು.

ಇಂಡಿಗೊ ಸಂಸ್ಥೆಯು ಮೇ 1ರಿಂದ ವಿಮಾನ ಸೇವೆ ನಿಲ್ಲಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ''ಪರ್ಯಾಯ ವ್ಯವಸ್ಥೆಗಾಗಿ ಇತರ ವಿಮಾನಯಾನ ಸಂಸ್ಥೆಗಳ ಜತೆ ಮಾತುಕತೆ ನಡೆಸಲಾಗುತ್ತಿದೆ. ಶಿವಮೊಗ್ಗ-ಬೆಂಗಳೂರು ನಡುವೆ ಶೀಘ್ರ ವಿಮಾನಯಾನ ಸೇವೆ ಪುನಾರಂಭಿಸಲು ಕ್ರಮ ಕೈಗೊಳ್ಳಲಾಗುವುದು,'' ಎಂದರು.

ಈ ಸಂದರ್ಭ ಶಿವಮೊಗ್ಗ ವಿಮಾನ ನಿಲ್ದಾಣದ ನಿರ್ದೇಶಕ ಶಮಂತ್, ನಿಲ್ದಾಣದ ಹಿರಿಯ ಅಧಿಕಾರಿ ವಿದ್ಯಾಧರ ಸಾಲಿಮಠ ಇದ್ದರು.

ಪ್ರಶ್ನೆ: ಹತ್ತು ವರ್ಷದಿಂದ ಜೀವನದ ಪ್ರತಿ ಹಂತದಲ್ಲಿಯೂ ಸೋಲೇ ಸಂಗಾತಿಯಾಗಿದೆ ಗುರೂಜಿ.?

ಜನ್ಮ ದಿನಾಂಕ: 01.09.1972

ನಕ್ಷತ್ರ: ಕೃತಿಕಾ

ಪರಿಹಾರ: ವೃಷಭ ರಾಶಿಯಲ್ಲಿ ಜನಿಸಿದವರು ಬುದ್ಧಿಜೀವಿಗಳು. ನಿಮ್ಮ ಜೀವನದ ಸಾಧನೆಯ ತುತ್ತತುದಿಯನ್ನು ತಲುಪುವ ಕಾಲವಿದು. ದಾನ-ಧರ್ಮ ಮಾಡುವುದು ನಿಮಗೆ ಇಷ್ಟವಾದ ಕೆಲಸ. ಅದನ್ನು ಮುಂದುವರಿಸಿ. ರಾಶಿಯಲ್ಲಿರುವ ಶುಕ್ರನಿಗಾಗಿ ಚಂಡಿ ಪಾಠ ಮಾಡಿಸಿದರೆ ಒಳ್ಳೆಯದು.

ನೀವೂ ಪ್ರಶ್ನೆ ಕೇಳಬಹುದು...

ನೀವು ನಿಮ್ಮ ವೈಯಕ್ತಿಕ ಪ್ರಶ್ನೆಯನ್ನು ಇಲ್ಲಿ ಕೇಳಬಹುದು. **ರಾಜಗುರು ಬಿ.ಎಸ್. ದ್ವಾರಕಾನಾಥ್** ಅವರು ನಿಮ್ಮ ಒಂದು ಪ್ರಶ್ನೆಗೆ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಯನ್ನು ಜನ್ಮದಿನಾಂಕ, ಸಮಯ (ಬೆಳಗ್ಗೆ/ಮಧ್ಯಾಹ್ನ/ರಾತ್ರಿ), ಹುಟ್ಟಿದ ಸ್ಥಳ, ರಾಶಿ-ನಕ್ಷತ್ರದೊಂದಿಗೆ ಈ ಕೆಳಗಿನ ನಂಬರ್‌ಗೆ ವಾಟ್ಸ್‌ಆ್ಯಪ್ ಮಾಡಿ. ದಿನಕ್ಕೊಬ್ಬರ ಪ್ರಶ್ನೆಗೆ ಉತ್ತರ ಪ್ರಕಟಿಸಲಾಗುವುದು.

ವಾಟ್ಸ್‌ಆ್ಯಪ್ ಸಂಖ್ಯೆ: 6366422240

ಪಂಚಾಂಗ 03-05-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ. **ಋತು:** ವಸಂತ. **ಮಾಸ:** ವೈಶಾಖ. **ಪಕ್ಷ:** ಕೃಷ್ಣ. **ಮಳೆ ನಕ್ಷತ್ರ:** ಭರಣಿ. **ನಿತ್ಯನಕ್ಷತ್ರ:** ವಿಶಾಖಾ. **ತಿಥಿ:** ಬಿದಿಗೆ. **ಯೋಗ:** ವರೀಯಾನ್. **ಕರಣ:** ತೈತಿಲ. **ವಾರ:** ಭಾನುವಾರ.

ರಾಹು ಕಾಲ: **ಸಂ. 4.30 - 6.00**
ಗುಳಿಕ ಕಾಲ: ಮ. 3.00-4.30
ಯಮಗಂಡ ಕಾಲ: **ಮ. 12.00-1.30**
ಸೂರ್ಯ ಉದಯ: **ಬೆ. 5.59**
ಸೂರ್ಯ ಅಸ್ತ: **ಸಂ. 6.34**

ಕೆಳಮಟ್ಟದಲ್ಲಿ ಹಾರಿದ ವಿಮಾನ, ಜನರಿಗೆ ಆತಂಕ

ಶಿರಸಿ (ಉ.ಕನ್ನಡ): ತಾಲೂಕಿನ ಗ್ರಾಮೀಣ ಭಾಗದಲ್ಲಿ ಎರಡು ದಿನದಿಂದ ಕೆಳಮಟ್ಟದಲ್ಲಿ ವಿಮಾನ ಹಾರಾಟ ನಡೆಸಿರುವುದು ಕುತೂಹಲ ಮತ್ತು ಜನರಲ್ಲಿ ಆತಂಕ ಮೂಡಿಸಿದೆ.

ಪಶ್ಚಿಮಘಟ್ಟ ಪ್ರದೇಶದ ಭೌಗೋಳಿಕ ಅಂಶಗಳ ಬಗ್ಗೆ ಸಮೀಕ್ಷೆ ನಡೆಸುವುದಕ್ಕೆ ಈ ವಿಮಾನ ಹಾರಾಟ ಮಾಡುತ್ತಿದೆ ಎಂಬುದಾಗಿ ಮೂಲಗಳು ತಿಳಿಸಿವೆ. ಈ ಬಗ್ಗೆ ಮಾಹಿತಿ ಇಲ್ಲದ ಸಾರ್ವಜನಿಕರು, ವಿಮಾನ ಇಷ್ಟು ಕೆಳಮಟ್ಟದಲ್ಲಿ ಹಾರಾಡುತ್ತಿದೆ ಎಂದು ಬರೂರು, ಉಂಚಳ್ಳಿ, ಬನವಾಸಿ, ಹೇರೂರು, ಹೆಗ್ಗರಣಿ ಹೀಗೆ ಅನೇಕ ಗ್ರಾಮಸ್ಥರು ಪ್ರಶ್ನಿಸುತ್ತಿದ್ದರು.

''ಮಂಗಳೂರು ವಿಮಾನ ನಿಲ್ದಾಣದಿಂದ ಹಾರಾಟ ನಡೆಸಿ ಚಿಕ್ಕಮಗಳೂರು ಹಾಗೂ ಪಶ್ಚಿಮಘಟ್ಟ ಪ್ರದೇಶದಲ್ಲಿ ವೈಮಾನಿಕ ಸಮೀಕ್ಷೆ ಮಾಡುತ್ತಿದೆ. ಆಸ್ಟ್ರೇಲಿಯಾದಲ್ಲಿ ನೋಂದಾಯಿತ ವಿಮಾನ ಇದಾಗಿದ್ದು, ಭೂಮಿಯ ಅಡಿಭಾಗವನ್ನು ಮ್ಯಾಪಿಂಗ್ ಮಾಡುವ ಕಂಪನಿಯಿಂದ ಈ ಕೆಲಸ ನಡೆಸುತ್ತಿದೆ. ವಿಮಾನದ ಹಿಂಭಾಗದಲ್ಲಿ ಉದ್ದವಾದ ಸೂಜಿ ತರಹ ಕಾಣುವ ಸಾಧನ ಇದ್ದು, ಇದನ್ನು 'ಮ್ಯಾಗ್ನೆಟೋಮೀಟರ್ ಸ್ಟಿಂಗರ್' ಎಂದು ಕರೆಯುತ್ತಾರೆ. ಇದು ಭೂಮಿಯ ಕಾಂತೀಯ ವ್ಯತ್ಯಾಸಗಳನ್ನು ಅಳೆಯಲು ಬಳಸಲಾಗುತ್ತದೆ.

ವಾಣಿಜ್ಯ ವಿಮಾನಗಳಿಗಿಂತ ಕಡಿಮೆ ಎತ್ತರದಲ್ಲಿ ಜಿಗ್‌ಜಾಗ್ ಅಥವಾ ಜಾಲರಿಯ ರೀತಿಯಲ್ಲಿ ಈ ವಿಮಾನ ಹಾರಾಟ ನಡೆಸುತ್ತದೆ. ಅದೇ ಪ್ರದೇಶದ ಮೇಲೆ ಮತ್ತೆಮತ್ತೆ ಹಾರುತ್ತದೆ.ಇದು ಖನಿಜ ಸಂಪತ್ತು, ಭೂಗರ್ಭ ಜಲ ಸಂಪನ್ಮೂಲ, ಕಾಂತೀಯ ಕ್ಷೇತ್ರದ ಬದಲಾವಣೆಗಳನ್ನು ಗ್ರಹಿಸುತ್ತದೆ. ಇದು ಅಧಿಕೃತ ವೈಜ್ಞಾನಿಕ ಕಾರ್ಯ ಮಾತ್ರವಾಗಿದ್ದು, ಯಾವುದೇ ಅನುಮಾನಾಸ್ಪದ ಅಥವಾ ಸೈನಿಕ ಚಟುವಟಿಕೆಯಲ್ಲ ಎಂಬ ಮಾಹಿತಿ ಲಭ್ಯವಾಗಿದೆ.

ಪಶ್ಚಿಮಘಟ್ಟ ಪ್ರದೇಶದಲ್ಲಿ ವೈಮಾನಿಕ ಸಮೀಕ್ಷೆ

ಬಹಿಷ್ಕಾರ, ದೂರು ದಾಖಲು

ಬಾಗಲಕೋಟೆ: ಜಿಲ್ಲೆಯ ಜಮಖಂಡಿ ತಾಲೂಕಿನ ಹುಣಸಿಕಟ್ಟಿ ಗ್ರಾಮದಲ್ಲಿ 7 ಕುಟುಂಬಗಳಿಗೆ ಬಹಿಷ್ಕಾರ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಾಗಿದೆ. ಜಮಖಂಡಿಯ ಕಂದಾಯ ನಿರೀಕ್ಷಕರು ನೀಡಿದ ದೂರಿನ ಮೇರೆಗೆ ಜಮಖಂಡಿ ಗ್ರಾಮೀಣ ಠಾಣೆಯಲ್ಲಿ ಶುಕ್ರವಾರ ದೂರು ದಾಖಲಿಸಲಾಗಿದೆ. ಗ್ರಾಮದ ಐವರು ಹಾಗೂ ಇತರರ ವಿರುದ್ಧ ಸಾಮಾಜಿಕ ಶಾಂತಿ ಕದಡುವ, ಮತ್ತೊಬ್ಬರನ್ನು ಉದ್ದೇಶಪೂರ್ವಕ ಅವಮಾನಿಸಿದ ಆರೋಪದ ಮೇಲೆ ದೂರು ದಾಖಲಿಸಿ ಕೊಳ್ಳಲಾಗಿದೆ. ಹನುಮಂತ ದೇವರ ಜಾತ್ರೆ ಸಂದರ್ಭದಲ್ಲಿ ದೇಣಿಗೆ ನೀಡಲಿಲ್ಲ ಎಂಬ ಕಾರಣಕ್ಕೆ 7 ಕುಟುಂಬಗಳ ವಿರುದ್ಧ ಬಹಿಷ್ಕಾರದ ಡಂಗುರ ಸಾರಲಾಗಿತ್ತು. ಈ ಹಿನ್ನೆಲೆಯಲ್ಲಿ ನೊಂದವರು ಜಿಲ್ಲಾಧಿಕಾರಿಗೆ ದೂರು ಸಲ್ಲಿಸಿದ ಬಳಿಕ ಪ್ರಕರಣ ಬೆಳಕಿಗೆ ಬಂದಿತ್ತು.

ಗೂಡಂಗಡಿಗೆ ನೆರವಾದ ಗೃಹಲಕ್ಷ್ಮಿ ಯೋಜನೆ ಹಣ

ಕೊಟ್ಟೂರು (ವಿಜಯನಗರ): ತಾಲೂಕಿನ ಹರಾಳು ಗ್ರಾಮದ ಎನ್.ವಿಶಾಲಾಕ್ಷಿ ಅವರು ಕುಟುಂಬದ ವೆಚ್ಚವನ್ನು ನಿಭಾಯಿಸಲು ಗೃಹಲಕ್ಷ್ಮಿ ಹಣದಲ್ಲಿ ಸಣ್ಣ ಗೂಡಂಗಡಿಯನ್ನು ಆರಂಭಿಸಿದ್ದಾರೆ. ಕೃಷಿಕರಾದ ಪತಿ ಬಸವರಾಜ ಜತೆ ಹೊಲ, ಮನೆ ಕೆಲಸ ಮಾಡಿಕೊಂಡಿದ್ದ ವಿಶಾಲಾಕ್ಷಿ ಅವರು ಹೆಚ್ಚುವರಿ ಆದಾಯ ಪಡೆಯಲೆಂದು ಈ ಪ್ರಯತ್ನ ನಡೆಸಿದ್ದಾರೆ.

ಬೇಸಿಗೆಯಲ್ಲಿ ತಣ್ಣನೆ ಬದುಕು: ಏಪ್ರಿಲ್ ಆರಂಭದಿಂದ ಗೂಡಂಗಡಿ ಆರಂಭಿಸಿರುವ ಇವರು, ಬೇಸಿಗೆ ಹಿನ್ನೆಲೆಯಲ್ಲಿ ಐಸ್ ಕ್ರೀಂ ಮಾರಾಟಕ್ಕೂ ಮುಂದಾಗಿದ್ದಾರೆ. ಐಸ್ ಕ್ರೀಂ ಏಜೆನ್ಸಿಯವರು ಉಚಿತವಾಗಿ ಫ್ರಿಜ್ ನೀಡಿದ್ದಾರೆ. ನಿತ್ಯ 1,500 ರೂ.ವರೆಗೆ ಐಸ್ ಕ್ರೀಂ ವ್ಯಾಪಾರವಾಗುತ್ತಿದ್ದು 400 ರೂ. ಲಾಭ ಕೈಸೇರುತ್ತಿದೆ. ಇದರ ಜತೆಗೆ ಹಾಲು, ಮೊಸರು, ಮಜ್ಜಿಗೆ, ತಂಪು ಪಾನೀಯ, ತಿನಿಸುಗಳ ಮಾರಾಟವನ್ನೂ ಮಾಡುತ್ತಾರೆ. ಬೇಸಿಗೆ ನಂತರ ಕಿರಾಣಿ ವ್ಯಾಪಾರ ಆರಂಭಿಸುವ ಚಿಂತನೆಯನ್ನೂ ನಡೆಸಿದ್ದಾರೆ.

PM SHRI SCHOOL
JAWAHAR NAVODAYA VIDYALAYA D.M.G Halli Post, Mysore-570 026
Tel:0821-2970040
e-mail:jnvmys@gmail.com

CORRIGENDUM FOR OPENING OF TENDER

F.No.5-1/T-1/JNVMY/2026-27/Dated:02-05-2026

Due to administrative reasons the Issuing of Tender forms and opening date of the Tender has been rescheduled.

The last date for submission of tenders in sealed envelope separately super scribbling **"Technical Bid"** and **"Financial Bid"** in the office of the undersigned is 1.00 pm on 09-05-2026 instead of 06.05.2026.

The Tender which was earlier scheduled to be opened on 08-05-2026, is now rescheduled to 11-05-2026 at 11.am.

Sd/-
Principal
PM SHRI SCHOOL, JNV-MYSURU
D.M.G. HALLI-570 02

ಸತ್ಯಮೇವ ಜಯತೇ Government of India

ಕರ್ನಾಟಕದಲ್ಲಿ ಕಾರ್ಮಿಕರಿಗೆ ಆರೋಗ್ಯ ಸೇವೆಯನ್ನು ಬಲಪಡಿಸುವತ್ತ

"ನಮ್ಮ ಸರ್ಕಾರ ಎಲ್ಲಾ ಕಾರ್ಮಿಕರಿಗಾಗಿ ಉದಾರ ಮತ್ತು ಸಮಗ್ರ ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಬದ್ಧವಾಗಿದೆ।"
ನರೇಂದ್ರ ಮೋದಿ
ಪ್ರಧಾನಮಂತ್ರಿ

100 ಹಾಸಿಗೆಗಳ ಇಎಸ್‌ಐಸಿ ಆಸ್ಪತ್ರೆ
ದೊಡ್ಡಬಳ್ಳಾಪುರ, ಕರ್ನಾಟಕ
ಉದ್ಘಾಟನೆ
ಮತ್ತು
100 ಹಾಸಿಗೆಗಳ ಇಎಸ್‌ಐಸಿ ಆಸ್ಪತ್ರೆ
ಬಳ್ಳಾರಿ, ಕರ್ನಾಟಕ
ಶಿಲಾನ್ಯಾಸ

ಇವರಿಂದ
ಡಾ. ಮನ್ಸುಖ್ ಮಾಂಡವಿಯಾ
ಕಾರ್ಮಿಕ ಮತ್ತು ಉದ್ಯೋಗ ಸಚಿವರು ಹಾಗೂ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವರು, ಭಾರತ ಸರ್ಕಾರ

ಗೌರವಾನ್ವಿತ ಉಪಸ್ಥಿತಿ
ಸುಶ್ರೀ ಶೋಭಾ ಕರಂದ್ಲಾಜೆ
ರಾಜ್ಯ ಸಚಿವರು, ಕಾರ್ಮಿಕ ಮತ್ತು ಉದ್ಯೋಗ ಹಾಗೂ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಭಾರತ ಸರ್ಕಾರ

ಭಾನುವಾರ, 3ನೇ ಮೇ, 2026 | ಬೆಳಿಗ್ಗೆ 10:30 ಗಂಟೆಗೆ
ಇಎಸ್‌ಐಸಿ ಆಸ್ಪತ್ರೆ, ದೊಡ್ಡಬಳ್ಳಾಪುರ, ಕರ್ನಾಟಕ

ಮುಖ್ಯ ವೈಶಿಷ್ಟ್ಯಗಳು

- ಆಧುನಿಕ ವೈದ್ಯಕೀಯ ಸೌಲಭ್ಯಗಳೊಂದಿಗೆ ಅತ್ಯಾಧುನಿಕ ಆಸ್ಪತ್ರೆಗಳು
- ಸಮಗ್ರ ಆರೋಗ್ಯ ಸೇವೆಗಳಿಗಾಗಿ ಎಲ್ಲಾ ಸೌಲಭ್ಯಗಳೊಂದಿಗೆ 5 ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗಿದೆ
- ದೊಡ್ಡಬಳ್ಳಾಪುರ ಆಸ್ಪತ್ರೆಯಿಂದ ಸುಮಾರು 1.50 ಲಕ್ಷ ಕಾರ್ಮಿಕರು ಮತ್ತು ಅವರ ಕುಟುಂಬಗಳಿಗೆ ಪ್ರಯೋಜನವಾಗುತ್ತದೆ
- ಬಳ್ಳಾರಿ ಆಸ್ಪತ್ರೆ ನಿರ್ಮಾಣವಾದ ನಂತರ ಸುಮಾರು 64,000 ಕಾರ್ಮಿಕರು ಮತ್ತು ಅವರ ಕುಟುಂಬಗಳಿಗೆ ಪ್ರಯೋಜನವಾಗುತ್ತದೆ

ಭಾರತದಲ್ಲಿ ಇಎಸ್‌ಐ ಯೋಜನೆ

- 167 ಆಸ್ಪತ್ರೆಗಳು
- 1603 ಔಷಧಾಲಯಗಳು
- 728 ಜಿಲ್ಲೆಗಳು ಒಳಗೊಂಡಿವೆ
- 3.84 ಕೋಟಿ ವಿಮಾದಾರರು
- 14.91 ಕೋಟಿ ಫಲಾನುಭವಿಗಳು

ಹೆಚ್ಚಿನ ವಿವರಗಳಿಗೆ ಭೇಟಿ ನೀಡಿ: https://www.esic.gov.in/
ಅಥವಾ ಟೋಲ್-ಫ್ರೀ ಸಂಖ್ಯೆ 1800-11-2526 ಗೆ ಕರೆ ಮಾಡಿ

ನೇರಪ್ರಸಾರವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸೈಬೋರ್ಗ್ ಕೀಟಗಳು

ಜಿರಳೆಗಳನ್ನು ಯೋಧರನ್ನಾಗಿ ಅಥವಾ ಬೇಹುಗಾರಿಕೆಗೆ ಬಳಸಬಹುದೆ? ಮನುಷ್ಯ ಹೋಗಲಾರದ ಜಾಗಕ್ಕೆ ಇವುಗಳನ್ನು ಕಳುಹಿಸಿ ಅಲ್ಲಿಂದ ಮಾಹಿತಿ ಪಡೆಯಲು ಸಾಧ್ಯವೆ? 'ಹೌದು' ಎನ್ನುತ್ತದೆ ಇತ್ತೀಚಿನ ಆವಿಷ್ಕಾರಗಳು. ಮಡಗಾಸ್ಕರ್ ಹಿಸ್ಸಿಂಗ್ ಎನ್ನುವ ಪ್ರಭೇದದ (Gromphadorhina portentosa) ಜಿರಳೆಗಳ ಬೆನ್ನಮೇಲೆ ಮೈಕ್ರೊಕಂಟ್ರೋಲರ್ ಬ್ಯಾಕ್‌ಪ್ಯಾಕ್ ಹಾಕಿ ದೂರದಿಂದಲೇ ನಿಯಂತ್ರಿಸುವ ತಂತ್ರಜ್ಞಾನವನ್ನು ಸಿಂಗಾಪುರದ ನಾನ್ಯಾಂಗ್ ತಾಂತ್ರಿಕ ವಿಶ್ವವಿದ್ಯಾಲಯ ಸಿದ್ಧಪಡಿಸಿದೆ.

ವಿಕ AI ಲೋಕ



ಸುಮಾರು 5 ಇಂಚು ಉದ್ದದ ಈ ಜಿರಳೆಗಳು 15 ಗ್ರಾಂ ತೂಕದ ಇನ್ಫ್ರಾರೆಡ್ ಕ್ಯಾಮೆರಾ ಹಾಗೂ ಜಾಗವನ್ನು ಗುರುತಿಸಲು ಸಮರ್ಥವಿರುವ ಪ್ರೊಸೆಸರ್ ಹೊತ್ತು ಹೋಗಬಲ್ಲವು. ಹೀಗೆ ಜೀವಿ ಮತ್ತು ಯಂತ್ರವನ್ನು ಜತೆಜತೆಯಾಗಿ ಬಳಸುವ ತಂತ್ರಜ್ಞಾನಕ್ಕೆ 'ಬಯೋ ಹೈಬ್ರಿಡ್ ರೋಬಾಟಿಕ್ಸ್' ಎನ್ನುತ್ತಾರೆ. ಇದನ್ನು ಕಟ್ಟಡಗಳ ಅವಶೇಷಗಳಡಿ ಹರಿದಾಡಲು ಬಿಟ್ಟು ಅಲ್ಲಿ ಸಿಕ್ಕಿಬಿದ್ದಿರುವ ಜೀವವನ್ನು ಹುಡುಕುವ ಪ್ರಕ್ರಿಯೆಗೆ ಬಳಸಿಕೊಳ್ಳಬಹುದು. ಅವುಗಳನ್ನು ಕ್ಷೇತ್ರಕಾರ್ಯಕ್ಕೆ ಬಿಡುವ ಮುನ್ನ ಪ್ರಯೋಗಾಲಯದಲ್ಲಿ ತರಬೇತಿ ನೀಡಲಾಗುತ್ತದೆ, ಅದನ್ನು 'ಸೈಬೋರ್ಗ್ ಕೊಕ್ರೊಚ್ ಲ್ಯಾಬ್' ಎನ್ನುತ್ತಾರೆ. ಎಲೆಕ್ಟ್ರಿಕಲ್ ಸಂಜ್ಞೆ ಹಾಗೂ ಕೃತಕ ಬುದ್ಧಿಮತ್ತೆ ಎರಡನ್ನೂ ಬಳಸಿ ಜಿರಳೆಗಳನ್ನು ದೂರದಿಂದಲೇ ನಿಯಂತ್ರಿಸಲು ಸಾಧ್ಯ.

ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

■ **ವಿಕ್ರಂ ಜೋಶಿ**
ಎಐ ವಿಶ್ಲೇಷಕರು

ಮಂಗಳೂರಲ್ಲಿ ಹೈಕೋರ್ಟ್ ಪೀಠ ಪ್ರಸ್ತಾವ ಮುನ್ನೆಲೆಗೆ

ಕರಾವಳಿ ಭಾಗದ ನ್ಯಾಯಯುತ ಬೇಡಿಕೆ ಶತಾಯ ಗತಾಯ ಈಡೇರಿಕೆಗೆ ಪ್ರಬಲ ಲಾಬಿ

■ **ಶ್ರೀಕಾಂತ್ ಹುಣಸವಾಡಿ** ಬೆಂಗಳೂರು
Srikanth.G@timesofindia.com

ಕರಾವಳಿ ಭಾಗದ ಜನರು ನ್ಯಾಯ ಕೋರಿ ಹೈಕೋರ್ಟ್ ಪ್ರಧಾನ ಪೀಠ ತಲುಪಲು ನೂರಾರು ಕಿಲೋಮೀಟರ್ ಕ್ರಮಿಸುವುದನ್ನು ತಪ್ಪಿಸಲು ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆ ಮಾಡಬೇಕೆಂಬ ಕೂಗು ಮತ್ತೆ ಮುನ್ನೆಲೆಗೆ ಬಂದಿದೆ.

ಕಳೆದ ಕೆಲ ವರ್ಷಗಳಿಂದ ಸಣ್ಣ ಪ್ರಮಾಣದಲ್ಲಿದ್ದ ಕೂಗು ಈಗ ದೊಡ್ಡದಾಗಿದೆ. ಬೇಡಿಕೆಯನ್ನು ಪ್ರಬಲವಾಗಿ ಮಂಡಿಸಲು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ ಅಧ್ಯಕ್ಷತೆಯಲ್ಲಿ ಹೋರಾಟ ಕ್ರಿಯಾ ಸಮಿತಿ ರಚಿಸಿಕೊಂಡು ಹಲವು ಸುತ್ತಿನ ಸಭೆಗಳನ್ನು ನಡೆಸಿ, ರಾಜಕೀಯ ಸೇರಿದಂತೆ ಎಲ್ಲಾ ವಲಯಗಳಿಂದಲೂ ಒತ್ತಡ ಹೇರಲು ಕಾರ್ಯಯೋಜನೆ ಹಾಕಿಕೊಳ್ಳಲಾಗಿದೆ.

ಅದರ ಮೊದಲ ಭಾಗವಾಗಿ ಕಳೆದ ವಾರ ಮಂಗಳೂರು ವಕೀಲರ ಸಂಘದ ಅಧ್ಯಕ್ಷ ಎಚ್.ವಿ.ರಾಘವೇಂದ್ರ ರಾವ್ ನೇತೃತ್ವದ ನಿಯೋಗ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರಿಗೆ ಸಂಚಾರಿ ಪೀಠದ ಬೇಡಿಕೆಯ ಅಧಿಕೃತ ಮನವಿ ಸಲ್ಲಿಸಿದೆ. ಸಿಜೆ ಪ್ರಸ್ತಾವದ ಬಗ್ಗೆ ಪರಿಶೀಲನೆ ಮಾಡಲಾಗುವುದೆಂಬ ಭರವಸೆ ನೀಡಿದ್ದಾರೆಂದು ನಿಯೋಗ ತಿಳಿಸಿದೆ.

ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್ ಮತ್ತು ದಕ್ಷಿಣ ಕನ್ನಡದವರೇ ಆದ ನ್ಯಾ.ರಾಜೇಶ್ ರೈ ಅವರಿಗೂ ನಿಯೋಗ ಮನವಿ ಸಲ್ಲಿಸಿದೆ. ಜತೆಗೆ ಈ ಪ್ರಸ್ತಾವಕ್ಕೆ ಆಂಧ್ರಪ್ರದೇಶದ ರಾಜ್ಯಪಾಲ, ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾ. ಎಸ್. ಅಬ್ದುಲ್ ನಜೀರ್, ಸ್ಪೀಕರ್ ಯು.ಟಿ.ಖಾದರ್ ಕೂಡ ಬೆಂಬಲಿಸಿದ್ದಾರೆ.

ಸಂಚಾರಿ ಪೀಠ ಬೇಡಿಕೆ ಅಪ್ರಸ್ತುತ

ಈ ಮಧ್ಯೆ, ಇಂದಿನ ಡಿಜಿಟಲ್ ಯುಗದಲ್ಲಿ ಸಂಚಾರಿ ಪೀಠದ ಬೇಡಿಕೆ ಅಪ್ರಸ್ತುತ. ಏಕೆಂದರೆ, ಕಕ್ಷಿದಾರರಿಗೆ ಇ-ಫೈಲಿಂಗ್‌ಗೆ ಅವಕಾಶವಿದೆ. ಎಲ್ಲಾ ಕೋರ್ಟ್ ಕಲಾಪಗಳು ವಿಡಿಯೊ ಕಾನ್ಫರೆನ್ಸ್ (ವಿಸಿ) ಮೂಲಕ ನಡೆಯಲಿದ್ದು, ವಕೀಲರು ಸೇರಿ ಯಾವೊಬ್ಬ ಕಕ್ಷಿದಾರರು ಖುದ್ದು ನ್ಯಾಯಾಲಯಗಳಿಗೆ ಹಾಜರಾಗುವ ಅಗತ್ಯವಿಲ್ಲ. ವಿಡಿಯೊ ಕಾನ್ಫರೆನ್ಸ್ ಮೂಲಕವೇ ವಾದ ಮಂಡಿಸ ಬಹುದಾಗಿದೆ. ಜತೆಗೆ, ಸಂಚಾರಿ ಪೀಠ ಸ್ಥಾಪನೆಗೆ ಕೋಟಿಗಟ್ಟಲೆ ಹಣ ಖರ್ಚಾಗುವುದಲ್ಲದೆ, ಸಿಬ್ಬಂದಿ ಮತ್ತು ಮೂಲಸೌಕರ್ಯ ಒದಗಿಸುವ ಸವಾಲುಗಳು ಎದುರಾಗಲಿವೆ ಎನ್ನುತ್ತದೆ ನ್ಯಾಯವಾದಿಗಳ ತಂಡ.

ಸಾಧಕ-ಬಾಧಕ ಅಧ್ಯಯನ: ಈ ಮಧ್ಯೆ, ಸಮಿತಿ ಜಿಲ್ಲಾಡಳಿತಕ್ಕೆ ಸಂಚಾರಿ ಪೀಠ ಸ್ಥಾಪನೆಗೆ ಅಗತ್ಯ ಮೂಲಸೌಕರ್ಯ ಸಿದ್ಧಪಡಿಸಿಕೊಳ್ಳುವಂತೆ ಮನವಿ ಸಲ್ಲಿಸಿದೆ. ಸದ್ಯಕ್ಕೆ ಹಳೆಯ ಜಿಲ್ಲಾಧಿಕಾರಿ ಕಚೇರಿ ಖಾಲಿ ಇದ್ದು, ಆ ಕಟ್ಟಡದಲ್ಲಿ ಸಂಚಾರಿ ಪೀಠ ಆರಂಭಿಸಬಹುದೆಂದು ಹೇಳಲಾಗುತ್ತಿದೆ. ಜತೆಗೆ, ಸಂಚಾರಿ ಪೀಠ ಆರಂಭಕ್ಕೆ ಇತರೆ ಅಗತ್ಯ ಮೂಲಸೌಕರ್ಯವೂ ಲಭ್ಯವಿದೆ ಎಂಬ ಅಂಶವನ್ನು ನಿಯೋಗ ಸಿಜೆ ಗಮನಕ್ಕೆ ತಂದಿದೆ. ಇತ್ತೀಚೆಗೆ ಮಂಗಳೂರಿಗೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಕರಾವಳಿಯಲ್ಲಿ ಸಂಚಾರಿ ಪೀಠ ಸ್ಥಾಪನೆಯಾಗಬೇಕೆಂದು ಆಗ್ರಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಆರಂಭಕ್ಕೆ ಮೊದಲು ಸಿಜೆ ಸಾಧಕ-ಬಾಧಕ ಅಧ್ಯಯನಕ್ಕೆ ಸಮಿತಿ ರಚಿಸಬೇಕಾಗುತ್ತದೆ. ಆ ಸಮಿತಿ ಸ್ಥಳ ಪರಿಶೀಲನೆ ನಡೆಸಿ ಪೀಠ ಸ್ಥಾಪನೆ ಸಾಧ್ಯಾ-ಸಾಧ್ಯತೆಗಳ ಬಗ್ಗೆ ವರದಿ ನೀಡಿದ ಬಳಿಕ ಮುಂದಿನ ಪ್ರಕ್ರಿಯೆ ನಡೆಯುತ್ತವೆ ಎಂದು ಹೇಳಲಾಗಿದೆ.

ಶೇ.33ರಷ್ಟು ಪ್ರಕರಣ: ಕರಾವಳಿ ಭಾಗದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಸೇರಿಸಿಕೊಂಡು ಸಂಚಾರಿ ಪೀಠವನ್ನು ರಚಿಸಬೇಕೆಂಬುದು ಮೂಲ ಬೇಡಿಕೆಯಾಗಿದೆ. ಜತೆಗೆ, ಪೀಠದ ವ್ಯಾಪ್ತಿಗೆ ಆ ಮೂರು ಜಿಲ್ಲೆಗಳಿಗೆ ಹೊಂದಿಕೊಂಡಿರುವ ಕೊಡಗು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನೂ ಸೇರಿಸಿಕೊಳ್ಳಬೇಕೆಂಬ ಆಗ್ರಹವೂ ಇದೆ.

"ಹೈಕೋರ್ಟ್‌ನಲ್ಲಿ ಸದ್ಯ ಬಾಕಿ ಇರುವ 3.33 ಲಕ್ಷ ಪ್ರಕರಣಗಳ ಪೈಕಿ ಈ ಜಿಲ್ಲೆಗಳು ಶೇ.33ರಷ್ಟು ಪ್ರಕರಣಗಳನ್ನು ಪ್ರತಿನಿಧಿಸುತ್ತವೆ. ಹಾಗಾಗಿ, ಸಂಚಾರಿ ಪೀಠ ಸ್ಥಾಪನೆ ಮಾಡಲೇಬೇಕೆಂಬ ಕಾನೂನುಬದ್ಧ ಬೇಡಿಕೆ ಮಂಡಿಸಲಾಗುತ್ತಿದೆ," ಎಂದು ಹೋರಾಟ ಸಮಿತಿ ಆಗ್ರಹಿಸಿದೆ.

ಮಂಗಳೂರಿಗೆ ರಸ್ತೆ, ವಿಮಾನ, ರೈಲು ಹಾಗೂ ಬಂದರು ಸೇರಿ ಎಲ್ಲಾ ರೀತಿಯ ಸಂಪರ್ಕ ಲಭ್ಯವಿದ್ದು, ಮಂಗಳೂರಿನಲ್ಲಿ ಸಂಚಾರಿ ಪೀಠ ಸ್ಥಾಪಿಸುವುದರಿಂದ ಇಡೀ ಕರಾವಳಿ ಭಾಗದ ಜನತೆಗೆ ಅನುಕೂಲವಾಗುತ್ತದೆ ಎಂಬುದು ಸಮಿತಿಯ ಅಭಿಮತವಾಗಿದೆ.

ಈ ಮಧ್ಯೆ, ಮಂಗಳೂರು ಪೀಠಕ್ಕೆ ಶಿವಮೊಗ್ಗ ಸೇರ್ಪಡೆ ಮಾಡಲಾಗುತ್ತಿದೆ ಎಂಬ ವದಂತಿ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಸಭೆ ನಡೆಸಿದ ಶಿವಮೊಗ್ಗ ಮೂಲದ ವಕೀಲರ ಸಮಿತಿ, ಯಾವುದೇ ಕಾರಣಕ್ಕೂ ಶಿವಮೊಗ್ಗ ಜಿಲ್ಲೆಯನ್ನು ಮಂಗಳೂರು ಪೀಠಕ್ಕೆ ಸೇರಿಸಬಾರದು ಎಂದು ಆಗ್ರಹಿಸಿದೆ.



ಸಂಚಾರಿ ಪೀಠ ಸ್ಥಾಪನೆಯಾಗಬೇಕೆಂಬುದು ಕರಾವಳಿ ಭಾಗದ ಜನರ ನ್ಯಾಯಯುತ ಬೇಡಿಕೆಯಾಗಿದ್ದು, ಅದನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಹೋರಾಟ ಮಾಡಲಾಗುತ್ತಿದೆ. ಮಂಗಳೂರಿನಲ್ಲಿ ಸಂಚಾರಿ ಪೀಠ ಸ್ಥಾಪನೆಗೆ ಕಟ್ಟಡ ಸೇರಿ ಎಲ್ಲಾ ಮೂಲಸೌಕರ್ಯ ಸಿದ್ಧವಿದೆ. ಹೈಕೋರ್ಟ್ ಸಿಜೆ ಕೂಡ ಸದ್ಯದಲ್ಲೇ ಮಂಗಳೂರಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಲಾಗುವುದೆಂದು ಭರವಸೆ ನೀಡಿದ್ದಾರೆ. ಸರಕಾರದ ಕಡೆಯಿಂದಲೂ ಎಲ್ಲಾ ನೆರವಿನ ಭರವಸೆ ಸಿಕ್ಕಿದೆ. ಪೀಠ ಸ್ಥಾಪನೆಗೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸಲಾಗುವುದು.

-ಐವನ್ ಡಿಸೋಜಾ
ವಿಧಾನ ಪರಿಷತ್ ಸದಸ್ಯ ಮತ್ತು ಸಂಚಾರಿ ಪೀಠ ಹೋರಾಟ ಕ್ರಿಯಾ ಸಮಿತಿ ಅಧ್ಯಕ್ಷ

ಹೈಕೋರ್ಟ್‌ನಲ್ಲಿ ಬಾಕಿ ಪ್ರಕರಣಗಳ ಅಂಕಿ ಅಂಶ

ಪೀಠಗಳು	ಸಿವಿಲ್	ಕ್ರಿಮಿನಲ್	ಒಟ್ಟು ಪ್ರಕರಣ
ಬೆಂಗಳೂರು	1,81,940	45,668	2,27,608
ಧಾರವಾಡ	60,444	9,914	70,358
ಕಲಬುರಗಿ	33,665	1,916	35,581
ಒಟ್ಟು ಪ್ರಕರಣ	2,76,049	57,498	3,33,547

TIMES interact
Connecting People, Connecting Needs.
ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

personal

CHANGE OF NAME

I, VIKAS PAREEK RAJENDRA PAREEK, S/o Rajendra Pareek, R/o GF001, G Floor, RR Enclave, 1360, 6th Main Road, Halagevaderahalli, BEML Layout 5th Stage, Rajarajeshwari Nagar, Bangalore-560098, have changed my name to VIKAS PAREEK for all purposes vide affidavit dated 01/05/2026 sworn before Notary N.Sandhya, Bangalore.

ನಾನು, ಅಮೋಘ್ ರಂಗನಾಥ ಗೌಡ, 310, ಎಸ್.ಎಸ್ ಎಲೈಟ್, ಜಕ್ಕೂರ್ ಮುಖ್ಯರಸ್ತೆ, ಯಲಹಂಕ, ಬೆಂಗಳೂರು ನಿವಾಸಿ. ನನ್ನ ದಾಖಲೆಗಳಲ್ಲಿರುವ 'Amogh R Gowda' ಬದಲಾಗಿ ನನ್ನ ಸರಿಯಾದ ಪೂರ್ಣ ಹೆಸರು 'Amogh Ranganatha Gowda' ಎಂದು ಎಲ್ಲಾ ಉದ್ದೇಶಗಳಿಗಾಗಿ ಪರಿಗಣಿಸತಕ್ಕದ್ದು.

I, KRISHNAPRASAD V, KRISHNAPRASAD, KRISHNA PRASAD, U KRISHNA PRASAD ACHARYA, KRISHNAPRASAD U Residing at Jathabettu Mutt, Post Uppoor, Udupi Tq and District -576105, Have changed my name to U KRISHNAPRASAD ACHARYA vide affidavit dated 02/05/2026 sworn before Notary Aravind Patil G.G Blore

I, YASHODAMMA KRISHNAPPA Residing at No 19, 4TH CROSS, 1ST MAIN, GOWRAVA NAGAR, JP NAGAR VII TH PHASE, BENGALURU-560078 have changed my name to YASHODA K vide affidavit dated:02/05/2026 Before Notary K.V.Mani Bangalore.

I S K Murthy S/o Hallimysore Seetharamkeshav Murthy R/o Flat- 3031, Sobha Forest Edge, 100 Feet Main Road, Near Turahalli Forest, Off Kanakapura Road, Thalaghattapura, Dist: Bengaluru, Karnataka- 560109, have changed my name to Seetaram Keshav Murthy

I, MEHENAZ AKHTAR, Residing at Flat #3303, Nandi Deepa Apt, Doddakammanahalli Main Road, Hulimavu, Bangalore -560076, have changed my name to MEHANAJ AKHTAR, vide affidavit dated 21/04/2026, sworn before notary Venkataraju H G, Bangalore.

I, SADIQULLA KAREEM, Residing at No.270, 3rd Cross, Tippu Nagar, Chamrajpet, Bengaluru – 560018, have changed my name to SYED SADIQ ULLA, vide affidavit dated 18/11/2025, sworn before notary Venkataraju H G, Bangalore.

I, KRISTOPHAR residing at No.311,13th Cross, Venkateswara Layout, Jai Bhimanagar, Bengaluru- 560068 have changed my name to KRISTOPHAR DASARI (KRISTOPHAR D) vide affidavit dated: 2/5/2026 Before Notary K.V.Mani Bangalore.

I, ADITYA RAO S/o K Vaman Rao, Residing at #624/13A, 3rd Cross, 3rd main, 3rd Phase, Ittamadu Layout, Bengaluru-560085, have changed my name to RAO CHAKRADHAR vide affidavit dated 09.03.2026 sworn before notary Sivakumara M N, Bangalore.

I, Nithya Sagairaj W/o Sagai Raj Daniel No 74, 2nd Cross Geetha Mandir Road Pemmegowda, Street Near Fun World J C Nagar, Bengaluru-560006 have changed My name to Nithya Arcot Madangopal for all purposes

I, Sagai Raj S/o Pitchamuthu Soryanayagam Daniel R/o No 74, 2nd Cross Geetha Mandir Road Pemmegowda, Street Near Fun World J C Nagar, Bengaluru -560006 have changed my name to Sagai Raj Daniel for all purposes

I H S Suresh S/o Siddiah Chamarajanagar Byraiah R/o 504, 4A Main 6th Cross, OMBR Layout Bhuvanagiri, Banaswadi, Bengaluru, Karnataka- 560043, have changed my name to Suresh Hulivana Siddiah

I S Indira Alias Indira Shankar D/o Narasinh Murthy and W/o S Snankar R/o 949, Ist E Main Road, DR Rajendra Prasad Road, II Phase Girinagar, Bangalore, Karnataka- 560085, have changed my name to Indiramma

I, Geeta Kareppa Channur W/o Kareppa Channur @ Kariyappa Channur, R/o Friends Colony, Lingasagur, Raichur District-584122 have changed my name to Geeta Channur for all purposes

I, Savitha Porwal Sajjan Raj R/o No-3, SF1, Comfort Castle Apartments,Kanakapura Road, Basavanagudi, B'lunu -560004,have changed my name to Savitha Porwal for all purposes.

LOST & FOUND

I, Praveen.R have Lost My Original Sale deed documents Situated in "Addaguriki Village of (Panchayath unit of Kanalatti) Hosur Taluk, Krishnagiri Dist. Doc No - 2504/2010, Sy No - 35/1C, (Area Extend AC 0.54 Cents), SRO Shoolagiri, While Some Personal Work in Near Old Airport Road Near HAL. Case Registered No - 2176390/2026. SAKALA NO - P0012S260001179, AFFIDAVIT NO - IN KA - 47839812508966Y. Finder Please Contact or Return to This Address, Praveen.R, Flat No - G05, SV Grand Appartment, 1st Main, 3rd Cross, NGR Layout, Roopena Agrahara Madivala, Bommanahalli, Bangalore. Phone - 8722281631

OBITUARY

DEATH ANNIVERSARY

12ನೇ ವರ್ಷದ ಪುಣ್ಯಸ್ಮರಣೆ



ಎಲ್. ಸಂತೋಷ್
ಜನನ: 11.06.1985
ಮರಣ: 03.05.2014
ದುಃಖತಪ್ತರು:
ಶ್ರೀಮತಿ ಸರಸ್ವತಮ್ಮ, ಶ್ರೀ ಲಕ್ಷ್ಮಯ್ಯ ಹಾಗೂ ಕುಟುಂಬದವರು.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು

More Classifieds on Page - 6

GALLERIA

ಇಂಪ್ಯಾಕ್ಟ್ ಪಾಲಿಟೆಕ್ನಿಕ್ (ಸರ್ಕಾರಿ ಅನುದಾನಿತ)
ಕೊಡಿಗೆಹಳ್ಳಿ, ಸಹಕಾರನಗರ, ಬೆಂಗಳೂರು-560092
2026-27ನೇ ಸಾಲಿನ ಸರ್ಕಾರಿ ಕೋಟಾದಲ್ಲಿ ಡಿಪ್ಲೋಮಾ ಪ್ರವೇಶಗಳು ಪ್ರಾರಂಭ "ಮೊದಲು ಬಂದವರಿಗೆ ಮೊದಲ ಆದ್ಯತೆ"ಮೂಲಕ ದಾಖಲಾತಿ
ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗಾಗಿ 1 ನೇ ಸೆಮಿಸ್ಟರ್‌ಗೆ ದಾಖಲಾತಿ ಆರಂಭವಾಗಿದೆ
ಕೋರ್ಸುಗಳು:
ಆರ್ಕಿಟೆಕ್ಚರ್, ಆಟೋಮೊಬೈಲ್, ಮೆಕ್ಯಾನಿಕಲ್, ಸಿವಿಲ್, ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್, ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್, ಮತ್ತು ಕಂಪ್ಯೂಟರ್ ಸೈನ್ಸ್
ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ ಯಲ್ಲಿ ಕನಿಷ್ಠ ಶೇ. 35% ಅಂಕ ಪಡೆದಿರಬೇಕು.
ಐಟಿಐ/ಪಿಯುಸಿ ವಿಜ್ಞಾನದಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ನೇರವಾಗಿ 3ನೇ ಸೆಮಿಸ್ಟರ್‌ನಲ್ಲಿ ಪ್ರವೇಶ ಲಭ್ಯವಿರುತ್ತದೆ.
ಅರ್ಜಿಗಳು ಕಾಲೇಜಿನ ಕಚೇರಿಯಲ್ಲಿ ದೊರೆಯುವುದು
Website: impactptbangalore.ac.in;
Email: impactpolytechnic@gmail.com
IMP-25602
ದಾಖಲಾತಿ ಮತ್ತು ಹೆಚ್ಚಿನ ಮಾಹಿತಿಗಾಗಿ ಇಲ್ಲಿಗೆ ಸಂಪರ್ಕಿಸಿ:
080-23334101, 94487 48297, 94487 96091

BHS HIGHER EDUCATION SOCIETY
35/1, 11TH MAIN ROAD, 4TH BLOCK, JAYANAGAR, BENGALURU - 560 011.
Contact No: 080-26632871, 9448513887, 7795625554
ADMISSIONS OPEN FOR THE ACADEMIC YEAR 2026-2027 FOR I PUC & I YEAR UG DEGREE COURSES AT VARIOUS INSTITUTIONS @ BENGALURU UNDER BHS HIGHER EDUCATION SOCIETY
4TH BLOCK JAYANAGAR BENGALURU - 560011.
VIJAYA PU COLLEGE [DAY] | VIJAYA COLLEGE JAYANAGAR [DAY]
RECOGNISED BY DEPARTMENT OF PU EDUCATION | AFFILIATED TO DR. MANMOHAN SINGH BENGALURU CITY UNIVERSITY
080-26632481, 9731302599, 9448529716, vpucjnr@gmail.com | 080-26548890, 9448237009, 6363881472, 9480019720, https://www.vcj.edu.in/, vijayacollegejnr@gmail.com
PU COURSE-COMBINATIONS | UG DEGREE COURSES - COMBINATIONS
:: SCIENCE STREAM :: PCMB & PCMCs | :: ARTS STREAM :: BA - JOURNALISM
"FREE CET COACHING OFFERED" | :: SCIENCE STREAM :: CZBt & CMbBt
:: COMMERCE STREAM :: GEBA, CEBA, BASC & SEBA | :: COMMERCE STREAM :: B.COM - REGULAR, B.COM - BUSINESS DATA ANALYTICS, B.COM - ACCOUNTING & FINANCE
:: MANAGEMENT STREAM :: BBA
:: INFORMATION TECHNOLOGY :: BCA
Sri.G.V. Viswanath, IAS (Retd) Hon. President, BHS HES | Dr. T.A. Balakrishna Hon. Secretary, BHS HES

BHS HIGHER EDUCATION SOCIETY
35/1, 11TH MAIN ROAD, 4TH BLOCK, JAYANAGAR, BENGALURU - 560 011.
Contact No: 080-26632871, 9448513887, 7795625554
ADMISSIONS OPEN FOR THE ACADEMIC YEAR 2026-2027 FOR I PUC & I YEAR UG DEGREE COURSES AT VARIOUS INSTITUTIONS @ BENGALURU UNDER BHS HIGHER EDUCATION SOCIETY
R.V.ROAD, BASAVANAGUDI, BENGALURU-560004.
VIJAYA BIFURCATED PU COLLEGE [DAY] | VIJAYA DEGREE COLLEGE [DAY]
RECOGNISED BY DEPARTMENT OF PU EDUCATION | AFFILIATED TO DR. MANMOHAN SINGH BENGALURU CITY UNIVERSITY
080-26933224, 8762606042, https://vijayapurv.org.in/, vijayapucollegervd@gmail.com | 080-26933220, 080-26933221, 9449050625, https://vijayacollege.ac.in/, vijayadegree@gmail.com
PU COURSE-COMBINATIONS | UG DEGREE COURSES - COMBINATIONS
:: SCIENCE STREAM :: PCMB, PCME & PCMCs | :: SCIENCE STREAM :: PMCS, PCM, PME, CBZ, MECs, CZBt, SMCs, BCGMb & BCBtMb
"FREE CET COACHING OFFERED" EXPERT COACHING FOR IIT-JEE & NEET BY QUALIFIED PROFESSIONALS | :: COMMERCE STREAM :: B.COM - REGULAR, B.COM - BUSINESS DATA ANALYTICS, B.COM - LOGISTICS & SUPPLY CHAIN MANAGEMENT
:: COMMERCE STREAM :: BASM, GEBA,CEBA,CSBA & SEBA | :: MANAGEMENT STREAM :: BBA
:: INFORMATION TECHNOLOGY :: BCA, BCA-ARTIFICIAL INTELLIGENCE & MANAGEMENT
VIJAYA EVENING COLLEGE [EVENING]
AFFILIATED TO DR. MANMOHAN SINGH BENGALURU CITY UNIVERSITY
080-26933226, 9482301226, 9448463466
vijayaeveningcollege@gmail.com
UG DEGREE COURSES - COMBINATIONS
:: COMMERCE STREAM :: B.COM - REGULAR
:: INFORMATION TECHNOLOGY :: BCA
Sri.G.V. Viswanath, IAS (Retd) Hon. President, BHS HES | Dr. T.A. Balakrishna Hon. Secretary, BHS HES

ಕೃಷಿಗೆ ವೈಜ್ಞಾನಿಕ ನೆರವು ನೀಡಲು ಸರಕಾರ ಬದ್ಧ

ರೇಷ್ಮೆ, ಖನಿಜ ಭವನ ನಿರ್ಮಾಣಕ್ಕೆ ಸಿಎಂ ಶಂಕುಸ್ಥಾಪನೆ | ಇ-ರೇಷ್ಮೆ ಪೋರ್ಟಲ್ ಬಿಡುಗಡೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕೃಷಿಯನ್ನು ಲಾಭದಾಯಕವಾಗಿಸಲು ವೈಜ್ಞಾನಿಕ ನೆರವನ್ನು ನೀಡಲು ಸರಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಒಕಳೀಪುರಂನಲ್ಲಿ ರೇಷ್ಮೆ ಮತ್ತು ಖನಿಜ ಭವನ ನಿರ್ಮಾಣಕ್ಕೆ ಶನಿವಾರ ಶಂಕುಸ್ಥಾಪನೆ ನೆರವೇರಿಸಿ ಹಾಗೂ ಇ-ರೇಷ್ಮೆ ಪೋರ್ಟಲ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

"ರಾಜ್ಯದಲ್ಲಿ 1.50 ಲಕ್ಷಕ್ಕೂ ಅಧಿಕ ಕುಟುಂಬಗಳು ರೇಷ್ಮೆ ಕೃಷಿಯನ್ನು ಅವಲಂಬಿಸಿವೆ. ರೇಷ್ಮೆ ಲಾಭದಾಯಕವಾದ ಕಸುಬು. ಅದಕ್ಕಾಗಿಯೇ ಹೆಚ್ಚು ಮಂದಿ ವ್ಯವಸಾಯದ ಜೊತೆಗೆ ಉಪ ಕಸುಬು ಮಾಡಬೇಕು," ಎಂದರು.

"ಕೃಷಿಯಿಂದ ವಿಮುಖರಾಗುತ್ತಿರುವ ಯುವಜನಾಂಗವನ್ನು ಪುನಃ ಸೆಳೆಯಲು ರೇಷ್ಮೆ ತೋಟಗಾರಿಕೆ, ಪಶುಸಂಗೋಪನೆಗೆ ಸರಕಾರ ಹೆಚ್ಚಿನ ಒತ್ತು ನೀಡುತ್ತಿದೆ. ಯುವಕರು ಕೃಷಿಯತ್ತ ಮರಳಬೇಕು," ಎಂದು ಕರೆ ನೀಡಿದರು.

"ಬೈವೋಲ್ಟಿನ್ ರೇಷ್ಮೆಗೆ ಬೇಡಿಕೆ ಹೆಚ್ಚಾಗಿದ್ದು, ನಮ್ಮ ಸರಕಾರದ ಅವಧಿಯಲ್ಲಿ ಸಾಗಾಣಿಕೆ ವೆಚ್ಚವನ್ನು 10 ರಿಂದ 20 ರೂ.ಗಳಿಗೆ ಹೆಚ್ಚಿಸಲಾಯಿತು ಮತ್ತು ಬೈವೋಲ್ಟಿನ್ ಬೆಳೆಯಲು ಹೆಚ್ಚಿನ ನೆರವು ನೀಡಲು ಬದ್ಧವಾಗಿದ್ದೇವೆ," ಎಂದು ಹೇಳಿದರು.

ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕ ನಂ. 1: "ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಹಾಲು ಉತ್ಪಾದನೆಯಲ್ಲಿ ಎರಡನೇ ಸ್ಥಾನ ಹಾಗೂ ಕಾಫಿ ಉತ್ಪಾದನೆಯಲ್ಲಿಯೂ ಮೊದಲ ಸ್ಥಾನದಲ್ಲಿದೆ. ಒಂದು ದಿನಕ್ಕೆ 1 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. 1.22 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆಯಲಾಗುತ್ತಿದೆ," ಎಂದು ವಿವರಿಸಿದರು.

"ಒಕಳೀಪುರಂನಲ್ಲಿರುವ 4.25 ಎಕರೆ ವಿಸ್ತೀರ್ಣದ ರೇಷ್ಮೆ ಇಲಾಖೆಗೆ ಸೇರಿದ ಜಾಗವನ್ನು 1995ರಲ್ಲಿ ಖರೀದಿಸಲಾಗಿತ್ತು. ನಮ್ಮ ಸರಕಾರ ಅಧಿಕಾರಕ್ಕೆ ಬಂದ ನಂತರ ರೇಷ್ಮೆ ಭವನದ ಅಗತ್ಯತೆ ಮನಗಂಡು ಸ್ಥಳವನ್ನು ರೇಷ್ಮೆ ಇಲಾಖೆ ಕೊಟ್ಟರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸೇರಿದ ಮೈಸೂರು ಖನಿಜ ಕಾರ್ಪೊರೇಷನ್ ವತಿಯಿಂದ ಭವನ ನಿರ್ಮಾಣ ಮಾಡಲು ತೀರ್ಮಾನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ರೇಷ್ಮೆ ಇಲಾಖೆಯ ಅಭಿವೃದ್ಧಿ ದೃಷ್ಟಿಯಿಂದ ಅಗತ್ಯವಿರುವಷ್ಟು ಸ್ಥಳವನ್ನು ಬಳಸಿಕೊಂಡು ಇತರೆ ಇಲಾಖೆಗಳಿಗೂ ಸ್ಥಳಾವಕಾಶವನ್ನು ಮಾಡಿಕೊಡುವಂತೆ ಸೂಚಿಸಲಾಗಿದೆ" ಎಂದರು.

"ಈಗಾಗಲೇ 66.75 ಕೋಟಿ ರೂ.ಗಳಿಗೆ ಟೆಂಡರ್ ಆಗಿದ್ದು, ಮೂರು ವರ್ಷಗಳಲ್ಲಿ ಕಟ್ಟಡ ನಿರ್ಮಾಣವಾಗಬೇಕು. 13 ಅಂತಸ್ತಿನ ಸುಸಜ್ಜಿತ ಸದೃಢ ಕಟ್ಟಡವನ್ನು ನಿರ್ಮಿಸಬೇಕು. ಮೂರು ವರ್ಷಗಳ ಕಾಲಮಿತಿಯಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಳಿಸದಿದ್ದರೆ ಕ್ರಮ ಜರುಗಿಸಲಾಗುವುದು," ಎಂದು ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದರು. ಸಚಿವರಾದ ದಿನೇಶ್ ಗುಂಡೂರಾವ್, ವೆಂಕಟೇಶ್, ಖನಿಜ ನಿಗಮದ ಅಧ್ಯಕ್ಷ ಜಿ. ಎಸ್.ಪಾಟೀಲ್, ಉಪಾಧ್ಯಕ್ಷ ಎಚ್.ಲಕ್ಷ್ಮಣ್, ರೇಷ್ಮೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಪಿಎಚ್‌ಸಿಗಳಲ್ಲಿ ತಂಬಾಕು ವ್ಯಸನ ಮುಕ್ತಿಗೆ ಸಂಕ್ಷಿಪ್ತಾ ಸಲಹಾ ಸೇವೆ

■ **ವಿಕ ಸುದ್ದಿಲೋಕ** ಬೆಂಗಳೂರು

ತಂಬಾಕು ಸೇವನೆ ತ್ಯಜಿಸುವುದನ್ನು ಉತ್ತೇಜಿಸಲು ರಾಜ್ಯದ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಂಕ್ಷಿಪ್ತ ಸಲಹಾ ಸೇವೆ ನೀಡುವುದನ್ನು ವಿಸ್ತರಿಸಲು ತೀರ್ಮಾನಿಸಲಾಗಿದೆ ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನ ಹೆಚ್ಚುವರಿ ನಿರ್ದೇಶಕಿ ಡಾ. ಎಂ.ರಜಿನಿ ತಿಳಿಸಿದರು.

ಆರೋಗ್ಯ ಇಲಾಖೆಯ ರಾಜ್ಯ ತಂಬಾಕು ನಿಯಂತ್ರಣ ಕೋಶವು ಬೆಂಗಳೂರು ವಿಭಾಗದ 9 ಜಿಲ್ಲೆಗಳ ಅಧಿಕಾರಿಗಳಿಗೆ ನಗರದಲ್ಲಿ ಆಯೋಜಿಸಿದ್ದ 'ಕ್ಷಯರೋಗ-ತಂಬಾಕು' ಕುರಿತ ವಿಭಾಗ ಮಟ್ಟದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

"ತಂಬಾಕು ನಿವಾರಣೆ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ. ತಂಬಾಕು ಸೇವಿಸುತ್ತಿದ್ದ 8.5 ಲಕ್ಷ ಮಂದಿಯನ್ನು ತಪಾಸಣೆ ನಡೆಸಿದ್ದು, 3.8 ಲಕ್ಷ ಮಂದಿಗೆ ತಂಬಾಕು ಸೇವನೆ ತ್ಯಜಿಸುವಂತೆ ಸಲಹೆ ನೀಡಲಾಗಿದೆ. 1,770ಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಂಕ್ಷಿಪ್ತ ಸಲಹಾ ಸೇವೆ ನೀಡಲಾಗುತ್ತಿದೆ. ಈಗ ಪ್ರತಿಯೊಂದು ಜಿಲ್ಲೆಗೂ ಸಲಹಾ ಸೇವೆ ವಿಸ್ತರಿಸಬೇಕಿದೆ. ಈ ಮೂಲಕ ಕ್ಷಯ ರೋಗ ತಡೆ ಅಗತ್ಯವಿದೆ," ಎಂದು ಹೇಳಿದರು.

30 ನಾನ್ ಐಪಿಎಸ್‌ಗಳಿಗೆ ಎಸ್‌ಪಿ ಹುದ್ದೆಗೆ ಬಡ್ತಿ ನೀಡಲು ಆದೇಶ

2 ತಿಂಗಳಲ್ಲಿ ನಿರ್ಧಾರ ಕೈಗೊಳ್ಳಲು ಹೈಕೋರ್ಟ್ ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯ ಪೊಲೀಸ್ ಸೇವೆಯಲ್ಲಿದ್ದ 30 ನಾನ್ ಐಪಿಎಸ್ ಅಧಿಕಾರಿಗಳಿಗೆ ಪೊಲೀಸ್ ವರಿಷ್ಠಾಧಿಕಾರಿ(ಎಸ್‌ಪಿ) ವೃಂದಕ್ಕೆ ಬಡ್ತಿ ನೀಡುವಂತೆ ಹೈಕೋರ್ಟ್, ರಾಜ್ಯ ಸರಕಾರಕ್ಕೆ ಆದೇಶಿಸಿದೆ.

ಎಸ್‌ಪಿ ಹುದ್ದೆಗೆ ಬಡ್ತಿ ನೀಡುವ ಸಂಬಂಧ 2025ರ ಆ.20ರಂದು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಸ್‌ಎಟಿ) ನೀಡಿದ್ದ ಆದೇಶವನ್ನು ಮಾರ್ಪಾಟು ಮಾಡಿರುವ ಹೈಕೋರ್ಟ್‌ನ ವಿಭಾಗೀಯ ಪೀಠ ಕರ್ನಾಟಕ ನಾಗರಿಕ ಸೇವಾ ನಿಯಮ (ಕೆಸಿಎಸ್‌ಆರ್) 45ರ ನಿಯಮದಡಿ ಬಡ್ತಿಗೆ ಪರಿಗಣಿಸಬೇಕು ಎಂದು ಹೇಳಿದೆ.

ಕೆಎಸ್‌ಎಟಿ ಆದೇಶ ಪ್ರಶ್ನಿಸಿ ಸರಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಆಲಿಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಮತ್ತು ನ್ಯಾ. ಕೆ.ಪಿ.ಅರವಿಂದ್ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ.

ವಾದ-ಪ್ರತಿವಾದ ಆಲಿಸಿ ಎಲ್ಲಾ ಅಂಶಗಳನ್ನು ಅವಲೋಕಿಸಿದ ನ್ಯಾಯಾಲಯ, "ಇಲಾಖಾ ಬಡ್ತಿ ಸಮಿತಿ (ಡಿಪಿಸಿ) ಹುದ್ದೆಗಳ ಲಭ್ಯತೆಯನ್ನು ಆಧರಿಸಿ ಗೃಹ ಸಚಿವರ ಅನುಮೋದನೆ ಪಡೆದು ಎರಡು ತಿಂಗಳಲ್ಲಿ ಪ್ರತಿವಾದಿಗಳಿಗೆ ಎಸ್‌ಪಿ ಹುದ್ದೆಗೆ ಬಡ್ತಿ ನೀಡಲು ತೀರ್ಮಾನಿಸಬೇಕು," ಎಂದು ಆದೇಶಿಸಿದೆ.

"ಈ ಪ್ರಕರಣದಲ್ಲಿ ಎಎಜಿ ಉನ್ನತೀಕರಿಸಲಾದ ಹುದ್ದೆಗಳು ಕೇವಲ 2 ವರ್ಷಕ್ಕೆ ಲಭ್ಯವಿವೆ. ಆದರೆ ಬಡ್ತಿ ಆದೇಶ ಹೊರಡಿಸುವ ದಿನಾಂಕ 2023 ಅನ್ನು ಪರಿಗಣಿಸಿದರೆ ಆ 30 ಹುದ್ದೆಗಳ ಉನ್ನತೀಕರಿಸಿದ ಅವಧಿ ಮುಕ್ತಾಯವಾಗಲಿದೆ. ಹಾಗಾಗಿ ಹುದ್ದೆಗಳು ಖಾಲಿ ಇರುವ ಅಂಶವನ್ನು ನ್ಯಾಯಮಂಡಳಿ ಪರಿಗಣಿಸಬೇಕಿತ್ತು. ಆದ್ದರಿಂದ ನ್ಯಾಯಮಂಡಳಿ ಆದೇಶವನ್ನು ಸ್ವಲ್ಪ ಮಾರ್ಪಾಡು ಮಾಡಬೇಕಾಗಿದೆ ಎಂದು ಕೋರಿರುವುದು ಸಮಂಜಸವಾಗಿದೆ," ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ: 2023ರ ನ.15ರಂದು ನಡೆದ ಇಲಾಖಾ ಬಡ್ತಿ ಸಮಿತಿ(ಡಿಪಿಸಿ) ಸಭೆಯು ಡಿಎಸ್‌ಪಿಗಳಾಗಿದ್ದ 30 ಮಂದಿ ಪ್ರತಿವಾದಿಗಳಿಗೆ ನಾನ್ ಐಪಿಎಸ್ ಎಸ್‌ಪಿ ವೃಂದಕ್ಕೆ(ಸಿವಿಲ್) ನೇರವಾಗಿ ಬಡ್ತಿ ನೀಡಲು ತೀರ್ಮಾನಿಸಿತ್ತು. ಆದರೆ ಸರಕಾರ ಅವರಿಗೆ ಬಡ್ತಿ ನೀಡುವ ಬದಲು ಕೆಸಿಎಸ್‌ಆರ್ ನಿಯಮ 32ರಂತೆ ಪ್ರತಿವಾದಿಗಳಿಗೆ ಎಸ್‌ಪಿಗಳಾಗಿ ಉಸ್ತುವಾರಿ ಹೊಣೆಯನ್ನು ನೀಡಲಾಗಿತ್ತು.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಜಿಲ್ಲಾ ಶಾಖೆ, ಕೊಠಡಿ ಸಂಖ್ಯೆ:25, ಜಿಲ್ಲಾಡಳಿತ ಭವನ, ಚಾಮರಾಜನಗರ
E-Mail:ddwocw@gmail.com ದೂರವಾಣಿ ಫ್ಯಾಕ್ಸ್ ಸಂಖ್ಯೆ : 08226-223688
ಸಂಖ್ಯೆ:ಜಿಅಂಕ-ಚಾ/ಸಾ.ಸ.ಟೆ/2025- 26 ದಿನಾಂಕ :30.04.2026
ಅಲ್ಪಾವಧಿ ಟೆಂಡರ್ ಪ್ರಕಟಣೆ (ಪೋರ್ಟಲ್ ಮುಖಾಂತರ)
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಚಾಮರಾಜನಗರ ಇಲಾಖೆಯ ಶ್ರವಣ ಸಾಧನ ಖರೀದಿಸಲು ನೋಂದಾಯಿತ ಸಂಸ್ಥೆಗಳವರಿಂದ ಟೆಂಡರ್ ಡಾಕ್ಯೂಮೆಂಟ್ ಪ್ರಕಾರ ಟೆಂಡರ್ ಅನ್ನು KPPP-ಪೋರ್ಟಲ್ ಮೂಲಕ ಆಹ್ವಾನಿಸಲಾಗಿದ್ದು ಟೆಂಡರ್ DEDASC/2026-27/IND0139 ಟೆಂಡರ್ ಮೊತ್ತ-7,00,712 ಲಕ್ಷ ರೂಗಳಿಗೆ ಟೆಂಡರ್ ಅನ್ನು KPPP-ಪೋರ್ಟಲ್ ಮೂಲಕ ಆಹ್ವಾನಿಸಲಾಗಿರುತ್ತದೆ. ವೆಬ್‌ಸೈಟ್‌ನಲ್ಲಿ ಅವಶ್ಯ ಮಾಹಿತಿಗಳೊಂದಿಗೆ ನಿಗಧಿತ ಇ.ಎಂ.ಡಿ ಮೊತ್ತವನ್ನು ಸಲ್ಲಿಸಿ ಅಪ್‌ಲೋಡ್ ಮಾಡುವುದು ಹಾಗೂ ಅರ್ಹತೆಗೆ ಬೇಕಾಗುವ ಎಲ್ಲಾ ಮೂಲ ದಾಖಲಾತಿಗಳನ್ನು ಸ್ಕ್ಯಾನ್‌ಮಾಡಿ ದಿನಾಂಕ : 14.05.2026 ರ ಸಂಜೆ : 5:30 ಗಂಟೆಯ ಒಳಗಾಗಿ ಆನ್‌ಲೈನ್‌ನಲ್ಲಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ 08226-223688 ದೂರವಾಣಿ ಸಂಖ್ಯೆಗೆ ಕರೆಮಾಡಿ ಅಥವಾ ಕಛೇರಿಯ ವೇಳೆಯಲ್ಲಿ ನೇರವಾಗಿ ಭೇಟಿಮಾಡಿ ತಿಳಿದುಕೊಳ್ಳಬಹುದು.
ಸಹಿ/- ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳು
ಚಾಮರಾಜನಗರ
ಸಂ:ವಾಸಾಸಂಇ:ಚಾನಗರ:79:2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೆ.ಜಿ.ಎಫ್
ಸಂಖ್ಯೆ : ಕೃಉಮಾಸ/ಕೆ.ಜಿ.ಎಫ್/05/2026-27 ದಿನಾಂಕ: 28.04.2026
-:: ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (2ನೇ ಕರೆ) ::-
ಕೃ.ಉ.ಮಾ.ಸ. ಕೆ.ಜಿ.ಎಫ್ 2025-26 ನೇ ಸಾಲಿನ RIDF-31 ರ ಯೋಜನೆಯಡಿ ಅನುಮೋದನೆಗೊಂಡ "Providing infrastructure facilities at main market yard of APMC KGF" ಕಾಮಗಾರಿಗೆ KW-4 ಮಾದರಿಯಲ್ಲಿ ಅರ್ಹತೆ ಹೊಂದಿದ ವರ್ಗ-1 ಪಿ.ಡಬ್ಲ್ಯೂ.ಡಿ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಅಂದಾಜು ಮೊತ್ತ ರೂ.806.41 ಲಕ್ಷ (GST ಹೊರತುಪಡಿಸಿ), ಇ.ಎಂ.ಡಿ ರೂ.12.10 ಲಕ್ಷ, ಕಾಮಗಾರಿ ಅವಧಿ: 11 ತಿಂಗಳು, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 14.05.2026 ಸಂಜೆ 5.30 ಗಂಟೆಯವರೆಗೆ. ಹೆಚ್ಚಿನ ಮಾಹಿತಿಗಾಗಿ : http://kppp.karnataka.gov.in ಅಥವಾ ಕಾರ್ಯದರ್ಶಿ, ಎ.ಪಿ.ಎಂ.ಸಿ ಕೆ.ಜಿ.ಎಫ್ ಕಛೇರಿ ಮೊ : 9900326365/9916784767/08153-255291 ಸಂಪರ್ಕಿಸಬಹುದು.
ಸಹಿ/- (ಟಿ.ಎಸ್.ರವಿಕುಮಾರ್) ಕಾರ್ಯದರ್ಶಿ (ಪ್ರಭಾರ) ಕೃ.ಉ.ಮಾ.ಸ.,ಕೆ.ಜಿ.ಎಫ್
ಸಹಿ/- (ಬಿ.ವಿ. ವಿಜಯರಾಘವರೆಡ್ಡಿ) ಅಧ್ಯಕ್ಷರು ಕೃ.ಉ.ಮಾ.ಸ.,ಕೆ.ಜಿ.ಎಫ್
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:56/ಕೆಎಸ್‌ಎಂಸಿಎ/2026-27

ಶೃಂಗೇರಿ ಶಾರದಾಂಬೆಗೆ ಮಹಾಭಿಷೇಕ

ಶೃಂಗೇರಿ (ಚಿಕ್ಕಮಗಳೂರು): ಇಲ್ಲಿನ ಶಾರದಾ ಪೀಠದ ಶಾರದಾಂಬೆಗೆ ವೈಶಾಖ ಕೃಷ್ಣ ಪಕ್ಷ ಪಾಡ್ಯ ದಿನವಾದ ಶನಿವಾರ ಮಹಾಭಿಷೇಕ ನಡೆಯಿತು.

ಬೆಳಗ್ಗೆ ಉಭಯ ಶ್ರೀಗಳಾದ ಭಾರತೀ ತೀರ್ಥ ಸ್ವಾಮೀಜಿ ಹಾಗೂ ವಿಧುಶೇಖರ ಭಾರತೀ ಸ್ವಾಮೀಜಿ ಆಹ್ನಿಕ ಕಾರ್ಯಕ್ರಮದ ನಂತರ ಅಧಿಷ್ಠಾನಕ್ಕೆ ಭೇಟಿ ನೀಡಿದರು. ಶಾರದಾ ದೇಗುಲಕ್ಕೆ ಆಗಮಿಸಿ ಶಾರದಾಂಬೆಗೆ ಪಂಚಾಮೃತ ಅಭಿಷೇಕ, ಶತರುದ್ರಾಭಿಷೇಕ, ಶ್ರೀಸೂಕ್ತ ಪೂಜೆ ನೆರವೇರಿಸಿದರು. ವರ್ಷದಲ್ಲಿ ಮೂರು ಬಾರಿ ಮಾತ್ರ ಶಾರದಾಂಬೆ ಮೂಲ ವಿಗ್ರಹಕ್ಕೆ ಮಹಾಭಿಷೇಕ ಮಾಡಲಾಗುತ್ತದೆ. ಮಹಾಲಯ ಅಮಾವಾಸ್ಯೆ, ಭೂಮಿ ಹುಣ್ಣಿಮೆ ಮತ್ತು ಶ್ರೀಶಾರದಾಂಬೆ ಪ್ರತಿಷ್ಠಾಪನೆಯ ವೈಶಾಖ ಕೃಷ್ಣ ಪಕ್ಷ ಪಾಡ್ಯದ ದಿನದಂದು ಮಹಾಭಿಷೇಕ ನಡೆಯುತ್ತದೆ.

ಕೃಷಿ ಅಧಿಕಾರಿಗಳ ನೇಮಕ ಪ್ರಕ್ರಿಯೆ ತಾತ್ಕಾಲಿಕ ಸ್ಥಗಿತ

■ **ವಿಕ ಸುದ್ದಿಲೋಕ** ಬೆಂಗಳೂರು



ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿಗಳ ನೇಮಕಾತಿ ಸಂಬಂಧ ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆಯಲು ಕೃಷಿ ಇಲಾಖೆ ಕೋರಿರುವ ಕಾರಣ ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಪರಿಶಿಷ್ಟ ಜಾತಿಗೆ ಶೇ.15ರಷ್ಟು ಮೀಸಲು ನಿಗದಿಪಡಿಸಿ ಸರಕಾರ ಆದೇಶ ಹೊರಡಿಸಿದೆ. ಇದರಲ್ಲಿ ಒಳ ಮೀಸಲು ಪ್ರಮಾಣವನ್ನೂ ಹಂಚಿಕೆ ಮಾಡಿದೆ. ಅದನ್ನು ಅಳವಡಿಸಿಕೊಂಡು ಪರಿಷ್ಕೃತ ಅಧಿಸೂಚನೆ ಹೊರಡಿಸಬೇಕಿರುವ ಕಾರಣ ಚಾಲ್ತಿಯಲ್ಲಿರುವ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಳಿಸಲು ಕೃಷಿ ಆಯುಕ್ತರು ಕೋರಿದ್ದಾರೆ. ಮುಂದಿನ ಪ್ರಕ್ರಿಯೆಯನ್ನು ನಂತರ ತಿಳಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಐದನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಎಸ್. ಗಾಯಿತ್ರಿದೇವಿ
(ಡಾ|| ಹೆಚ್.ವಿ. ಶಿವಕುಮಾರ್ ಇವರ ಧರ್ಮಪತ್ನಿ)
ಜನನ : 24.12.1964 ಮರಣ : 03.05.2021
ನೀವು ನಮ್ಮನ್ನಗಲಿ 5 ವರ್ಷ ಕಳೆದರು ನಿಮ್ಮ ಸವಿನೆನಪು ನಮ್ಮ ಹೃದಯಾಂತರಾಳದಲ್ಲಿ ಅಚ್ಚಳಿಯದೇ ಉಳಿದಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.
ಸದಾ ನಿಮ್ಮ ನೆನಪಿನಲ್ಲಿ
ಪತಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಶುಕ್ರವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಮಳೆಗೆ ಜಯನಗರದ ಹಲವೆಡೆ ಮರಗಳು ಬಿದ್ದು, ವಾಹನಗಳು ಜಖಂಗೊಂಡವು.

ಮಾಲೀಕರು, ಬಿಲ್ಡರ್‌ಗಳೊಂದಿಗೆ ಪಾಲಿಕೆ ಅಧಿಕಾರಿಗಳು ಶಾಮೀಲು | ಲೆಕ್ಕ ಪರಿಶೋಧನಾ ವರದಿಯಲ್ಲಿ ಬಹಿರಂಗ

ಕಂದಾಯ ವಿಭಾಗದಲ್ಲಿ 107 ಕೋಟಿ ರೂ. ಅಕ್ರಮ!

■ **ನಾಗಪ್ಪ ನಾಗನಾಯಕನಹಳ್ಳಿ** ಬೆಂಗಳೂರು
nagappa.narayanappa@timesofindia.com

ಬಿಬಿಎಂಪಿ (ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರ) ಕಂದಾಯ ವಿಭಾಗದ ಅಧಿಕಾರಿಗಳು ಆಸ್ತಿ ಮಾಲೀಕರು, ಬಿಲ್ಡರ್‌ಗಳೊಂದಿಗೆ ಶಾಮೀಲಾಗಿ ಕೋಟ್ಯಂತರ ರೂ. ವಂಚಿಸಿರುವುದು ಲೆಕ್ಕ ಪರಿಶೋಧನಾ ವರದಿಯಿಂದ ಬೆಳಕಿಗೆ ಬಂದಿದೆ. 2023-24ನೇ ಸಾಲಿನ ಹಣಕಾಸು ನಿರ್ವಹಣೆಯಲ್ಲಿ ಈ ವಿಭಾಗವೊಂದರಿಂದಲೇ 107.37 ಕೋಟಿ ರೂ. ಅಕ್ರಮ ನಡೆದಿರುವುದು ಪತ್ತೆಯಾಗಿದೆ.

ಕಟ್ಟಡಗಳ ನೈಜ ವಿಸ್ತೀರ್ಣಕ್ಕಿಂತ ಕಡಿಮೆ ಜಾಗಕ್ಕೆ ತೆರಿಗೆ ನಿಗದಿ, ವಾಣಿಜ್ಯ ಕಟ್ಟಡದಿಂದ ವಸತಿ ಬಳಕೆಯ ತೆರಿಗೆ ಸಂಗ್ರಹ, ನಿಯಮಬಾಹಿರವಾಗಿ ಖಾತಾ ವಿತರಣೆ, ಸುಧಾರಣಾ ವೆಚ್ಚ ಪಾವತಿಸಿಕೊಳ್ಳದೆಯೇ ಖಾತಾ ನೋಂದಣಿ ಸೇರಿದಂತೆ ಹಲವು ಅಕ್ರಮಗಳ ಸರಮಾಲೆ ಮುಂದುವರಿದಿದೆ. ಲೆಕ್ಕ ಪರಿಶೋಧಕರು 2023-24ನೇ ಸಾಲಿನಲ್ಲಿ 84.98 ಕೋಟಿ ರೂ. ವಸೂಲಾತಿಗೆ ಸೂಚಿಸಿ, 22.39 ಕೋಟಿ ರೂ.ಗೆ ಆಕ್ಷೇಪಣೆ ಸಲ್ಲಿಸಿದ್ದಾರೆ.

ಪಾಲಿಕೆಗೆ ಆಸ್ತಿ ತೆರಿಗೆಯೇ ಪ್ರಮುಖ ಆದಾಯ ಮೂಲ. ಆದರೆ, ಆಸ್ತಿ ಮಾಲೀಕರು ಸಮರ್ಪಕವಾಗಿ ತೆರಿಗೆ ಕಟ್ಟುತ್ತಿಲ್ಲ. ಲಕ್ಷಾಂತರ ಆಸ್ತಿ ಮಾಲೀಕರು 600 ಕೋಟಿಗಿಂತ ಅಧಿಕ ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಆಸ್ತಿ ಹರಾಜಿನ ಎಚ್ಚರಿಕೆಗೂ ಜಗ್ಗುತ್ತಿಲ್ಲ. ಆದರೆ, ಕಂದಾಯ ವಿಭಾಗದಲ್ಲಿ ಕಾರ್ಯ ನಿರ್ವಹಿಸುವ ಕೆಲ ಅಧಿಕಾರಿ, ಸಿಬ್ಬಂದಿಗಳು ಸ್ವತ್ತಿನ ಮಾಲೀಕರು ಹಾಗೂ ಬಿಲ್ಡರ್‌ಗಳೊಂದಿಗೆ ಶಾಮೀಲಾಗಿ ಪಾಲಿಕೆಗೆ ಕೋಟ್ಯಂತರ ರೂ. ವಂಚಿಸುತ್ತಿದ್ದಾರೆ. ಪ್ರತಿ ವರ್ಷದ ಲೆಕ್ಕ ಪರಿಶೋಧನೆಯಲ್ಲಿ ಈ ಅಧಿಕಾರಿಗಳ ಲಂಚಾವತಾರ ಬಯಲಾಗುತ್ತಿದೆ. ಆದಾಗ್ಯೂ, ಇದಕ್ಕೆ ಕಡಿವಾಣ ಬೀಳುತ್ತಿಲ್ಲ.

2.35 ಕೋಟಿ ಸುಧಾರಣಾ ಶುಲ್ಕ ಖೋತಾ: 2007ರಲ್ಲಿ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡಿರುವ ಪ್ರದೇಶಗಳಲ್ಲಿ ವ್ಯವಸಾಯೇತರ ಉದ್ದೇಶಕ್ಕೆ ಭೂಪರಿವರ್ತನೆಗೊಂಡಿರುವ ಸ್ವತ್ತುಗಳಿಗೆ ಚ.ಮೀ. ಗೆ 250 ರೂ. ಹಾಗೂ ಹಳೆಯ 100 ವಾರ್ಡ್‌ಗಳ ವ್ಯಾಪ್ತಿಯಲ್ಲಿನ ಸ್ವತ್ತುಗಳಿಗೆ ಚ.ಮೀ. ಗೆ 200 ರೂ. ಸುಧಾರಣಾ ಶುಲ್ಕ ನಿಗದಿಪಡಿಸಲಾಗಿದೆ. ಕೆಲವೊಂದು ಪ್ರಕರಣಗಳಲ್ಲಿ ಸುಧಾರಣಾ ವೆಚ್ಚ ಪಾವತಿಸಿಕೊಳ್ಳದೆ ಖಾತೆ ನೋಂದಾಯಿಸಿರುವುದು, ಇನ್ನೂ ಕೆಲ ಪ್ರಕರಣಗಳಲ್ಲಿ ಕಡಿಮೆ ಪಾವತಿಸಿಕೊಂಡಿರುವುದು ಕಂಡು ಬಂದಿದೆ. ಈ ಸಂಬಂಧ ಪೂರಕ ದಾಖಲೆಗಳನ್ನು ಒದಗಿಸದಿರುವುದರಿಂದ 2.35 ಕೋಟಿ ರೂ. ವಸೂಲಾತಿಗೆ ಸೂಚಿಸಲಾಗಿದೆ.

'ಬಿ' ಖಾತಾ ಸ್ವತ್ತಿಗೆ ಖಾತಾ ವಿಭಜನೆ: ಗಾಂಧಿನಗರ ಉಪ ವಿಭಾಗದ ಕಂದಾಯ ಅಧಿಕಾರಿಗಳು 6851 ಚ.ಅಡಿ ವಿಸ್ತೀರ್ಣದ ನಿವೇಶನದಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಮಾಲೀಕರು ಕಟ್ಟಡ ನಕ್ಷೆ ಮಂಜೂರಾತಿ ಪಡೆದಿದ್ದಾರೆಂದು ಟಿಪ್ಪಣಿಯಲ್ಲಿ ನಮೂದಿಸಿದ್ದಾರೆ. ಆದರೆ, ಒ.ಸಿ. ಪಡೆದಿರುವ ವಿವರ ಲಭ್ಯವಿಲ್ಲ. ಹೀಗಾಗಿ, ಈ ಕಟ್ಟಡವನ್ನು ಅನಧಿಕೃತವೆಂದೇ ಪರಿಗಣಿಸಿ 'ಎ' ಖಾತೆಯಿಂದ 'ಬಿ' ಖಾತೆ ವಹಿಯಲ್ಲಿ ಕಟ್ಟಡದ ವಿವರಗಳನ್ನು ನಮೂದಿಸಿ, ತೆರಿಗೆ ನಿಗದಿಪಡಿಸಿ ವಸೂಲಿ ಮಾಡಬೇಕಿತ್ತು. ಈ ಸ್ವತ್ತಿನಲ್ಲಿ ನಿರ್ಮಿಸಿದ್ದ 16 ಫ್ಲ್ಯಾಟ್‌ಗಳಿಗೆ 'ಬಿ' ಖಾತಾ ನೀಡಿ, ನಿಯಮಬಾಹಿರವಾಗಿ ವಿಭಜನೆ ಮಾಡಲಾಗಿದೆ.

ಜಯನಗರ ಉಪ ವಿಭಾಗದ ಕಂದಾಯ ಅಧಿಕಾರಿಗಳು ಭೂಪರಿವರ್ತನೆಗೊಳ್ಳದ ಆಸ್ತಿಗಳಿಗೆ ಖಾತಾ ನೋಂದಣಿ ಮಾಡಿಕೊಟ್ಟು ಅಕ್ರಮವೆಸಗಿದ್ದಾರೆ. ಅದೇ ಜಯನಗರ 3ನೇ ಬ್ಲಾಕ್‌ನಲ್ಲಿ 2400 ಚ.ಅಡಿ ವಿಸ್ತೀರ್ಣದ ನಿವೇಶನದಲ್ಲಿ ಸ್ಟಿಲ್ಟ್, ನೆಲಮಹಡಿ, 1, 2 ಮತ್ತು 3ನೇ ಅಂತಸ್ತಿನ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ನೀಡಲಾಗಿತ್ತು. ಸ್ವತ್ತಿನ ಮಾಲೀಕರು ಅನಧಿಕೃತವಾಗಿ 4 ಮತ್ತು 5ನೇ ಅಂತಸ್ತು ನಿರ್ಮಾಣ ಮಾಡಿದ್ದಾರೆ. ಈ ಕಟ್ಟಡಕ್ಕೆ ಸಬ್ ಮುನ್ಸಿಪಲ್ ಸಂಖ್ಯೆ ನೀಡಲು ಅವಕಾಶ ಇಲ್ಲ. ಇಂತಹ ಸ್ವತ್ತನ್ನು 'ಬಿ' ಖಾತೆ ವಹಿಯಲ್ಲಿ ದಾಖಲಿಸಬೇಕಿತ್ತು. ಆದರೆ, ನಿಯಮ ಉಲ್ಲಂಘಿಸಿ ಸಬ್ ಮುನ್ಸಿಪಲ್ ಸಂಖ್ಯೆ ನೀಡಿರುವುದನ್ನು ಲೆಕ್ಕ ಪರಿಶೋಧಕರು ಪತ್ತೆ ಮಾಡಿದ್ದಾರೆ.

ನಕ್ಷೆ, ಒಸಿ ಇಲ್ಲದ ಕಟ್ಟಡಕ್ಕೆ ಖಾತೆ: ಎಚ್ಎಎಲ್ ಉಪ ವಿಭಾಗದ ಮಹದೇವಪುರದಲ್ಲಿನ 1.13 ಎಕರೆ ಜಾಗವನ್ನು ವಸತಿ ಉದ್ದೇಶಕ್ಕೆ ಭೂಪರಿವರ್ತನೆ ಮಾಡಿಸಿಕೊಳ್ಳಲಾಗಿದೆ. ಅದರಂತೆ ಮಾಲೀಕರ ಹೆಸರಿಗೆ ಖಾತೆ ನೋಂದಾಯಿಸಿ ತೆರಿಗೆ ನಿಗದಿಪಡಿಸಲಾಗಿದೆ. ಆದರೆ, 27,830 ಚ.ಅಡಿ ವಿಸ್ತೀರ್ಣದ ಈ ಸ್ವತ್ತಿನಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಲಾಗಿದ್ದು, ಇದಕ್ಕೆ ನಕ್ಷೆ ಮಂಜೂರಾತಿ, ಒ.ಸಿ ಪಡೆದಿರುವ ದಾಖಲೆಗಳು ಇಲ್ಲ. ಅಲ್ಲದೆ, ಭೂಪರಿವರ್ತನೆ ಉದ್ದೇಶಕ್ಕೆ ವಿರುದ್ಧವಾಗಿ ವಾಣಿಜ್ಯ ಕಟ್ಟಡ ನಿರ್ಮಿಸಲಾಗಿದೆ. ಆದರೆ, ಅನಧಿಕೃತ ಕಟ್ಟಡ ಮತ್ತು ಜಮೀನಿಗೆ ಖಾತೆ ನೋಂದಾಯಿಸಿರುವುದು ನಿಯಮಬಾಹಿರವಾಗಿದೆ. ಹೀಗಿದ್ದರೂ ಸುಧಾರಣಾ ವೆಚ್ಚ ಪಾವತಿಸಿಕೊಂಡು ಖಾತೆ ಮಾಡಿಕೊಡಲಾಗಿದೆ.

84.98 ಕೋಟಿ ರೂ. ವಸೂಲಾತಿಗೆ ಸೂಚನೆ
22.39 ಕೋಟಿ ರೂ.ಗೆ ಆಕ್ಷೇಪಣೆ

ನಿಗದಿಗಿಂತ ಕಡಿಮೆ ತೆರಿಗೆ ವಸೂಲಿ



ಸಹಾಯಕ ಕಂದಾಯ ಅಧಿಕಾರಿಗಳು ನಿಗದಿತ ಆಸ್ತಿ ತೆರಿಗೆ ವಸೂಲಿ ಮಾಡದೆ ಕಡಿಮೆ ವಸೂಲಿ ಮಾಡಿರುವುದು, ವಲಯ ವರ್ಗೀಕರಣದಂತೆ ತೆರಿಗೆ ನಿಗದಿಪಡಿಸಿ ವಸೂಲಿ ಮಾಡದೆ ಕಡಿಮೆ ಸಂಗ್ರಹ ಮಾಡಿರುವುದು ಹಾಗೂ ಸ್ವತ್ತುಗಳ ಅಳತೆ ಕಡಿಮೆ ಪರಿಗಣಿಸಿ ಮಾಲೀಕರಿಗೆ ಅನುಕೂಲ ಮಾಡಿಕೊಟ್ಟಿರುವುದು, ವಾರ್ಷಿಕ ಮೌಲ್ಯವನ್ನು ಕಡಿಮೆ ಪರಿಗಣಿಸಿರುವುದು, ಸ್ವಾಧೀನಾನುಭವ ಪ್ರಮಾಣಪತ್ರದಲ್ಲಿರುವಂತೆ ನೀಡಿರುವ ದಿನಾಂಕದಿಂದ ತೆರಿಗೆ ನಿಗದಿಪಡಿಸದಿರುವುದು ಇತ್ಯಾದಿ ಕಾರಣಗಳಿಂದ ಪಾಲಿಕೆಗೆ ಬರಬೇಕಿದ್ದ ತೆರಿಗೆ ವಸೂಲಿ ಮಾಡದಿರುವುದು ಕಂಡು ಬಂದಿದ್ದು, 1.79 ಕೋಟಿ ರೂ. ವಸೂಲಾತಿಗೆ ಶಿಫಾರಸು ಮಾಡಲಾಗಿದೆ. ಅಲ್ಲದೆ, ಖಾತೆ ನೋಂದಣಿ, ಸ್ವತ್ತುಗಳ ವರ್ಗಾವಣೆ ಶುಲ್ಕ ಪಾವತಿಸಿಕೊಳ್ಳದಿರುವುದು ಹಾಗೂ ಕಡಿಮೆ ಸಂಗ್ರಹಿಸಿರುವುದರಿಂದ ಪಾಲಿಕೆಗೆ 84.16 ಲಕ್ಷ ರೂ. ನಷ್ಟ ಉಂಟಾಗಿದೆ.

3357 ಟವರ್‌ಗಳಿಂದ ₹7.90 ಕೋಟಿ ಬಾಕಿ

ಪಾಲಿಕೆ ವ್ಯಾಪ್ತಿಯಲ್ಲಿ ಮೊಬೈಲ್ ಟವರ್‌ಗಳಿಂದ ತೆರಿಗೆ ವಸೂಲಿ ಮಾಡದಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿದೆ. ಪ್ರತಿ ಟವರ್‌ನಿಂದ ವಾರ್ಷಿಕ 15 ಸಾವಿರ ರೂ., 3900 ಉಪಕರ, ವಿಳಂಬಕ್ಕೆ ವಾರ್ಷಿಕ ಬಡ್ಡಿ 4536 ರೂ., 100 ರೂ. ದಂಡ ಸೇರಿ 23536 ರೂ. ವಸೂಲಿ ಮಾಡಬೇಕಿದೆ. ಆದರೆ, 3357 ಟವರ್‌ಗಳಿಂದ 7.90 ಕೋಟಿ ರೂ. ವಸೂಲಾಗಿಲ್ಲ.

ಅನಧಿಕೃತ ಕಟ್ಟಡಗಳಿಗೆ ಖಾತೆ

ಪಾಲಿಕೆಯ ಕೆಲ ಕಂದಾಯ ಉಪ ವಿಭಾಗ ಕಚೇರಿಗಳಲ್ಲಿ ಕಟ್ಟಡ ನಿರ್ಮಿಸಲು ಸಕ್ಷಮ ಪ್ರಾಧಿಕಾರದ ವತಿಯಿಂದ ನಕ್ಷೆ ಮಂಜೂರಾತಿ ಹಾಗೂ ಒ.ಸಿ ಪಡೆಯದಿರುವುದು ಕಂಡು ಬಂದಿದೆ. ಈ ರೀತಿಯ ಕಟ್ಟಡಗಳಿಗೆ ಕಡಿಮೆ ತೆರಿಗೆ ನಿಗದಿಪಡಿಸಿ ಪಾವತಿಸಿಕೊಂಡಿರುವುದರಿಂದ ಅನಧಿಕೃತ ಕಟ್ಟಡಗಳಿಗೆ ಖಾತೆ ಮಾಡಿಕೊಟ್ಟಂತಾಗಿದೆ ಎಂದು ಆಡಿಟ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಹೆಚ್ಚುವರಿ ವಿಸ್ತೀರ್ಣಕ್ಕೆ ಖಾತೆ ನೋಂದಣಿ

ಹೂಡಿ ಉಪ ವಿಭಾಗದ ಪಟ್ಟಂದೂರು ಅಗ್ರಹಾರದಲ್ಲಿ 8136.01 ಚ.ಮೀ ವಿಸ್ತೀರ್ಣದ ಜಾಗದಲ್ಲಿ ನಿರ್ಮಿಸಿದ್ದ 80 ಫ್ಲ್ಯಾಟ್‌ಗಳ ಅಪಾರ್ಟ್‌ಮೆಂಟ್‌ಗೆ ಸ್ವಾಧೀನಾನುಭವ ಪ್ರಮಾಣಪತ್ರ ವಿತರಿಸಲಾಗಿದೆ. ಇದರಲ್ಲಿ 6 ಫ್ಲ್ಯಾಟ್‌ಗಳನ್ನು ಖರೀದಿದಾರರಿಗೆ, 71 ಫ್ಲ್ಯಾಟ್‌ಗಳನ್ನು ಮೂಲ ಖಾತೆದಾರರ ಹೆಸರಿಗೆ ಖಾತೆ ಮಾಡಿಕೊಡಲಾಗಿದೆ. ಈ ಫ್ಲ್ಯಾಟ್‌ಗಳು ಹಾಗೂ ಕ್ಲಬ್ ಹೌಸ್‌ಗೆ 2018ರ ಅ.1ರಿಂದ ಅನ್ವಯವಾಗುವಂತೆ ತೆರಿಗೆ ನಿಗದಿಪಡಿಸಲಾಗಿದೆ. ಆದರೆ, ಅಧಿಕಾರಿಗಳು 77 ಫ್ಲ್ಯಾಟ್‌ಗಳ ವಿಸ್ತೀರ್ಣ 88,837 ಚ.ಅಡಿ ಹಾಗೂ ಕ್ಲಬ್ ಹೌಸ್ ವಿಸ್ತೀರ್ಣ 2400 ಚ.ಅಡಿ ಸೇರಿ 91,237 ಚ.ಅಡಿಗೆ ಖಾತೆ ನೋಂದಾಯಿಸಿದ್ದಾರೆ. ಸ್ವಾಧೀನಾನುಭವ ಪ್ರಮಾಣಪತ್ರದಲ್ಲಿನ ವಸತಿ ಸಮುಚ್ಚಯದಲ್ಲಿನ ವಿಸ್ತೀರ್ಣಕ್ಕಿಂತ 23729.63 ಚ.ಅಡಿ ಹೆಚ್ಚುವರಿ ವಿಸ್ತೀರ್ಣಕ್ಕೆ ಖಾತೆ ನೋಂದಾಯಿಸಲಾಗಿದೆ. ಮಾರತ್ ಹಳ್ಳಿ ಉಪ ವಿಭಾಗದ ಕಸವನಹಳ್ಳಿಯಲ್ಲೂ ಇದೇ ರೀತಿಯ ನಿಯಮ ಉಲ್ಲಂಘಿಸಲಾಗಿದೆ. 29,614 ಚ.ಅಡಿ ಜಾಗಕ್ಕೆ ಸುಧಾರಣಾ ವೆಚ್ಚ ಸಂಗ್ರಹಿಸದೆ ಖಾತೆ ಮಾಡಿಕೊಡಲಾಗಿದೆ.

ಸಾ.ರಾ.ಗೋವಿಂದು ವಿರುದ್ಧ ಕೇಸ್

ಬೆಂಗಳೂರು: ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದು ಹಾಗೂ ಇತರರು ತಮ್ಮ ಮನೆಗೆ ನುಗ್ಗಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ನಟ ಚೇತನ್ ಅಹಿಂಸಾ ಶೇಷಾದ್ರಿಪುರಂ ಠಾಣೆ ಪೊಲೀಸರಿಗೆ ದೂರು ನೀಡಿದ್ದು, ಈ ಸಂಬಂಧ ಎಫ್ಐಆರ್ ದಾಖಲಿಸಲಾಗಿದೆ.

ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಆರೋಪ

ಜನಪರ ವಾಗೂ ದಲಿತ ಸಂಘಟನೆಗಳ ಪದಾಧಿಕಾರಿಗಳೊಂದಿಗೆ ಶನಿವಾರ ಪೊಲೀಸ್ ಠಾಣೆಗೆ ತೆರಳಿದ್ದ ಚೇತನ್, ಗೋವಿಂದು ವಾಗೂ ಇತರರ ವಿರುದ್ಧ ಲಿಖಿತ ದೂರು ನೀಡಿದ್ದರು. ದೂರು ನೀಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಚೇತನ್, ''ರಾಜ್‌ಕುಮಾರ್ ಅವರ ಹೆಸರಿಗೆ ಮಸಿ ಬಳಿಯುವ ಕೆಲಸವನ್ನು ಗೋವಿಂದು ಮಾಡುತ್ತಿದ್ದಾರೆ. ಅಲ್ಲದೇ ಸಿನಿಮಾ ರಂಗದ ಬೆಳವಣಿಗೆಗೂ ಅಡ್ಡಿಯಾಗಿದ್ದಾರೆ. ದಬ್ಬಾಳಿಕೆ, ಭಯ ಹುಟ್ಟಿಸುವ ಕೆಲಸ ಮಾಡುತ್ತಿದ್ದಾರೆ. ಪೊಲೀಸರ ಸಮ್ಮುಖದಲ್ಲೇ ನನಗೆ ಧಮ್ಕಿ ಹಾಕಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ರಾಜ್‌ಕುಮಾರ್ ಅವರ ಅಭಿಮಾನಿ ಅಂತ ಹೇಳಿಕೊಳ್ಳುವ ಯಾವ ಯೋಗ್ಯತೆಯೂ ಅವರಿಗಿಲ್ಲ. ಸಿನಿಮಾ ರಂಗದ ಒಳಿತಿಗೆ ಶ್ರಮಿಸಿದವರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ,'' ಎಂದು ಆರೋಪಿಸಿದರು. ''ಈ ಹಿಂದೆ ಲಂಕೇಶ್ ಪತ್ರಿಕೆಯ ಪತ್ರಕರ್ತರ ಮೇಲೆ ಗೋವಿಂದು ಹಲ್ಲೆ ಮಾಡಿದ್ದರು. ಫಿಲ್ಮ್ ಚೇಂಬರ್‌ನಲ್ಲಿ ಹಣ ಕಳ್ಳತನ ಮಾಡಿರುವ ಆರೋಪ ಸಹ ಅವರ ಮೇಲಿದೆ'' ಎಂದು ದೂರಿದರು. ನಗರದ ಕಂಠೀರವ ಸ್ಟುಡಿಯೋದಲ್ಲಿ ಡಾ.ರಾಜ್ ಕುಮಾರ್ ಅವರ ಸಮಾಧಿಗೆ 2.5 ಎಕರೆ ಭೂಮಿ ಮಂಜೂರು ಮಾಡಿರುವ ರಾಜ್ಯ ಸರಕಾರದ ನಿರ್ಧಾರದ ಬಗ್ಗೆ ಚೇತನ್ ಆಕ್ಷೇಪಿಸಿ ಸಾಮಾಜಿಕ ಜಾಲತಾಣಗಳಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದರು. ಇದು ವಿವಾದ ಸ್ವರೂಪ ಪಡೆದುಕೊಂಡು ಪರ-ವಿರೋಧ ಚರ್ಚೆಗೆ ಗ್ರಾಸವಾಗಿತ್ತು. ವಿವಾದ ಭುಗಿಲೇಳುತ್ತಿದ್ದಂತೆಯೇ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದು ನೇತೃತ್ವದಲ್ಲಿ ಕೆಲವರು ಏ.25ರಂದು ಚೇತನ್ ಮನೆ ಬಳಿ ತೆರಳಿ ಗಲಾಟೆ ಮಾಡಿದ್ದರು.

ಕಂದಾಯಾಧಿಕಾರಿಗಳಿಗೆ ಅಧಿಕಾರವಿಲ್ಲ: ಹೈಕೋರ್ಟ್ ಸ್ಪಷ್ಟನೆ

ಬೆಂಗಳೂರು: ಹಿಂದಿನ ಬಿಬಿಎಂಪಿ- ಹಾಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿರುವ ಭೂಮಿ, ಕೃಷಿ ಎಂದು ವರ್ಗೀಕರಿಸಲ್ಪಟ್ಟಿದ್ದರೂ ಅದರ ಮೇಲೆ ಕರ್ನಾಟಕ ಭೂ ಕಂದಾಯ ಕಾಯಿದೆಯಡಿ ಯಾವುದೇ ದೂರು ಸ್ವೀಕರಿಸಲು ಅಥವಾ ಆದೇಶ ಹೊರಡಿಸಲು ಕಂದಾಯ ಅಧಿಕಾರಿಗಳಿಗೆ ಯಾವುದೇ ಅಧಿಕಾರವಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ. ಕೃಷಿ ಭೂಮಿಯನ್ನು ಅನಧಿಕೃತವಾಗಿ ಕೃಷಿಯೇತರ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳುತ್ತಿರುವುದರಿಂದ ಅದನ್ನು ತೆರವುಗೊಳಿಸುವಂತೆ ತಹಸೀಲ್ದಾರ್ ಹೊರಡಿಸಿದ್ದ ಆದೇಶಗಳನ್ನು ಪ್ರಶ್ನಿಸಿ ಸಿ.ಪರಿಮಳಾ ಮತ್ತಿತರರು ಸಲ್ಲಿಸಿದ್ದ ಹಲವು ಮೇಲ್ಮನವಿಗಳನ್ನು ಪರಿಶೀಲಿಸಿದ ನ್ಯಾಯಮೂರ್ತಿಗಳಾದ ಡಿ.ಕೆ. ಸಿಂಗ್ ಮತ್ತು ಟಿ.ಎಂ. ನದಾಫ್ ಅವರನ್ನು ಒಳಗೊಂಡ ವಿಭಾಗೀಯ ಪೀಠವು ಈ ಆದೇಶ ಮಾಡಿದೆ. ವಾದ-ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯ, ''ಭೂಮಿಯನ್ನು ಪರಿವರ್ತಿಸದೆ ಅಥವಾ ಕಟ್ಟಡ ನಿರ್ಮಾಣಕ್ಕೆ ಅನುಮತಿ ಪಡೆಯದೆ ವಸತಿ ಉದ್ದೇಶಗಳಿಗಾಗಿ ಕೃಷಿ ಭೂಮಿಯನ್ನು ಬಳಸುವ ಕಾನೂನುಬದ್ಧತೆಯನ್ನು ಪರಿಶೀಲಿಸದೆ, ಭೂ ಬಳಕೆ ಮತ್ತು ಅಕ್ರಮ ನಿರ್ಮಾಣದ ಉಲ್ಲಂಘನೆಯ ವಿರುದ್ಧ ಜಿಬಿಎ ಮಾತ್ರ ಕಾನೂನಿನ ಪ್ರಕಾರ ಮುಂದುವರಿಯಬಹುದು,'' ಎಂದು ಹೇಳಿದೆ. ಅರ್ಜಿಗಳನ್ನು ಇತ್ಯರ್ಥಪಡಿಸಿರುವ ನ್ಯಾಯಾಲಯ, '2014-2022ರ ಹಿಂದಿನ ಆದೇಶ ಜಾರಿಗೊಳಿಸುವ ಅಥವಾ ಕರ್ನಾಟಕ ಭೂ ಕಂದಾಯ ಕಾಯಿದೆಯ ನಿಬಂಧನೆಗಳಡಿ ನೋಟಿಸ್ ನೀಡುವ ಮತ್ತು ಆದೇಶಗಳನ್ನು ರವಾನಿಸುವ ಮೂಲಕ ಯಾವುದೇ ಕ್ರಮ ಕೈಗೊಳ್ಳುವ ಅಧಿಕಾರವನ್ನು ಕಂದಾಯ ಅಧಿಕಾರಿಗಳು ಕಳೆದುಕೊಂಡಿದ್ದಾರೆ,'' ಎಂದು ಹೇಳಿದೆ. ''ಸೈನಿಕ್ ವಿಹಾರ್ ಲೇ ಔಟ್‌ನಲ್ಲಿರುವ ನಿವೇಶನಗಳು ಮತ್ತು ಮನೆಗಳ ಭೂಮಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಹಾಲಿ ಗ್ರೇಟರ್‌ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಗೆ ಬರುವ ಜಮೀನುಗಳಾಗಿವೆ. ಹಾಗಾಗಿ, ಆ ಜಮೀನುಗಳು ಕಂದಾಯ ದಾಖಲೆಗಳಲ್ಲಿ ಕೃಷಿ ಪ್ರದೇಶವೆಂಬ ವರ್ಗೀಕರಣವನ್ನು ಉಳಿಸಿಕೊಂಡಿದ್ದರೂ ಕರ್ನಾಟಕ ಭೂ ಕಂದಾಯ ಕಾಯಿದೆಯಡಿ ರಾಜ್ಯ ಕಂದಾಯ ಇಲಾಖೆಯ ಅಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿ ಚಲಾಯಿಸಲು ಸಾಧ್ಯವಿಲ್ಲ,'' ಎಂದು ನ್ಯಾಯಪೀಠ ಆದೇಶಿಸಿದೆ.

ಪ್ರಯಾಣಿಕರ ಜೇಬಿಗೆ ಕತ್ತರಿ

■ **ವಿಕ ಸುದ್ದಿಲೋಕ** ಬೆಂಗಳೂರು

ಆಟೊ ಎಲ್‌ಪಿಜಿ ಸಮಸ್ಯೆಯಿಂದ ಕಂಗೆಟ್ಟು ಹೋಗಿರುವ ಚಾಲಕರಿಗೆ, ದರ ಏರಿಕೆಯಿಂದ ಗಾಯದ ಮೇಲೆ ಬರೆ ಎಳೆದಂತಾಗಿದೆ. ಹೀಗಾಗಿ, ಆಟೊ ಚಾಲಕರು ಪ್ರಯಾಣಿಕರು ಹೆಚ್ಚುವರಿ ದರಕ್ಕೆ ಬೇಡಿಕೆ ಇಡುತ್ತಿದ್ದಾರೆ.

ಅಮೆರಿಕ, ಇಸ್ರೇಲ್ ಹಾಗೂ ಇರಾನ್ ನಡುವಿನ ಸಂಘರ್ಷದ ಪರಿಣಾಮ, ಕಳೆದ ಒಂದು ತಿಂಗಳಿನಿಂದ ನಗರದಲ್ಲಿ ಎಲ್‌ಪಿಜಿ ಕೊರತೆ ಉಂಟಾಗಿತ್ತು. ಸದ್ಯ ಅಲ್ಪಮಟ್ಟಿಗೆ ಸಮಸ್ಯೆ ನೀಗಿದ ಹಿನ್ನೆಲೆಯಲ್ಲಿ ಚಾಲಕರು ನಿಟ್ಟುಸಿರು ಬಿಟ್ಟಿದ್ದಾರೆ. ಆದರೆ, ಕೇಂದ್ರ ಸರಕಾರವು ಆಟೊ ಎಲ್‌ಪಿಜಿ ದರವನ್ನು ಮೇ 1ರಿಂದ ಅನ್ವಯವಾಗುವಂತೆ ಕೆ.ಜಿಗೆ 5.73 ರೂ. ಏರಿಕೆ ಮಾಡಿದೆ. ಇದರಿಂದಾಗಿ ಆಟೊ ಎಲ್‌ಪಿಜಿ ದರವು ಕೆ.ಜಿಗೆ 95.08 ರೂ. ಆಗಿದೆ.

ದರ ಹೆಚ್ಚಳದಿಂದ ತತ್ತರಿಸಿ ಹೋಗಿರುವ ಆಟೊ ಚಾಲಕರು, ಅನಧಿಕೃತವಾಗಿ ಪ್ರಯಾಣಿಕರಿಂದ ದುಪ್ಪಟ್ಟು ಪ್ರಯಾಣ ದರ ವಸೂಲಿ ಮಾಡುತ್ತಿರುವ ದೂರುಗಳು ಕೇಳಿಬಂದಿವೆ. ಆಟೊ ಎಲ್‌ಪಿಜಿ ದರ ಹೆಚ್ಚಳದ ಹಿನ್ನೆಲೆಯಲ್ಲಿ ಪ್ರಯಾಣ ದರವನ್ನು ಏರಿಕೆ ಮಾಡಬೇಕೆಂದು ಆಟೊ ಚಾಲಕರು ಹಾಗೂ ಮಾಲೀಕರ ಸಂಘಟನೆಗಳು ಸರಕಾರವನ್ನು ಒತ್ತಾಯಿಸಿವೆ.

''ನಗರದಲ್ಲಿ ಸುಮಾರು 2 ಲಕ್ಷಕ್ಕೂ ಹೆಚ್ಚು ಆಟೊಗಳು ಸಂಚರಿಸುತ್ತವೆ. ಆಟೊ ಎಲ್‌ಪಿಜಿ ಕೊರತೆಯಿಂದಾಗಿ ಹಲವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕುಟುಂಬ ನಿರ್ವಹಣೆಗೂ ಪರದಾಡುತ್ತಿದ್ದಾರೆ. ಇಂಥಹ ಪರಿಸ್ಥಿತಿಯಲ್ಲಿ ಎಲ್‌ಪಿಜಿ ದರ ಏರಿಕೆ ಮಾಡಲಾಗಿದೆ. ರಾಜ್ಯ ಸರಕಾರ ತಕ್ಷಣ ಮಧ್ಯಪ್ರವೇಶಿಸಿ ದರ ಇಳಿಕೆ ಮಾಡಬೇಕು. ಇಲ್ಲವಾದಲ್ಲಿ ಪ್ರಯಾಣಿಕರಿಂದ ಅಧಿಕ ದರ ಪಡೆಯುವುದು ಅನಿವಾರ್ಯವಾಗಲಿದೆ,'' ಎಂದು ಚಾಲಕ ರೆಹಮಾನ್ ಆಕ್ರೋಶ ವ್ಯಕ್ತಪಡಿಸಿದರು.

''ಆಟೊ ಚಾಲಕರು ತಮ್ಮ ವಾಹನವನ್ನು ಗ್ಯಾಸ್‌ನಿಂದ ಸಿಎನ್‌ಜಿಗೆ ಪರಿವರ್ತಿಸಿಕೊಳ್ಳುತ್ತಿದ್ದಾರೆ. ಇನ್ನು ಕೆಲವರಿಗೆ ತಮ್ಮ ವಾಹನಗಳ ಸಾಲದ ಕಂತು ಕಟ್ಟಲಾಗುತ್ತಿಲ್ಲ. ಹೀಗಾಗಿ, ಸಾಲ ನೀಡಿರುವ ಸಂಸ್ಥೆಗಳು ಆಟೊಗಳನ್ನು ಜಪ್ತಿ ಮಾಡುತ್ತಿವೆ. ಓಲಾ, ಉಬರ್, ರ್‍ಯಾಪಿಡೊ ಸಂಸ್ಥೆಗಳು ಪ್ರಯಾಣ ದರ ಹೆಚ್ಚಿಸಿದರೆ ಪ್ರಯಾಣಿಕರ ಸಂಖ್ಯೆ ಕ್ಷೀಣಿಸುವ ಭಯವಿದೆ. ಆದ್ದರಿಂದ ದರ ಏರಿಕೆಗೆ ಹಿಂದೇಟು ಹಾಕುತ್ತಿವೆ. ಹೀಗಾಗಿ, ಗ್ಯಾಸ್ ದರ ಕಡಿಮೆ ಮಾಡುವಂತೆ ಸರಕಾರದ ಮೇಲೆ ಒತ್ತಡ ಹೇರಲಾಗುವುದು,'' ಎಂದು ಓಲಾ, ಉಬರ್ ಅಸೋಸಿಯೇಷನ್ ಅಧ್ಯಕ್ಷ ತನ್ವೀರ್ ಪಾಷ ತಿಳಿಸಿದರು.

ಆಟೊ ಎಲ್‌ಪಿಜಿ ದರ ಹೆಚ್ಚಳ



ಗ್ಯಾಸ್ ದರ ಏರಿಕೆಯಾಗಿದ್ದರೂ, ಪ್ರಯಾಣ ದರ ಹೆಚ್ಚಿಸಿಲ್ಲ. 2-3 ದಿನಗಳಲ್ಲಿ ಸಾರಿಗೆ ಸಚಿವರು ಮತ್ತು ಆಹಾರ ಇಲಾಖೆ ಸಚಿವರೊಂದಿಗೆ ಸಭೆ ನಡೆಯಲಿದೆ. ಆ ಸಭೆಯಲ್ಲಿ ಪ್ರಯಾಣ ದರ ಏರಿಕೆ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು.
-ಮಂಜುನಾಥ್ ಅಧ್ಯಕ್ಷ, ಆದರ್ಶ ಆಟೊ ಚಾಲಕರ ಸಂಘ

ಜಿಎಸ್‌ಟಿ ಇಳಿಕೆಗೆ ಹೋಟೆಲ್‌ಗಳ ಆಗ್ರಹ

ಬೆಂಗಳೂರು: ವಾಣಿಜ್ಯ ಅಡುಗೆ ಅನಿಲದ ಬೆಲೆ ಏರಿಕೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕರ್ನಾಟಕ ರಾಜ್ಯ ಹೋಟೆಲ್ ಅಸೋಸಿಯೇಷನ್(ಕೆಎಸ್‌ಎಚ್ಎ), ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆಯನ್ನು(ಜಿಎಸ್‌ಟಿ) ಇಳಿಕೆ ಮಾಡುವಂತೆ ಸರಕಾರವನ್ನು ಒತ್ತಾಯಿಸಿದೆ.

''ದಿನಸಿ ಮತ್ತು ತರಕಾರಿ ಬೆಲೆ ಹೆಚ್ಚಳದಿಂದ ಕಂಗೆಟ್ಟಿರುವ ಹೋಟೆಲ್ ಉದ್ಯಮಕ್ಕೆ ಅಡುಗೆ ಅನಿಲದ ಬೆಲೆ ಏರಿಕೆಯ ಹೊಡೆತ ನೀಡಲಾಗಿದೆ. ಹಾಗಾಗಿ, ತಕ್ಷಣವೇ 19 ಕೆ.ಜಿ ತೂಕದ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಮೇಲಿನ ಜಿಎಸ್‌ಟಿಯನ್ನು ಶೇ.18 ರಿಂದ ಶೇ.5ಕ್ಕೆ ಇಳಿಸಬೇಕು,'' ಎಂದು ಕೆಎಸ್‌ಎಚ್ಎ ಅಧ್ಯಕ್ಷ ಜಿ.ಕೆ.ಶೆಟ್ಟಿ ಆಗ್ರಹಿಸಿದ್ದಾರೆ.

''ಸರಕಾರವು ತೈಲ ಮಾರಾಟ ಕಂಪನಿಗಳ ಮೂಲಕ ಕಳೆದ 60 ದಿನಗಳಲ್ಲಿ ಸಿಲಿಂಡರ್ ಬೆಲೆಯನ್ನು 1308 ರೂ. ಏರಿಕೆ ಮಾಡಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಮಾಡಲಾದ ಅತಿ ದೊಡ್ಡ ಏರಿಕೆ. ಮಾರ್ಚ್‌ನಲ್ಲಿ ಸುಮಾರು 1,800-2,000 ರೂ. ಇತ್ತು. ಈಗ 3,100ರೂ.ಗೆ ಏರಿಕೆಯಾಗಿದೆ. ಇದರಿಂದ ಹೋಟೆಲ್‌ಗಳು ನಷ್ಟದ ಭೀತಿಗೆ ಸಿಲುಕಿವೆ,'' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

''ಪಶ್ಚಿಮ ಏಷ್ಯಾ ಬಿಕ್ಕಟ್ಟು ಸೇರಿದಂತೆ ನಾನಾ ಕಾರಣಗಳಿಂದ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ವಾಣಿಜ್ಯ ಎಲ್‌ಪಿಜಿ ಕೊರತೆ ಹಾಗೂ ಬೆಲೆಗಳ ಭಾರಿ ಏರಿಕೆಯಿಂದ ಹೋಟೆಲ್‌ಗಳ ನಿರ್ವಹಣಾ ವೆಚ್ಚ ಜಾಸ್ತಿಯಾಗಿದೆ,'' ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ''ವಾಣಿಜ್ಯ ಅಡುಗೆ ಅನಿಲದ ಬೆಲೆ ಏರಿಕೆ ಹಣದುಬ್ಬರದ ಒತ್ತಡವನ್ನು ಮತ್ತಷ್ಟು ಹೆಚ್ಚಿಸಲಿದೆ. »10

ದ್ವಿಶತಕ ಬಾರಿಸಿದ ಬೀನ್ಸ್

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಸಿಲಿನ ತಾಪಮಾನ ಏರುತ್ತಿರುವುದರ ನಡುವೆಯೇ ಬೀನ್ಸ್ ದರವೂ ದ್ವಿಶತಕ ಬಾರಿಸಿದೆ. ಇದರಿಂದ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ.

ಬಿಸಿಲ ತಾಪಮಾನ ಹೆಚ್ಚಳ ಹಿನ್ನೆಲೆಯಲ್ಲಿ ಬೀನ್ಸ್ ಬೆಳೆಯ ಹೂವು, ಕಾಯಿಗಳುಉದುರಲಾರಂಭಿಸಿವೆ. ನೀರಿನ ಅಭಾವದಿಂದ ಬೆಳೆ ಒಣಗಿ ಹೋಗುತ್ತಿದೆ. ಇದರಿಂದಾಗಿ ಇಳುವರಿ ಗಣನೀಯವಾಗಿ ಕುಸಿದಿದೆ. ಮದುವೆ, ಜಾತ್ರೆಗಳು, ಊರ ಹಬ್ಬಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಬೀನ್ಸ್‌ಗೆ ಬೇಡಿಕೆ ಜಾಸ್ತಿಯಾಗಿದೆ. ಬೇಡಿಕೆಗೆ ಅನುಗುಣವಾಗಿ ಲಭ್ಯವಾಗದ ಹಿನ್ನೆಲೆಯಲ್ಲಿ ದಿಢೀರ್ ಬೆಲೆ ಏರಿಕೆಯಾಗಿದೆ.

ಕಳೆದ ಎರಡು ವಾರಗಳಿಂದೀಚೆಗೆ ಬೀನ್ಸ್ ದರವು ಜಾಸ್ತಿಯಾಗಿದೆ. ಏ.14ರಂದು ಹಾಪ್‌ಕಾಮ್ಸ್‌ನಲ್ಲಿ ಒಂದು ಕೆ.ಜಿ ಹುರುಳಿಕಾಯಿ ದರವು 90 ರೂ. ಇತ್ತು. ಇದೇ ಬೀನ್ಸ್ ಬೆಲೆ ಮೇ 2ರಂದು 240 ರೂ.ಗೆ ಜಿಗಿದಿದೆ.

ಸಗಟು ಮಾರುಕಟ್ಟೆಯಲ್ಲೂ ಬೀನ್ಸ್ ದರ ಕೆ.ಜಿಗೆ 120 ರೂ. ಇದೆ. ಚಿಲ್ಲರೆ ದರದಲ್ಲಿ ಕೆ.ಜಿ 200 ರೂ. ಇದೆ. ಕೆಲ ವ್ಯಾಪಾರಿಗಳು ಬೀನ್ಸ್ ಮಾರಾಟ ಮಾಡುವುದನ್ನೇ ನಿಲ್ಲಿಸಿದ್ದಾರೆ. ಕ್ಯಾರಟ್ ದರ ಕಡಿಮೆಯಿದ್ದು, ಇತರೆ ತರಕಾರಿಗಳ ದರ ಏರಿಕೆಯಾಗಿದೆ. ಬೇಸಿಗೆಯಲ್ಲಿ ನಿಂಬೆಹಣ್ಣಿಗೆ ಬೇಡಿಕೆಯಿದ್ದು, ಇದೂ ಕೂಡ ದುಬಾರಿಯಾಗಿದೆ. ಒಂದು ಹಣ್ಣಿಗೆ 8 ರೂ. ಇದ್ದರೆ ಕೆ.ಜಿ ಗೆ 315 ರೂ. ಇದೆ.

ಹಾಪ್‌ಕಾಮ್ಸ್‌ನಲ್ಲಿ ತರಕಾರಿ ದರ (ಕೆ.ಜಿ.ಗಳಲ್ಲಿ)	
ಹುರುಳಿಕಾಯಿ	240
ಬದನೆಕಾಯಿ (ಬಿಳಿ)	60
ಬಜ್ಜಿ ಮೆಣಸಿನಕಾಯಿ	70
ಸೌತೆಕಾಯಿ	38
ಮೂಲಂಗಿ	40
ಕ್ಯಾರಟ್ ನಾಟಿ	44
ಬೀಟ್‌ರೂಟ್	56
ನವಿಲುಕೋಸು	44
ಹೀರೇಕಾಯಿ	58
ಎಲೆಕೋಸು	38
ಹೂಕೋಸು	44
ನಿಂಬೆಹಣ್ಣು	315
ಟೊಮೇಟೊ	48

50 ರೂ. ತಲುಪಿದ ಟೊಮೆಟೊ

ಟೊಮೆಟೊ ದರವೂ ದುಬಾರಿಯಾಗಿದೆ. ಕಳೆದ ಎರಡು ವಾರಗಳಿಂದೀಚೆಗೆ ಟೊಮೆಟೊ ದರ ಏರಿಕೆಯಾಗಿದೆ. ಬಿರುಗಾಳಿ, ಆಲಿಕಲ್ಲು ಸಹಿತ ಸುರಿದ ಮಳೆಯಿಂದಾಗಿ ಟೊಮೇಟೊ ಬೆಳೆ ಹಾನಿಗೀಡಾಗಿದೆ. ಹೀಗಾಗಿ ಕೆ.ಜಿ ಟೊಮೆಟೊ ದರವು ಹಾಪ್‌ಕಾಮ್ಸ್‌ನಲ್ಲಿ 48 ರೂ. ಇದೆ. ಚಿಲ್ಲರೆ ಮಾರಾಟಗಾರರು ಗುಣಮಟ್ಟ ಆಧರಿಸಿ ಕೆ.ಜಿಗೆ. 50 ರಿಂದ 60 ರೂ.ವರೆಗೆ ಮಾರಾಟ ಮಾಡುತ್ತಿದ್ದಾರೆ.

ಸೊಪ್ಪುಗಳ ದರವೂ ದುಬಾರಿ

ಸೊಪ್ಪುಗಳ ಬೆಲೆಯೂ ಏರಿಕೆಯಾಗಿದೆ. ಬಿಸಿಲು ಮತ್ತು ಮಳೆಯಿಂದಾಗಿ ಸೊಪ್ಪು ಕೊಳೆತು ಹೋಗಿದೆ. ಹೀಗಾಗಿ, ಮಾರುಕಟ್ಟೆಗೆ ಪೂರೈಕೆಯಾಗುವ ಸೊಪ್ಪಿನ ಪ್ರಮಾಣದಲ್ಲಿ ಇಳಿಕೆಯಾಗಿದೆ. ಇದರಿಂದ ಒಂದು ಕಟ್ಟು ಸೊಪ್ಪಿನ ಬೆಲೆ 25-30 ರೂ. ತಲುಪಿದೆ. ಕೊತ್ತಂಬರಿ ಸೊಪ್ಪು ಕಟ್ಟಿಗೆ 50 ರೂ. ಆಗಿದೆ. ನಾಟಿ ಕೊತ್ತಂಬರಿ ಸೊಪ್ಪಿನ ದರವೂ 60 ರೂ.ಗೆ ಜಿಗಿದಿದೆ. ಬಿಸಿಲಿನಿಂದಾಗಿ ಬೆಳೆಗಳಿಗೆ ನೀರು ಸಾಕಾಗುತ್ತಿಲ್ಲ. ಹೀಗಾಗಿ ಇಳುವರಿ ಕಡಿಮೆಯಾಗಿದ್ದು, ಬೇಡಿಕೆಗೆ ತಕ್ಕಂತೆ ಪೂರೈಕೆಯಿಲ್ಲ. ಇನ್ನೂ ಮೇ ಮುಗಿಯುವವರೆಗೆ ಬೆಲೆ ಏರಿಕೆ ಮುಂದುವರಿಯುತ್ತದೆ ಎನ್ನುತ್ತಾರೆ ಹಾಪ್‌ಕಾಮ್ಸ್‌ನ ಸಿಬ್ಬಂದಿ.

ಶ್ವಾನ ದತ್ತು ಪಡೆಯಲು ಮೋತಿ ಕಾರ್ಯಕ್ರಮ

ಬೆಂಗಳೂರು: ಬೀದಿ ನಾಯಿಗಳನ್ನು ದತ್ತು ಪಡೆಯುವುದನ್ನು ಉತ್ತೇಜಿಸುವುದಕ್ಕಾಗಿ ಬೆಂಗಳೂರು ಕೇಂದ್ರ ನಗರ ಪಾಲಿಕೆಯು ಮೇ 3ರಂದು 'ಮೋತಿ ನಂಬಿಕೆ ಮತ್ತು ಒಳಗೊಳ್ಳುವಿಕೆ ಆಂದೋಲನ' ಕಾರ್ಯಕ್ರಮವನ್ನು ಕಬ್ಬನ್ ಪಾರ್ಕ್‌ನಲ್ಲಿ ಆಯೋಜಿಸಿದೆ.

ಬೆಳಗ್ಗೆ 7ರಿಂದ 11ವರೆಗೆ ನಡೆಯುವ ಈ ಕಾರ್ಯಕ್ರಮವು ನಾಗರಿಕರು ಮತ್ತು ಸಮುದಾಯ ಪ್ರಾಣಿಗಳ ನಡುವೆ ಸಹಾನುಭೂತಿ, ಜವಾಬ್ದಾರಿ ಮತ್ತು ಸಮನ್ವಯಪೂರ್ಣ ಸಹಜೀವನವನ್ನು ಉತ್ತೇಜಿಸುವ ನಾಗರಿಕ ಚಳುವಳಿಯಾಗಿದೆ. ಪ್ರೀತಿಯ ಮನೆ ಹುಡುಕುತ್ತಿರುವ ಸಮುದಾಯದ ಶ್ವಾನಗಳ ದತ್ತು ಸ್ವೀಕಾರ ಅಭಿಯಾನ ನಡೆಯಲಿದೆ. ಆದ್ದರಿಂದ ಸಾರ್ವಜನಿಕರು, ಶ್ವಾನ ಪ್ರಿಯರು, ಸಂಘ-ಸಂಸ್ಥೆಗಳು, ಎನ್‌ಜಿಒಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಕೇಂದ್ರ ನಗರ ಪಾಲಿಕೆ ಅಭಿವೃದ್ಧಿ ಹೆಚ್ಚುವರಿ ಆಯುಕ್ತ ದಲ್ಜಿತ್ ಕುಮಾರ್ ಕೋರಿದ್ದಾರೆ.

44 ದಶಲಕ್ಷ ಪ್ರಯಾಣಿಕರಿಗೆ ಸೇವೆ | 5,32,000 ಮೆಟ್ರಿಕ್ ಟನ್ ಸರಕು ಸಾಗಣೆ | ಅಂತಾರಾಷ್ಟ್ರೀಯ ಪ್ರಯಾಣಿಕರ ಸಂಚಾರದಲ್ಲಿ ಶೇ.23.9 ರಷ್ಟು ಏರಿಕೆ

ಪ್ರಯಾಣಿಕರ ಸೇವೆ, ಸರಕು ಸಾಗಣೆಯಲ್ಲಿ ಕೆಐಎಎಲ್ ಪ್ರಗತಿ

■ **ವಿಕ ಸುದ್ದಿಲೋಕ** ಬೆಂಗಳೂರು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು 2025-26ನೇ ಸಾಲಿನಲ್ಲಿ ಪ್ರಯಾಣಿಕರ ಸೇವೆ ಮತ್ತು ಸರಕು ಸಾಗಣೆ ವಿಭಾಗದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ.

2025-26ನೇ ಸಾಲಿನಲ್ಲಿ 44.47 ದಶಲಕ್ಷ ಪ್ರಯಾಣಿಕರಿಗೆ ಸೇವೆ ಹಾಗೂ 5,32,000 ಮೆಟ್ರಿಕ್ ಟನ್ ಸರಕುಗಳನ್ನು ಸಾಗಣೆ ಮಾಡಿದೆ. ಈ ಮೂಲಕ ಅಂತಾರಾಷ್ಟ್ರೀಯ ಪ್ರಯಾಣಿಕರ ಏರಿಕೆ, ದೇಶೀಯ ಬೇಡಿಕೆಯ ಸ್ಥಿರತೆ ಹಾಗೂ ಬಲಿಷ್ಠ ಸರಕು ಕಾರ್ಯಾಚರಣೆ ವ್ಯವಸ್ಥೆಯು ಈ ಬೆಳವಣಿಗೆಗೆ ಮುಖ್ಯ ಕಾರಣವಾಗಿದೆ. ಈ ಮೂಲಕ ದಕ್ಷಿಣ ಭಾರತದ ಪ್ರಮುಖ ಜಾಗತಿಕ ಪ್ರವೇಶ ದ್ವಾರ ಎಂಬ ಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಂಡಿದೆ.

ಅಂತಾರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆಯ ಸಂಚಾರದಲ್ಲಿ ಶೇ.23.9ರಷ್ಟು ಏರಿಕೆಯೊಂದಿಗೆ 7.23 ದಶಲಕ್ಷ, ದೇಶೀಯ ಪ್ರಯಾಣಿಕರ ಸಂಖ್ಯೆಯು ಶೇ.3.3ರಷ್ಟು ಏರಿಕೆಯೊಂದಿಗೆ 37.24 ದಶಲಕ್ಷ ತಲುಪಿದೆ. ಒಟ್ಟಾರೆ ಪ್ರಯಾಣಿಕರ ಸಂಖ್ಯೆಯಲ್ಲಿ ವರ್ಷದಿಂದ ವರ್ಷಕ್ಕೆ ಶೇ. 6.2ರಷ್ಟು ಏರಿಕೆ ಕಂಡುಬಂದಿದೆ. ಜಾಗತಿಕ ರಾಜಕೀಯ ಸವಾಲುಗಳ ನಡುವೆಯೂ ಈ ಬೆಳವಣಿಗೆ ಬೆಂಗಳೂರು ನಗರವು ಜಾಗತಿಕ ವ್ಯವಹಾರ ಹಾಗೂ ನಾವೀನ್ಯತಾ ಕೇಂದ್ರವಾಗಿ ಹೆಚ್ಚುತ್ತಿರುವ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುತ್ತದೆ.

ವಿಮಾನ ನಿಲ್ದಾಣದಲ್ಲಿ ವರ್ಗಾವಣೆ ಪ್ರಯಾಣಿಕರ ಸಂಖ್ಯೆಯಲ್ಲೂ ಗಮನಾರ್ಹವಾಗಿ ಹೆಚ್ಚಳ ಕಂಡುಬಂದಿದ್ದು, ವರ್ಷದಿಂದ ವರ್ಷಕ್ಕೆ ಶೇ.22ರಷ್ಟು ಏರಿಕೆಯಾಗಿದೆ. ಇದು ಒಟ್ಟು ಪ್ರಯಾಣಿಕರ ಸಂಚಾರದಲ್ಲಿ ಶೇ.15.7ರಷ್ಟು ಪಾಲನ್ನು ಹೊಂದಿದೆ. ದೇಶೀಯ ವರ್ಗಾವಣೆ ಪ್ರಯಾಣಿಕರ ಸಂಖ್ಯೆ ಸುಮಾರು ಶೇ.3.2ರಷ್ಟು ಏರಿಕೆಯಾದರೆ, ಅಂತಾರಾಷ್ಟ್ರೀಯ ವರ್ಗಾವಣೆಯ ಪ್ರಯಾಣಿಕರ ಸಂಖ್ಯೆ ಶೇ.50ಕ್ಕಿಂತ ಹೆಚ್ಚು ವೇಗದಲ್ಲಿ ಬೆಳೆಯುತ್ತಿದೆ. ಇದು ಭವಿಷ್ಯದಲ್ಲಿ ಹೆಚ್ಚಿನ ಸಾಧ್ಯತೆಗಳನ್ನು ಸೂಚಿಸುತ್ತದೆ. ಪ್ರಸ್ತುತ, 'ಕನೆಕ್ಷನ್ಸ್ ಬೈ ಬಿಎಲ್‌ಆರ್' ಸೇವೆಯ ಮೂಲಕ ವರ್ಗಾವಣೆ ಪ್ರಯಾಣಿಕರಿಗೆ ಇನ್ನಷ್ಟು ಸುಗಮ ಮತ್ತು ವಿಶ್ವಾಸಾರ್ಹ ಸಂಪರ್ಕ ಅನುಭವ ದೊರೆಯುತ್ತಿದೆ.

ಲಂಡನ್ ಹೀತ್ರೋ, ಬ್ಯಾಂಕಾಕ್, ಬಹ್ರೇನ್, ಜೆಡ್ಡಾ, ಫುಕೆಟ್, ಕುವೈತ್, ಕಠ್ಮಂಡು, ಮ್ಯೂನಿಕ್ ಮತ್ತು ಮಾರಿಷಿಯಸ್ ಮಾರ್ಗಗಳಲ್ಲಿ ಸೇವೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ದುಬೈ, ಅಬುಧಾಬಿ, ಸಿಂಗಾಪುರ, ಲಂಡನ್ ಹೀತ್ರೋ ಮತ್ತು ಕೌಲಾಲಂಪುರ ಪ್ರಮುಖ ಅಂತಾರಾಷ್ಟ್ರೀಯ ಗಮ್ಯಸ್ಥಾನಗಳಾಗಿದ್ದರೆ, ದೆಹಲಿ, ಮುಂಬೈ, ಕೋಲ್ಕೊತ್ತಾ, ಹೈದರಾಬಾದ್ ಮತ್ತು ಪುಣೆ ದೇಶೀಯವಾಗಿ ಪ್ರಮುಖ ಮಾರ್ಗಗಳಾಗಿವೆ. ನವಿ ಮುಂಬೈ, ಜೈಸಲ್ಮೇರ್, ಬೀದರ್, ಸಿಲ್ಚರ್ ಮತ್ತು ದಿಮಾಪುರಗಳು ದೇಶೀಯವಾಗಿ ಹೊಸದಾಗಿ ಸೇರ್ಪಡೆಗೊಂಡಿವೆ.

ಒಟ್ಟು 2,80,800 ವಿಮಾನಗಳು ಸಂಚರಿಸಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.4.5ರಷ್ಟು ಏರಿಕೆಯಾಗಿದೆ. ದಿನಕ್ಕೆ ಸರಾಸರಿ 769 ವಿಮಾನ ಸಂಚಾರ ದಾಖಲಾಗಿದ್ದು, ಒಂದೇ ದಿನದಲ್ಲಿ ಗರಿಷ್ಠ 837 ವಿಮಾನಗಳು ಸಂಚರಿಸಿರುವುದು ದಾಖಲೆಯಾಗಿದೆ. ಪ್ರಯಾಣಿಕರ ಸಂಚಾರದಲ್ಲೂ ದಾಖಲೆ ನಿರ್ಮಾಣವಾಗಿದ್ದು, ಒಂದೇ ದಿನದಲ್ಲಿ 1,39,111 ಮಂದಿ ಪ್ರಯಾಣಿಸಿದ್ದಾರೆ.

ಸರಕು ವಿಭಾಗದಲ್ಲಿ ನಿರಂತರ ಪ್ರಗತಿ

ಸರಕು ಸಾಗಣೆ ವಿಭಾಗವು ಸ್ಥಿರವಾದ ಬೆಳವಣಿಗೆಯನ್ನು ಕಾಯ್ದುಕೊಂಡಿದೆ. ಶೇ.6 ರಷ್ಟು ಏರಿಕೆಯೊಂದಿಗೆ 5,32,000 ಮೆಟ್ರಿಕ್ ಟನ್ ಸರಕನ್ನು ಸಾಗಣೆ ಮಾಡಿದೆ. 15 ಸರಕು ವಿಮಾನ ಸಂಸ್ಥೆಗಳು 38 ಗಮ್ಯ ಸ್ಥಾನಗಳಿಗೆ ಸೇವೆ ನೀಡುತ್ತಿದೆ. ಕೊಳೆತು ಹೋಗುವ ಸರಕುಗಳ ಸಾಗಣೆಯಲ್ಲಿ ಬೆಂಗಳೂರು ವಿಮಾನ ನಿಲ್ದಾಣ ಸತತ ಐದನೇ ವರ್ಷವೂ ಭಾರತದ ಪ್ರಮುಖ ರಫ್ತು ಕೇಂದ್ರವಾಗಿ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ಈ ವರ್ಷದಲ್ಲಿ 60 ದಶಲಕ್ಷ ಗುಲಾಬಿ ಹೂಗಳನ್ನು ಸಾಗಣೆ ಮಾಡಿದೆ. ಈ ಪ್ರಮಾಣದಲ್ಲಿ ಶೇ.38 ಮತ್ತು ತೂಕದಲ್ಲಿ ಶೇ. 64ರಷ್ಟು ಏರಿಕೆಯಾಗಿದೆ. ಮಾವಿನ ಹಣ್ಣುಗಳ ರಫ್ತು ಶೇ.12ರಷ್ಟು ಏರಿಕೆಯಾಗಿ ಐದು ವರ್ಷಗಳ ಗರಿಷ್ಠ ಮಟ್ಟ ತಲುಪಿದರೆ, ಕೊತ್ತಂಬರಿ ಸೊಪ್ಪಿನ ಸಾಗಣೆಯಲ್ಲಿ ಶೇ.13ರಷ್ಟು ಏರಿಕೆಯಾಗಿದೆ. ಏಐಸಾಟ್ಸ್ ಬಿಎಲ್‌ಆರ್ ಲಾಜಿಸ್ಟಿಕ್ಸ್ ಪಾರ್ಕ್ ಪ್ರಾರಂಭವಾಗಿರುವುದು ಸರಕು ಸಾಗಣೆಯ ಸಾಮರ್ಥ್ಯ ಮತ್ತು ಸಂಸ್ಕರಣಾ ವ್ಯವಸ್ಥೆಗೆ ಮತ್ತಷ್ಟು ಬಲ ಬಂದಿದೆ.

ಹೂಡಿ ಗ್ರಾಮದಲ್ಲಿ ಲಕ್ಷ್ಮೀನಾರಾಯಣ ಸ್ವಾಮಿಯ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ಪೊಲೀಸ್ ವರಿಷ್ಠಾಧಿಕಾರಿ ನಿಧನ

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ಬೆಸ್ಕಾಂ ವಿಚಕ್ಷಣಾ ದಳದ ಪೊಲೀಸ್ ವರಿಷ್ಠಾಧಿಕಾರಿ ಬಿ.ಎನ್.ಲಾವಣ್ಯ

(39) ಅವರು ಚಿಕಿತ್ಸೆ ಫಲಿಸದೆ ಶನಿವಾರ ಮೃತಪಟ್ಟಿದ್ದಾರೆ. ಲಾವಣ್ಯ ಅವರು ಕಳೆದ 14 ವರ್ಷಗಳಿಂದ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಕೆಲ ತಿಂಗಳುಗಳಿಂದ ಕರುಳು ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಆದರೆ, ಚಿಕಿತ್ಸೆ ಫಲಿಸದೆ ಶನಿವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ. ಮೃತ ಲಾವಣ್ಯ ಅವರು ಪತಿ ಪುರುಷೋತ್ತಮ್, 10 ವರ್ಷದ ಮಗ ಹಾಗೂ ಮೂರು ವರ್ಷದ ಮಗಳನ್ನು ಅಗಲಿದ್ದಾರೆ. ಲಾವಣ್ಯ ಅವರ ಅಕಾಲಿಕ ಸಾವಿಗೆ ಪೊಲೀಸ್ ಇಲಾಖೆ ಸಂತಾಪ ವ್ಯಕ್ತಪಡಿಸಿದೆ. ವಿದ್ಯಾರಣ್ಯಪುರದ ನಿವಾಸದಲ್ಲಿ ಲಾವಣ್ಯ ಅವರ ಮೃತದೇಹವನ್ನು ಅಂತಿಮ ದರ್ಶನಕ್ಕಿಡಲಾಗಿತ್ತು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ.ಸಲೀಂ, ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಲಾವಣ್ಯ ಅವರ ಅಂತಿಮ ದರ್ಶನ ಪಡೆದು ಗೌರವ ಸೂಚಿಸಿದರು.

14 ವರ್ಷದಿಂದ ಪೊಲೀಸ್ ಅಧಿಕಾರಿಯಾಗಿ ಸೇವೆ: ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲೂಕಿನ ದೊಡ್ಡಗಂಜೂರು ಗ್ರಾಮದ ಲಾವಣ್ಯ ಅವರು 2012ರಲ್ಲಿ ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಡಿವೈಎಸ್ಪಿಯಾಗಿ ಪೊಲೀಸ್ ಇಲಾಖೆಗೆ ಸೇರಿದ್ದರು. ತರಬೇತಿ ಅವಧಿ ಮುಗಿದ ಬಳಿಕ ಹಂಪಿ, ಮಧುಗಿರಿ ಉಪವಿಭಾಗ ಹಾಗೂ ಐಎಸ್‌ಡಿ ಡಿವೈಎಸ್ಪಿಯಾಗಿ ಸೇವೆ ಸಲ್ಲಿಸಿದ್ದರು. ಮಂಡ್ಯ, ಬಳ್ಳಾರಿ ಜಿಲ್ಲೆಯ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದರು.

ರಾಜ್ಯ ಗುಪ್ತಚರ ದಳ ಹಾಗೂ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಎಸ್ಪಿಯಾಗಿದ್ದರು. 2023ರ ಜುಲೈನಿಂದ ಬೆಸ್ಕಾಂ ವಿಚಕ್ಷಣಾ ದಳದ ಎಸ್ಪಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದು ಪೊಲೀಸ್ ಇಲಾಖೆ ತಿಳಿಸಿದೆ.

'ಜಡ್ಜ್‌ಗಳು ಸ್ಥಳೀಯ ಭಾಷೆ ಗ್ರಹಿಸಬೇಕು'

ಬೆಂಗಳೂರು: ಯಾವುದೇ ನ್ಯಾಯಮೂರ್ತಿ ಸ್ಥಳೀಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಅಲ್ಲಿನ ಭಾಷೆ ಗ್ರಹಿಸಲೇಬೇಕು. ಕರ್ನಾಟಕ ಹೈಕೋರ್ಟ್‌ನಿಂದ ಒಡಿಶಾಗೆ ವರ್ಗವಾಗಿ ಹೋದ ಮೇಲೆ ಒರಿಯಾ ಭಾಷೆ ಅರ್ಥ ಮಾಡಿಕೊಳ್ಳಲು ಯಶಸ್ವಿಯಾಗಿದ್ದೇನೆ. ನನಗೀಗ ಒರಿಯಾ ಸಂಭಾಷಣೆ ಸಂಪೂರ್ಣ ಅರ್ಥವಾಗುತ್ತದೆ ಎಂದು ಒಡಿಶಾ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹೇಳಿದರು. ಬೆಂಗಳೂರು ವಕೀಲರ ಸಂಘ ಹಮ್ಮಿಕೊಂಡಿದ್ದ ವಾರ್ಷಿಕ ದಿನಾಚರಣೆಯಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ''ಕರ್ನಾಟಕ ಹೈಕೋರ್ಟ್‌ಗೆ ಬರುವ ನ್ಯಾಯಮೂರ್ತಿಗಳು ತಾವು ಕನ್ನಡದ ನೆಲದಲ್ಲಿರುತ್ತೇವೆ ಎಂಬುದನ್ನು ಮರೆಯಬಾರದು; ನಿಮಗೆಲ್ಲಾ ಹಸಿವಾದರೆ ಇಲ್ಲಿನ ಆಹಾರ ಬೇಕು, ಕುಡಿಯಲು ಕಾವೇರಿ ನೀರು ಬೇಕು. ಇವೆಲ್ಲಾ ಬೇಕಾದ ಮೇಲೆ ಕನ್ನಡದ ಭಾಷೆ ಬೇಡ ಅಂದರೆ ಹೇಗೆ?'' ಎಂದು ಪ್ರಶ್ನಿಸಿದರು. ''ಕರ್ನಾಟಕಕ್ಕೆ ಬಂದ ಅನೇಕ ಮಹನೀಯರು ಕನ್ನಡ ಭಾಷೆ ಕಲಿತು ಹೋಗಿದ್ದಾರೆ. ನ್ಯಾಯಮೂರ್ತಿಗಳು ಮಾತ್ರವಲ್ಲ, ಹೊರಗಿನಿಂದ ಬರುವ ವಕೀಲರೂ ಕನ್ನಡ ಕಲಿಯಬೇಕು,'' ಎಂದು ಅವರು ತಾಕೀತು ಮಾಡಿದರು. ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಎಎಬಿ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಮತ್ತು ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದು ಮೃತಪಟ್ಟ ಸಂತ್ರಸ್ತ ವ್ಯಕ್ತಿಯ ಮನೆಗೆ ಭೇಟಿ ನೀಡಿದ ಶಾಸಕ ಎ.ಸಿ.ಶ್ರೀನಿವಾಸ್ ಅವರು, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿ 1 ಲಕ್ಷ ರೂ. ಆರ್ಥಿಕ ನೆರವು ನೀಡಿದರು.

ಬಿನ್ನಿಮಿಲ್ ರಸ್ತೆ, ಮೈಸೂರು ಲ್ಯಾಂಪ್ಸ್ ಆವರಣದಲ್ಲಿನ ತಡೆಗೋಡೆಗಳ ತೆರವು

ಶಿಥಿಲ ಕಾಂಪೌಂಡ್ ತೆರವು ಚುರುಕು

■ **ವಿಕ ಸುದ್ದಿಲೋಕ** ಬೆಂಗಳೂರು

ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು 7 ಮಂದಿ ಮೃತಪಟ್ಟ ದುರಂತ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಸೂಚನೆ ಬೆನ್ನಲ್ಲೇ ನಗರ ಪಾಲಿಕೆಗಳು ಶಿಥಿಲಾವಸ್ಥೆಯಲ್ಲಿರುವ ತಡೆಗೋಡೆಗಳ ತೆರವು ಕಾರ್ಯಾಚರಣೆ ತೀವ್ರಗೊಳಿಸಿವೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಬಿನ್ನಿಮಿಲ್ ರಸ್ತೆಯಲ್ಲಿ 25 ಅಡಿಯಷ್ಟು ಎತ್ತರವಿರುವ 300 ಮೀಟರ್ ಗೋಡೆಯನ್ನು ನೆಲಸಮಗೊಳಿಸಲಾಗಿದೆ. ಜತೆಗೆ 10 ಅಡಿ ಎತ್ತರದ 100 ಮೀಟರ್ ಉದ್ದದ ಗೋಡೆಯ ತೆರವು ಕಾರ್ಯವೂ ಪ್ರಗತಿಯಲ್ಲಿದೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಮಲ್ಲೇಶ್ವರದ 8ನೇ ಮುಖ್ಯರಸ್ತೆಯಲ್ಲಿರುವ ಮೈಸೂರು ಲ್ಯಾಂಪ್ಸ್ ಆವರಣದ 240 ಮೀಟರ್ ಉದ್ದದ ಕಾಂಪೌಂಡ್ ಶಿಥಿಲಾವಸ್ಥೆಯಲ್ಲಿತ್ತು. ಪಾಲಿಕೆ ಅಧಿಕಾರಿ, ಸಿಬ್ಬಂದಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಂಡು ಯಂತ್ರೋಪಕರಣಗಳ ನೆರವಿನಿಂದ ತೆರವುಗೊಳಿಸಿದ್ದಾರೆ.

ಮುಖ್ಯ ಆಯುಕ್ತರ ತಾಕೀತು: ಜಿಬಿಎ ವ್ಯಾಪ್ತಿಯಲ್ಲಿ ಬೀಳುವ ಹಂತದಲ್ಲಿರುವ ಶಿಥಿಲ ಕಾಂಪೌಂಡ್‌ಗಳು ಹಾಗೂ ಅಪಾಯಕಾರಿ ಕಟ್ಟಡಗಳನ್ನು ತ್ವರಿತವಾಗಿ ಗುರುತಿಸಿ ತೆರವುಗೊಳಿಸಬೇಕು ಎಂದು ಮುಖ್ಯ ಆಯುಕ್ತ ಮಹೇಶ್ವರ ರಾವ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. ''ಈ ಬಗ್ಗೆ ಪಂಚ ನಗರ ಪಾಲಿಕೆಯ ಆಯುಕ್ತರು ಹಾಗೂ ಹೆಚ್ಚುವರಿ ಆಯುಕ್ತರು ಖುದ್ದು ಗಮನ ಹರಿಸಬೇಕು. ಅಗ್ನಿಶಾಮಕ, ಪೊಲೀಸರು ಹಾಗೂ ಪಾಲಿಕೆಗಳ ಅಧಿಕಾರಿಗಳನ್ನೊಳಗೊಂಡ ವಿಶೇಷ ತಂಡಗಳನ್ನು ರಚಿಸಿ, ಮಳೆ ಹಾನಿ ತಡೆಗೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು,'' ಎಂದು ತಿಳಿಸಿದ್ದಾರೆ.

ಬಿನ್ನಿಮಿಲ್ ರಸ್ತೆ

ಮಲ್ಲೇಶ್ವರದ ಮೈಸೂರು ಲ್ಯಾಂಪ್ಸ್ ಆವರಣ

ಕಸ ವಿಲೇವಾರಿಯ ಟೆಂಡರ್ ರದ್ದತಿಗೆ ಆಗ್ರಹ

ಬೆಂಗಳೂರು: ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ (ಬಿಎಸ್‌ಡಬ್ಲ್ಯೂಎಂಎಲ್) ವತಿಯಿಂದ ನಗರದಲ್ಲಿ ತ್ಯಾಜ್ಯ ಸಂಗ್ರಹ ಮತ್ತು ವಿಲೇವಾರಿಗೆ ನಡೆದ ಟೆಂಡರ್‌ನಲ್ಲಿ ಅಕ್ರಮ ನಡೆದಿರುವ ಆರೋಪಗಳ ಹಿನ್ನೆಲೆಯಲ್ಲಿ ಲೋಕಾಯುಕ್ತ ತನಿಖೆಗೆ ಮುಗಿಯುವವರೆಗೆ ಟೆಂಡರ್ ಪ್ರಕ್ರಿಯೆ ರದ್ದುಪಡಿಸಬೇಕು ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ.

ಈ ಸಂಬಂಧ ಬೆಂಗಳೂರು ಅಭಿವೃದ್ಧಿ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್, ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರರಾವ್ ಅವರಿಗೆ ಛಲವಾದಿ ನಾರಾಯಣಸ್ವಾಮಿ ಪ್ರತ್ಯೇಕವಾಗಿ ಪತ್ರ ಬರೆದಿದ್ದಾರೆ.

ಬಿಎಸ್‌ಡಬ್ಲ್ಯೂಎಂಎಲ್ ಸಂಸ್ಥೆಯು ನಗರದಲ್ಲಿ ಘನ ತ್ಯಾಜ್ಯ ಸಂಗ್ರಹ ಹಾಗೂ ವಿಲೇವಾರಿಗೆ ನಡೆಸಿರುವ ಟೆಂಡರ್ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಲೋಕಾಯುಕ್ತ ಹಾಗೂ ಹೈಕೋರ್ಟ್‌ನಲ್ಲಿ ದೂರು, ಮೊಕದ್ದಮೆಗಳು ದಾಖಲಾಗಿವೆ. ಅನುಭವದ ಕೊರತೆ, ಹಣಕಾಸಿನ ದಾಖಲೆಗಳಲ್ಲಿ ಲೋಪ, ಅನುಭವ ಕೊರತೆ, ತಾಂತ್ರಿಕ ಸಾಮರ್ಥ್ಯ ಹಾಗೂ ವಾಹನಗಳ ನಿರ್ವಹಣಾ ಸಾಮರ್ಥ್ಯದ ಬಗ್ಗೆ ಸಲ್ಲಿಸಿರುವ ಮಾಹಿತಿ ಅಸಮರ್ಪಕವಾಗಿರದಿದ್ದರೂ ತಾಂತ್ರಿಕ ಸಮಿತಿ ಕಾನೂನುಬಾಹಿರವಾಗಿ ಅನರ್ಹ ಗುತ್ತಿಗೆದಾರರನ್ನು ಅರ್ಹಗೊಳಿಸಿದೆ ಎಂದು ಆರೋಪಿಸಿದ್ದಾರೆ.

ಕಾಗದರಹಿತ ನೋಂದಣಿಯಿಂದ ಆಸ್ತಿ ಭದ್ರತೆಗೆ ಅಪಾಯ

■ **ವಿಕ ಸುದ್ದಿಲೋಕ** ಬೆಂಗಳೂರು

ಆತಂಕ ವ್ಯಕ್ತಪಡಿಸಿದ ಪರವಾನಗಿ ಪಡೆದ ಪತ್ರ ಬರಹಗಾರರ ಒಕ್ಕೂಟ

ರಾಜ್ಯದಲ್ಲಿ ಜಾರಿಗೊಂಡಿರುವ ಕಾಗದರಹಿತ ಡಿಜಿಟಲ್ ಇ-ನೋಂದಣಿ ವ್ಯವಸ್ಥೆಯಿಂದ ಸಾಮಾನ್ಯ ಜನರ ಆಸ್ತಿ ಭದ್ರತೆಯು ಗಂಭೀರ ಅಪಾಯದಲ್ಲಿ ಸಿಲುಕಿದೆ. ವಿಶ್ವಾಸಾರ್ಹವಲ್ಲದ ಈ ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರವಾನಗಿ ಪಡೆದ (ದಸ್ತು) ಪತ್ರ ಬರಹಗಾರರ ಒಕ್ಕೂಟ ಎಚ್ಚರಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಧರ್ಮರಾಜ್ ವಿ. ಏಕಕೋಟೆ, ''ವ್ಯವಸ್ಥೆಯಲ್ಲಿ ಸಾಕಷ್ಟು ಲೋಪದೋಷಗಳಿದ್ದು, ಜನಸಾಮಾನ್ಯರ ಆಸ್ತಿ ರಕ್ಷಣೆಗೆ ಗಂಭೀರ ಸವಾಲು ಎದುರಾಗಿದೆ. ತಾಂತ್ರಿಕ ದೋಷಗಳು, ಭದ್ರತಾ ಕೊರತೆ ಹಾಗೂ ಪಾರದರ್ಶಕತೆಯ ಅಭಾವದಿಂದ ಈ ವ್ಯವಸ್ಥೆ ಭೂಮಾಫಿಯಾ ಮತ್ತು ಹ್ಯಾಕರ್‌ಗಳಿಗೆ ನೆರವಾಗಲಿದೆ. ಇ-ನೋಂದಣಿ ಬಳಿಕ ಖರೀದಿದಾರರಿಗೆ ಯಾವುದೇ ಭೌತಿಕ ದಾಖಲೆಗಳನ್ನು ನೀಡುತ್ತಿಲ್ಲ, ಡಿಜಿಟಲ್ ಲಾಕರ್‌ನಲ್ಲೇ ದಾಖಲೆಗಳು ಉಳಿಯುತ್ತಿರುವುದರಿಂದ ಜನರಿಗೆ ತಮ್ಮ ಆಸ್ತಿಯ ನಿಖರ ದಸ್ತಾವೇಜುಗಳು ದೊರೆಯುವುದಿಲ್ಲ'' ಎಂದು ತಿಳಿಸಿದರು.

''ಆಸ್ತಿ ಖರೀದಿ ಬಗ್ಗೆ ಕುಟುಂಬ ಸದಸ್ಯರಿಗೆ ಸ್ಪಷ್ಟ ಮಾಹಿತಿ ಸಿಗದಿರುವುದರಿಂದ ಮುಂದಿನ ದಿನಗಳಲ್ಲಿ ಆಸ್ತಿಗಳು ಕೈತಪ್ಪುವ ಕಳವಳ ಹೆಚ್ಚಾಗಿದೆ. ಭೌತಿಕ ಸಹಿ ಬದಲು ಇ-ಸಹಿಯನ್ನು ಬಳಸುವುದರಿಂದ ಹಿರಿಯ ನಾಗರಿಕರು, ಅನಕ್ಷರಸ್ಥರು ಮೋಸಕ್ಕೆ ಒಳಗಾಗುವ ಸಾಧ್ಯತೆ ಇದೆ,'' ಎಂದು ದೂರಿದರು.

''ಈ ಕಾಗದರಹಿತ ವ್ಯವಸ್ಥೆ ಭೂಮಾಫಿಯಾ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡಲಿದ್ದು, ಬ್ಯಾಂಕ್ ಸಾಲಕ್ಕೂ ಅಡೆತಡೆಯಾಗಲಿದೆ. ಮೂಲ ದಾಖಲೆಗಳಿಲ್ಲದೆ ಬ್ಯಾಂಕ್‌ಗಳಲ್ಲಿ ಆಸ್ತಿ ಮೇಲೆ ಸಾಲ ಪಡೆಯುವುದು ಕಷ್ಟ. ಜತೆಗೆ, ಒಟಿಪಿ ಗೊಂದಲ ಹೆಚ್ಚಾಗಿದ್ದು, ಒಂದೇ ನೋಂದಣಿಗೆ ಅನೇಕ ಬಾರಿ ಒಟಿಪಿ ಅಗತ್ಯವಿರುವುದರಿಂದ ಜನರಲ್ಲಿ ಈ ವ್ಯವಸ್ಥೆ ಆತಂಕ ಮೂಡಿಸುವ ಜತೆಗೆ ಹ್ಯಾಕಿಂಗ್ ಭೀತಿ ಹೆಚ್ಚಾಗಿದೆ,'' ಎಂದರು.

''ಇದು ಪೇಪರ್‌ಲೆಸ್ ಅಲ್ಲ, ಇದು 'ಪೆನ್‌ಲೆಸ್' ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯಲ್ಲಿ ಖರೀದಿದಾರರು, ಮಾರಾಟಗಾರರು, ಸಾಕ್ಷಿದಾರರು ಹಾಗೂ ಅಧಿಕಾರಿಗಳೂ ಸಹ ಭೌತಿಕ ಸಹಿ ಮಾಡುವ ಅಗತ್ಯವಿಲ್ಲ. ಇದು ವ್ಯವಸ್ಥೆಯ ನಂಬಿಕೆಯನ್ನು ಪ್ರಶ್ನಿಸುವಂತೆ ಮಾಡುತ್ತಿದೆ. ತಜ್ಞರು ಮತ್ತು ಸಂಘಟನೆಗಳು ಈ ವ್ಯವಸ್ಥೆಯ ದೋಷಗಳನ್ನು ತಕ್ಷಣ ಸರಿಪಡಿಸಬೇಕು. ಇಲ್ಲವಾದರೆ ರಾಜ್ಯಾದ್ಯಂತ ಹೋರಾಟಕ್ಕೆ ಮುಂದಾಗುತ್ತೇವೆ,'' ಎಂದು ಎಚ್ಚರಿಕೆ ನೀಡಿದ್ದಾರೆ.

ಈ ವೇಳೆ ಒಕ್ಕೂಟದ ಉಪಾಧ್ಯಕ್ಷ ನವೀನ್ ಕುಮಾರ್ ಎಸ್., ಸಹಕಾರ್ಯದರ್ಶಿಗಳಾದ ಕರಿಬಸಪ್ಪ ಬಳ್ಳಿ, ಈ.ಕೃಷ್ಣಮೂರ್ತಿ ಇದ್ದರು.

ಬಿರು ಬಿಸಿಲಲ್ಲೂ ಸೇವೆ ಒದಗಿಸುತ್ತಿರುವ ಸಂಚಾರ ಪೊಲೀಸರಿಗೆ ಹಾಂಗ್ಯೋ ರಾಯಭಾರಿಗಳು ಐಸ್‌ಕ್ರೀಂ ವಿತರಿಸಿದರು. ನಗರದ ವಿವಿಧ ಜಂಕ್ಷನ್‌ಗಳಲ್ಲಿ ಐಸ್‌ಕ್ರೀಂ ವಿತರಿಸುವ ಅಭಿಯಾನ ಕೈಗೊಳ್ಳಲಾಯಿತು.

ಶಿವಕೋಟೆಯಲ್ಲಿ ಗಂಗರ ಕಾಲದ ಶಿವಲಿಂಗ ಪತ್ತೆ

ಯಲಹಂಕ: ಹೆಸರಘಟ್ಟ ಹೋಬಳಿ ವ್ಯಾಪ್ತಿಯ ಶಿವಕೋಟೆ ಗ್ರಾಮದಲ್ಲಿ 8ನೇ ಶತಮಾನದ, ಗಂಗರ ಕಾಲದ ಅಪರೂಪದ ಶಿವಲಿಂಗ ಪತ್ತೆಯಾಗಿದೆ.

ಇತಿಹಾಸ ಸಂಶೋಧಕರಾದ ಎಂ. ನರೇಂದ್ರ ಹಾಗೂ ಶಾಸನತಜ್ಞ ಕೆ.ಧನಪಾಲ್, ಡಾ.ವಿವೇಕಾನಂದ ಸಚ್ಚಿನ ಅವರ ನೇತೃತ್ವದಲ್ಲಿ ನಡೆದ ಕ್ಷೇತ್ರಕಾರ್ಯದ ವೇಳೆ ಗುಡಿಯೊಂದರಲ್ಲಿ ಇರುವ ಮೂರ್ತಿಯ ಇತಿಹಾಸದ ಮೇಲೆ ಬೆಳಕು ಚೆಲ್ಲಲಾಗಿದೆ.

ಗ್ರಾಮದ ಹೊರವಲಯದಲ್ಲಿರುವ ನ್ಯಾನ ಮೂರ್ತಾಚಾರ್ ಎಂಬುವರ ತೋಟದಲ್ಲಿನ ಸಣ್ಣ ಗುಡಿಯಲ್ಲಿ ಈ ವಿಶಿಷ್ಟ ಶಿವಲಿಂಗವಿದೆ. ಶಿವಲಿಂಗದಲ್ಲಿ ಬಾಣದ ಗುರುತುಗಳಿದ್ದು, ಇದು ಗಂಗರ ಕಾಲದ ಶೈಲಿಯನ್ನು ಪ್ರತಿಬಿಂಬಿಸುತ್ತದೆ ಎಂದು ಸಂಶೋಧಕರು ತಿಳಿಸಿದ್ದಾರೆ.

''ಗಂಗರ ಕಾಲದಲ್ಲಿ (ಸುಮಾರು 4ನೇ -10 ನೇ ಶತಮಾನ) ಈಶ್ವರನ ಆರಾಧನೆ ವ್ಯಾಪಕವಾಗಿತ್ತು. ಇಂತಹ ಏಕಶಿಲಾ ಲಿಂಗಗಳನ್ನು ಪ್ರತಿಷ್ಠಾಪನೆ ಮಾಡುವ ಪದ್ಧತಿ ಇತ್ತು. ಸ್ಥಳದಲ್ಲಿರುವ ಕಲ್ಲು ಚಪ್ಪಡಿಗಳು, ಕಂಬಗಳ ಅವಶೇಷಗಳು ದೇವಾಲಯ ಇತ್ತು ಎಂಬುದಕ್ಕೆ ಕುರುಹು ಒದಗಿಸುತ್ತಿವೆ,'' ಎಂದು ಶಾಸನತಜ್ಞ ಕೆ. ಧನಪಾಲ್ ಹೇಳಿದರು.

''ಪುರಾತನ ಶಿವಲಿಂಗದ ಅಸ್ತಿತ್ವ ಹಾಗೂ ಸುತ್ತಲೂ ಕೋಟೆಯಂತಿದ್ದ ರಕ್ಷಣಾ ವ್ಯವಸ್ಥೆಯಿಂದ ಈ ಗ್ರಾಮಕ್ಕೆ ಶಿವಕೋಟೆ ಎಂದು ಹೆಸರು ಬಂದಿರಬಹುದು,'' ಎಂದು ಇತಿಹಾಸ ಸಂಶೋಧಕ ಎಂ.ನರೇಂದ್ರ ಅಭಿಪ್ರಾಯಪಟ್ಟರು.

'' ಕೆಲ ವರ್ಷಗಳ ಹಿಂದೆ ನಿಧಿಗಳ್ಳರು ದೇವಾಲಯವನ್ನು ಹಾಳು ಮಾಡಿದ್ದರು. ಬಳಿಕ ಶಿವಲಿಂಗವನ್ನು ಅಲ್ಲೇ ಪ್ರತಿಷ್ಠಾಪಿಸಿ ಪೂಜೆ ಮಾಡುತ್ತಿದ್ದೇವೆ,'' ಎಂದು ಗ್ರಾಮಸ್ಥರಾದ ಎಚ್ ಎಸ್. ಆನಂದ್ ಹೇಳಿದರು.

ಐಐಎಚ್‌ಆರ್‌ನಿಂದ ಅಭಿಯಾನ

■ **ವಿಕ ಸುದ್ದಿಲೋಕ** ಬೆಂಗಳೂರು

ಹೆಸರುಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು (ಐಸಿಎಆರ್ -ಐಐಎಚ್‌ಆರ್) ಸಮತೋಲಿತ ರಸಗೊಬ್ಬರ ಬಳಕೆ ಕುರಿತು ರೈತರಿಗೆ ರಾಷ್ಟ್ರವ್ಯಾಪಿ ಜಾಗೃತಿ ಮೂಡಿಸುವ ಅಭಿಯಾನ ಕೈಗೊಂಡಿದೆ.

ತುಮಕೂರು ಜಿಲ್ಲೆಯಲ್ಲಿ ಆಯೋಜಿಸಿದ್ದ ಅಭಿಯಾನದಲ್ಲಿ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಪಾಲ್ಗೊಂಡು ತಾಲೂಕು ಮಟ್ಟದ ಸಂಪರ್ಕಕ್ಕಾಗಿ ಜಾಗೃತಿ ವಾಹನಗಳಿಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸಚಿವರು, ''ರಸ ಗೊಬ್ಬರ ಬಳಕೆಯು ಮಣ್ಣಿಗೆ ಅನುಗುಣವಾಗಿ ಬದಲಾಗಬೇಕು,'' ಎಂದರು.

ಡಿ. ನಾಗೇನಹಳ್ಳಿ ಸೇರಿದಂತೆ ಹೆಚ್ಚುವರಿ ಗ್ರಾಮ ಮಟ್ಟದ ಕಾರ್ಯಕ್ರಮಗಳು, ಸುಸ್ಥಿರ ಪೋಷಕಾಂಶ ನಿರ್ವಹಣೆಯ ಕುರಿತು ಪ್ರಾತ್ಯಕ್ಷಿಕೆಗಳು ಮತ್ತು ಪ್ರದರ್ಶನಗಳು ರೈತರ ಗಮನ ಸೆಳೆದವು. ಶಾಸಕ ಟಿ.ಬಿ.ಜಯಚಂದ್ರ ಮತ್ತು ಹಿರಿಯ ಜಿಲ್ಲಾ ಅಧಿಕಾರಿಗಳು ಉಪಸ್ಥಿತರಿದ್ದರು.

ಹೆಸರಘಟ್ಟದಲ್ಲಿ ವಿಶೇಷ ಕಾರ್ಯಕ್ರಮ: ಹೆಸರಘಟ್ಟದ ಐಐಎಚ್‌ಆರ್‌ನಲ್ಲಿ ಸಮತೋಲನ ಗೊಬ್ಬರ ಬಳಕೆ ಕುರಿತು ಇತ್ತೀಚೆಗೆ ರೈತರಿಗೆ ವಿಶೇಷವಾಗಿ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಐಐಎಚ್‌ಆರ್‌ನ ನಿರ್ದೇಶಕ ಡಾ. ಟಿ. ಕೆ.ಬೆಹೆರಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಪಂಚಾಯತ್ ಆಡಳಿತಾಧಿಕಾರಿ ಎಲ್.ಸುನಿಲ್, ಪಿಡಿಒ ವೀಣಾ ಟಿ.ವಿ. ಮಾಜಿ ಅಧ್ಯಕ್ಷೆ ವಸಂತಲಕ್ಷ್ಮಿ ಉಪಸ್ಥಿತರಿದ್ದರು.

ತಾಂತ್ರಿಕ ಅಧಿವೇಶನಗಳಲ್ಲಿ ತಜ್ಞರು ಮಣ್ಣಿನ ಪರೀಕ್ಷೆಯ ಮಹತ್ವವನ್ನು ವಿವರಿಸಿದರು. ಇದೇ ವೇಳೆ ರೈತರು ತಜ್ಞರೊಂದಿಗೆ ಸಂವಾದ ನಡೆಸಿದರು. ಸೀಬೆ ಮತ್ತಿತರ ಹಣ್ಣಿನ ಸಸಿ ಮತ್ತು ತರಕಾರಿ ಬೀಜಗಳನ್ನು ವಿತರಿಸಲಾಯಿತು.

ವಾಣಿಜ್ಯ ಅಡುಗೆ ಅನಿಲ ದರ ಏರಿಕೆ ಖಂಡಿಸಿ ಪ್ರತಿಭಟನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕೇಂದ್ರ ಬಿಜೆಪಿ ಸರಕಾರವು ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ದರ ಏರಿಕೆ ಮಾಡಿರುವುದನ್ನು ಖಂಡಿಸಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ಕಾರ್ಯಕರ್ತರು ನಗರದ ಫ್ರೀಡಂಪಾರ್ಕ್‌ನಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

''ಕೇಂದ್ರ ಸರಕಾರವು ಚುನಾವಣೆ ಹಿನ್ನೆಲೆಯಲ್ಲಿ ದರ ಹೆಚ್ಚಳ ಮಾಡಿರಲಿಲ್ಲ. ಈಗ ವಾಣಿಜ್ಯ ಸಿಲಿಂಡರ್‌ಗಳ ದರವನ್ನು 993 ರೂ. ಹೆಚ್ಚಳ ಮಾಡಿ, ಬೀದಿ ಬದಿಯ ಸಣ್ಣ ವ್ಯಾಪಾರಿಗಳು, ಹೋಟೆಲ್ ಉದ್ಯಮದವರನ್ನು ಸಂಕಷ್ಟಕ್ಕೆ ದೂಡಿದೆ. ಈ ಬಗ್ಗೆ ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿ ಸಂಸದರು ಮೌನ ವಹಿಸಿರುವುದು ಖಂಡನೀಯ,'' ಎಂದು ಸಮಿತಿಯ ರಾಜ್ಯಾಧ್ಯಕ್ಷ ಎಚ್.ಎಸ್.ಮಂಜುನಾಥ್ ಗೌಡ ಕಿಡಿಕಾರಿದರು.

''ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ಯಾವುದೇ ಬೆಲೆ 2 ರೂ. ಹೆಚ್ಚಾದರೆ ಬೀದಿಗೆ ಬಂದು ಗಲಾಟೆ ಮಾಡುತ್ತಿದ್ದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಇಂದು 993 ರೂ. ದರ ಏರಿಕೆಯಾದರೂ ಏಕೆ ಮಾತನಾಡುತ್ತಿಲ್ಲ? ಸಂಸದ ತೇಜಸ್ವಿಸೂರ್ಯ ಎಲ್ಲಿದ್ದೀಯಪ್ಪ?,'' ಎಂದು ಕಿಚಾಯಿಸಿದ ಅವರು, ''ಕೇಂದ್ರ ಬಿಜೆಪಿ ಸರಕಾರದ ವಿರುದ್ಧ ರಾಜ್ಯಾದ್ಯಂತ ಯುವ ಕಾಂಗ್ರೆಸ್ ಸಮಿತಿ ಹೋರಾಟ ನಡೆಸಲಿದೆ,'' ಎಂದು ಎಚ್ಚರಿಕೆ ನೀಡಿದರು.

ಜಿಎಸ್‌ಟಿ ಇಳಿಕೆಗೆ ಹೋಟೆಲ್‌ಗಳ ಆಗ್ರಹ

» ನಮ್ಮ ಮೊದಲ ಪುಟದಿಂದ

ಈ ಏರಿಕೆಯನ್ನು ಗ್ರಾಹಕರ ಮೇಲೆ ವರ್ಗಾಯಿಸುವುದರ ಹೊರತಾಗಿ ಬೇರ್‍ಯಾವುದೇ ಪರ್ಯಾಯ ಮಾರ್ಗಗಳಿಲ್ಲ. ಇದರಿಂದ ಜನ ಸಾಮಾನ್ಯರ ಮೇಲೂ ಹೊರೆ ಬೀಳಲಿದೆ. ಉದ್ಯಮದ ಮೇಲೂ ದುಷ್ಪರಿಣಾಮ ಬೀಳಲಿದೆ,'' ಎಂದು ಹೇಳಿದರು.

''ಇತ್ತೀಚಿನ ವರ್ಷಗಳಲ್ಲಿ ಹೋಟೆಲ್ ಉದ್ಯಮವು ನಾನಾ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಹಾಗಾಗಿ, ಸರಕಾರವು ತಕ್ಷಣವೇ 19 ಕೆ.ಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಮೇಲಿನ ಜಿಎಸ್‌ಟಿಯನ್ನು ಶೇ.18 ರಿಂದ ಶೇ.5ಕ್ಕೆ ಇಳಿಸಬೇಕು. ಈಗ ಪ್ರತಿ ಸಿಲಿಂಡರ್‌ಗೆ 500 ರೂ. ಜಿಎಸ್‌ಟಿ ವಿಧಿಸಲಾಗುತ್ತಿದೆ. ಈ ಭಾರವನ್ನು ಕಡಿಮೆ ಮಾಡಬೇಕು. ಆರ್ಥಿಕ ಸಂಕಷ್ಟವನ್ನು ತಪ್ಪಿಸುವ ಮೂಲಕ ಉದ್ಯಮದ ಉಳಿವು ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು,'' ಎಂದು ಒತ್ತಾಯಿಸಿದ್ದಾರೆ.

ಮಾಜಿ ಕೆಎಎಸ್ ಅಧಿಕಾರಿ ಎಲ್.ಸಿ.ನಾಗರಾಜ್ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್ | ವಿಚಕ್ಷಣಾ ದಳದಿಂದ ದೂರು

ಬಿಡಿಎ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ ಕಬಳಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ನಗರದ ಕೊತ್ತನೂರಿನಲ್ಲಿ ಸ್ವಾಧೀನಪಡಿಸಿಕೊಂಡಿದ್ದ 2.35 ಎಕರೆ ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಿ ಕಬಳಿಸಿರುವ ಆರೋಪ ಸಂಬಂಧ ಮಾಜಿ ಕೆಎಎಸ್ ಅಧಿಕಾರಿ ಎಲ್.ಸಿ.ನಾಗರಾಜ್ ಸೇರಿ ನಾಲ್ವರ ವಿರುದ್ಧ ಶೇಷಾದ್ರಿಪುರಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೊತ್ತನೂರಿನಲ್ಲಿ 2.35 ಎಕರೆ ಜಾಗ ಕಬಳಿಕೆ

ಬಿಡಿಎ ವಿಚಕ್ಷಣಾ ದಳದ ಡಿವೈಎಸ್‌ಪಿ ಬಿ.ಹನುಮಂತರಾಯ ನೀಡಿದ ದೂರಿನ ಅನ್ವಯ ಸಿ. ಲಕ್ಷ್ಮೀನಾರಾಯಣ, ಮಾರುತಿ ಕುಮಾರ್, ಎಚ್.ಆರ್.ಪ್ರದೀಪ್, ಎಲ್.ಸಿ.ನಾಗರಾಜ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೆ.ಪಿ.ನಗರ 8ನೇ ಹಂತದ ಬಡಾವಣೆ ಅಭಿವೃದ್ಧಿಗೆ ಕೊತ್ತನೂರಿನ ಸರ್ವೆ ನಂ.176/1ರಲ್ಲಿನ 2.35 ಎಕರೆ ಜಮೀನನ್ನು ಬಿಡಿಎ ಸ್ವಾಧೀನಪಡಿಸಿಕೊಂಡಿತ್ತು. ಇದಕ್ಕೆ ಜಮೀನು ಮಾಲೀಕರಾದ ಮೇರಿಯಮ್ಮ ಎಂಬುವವರು ಪರಿಹಾರ ಕೂಡ ಪಡೆದುಕೊಂಡಿದ್ದರು.

ಆದರೆ, 2008ರಲ್ಲಿ ಮೇರಿಯಮ್ಮ ಅವರ ಪತಿ ಫಾಲ್ಕನ್ ಎಂಬುವವರು ಮಾರುತಿ ಕುಮಾರ್ ಅವರಿಗೆ ದಾನ ನೀಡಿದಂತೆ ನಕಲಿ ವಿಲ್ ಸೃಷ್ಟಿಸಿದ್ದರು. ಇದೇ ದಾಖಲೆಗಳ ಆಧಾರದಲ್ಲಿ ಬೆಂಗಳೂರು ದಕ್ಷಿಣ ಉಪ ವಿಭಾಗಾಧಿಕಾರಿಯಾಗಿದ್ದ ಎಲ್.ಸಿ.ನಾಗರಾಜ್ ಅವರ ಮುಂದೆ ದಾವೆ ಸಲ್ಲಿಸಿ ತಮ್ಮ ಪರವಾಗಿ ಆದೇಶ ಪಡೆದುಕೊಂಡಿದ್ದರು. ಆ ಮೂಲಕ ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಿಕೊಂಡು ಬಿಡಿಎ ಜಾಗವನ್ನು ಕಬಳಿಸಿದ್ದರು ಎಂದು ಡಿವೈಎಸ್ಪಿ ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಈ ವಂಚನೆಯಲ್ಲಿ ಸಿ.ಲಕ್ಷ್ಮೀನಾರಾಯಣ, ಮಾರುತಿ ಕುಮಾರ್, ಎಚ್.ಆರ್.ಪ್ರದೀಪ್ ಭಾಗಿಯಾಗಿದ್ದಾರೆ. ವಂಚಕರು ಸಲ್ಲಿಸಿದ್ದ ನಕಲಿ ದಾಖಲೆ ಪರಿಶೀಲಿಸದೆ ಉಪ ವಿಭಾಗಾಧಿಕಾರಿಯಾಗಿದ್ದ ನಾಗರಾಜ್ ಅವರು ಆದೇಶ ಹೊರಡಿಸಿ ಕರ್ತವ್ಯಲೋಪ ಎಸಗಿದ್ದಾರೆ ಎಂದು ಡಿವೈಎಸ್‌ಪಿ ದೂರಿನಲ್ಲಿ ತಿಳಿಸಿದ್ದಾರೆ.

ಬೈಕ್ ವಿಚಾರಕ್ಕೆ ಜಗಳ: ಮಗನಿಗೆ ಬೆಂಕಿ ಇಟ್ಟು ಆಸ್ಪತ್ರೆ ಸೇರಿದ ತಂದೆ

ಬೆಂಗಳೂರು: ಬೈಕ್ ಬಳಕೆ ವಿಚಾರಕ್ಕೆ ಶುರುವಾದ ಜಗಳ ವಿಕೋಪಕ್ಕೆ ತಿರುಗಿ ತಂದೆಯೇ ಮಗನ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲ್ಲಲು ಪ್ರಯತ್ನಿಸಿದ್ದು, ಅದೇ ಬೆಂಕಿ ತಗುಲಿ ತಂದೆಯೂ ಗಾಯಗೊಂಡಿರುವ ಘಟನೆ ಕುಮಾರಸ್ವಾಮಿ ಲೇಔಟ್ ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ತಡರಾತ್ರಿ ನಡೆದಿದೆ.

ಪ್ರಗತಿಪುರ ಕೊಳೆಗೇರಿ ನಿವಾಸಿ ಆನಂದ್ ದೊಡ್ಡಮನಿ ಎಂಬುವವರು ತಮ್ಮ 19 ವರ್ಷದ ಪುತ್ರ ಮಲ್ಲಿಕಾರ್ಜುನ್ ಮೇಲೆ ಪೆಟ್ರೋಲ್ ಸುರಿದು ಕೊಲ್ಲಲು ಯತ್ನಿಸಿದ್ದಾರೆ. ಅದೇ ಬೆಂಕಿ ತಂದೆಗೂ ತಗಲಿದ್ದು, ತಕ್ಷಣ ಸ್ಥಳೀಯರು ಬೆಂಕಿ ನಂದಿಸಿ ಇಬ್ಬರನ್ನೂ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ಮಲ್ಲಿಕಾರ್ಜುನ್‌ಗೆ ಶೇ. 40ರಷ್ಟು ಸುಟ್ಟ ಗಾಯಗಳಾಗಿದ್ದು, ಅವರ ಸ್ಥಿತಿ ಚಿಂತಾಜನಕವಾಗಿದೆ. ಆನಂದ್‌ಗೆ ಶೇ. 18ರಷ್ಟು ಸುಟ್ಟ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ

ಕಲಬುರಗಿ ಮೂಲದ ಆನಂದ್ ಹಾಗೂ ಈರಮ್ಮ ದಂಪತಿಯು ಮಕ್ಕಳಾದ ಮಲ್ಲಿಕಾರ್ಜುನ ಹಾಗೂ ಪರಮೇಶ್ ಜತೆ ಉದ್ಯೋಗ ಅರಸಿ ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಆನಂದ್ ಗಾರೆ ಕೆಲಸ ಮಾಡುತ್ತಿದ್ದರು. ಮಲ್ಲಿಕಾರ್ಜುನ್ ಟೈಲ್ಸ್ ಹಾಕುವ ಕೆಲಸ ಮಾಡುತ್ತಿದ್ದ ಎಂದು ಹೇಳಿದ್ದಾರೆ.

ಮನೆಗೂ ವ್ಯಾಪಿಸಿದ ಬೆಂಕಿ

ಕಾರ್ಮಿಕರ ದಿನಾಚರಣೆ ಹಿನ್ನೆಲೆಯಲ್ಲಿ ತಂದೆ-ಮಗ ಶುಕ್ರವಾರ ಕೆಲಸಕ್ಕೆ ಹೋಗಿರಲಿಲ್ಲ. ತಂದೆಯ ಬೈಕ್‌ನಲ್ಲಿ ಹೊರಗೆ ಹೋಗಿದ್ದ ಮಲ್ಲಿಕಾರ್ಜುನ್, ತಡರಾತ್ರಿ ಮನೆಗೆ ಬಂದಿದ್ದ. ಈ ವಿಚಾರವಾಗಿ ಇಬ್ಬರ ನಡುವೆ ಜಗಳ ನಡೆದಿದೆ. ಆಗ ತಂದೆ ಆನಂದ್, ಬಾಟಲಿಯಲ್ಲಿದ್ದ ಪೆಟ್ರೋಲ್ ಅನ್ನು ಪುತ್ರ ಮಲ್ಲಿಕಾರ್ಜುನ್ ಮೇಲೆ ಎರಚಿ ಬೆಂಕಿ ಹಂಚಿದ್ದಾನೆ. ಬೆಂಕಿಯ ಜ್ವಾಲೆ ಮನೆಯ ಅಡುಗೆ ಮನೆಗೂ ವ್ಯಾಪಿಸಿದ್ದರಿಂದ ಆನಂದ್‌ಗೂ ತಾಗಿದೆ. ತಂದೆ ಮತ್ತು ಮಗ ಬೆಂಕಿಯ ಜ್ವಾಲೆಯಲ್ಲಿ ನರಳಾಡುತ್ತಿರುವುದನ್ನು ಕಂಡು ಈರಮ್ಮ, ಸಹಾಯಕ್ಕಾಗಿ ಕಿರುಚಾಡಿದ್ದಾರೆ. ಇದರಿಂದ ಸ್ಥಳೀಯರು ದೌಡಾಯಿಸಿ ಬಂದು ಬೆಂಕಿ ನಂದಿಸಿ, ಆಸ್ಪತ್ರೆಗೆ ದಾಖಲಿಸಿದ್ದಾರೆ.

ಅಪರಾಧ ಸುದ್ದಿ

ವರದಕ್ಷಿಣೆ ಕಿರುಕುಳ: ಗೃಹಿಣಿ ಆತ್ಮಹತ್ಯೆ

ಬೆಂಗಳೂರು: ಕೌಟುಂಬಿಕ ಜಗಳದಿಂದ ಬೇಸತ್ತು ಗೃಹಿಣಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶುಕ್ರವಾರ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಹುಳಿಮಾವು ನಿವಾಸಿ ವಂದನಾ (24) ಮೃತ ದುರ್ದೈವಿ. ''ಮಗಳ ಸಾವಿಗೆ ಆಕೆಯ ಪತಿ ವಿಕ್ರಂಶೇಷ ಹಾಗೂ ಕುಟುಂಬಸ್ಥರ ವರದಕ್ಷಿಣೆ ಕಿರುಕುಳವೇ ಕಾರಣ,'' ಎಂದು ವಂದನಾ ಪೋಷಕರು ಆರೋಪಿಸಿದ್ದಾರೆ.

ಈ ದೂರಿನ ಅನ್ವಯ ಮೃತ ವಂದನಾ ಅವರ ಪತಿ ವಿಕ್ರಂ, ಅತ್ತೆ ಅಮೃತಾ, ಮಾವ ಶ್ರೀನಿವಾಸ್ ಹಾಗೂ ಮೈದುನ ವಿನೀಷ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ.

ಮೂರು ವರ್ಷಗಳ ಹಿಂದೆ ವಿಕ್ರಂ ಹಾಗೂ ವಂದನಾ ಅವರಿಗೆ ಮದುವೆಯಾಗಿತ್ತು. ದಂಪತಿಗೆ ಮೂರು ತಿಂಗಳ ಮಗುವಿದೆ.

ಪತಿ ಕುಟುಂಬದವರ ವಿರುದ್ಧ ಕೇಸ್ ದಾಖಲು

ಇತ್ತೀಚಿಗೆ ಕೌಟುಂಬಿಕ ವಿಚಾರವಾಗಿ ಪತಿ-ಪತ್ನಿ ನಡುವೆ ಜಗಳ ನಡೆಯುತ್ತಿತ್ತು. ಪೋಷಕರು ರಾಜಿ ಸಂಧಾನ ನಡೆಸಿದರೂ ದಾಂಪತ್ಯದಲ್ಲಿ ಸಾಮರಸ್ಯ ಮೂಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಶುಕ್ರವಾರ ವಂದನಾ ತನ್ನ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯಿದೆ ಎಂದು ಪೊಲೀಸರು ತಿಳಿಸಿದ್ದಾರೆ.

''ನಾಲ್ಕು ಲಕ್ಷ ರೂ. ಮೌಲ್ಯದ ಬೈಕ್ ಹಾಗೂ ಚಿನ್ನಾಭರಣ ನೀಡಿ ಮಗಳಿಗೆ ಅದ್ಧೂರಿಯಾಗಿ ಮದುವೆ ಮಾಡಿಕೊಡಲಾಗಿತ್ತು. ಇಷ್ಟಾದರೂ ವರದಕ್ಷಿಣೆಗಾಗಿ ಮಗಳನ್ನು ಪೀಡಿಸುತ್ತಿದ್ದರು,'' ಎಂದು ವಂದನಾ ಅವರ ಪೋಷಕರು ದೂರಿನಲ್ಲಿ ಆರೋಪಿಸಿದ್ದಾರೆ.

ಸುಟ್ಟ ಸ್ಥಿತಿಯಲ್ಲಿ ಮಹಿಳೆ ಶವ ಪತ್ತೆ

ಬೆಂಗಳೂರು ದಕ್ಷಿಣ: ಬನ್ನೇರುಘಟ್ಟ-ಕಗ್ಗಲೀಪುರ ರಸ್ತೆಯ ಬಿಲ್ವಾರದಹಳ್ಳಿ ಸಮೀಪ ಸುಮಾರು 50 ರಿಂದ 60 ವರ್ಷ ವಯಸ್ಸಿನ ಮಹಿಳೆಯ ಮೃತದೇಹ ಅರೆಬೆಂದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ದುಷ್ಕರ್ಮಿಗಳು ಬೇರೆಡೆ ಕೊಲೆ ಮಾಡಿ, ಸಾಕ್ಷ್ಯ ನಾಶಪಡಿಸಲು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಇಲ್ಲಿಗೆ ತಂದು ಎಸೆದು ಹೋಗಿರುವ ಶಂಕೆ ವ್ಯಕ್ತವಾಗಿದೆ. ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಲ್ಲಿ-ಏನು? ಭಾನುವಾರ

ಸತ್ಯ ಸಾಯಿ ಸೇವಾ ಸಂಸ್ಥೆ: 'ಭಕ್ತಿ ಭಾವಾನಂದವ್' ಅಖಂಡ ಭಜನೆ ಕಾರ್ಯಕ್ರಮ.

ಸ್ಥಳ: ಸತ್ಯ ಸಾಯಿ ಬಾಬಾ ಆಶ್ರಮ, ಬೃಂದಾವನ, ಕಾಡುಗೋಡಿ. ಬೆಳಗ್ಗೆ 9

ವೀರಶೈವ ಸೇವಾ ಸಮಾಜ: ಜಗಜ್ಯೋತಿ ಬಸವೇಶ್ವರರ ಜಯಂತಿ, 'ಶರಣ ಮುಕುಟ ಪ್ರಶಸ್ತಿ' ಪ್ರದಾನ ಸಮಾರಂಭ. ಅತಿಥಿ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಬಿ.ಸ್ವರ್ಣಗೌರಿ, ವೀರಶೈವ ಸೇವಾ ಸಮಾಜದ ಅಧ್ಯಕ್ಷ ಡಾ. ಎಂ.ಎನ್.ದಿನೇಶ್.

ಸ್ಥಳ: ಎಸ್.ಎಂ.ಕಲ್ಯಾಣ ಮಂಟಪ, ಜರಗನಹಳ್ಳಿ, ಕನಕಪುರ ರಸ್ತೆ. ಬೆಳಗ್ಗೆ 10

ವಿದ್ವಾಂಸ ಜಗದೀಶಶರ್ಮಾ ಸಂಪ ಅವರಿಂದ 'ಕವಿಗಳು ಕಂಡ ಶಬರಿ' ವಿಷಯ ಕುರಿತು 'ಮಾಸದ ಮಂಥನ' 86ನೇ ಕಾರ್ಯಕ್ರಮ.

ಸ್ಥಳ: ನಂ.17, ಸಾನಿಧ್ಯ, 1ನೇ ಅಡ್ಡರಸ್ತೆ, ದೊಡ್ಡಕನ್ನಲ್ಲಿ. ಬೆಳಗ್ಗೆ 11

ದಿ ಕಲಾಪ್ರೇಮಿ ಫೌಂಡೇಶನ್: ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್ ನಿರ್ದೇಶನದ 'ಇದ್ದಾಗ ನಿಮ್ದು ಕದ್ದಾಗ ನಮ್ದು' ನಾಟಕ ಪ್ರದರ್ಶನ.

ಸ್ಥಳ: ಸೇವಾ ಸದನ ಸಭಾಂಗಣ, 14ನೇ ಅಡ್ಡರಸ್ತೆ, ಎಂಎಲ್‌ಎ ಕಾಲೇಜ್ ಮುಂಭಾಗ, ಮಲ್ಲೇಶ್ವರ. ಸಂಜೆ 4 ಮತ್ತು 7.

ಕಾರ್ಯಕ್ರಮ ಆಹ್ವಾನ ಪತ್ರಿಕೆ ವಾಟ್ಸ್‌ಆಪ್ ಮಾಡಿ

76766 68588

ಭಾರತದ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ರಚಿಸಿರುವ 'ಟ್ರಯಂಫ್ ಆಫ್ ದ ಇಂಡಿಯನ್ ರಿಪಬ್ಲಿಕ್: ಮೈ ಲೈಫ್, ಮೈ ಸ್ಟ್ರಗಲ್' ಕೃತಿ ಈ ವರ್ಷದ ಕೊನೆಯಲ್ಲಿ ಬಿಡುಗಡೆಯಾಗಬಹುದೆಂದು ನಿರೀಕ್ಷಿಸಲಾಗಿದೆ. ಅವರ ರಾಜಕೀಯ ಪಯಣ, ರಾಷ್ಟ್ರಪತಿ ಹುದ್ದೆ ನಿಭಾವಣೆಯ ಅನುಭವಗಳು ಇತ್ಯಾದಿ ವಿವರಗಳನ್ನು ಈ ಕೃತಿ ಹೊಂದಿದೆ ಎನ್ನಲಾಗಿದೆ.



ಚೌಕಟ್ಟಿನಿಂದ ಹೊರಬಂದ ಚಿತ್ರ

ರೂಲ್ಸುರೂಲ್ಸುಎಂದೇತಕೆ ಗೋಳು ಹೊಯ್ಯುವಿರಿ?

ಒಂದು ದೇಶದ ಪ್ರಗತಿ ಅಳೆಯುವುದು ಅಲ್ಲಿನ ಕಟ್ಟಡಗಳಿಂದಲ್ಲ, ಬದಲಿಗೆ ಆ ಕಟ್ಟಡದೊಳಗಿನ ವ್ಯವಸ್ಥೆ ಸಾರ್ವಜನಿಕರನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂಬುದರ ಮೇಲೆ. ಒಡಿಶಾದಲ್ಲಿ ಇತ್ತೀಚೆಗೆ ನಡೆದ ಹೆಣವನ್ನೇ ದಾಖಲೆಯಾಗಿ ಹೊತ್ತು ತಂದ ಘಟನೆ ಚರ್ಚೆಗೆ ಒಳಗಾಗಿದೆ. ಅಲ್ಲದೆ ಇದು ಸಾರ್ವಜನಿಕ ಆಡಳಿತ ವ್ಯವಸ್ಥೆ ಮತ್ತು ಸಾಮಾನ್ಯ ಮನುಷ್ಯನ ನಡುವೆ ಇರುವ ಕಂದಕವನ್ನು ವಿಮರ್ಶೆಗೆ ಒಳಗಾಗುವಂತೆ ಮಾಡಿದೆ.

ಕುಸುಮಾ ಆಯರಹಳ್ಳಿ
feedbacklvk@vijaykarnataka.com

ಯಾರಾದರೂ ಕತೆಯಾಗಿ, ಕಲ್ಪನೆಯಾಗಿ ಯೋಚಿಸಲು ಕೂಡ ಭಯಪಡುವ ಸಂಗತಿಯೊಂದು ನಿಜದಲ್ಲಿಯೇ ನಡೆದುಬಿಟ್ಟಿದೆ. ಒಡಿಶಾದ ದೈನಾಳಿ ಬುಡಕಟ್ಟು ಜನಾಂಗಕ್ಕೆ ಸೇರಿದ ಜಿತು ಮುಂಡಾ ತನ್ನ ಸಹೋದರಿ ಬ್ಯಾಂಕಿನಲ್ಲಿಟ್ಟ 20ಸಾವಿರ ರೂ. ಪಡೆಯಲು ಬ್ಯಾಂಕಿಗೆ ಹೋದರೆ, ಮರಣ ಪ್ರಮಾಣ ಪತ್ರ ಕೇಳಿದರೆನ್ನಲಾಗಿ ಕೆಲವು ತಿಂಗಳ ಹಿಂದೆ ಹೂತಿದ್ದ ಸಹೋದರಿಯ ಹೆಣವನ್ನೆ ಅಗೆದು ಅಸ್ಥಿಪಂಜರವನ್ನೇ ಮುಂದಿಟ್ಟುಬಿಟ್ಟಿದ್ದಾನೆ... ಬೆಚ್ಚಿಬಿದ್ದ ಬ್ಯಾಂಕಿನ ಅಧಿಕಾರಿಗಳು, ಪೊಲೀಸ್ ಸಹಾಯದಿಂದ ಪ್ರಕರಣ ಬಗೆಹರಿಸಿಕೊಂಡು, ಹಣ ನೀಡಿದ್ದಾರೆ. ನಂತರ 'ನಮಗೆ ದಾಖಲೆಗಳು ಅನಿವಾರ್ಯ. ಅದನ್ನು ಕೇಳಿದ್ದಕ್ಕೆ ಜಿತು ಕುಡಿದು ಗಲಾಟೆ ಮಾಡಿದ್ದರು' ಅಂತ ವಿವರ ಕೊಟ್ಟಿದೆ.

ಈ ಘಟನೆಯಲ್ಲಿ ಯಾರದು ಸರಿ, ಯಾರದು ತಪ್ಪು? ಸಹೋದರಿ ಮೃತಪಟ್ಟು ಎರಡು ತಿಂಗಳು ಮಾತ್ರ ಆಗಿದ್ದರೆ ಅವರಿಗೆ ಮರಣ ಪ್ರಮಾಣ ಪತ್ರ ತೆಗೆದುಕೊಳ್ಳಲು ಯಾಕೆ ಕಷ್ಟವಾಯಿತು? ಅದನ್ನು ಯಾಕೆ ಜಿತು ಒದಗಿಸಲಿಲ್ಲ? ಆಕೆ ಸತ್ತಿದ್ದಾಳೆಂದು ಬ್ಯಾಂಕಿಗೆ ಹೇಗೆ ಗೊತ್ತಾಗಬೇಕು? ಯಾಕೆ ನಂಬಬೇಕು? ಯಾರೋ ಬಂದು ಸತ್ತರೆಂದು ಹೇಳಿ ಹಣ ತೆಗೆದುಕೊಂಡು ಹೋಗಿ, ನಾಳೆ ಆ ವ್ಯಕ್ತಿ ಬಂದು ನಾನು ಬದುಕಿದ್ದೇನೆ, ಹಣ ಕೊಡಿ ಅಂದರೆ ಬ್ಯಾಂಕು ಏನು ಮಾಡಬೇಕು? ವ್ಯವಸ್ಥೆಗೆ ಅದರದೇ ಆದ ನಿಯಮಗಳೂ ಇರುತ್ತವಲ್ಲ? ಕುಡಿದ ಮತ್ತಿನಲ್ಲಿ ಜಿತು ಮಾಡಿದ ಕೆಲಸವನ್ನು ನೀವು ಭಾವನಾತ್ಮಕವಾಗಿ ಸಮರ್ಥಿಸಿದರೆ ಹೇಗೆ ಎಂಬುದು ವ್ಯವಸ್ಥೆಯ ಪ್ರಶ್ನೆ. ಬ್ಯಾಂಕಿನವರು ಸೌಜನ್ಯದಿಂದ ವರ್ತಿಸಿಲ್ಲ, ಹಾಗಾಗಿಯೇ ಜಿತು ರೋಸಿಹೋಗಿ ಇಂತಹ ಕೆಲಸ ಮಾಡಿದ್ದಾನೆ ಎಂಬುದು ಒಂದು ಆರೋಪ. ಇದರಲ್ಲಿ ಯಾವುದು ನಿಜ, ಯಾವುದು ಸುಳ್ಳು ಎಂಬುದರ ಪರಿಶೀಲನೆ ಆಗಿಲ್ಲ, ಆದರೆ ಮಾಧ್ಯಮಗಳ ತುಂಬಾ ಹೆಗಲ ಮೇಲಿನ ಹೆಣದ ಭಯಾನಕ ಸುದ್ದಿ! ಅವನೊಬ್ಬ ಕುಡುಕ. ಇದೊಂದು ಅತಿಪ್ರತಿಕ್ರಿಯೆಯ ನಡತೆ ಅಂದುಕೊಳ್ಳೋಣ. ಆದರೆ ಈ ಘಟನೆಯ ಹೊರತಾಗಿ, ಬ್ಯಾಂಕು ಮತ್ತು ಇತರೆ ಸಾರ್ವಜನಿಕ ವ್ಯವಸ್ಥೆಯಲ್ಲಿ ಸೌಜನ್ಯ ಇದೆಯೇ? ಅದರಲ್ಲೂ ಬಡವರ ಕುರಿತು?



ವ್ಯವಸ್ಥೆಯನ್ನು ಪ್ರಶ್ನಿಸುವ ಕಿರುಚಿತ್ರ

ಕಿರುಚಿತ್ರವೊಂದು ಇಂಥದ್ದೇ ಹತಾಶೆಯ ಪರಮಾವಧಿಯನ್ನು ಬಿಂಬಿಸಿತ್ತು. ತನ್ನ ನಿವೃತ್ತಿ ವೇತನಕ್ಕಾಗಿ ಅಲೆದಲೆದು ಸಾಕಾದ ವೃದ್ಧರೊಬ್ಬರು ಒಂದು ದಿನ ಕಚೇರಿಗೆ ಬಂದು ಸಂಬಂಧಿಸಿದ ಆಫೀಸರನ ಎದುರು ನಿಂತು, ಒಂದೂ ಮಾತಾಡದೇ ತನ್ನ ಅಂಗಿ, ಪ್ಯಾಂಟು, ಬೆಲ್ಟು, ವಾಚು ಎಲ್ಲವನ್ನೂ ಕಳಚಿಡುತ್ತಾರೆ. ನನ್ನ ಹತ್ರ ಕೊಡಲು ಇನ್ನೇನೂ ಉಳಿದಿಲ್ಲ, ಜೀವವೊಂದನ್ನು ಬಿಟ್ಟು ಎಂಬುದರ ಸಂಕೇತವಾಗಿದ್ದ ಆ ನಡೆ ಇಡೀ ಕಚೇರಿಯನ್ನು ಬೆಚ್ಚಿ ಬೀಳಿಸುತ್ತದೆ. ಇಂತಹ ಚಿತ್ರಗಳೇ ಆಕ್ರೋಶ ಹುಟ್ಟಿಸುವಾಗ, 20 ಸಾವಿರ ರೂಪಾಯಿಗಾಗಿ ಒಬ್ಬ ಹೆಣವನ್ನೆ ಬಗೆದು ತಂದರೆ?

ನಡೆನುಡಿಯಲ್ಲಿಲ್ಲ ಸೌಜನ್ಯ: ಕಳೆದ ಬೇಸಗೆಯಲ್ಲಿ ಒಮ್ಮೆ ನಮ್ಮ ಪಕ್ಕದ ಗ್ರಾಮೀಣ ಬ್ಯಾಂಕಿಗೆ ಹೋಗಿದ್ದಾಗ ಹಾಲಿನ ದುಡ್ಡು, ಸ್ತ್ರೀಶಕ್ತಿ ಸಂಘದ ದುಡ್ಡು, ವೃದ್ಧಾಪ್ಯವೇತನ, ಅಂಗವಿಕಲರ ವೇತನ ಅಂತ ಹಣ ತೆಗೆದುಕೊಳ್ಳಲು ಬಂದವರು ಬ್ಯಾಂಕಿನ ತುಂಬಾ ತುಂಬಿಹೋಗಿದ್ದರು. ಮ್ಯಾನೇಜರ್ ಹತ್ತಿರ, 'ಇಷ್ಟು ಸೆಕೆ ಇದೆಯಲ್ಲಾ, ಎಸಿ ಇಲ್ವ' ಕೇಳಿದೆ. 'ಅಯ್ಯೋ, ಎಸಿ ಹಾಕ್ಸಿದ್ರೆ ಜಾಸ್ತಿ ಹೊತ್ ಕೂತ್ಬಿಡ್ತಾರೆ ಮೇಡಂ. ಕೆಲ್ಸ ಇಲ್ದೆ ಇರೋರೂ ಬಂದ್ ಕೂತು ಹೋಗ್ತಾರೆ' ಅಂದರು! ತಾಲೂಕು ಕಚೇರಿ, ಸರಕಾರಿ ಆಸ್ಪತ್ರೆ ಮುಂತಾದ ಕಡೆ ಬಡವರಾಗಿ, ಅಸಹಾಯಕರಾಗಿ ಹೋಗಿ ಏನನ್ನಾದರೂ ಕೇಳಿನೋಡಿ. ಬಹುತೇಕರು ತಮ್ಮ ದೇಹದ ಕೊಬ್ಬನ್ನೆಲ್ಲಾ ಗಂಟಲಿಗೆ ತಂದಿಟ್ಟುಕೊಂಡು ಮಾತಾಡುತ್ತಾರೆ. ಕನಿಷ್ಠ ಸೌಜನ್ಯ ತೋರಿಸುವುದಿಲ್ಲ. ಸರಕಾರದ ವಿಧವಾವೇತನ ಪಡೆಯಲು ದಾಖಲೆಗಳಿಗಾಗಿ ಬರುವ ಹೆಂಗಸರಿಗೆ 'ಏನಮ್ಮೋವ್, ಹೇಳಿದ್ದರ್ಥ ಆಯ್ತಿಲ್ವ? ನಿಂತ್ಕಳಮ್ಮ ಹಿಂದಕ್ಕೆ' ಅಂತ ರೇಗುತ್ತಾರೆ. ಅದೇ ನೀವು, ಶ್ರೀಮಂತಿಕೆ ಮತ್ತು ಪ್ರಭಾವದ ಜೊತೆ ಹೋಗಿ. ಮಾತಿನ ಶೈಲಿಯೇ ಬದಲಾಗಿರುತ್ತದೆ. ನಿಮ್ಮ ದಾಖಲೆಗಳಿಗೆ ಬೇಕಾದ ಅರ್ಜಿಯೂ ಬೇಡ. ಅವರೇ ಬರೆದುಕೊಂಡಿರ್ತಾರೆ ನಿಮ್ಮ ಹೆಸರಲ್ಲಿ. ಬಹುತೇಕ ಸರಕಾರಿ ಆಸ್ಪತ್ರೆಗಳು ಈ ಭೂಲೋಕದ ಮೇಲಿರುವ ನಿತ್ಯ ನರಕ. ಇದು ಈ ದೇಶದ ಕಟು ವಾಸ್ತವ.

ದಾಖಲೆ ಮಾತು

ಒಂದು ವ್ಯವಸ್ಥೆ ಸರಿಯಾದ ರೀತಿಯಲ್ಲಿ ಮುನ್ನಡೆಯಲು ನಿಯಮ ಮತ್ತು ದಾಖಲೆಗಳ ಪ್ರಕಾರವೇ ಹೋಗುವುದು ಅವಶ್ಯ. ಅದಿಲ್ಲದಿದ್ದರೆ ಅರಾಜಕತೆ ಸೃಷ್ಟಿಯಾಗುತ್ತದೆ. ದಾಖಲೆ ಮತ್ತು ನಿಯಮ ಪಾಲನೆ ಮುಖ್ಯ. ಆದರೆ ವ್ಯವಸ್ಥೆ ಕೆಲವರ ವಿಷಯದಲ್ಲಿ ಮಾತ್ರ ಬಹಳ ನಿಯತ್ತಾಗಿ ದಾಖಲೆ ಕೇಳುತ್ತದೆ. ನಿಯಮ ಹೇಳುತ್ತದೆ/ ಹೇರುತ್ತದೆ. ಉಳಿದಂತೆ ಹಣ/ ಪ್ರಭಾವ / ಲಂಚ ಇದ್ದ ಕಡೆ ದಾಖಲೆ, ನಿಯಮ ಎಲ್ಲವೂ ತುಸು ಫ್ಲೆಕ್ಸಿಬಲ್ ನೀತಿ ಅನುಸರಿಸುತ್ತದೆ. ಇದು ನಿಜವಾದ ಸಮಸ್ಯೆ. ಕೆಲವರ ವಿಷಯದಲ್ಲಿ ಕಟ್ಟುನಿಟ್ಟಾಗಿರುವ ನಿಯಮಗಳು ಮತ್ತೆ ಕೆಲವರಿಗೆ ನಿಯಮದೊಳಗೆ ತುಸು ಹೊಂದಾಣಿಕೆ ಮಾಡಿಕೊಳ್ಳುವ ಅವಕಾಶ ಮಾಡಿಕೊಡುತ್ತವೆ, ಏನೇ ಇದ್ದರೂ ಗೌರವದಿಂದ ಮಾತಾಡಲಾಗುತ್ತದೆ. ವ್ಯವಸ್ಥೆಯ ಬೇರೆ ಬೇರೆ ಹಂತದ ಕುರ್ಚಿಗಳ ಕೈಲಿರುವ ನಿಯಮಗಳ ಹೊಂದಾಣಿಕೆ ಅಥವಾ ಸಡಿಲಿಕೆಯನ್ನು ಶ್ರೀಮಂತ/ ಪ್ರಭಾವೀ/ ಲಂಚದ ಲೆಕ್ಕದಲ್ಲಿ ಮಾತ್ರ ಮಾಡದೇ ಮಾನವೀಯತೆಯ ದೃಷ್ಟಿಯಿಂದ ಮಾಡಿದರೆ ಒಳ್ಳೆಯದಲ್ಲವೇ ಎಂಬುದು ಸಾಮಾನ್ಯರ ಪ್ರಶ್ನೆ. ನಿಯಮಗಳ ಕುರಿತ ಕಟುನೀತಿಯನ್ನು ಭ್ರಷ್ಟರ ಕುರಿತು ಅನುಸರಿಸಿದರೆ? 'ಮಾಡಕಾಗಲ್ಲ ಸರ್, ರೂಲ್ಸು' ಅಂತ ಉಳ್ಳವರಿಗೆ ಹೇಳಿದರೆ? ಹಾಗಾಗುತ್ತಿಲ್ಲ, ಬಹುತೇಕ ಕಚೇರಿಗಳಲ್ಲಿ ಇದರ ವಿರುದ್ಧವಾದದ್ದೇ ನಡೆಯುತ್ತಿದೆ. ಬಡವರನ್ನು ದಿನಾ ಅಲೆಸುವ ಕುರ್ಚಿಗಳು ಉಳ್ಳವರಿಗೆ ಫ್ಯಾನು ಹಾಕಿ ಕೂರಿಸಿ ಕೆಲಸ ಮುಗಿಸಿ ಕೊಡುತ್ತವೆ. ಇಂತಹ ವ್ಯವಸ್ಥೆಯಲ್ಲಿ ಇಲ್ಲದವರಿಗೆ ಸಂಕಟ. ಉಳ್ಳವರಿಗೆ ನಿರಾಳ. ಇಡೀ ದೇಶ ಜಿತು ಮುಂಡಾ ಪ್ರಕರಣದಲ್ಲಿ ಆಕ್ರೋಶಗೊಂಡಿರುವುದರ ನಿಜವಾದ ಕಾರಣ ಇದು.

ಹತಾಶೆಯ ಸ್ಫೋಟ: ನಾವೇ ಪಟ್ಟ ಪಾಡಿನ ಕುರಿತು ನಮ್ಮೊಳಗಿರುವ ಆಕ್ರೋಶ ಅಥವಾ ಅಂಥವರ ಕುರಿತ ಕಾಳಜಿ ಜಿತು ಹೆಣ ಬಗೆದು ತಂದಾಗ ಧಿಕ್ಕಾರ ರೂಪದಲ್ಲಿ ಪ್ರಕಟವಾಗಿದೆ. ಇದಕ್ಕೆ ನಾವು ಭಾವುಕರಾಗಿ ಪ್ರತಿಕ್ರಿಯಿಸುತ್ತಿರಬಹುದು. ಆದರೆ ಹೀಗೆ ಹೆಣ ಬಗೆದು ತರುವ ಅವನ ನಿರ್ಧಾರದ ಹಿಂದೆ ಹತಾಶೆ ಇದೆ. ಅವನ ಹಣದ ಅನಿವಾರ್ಯತೆಯನ್ನು ನಿರಾಕರಿಸಲಾಗದು. ನಾಗರಿಕತೆಯ ಪರಿಭಾಷೆಯ ಚೌಕಟ್ಟಿಗೆ ಇನ್ನೂ ಕೆಲವು ಜನಾಂಗಗಳು ಬಂದೇ ಇಲ್ಲ ಎಂಬುದನ್ನು ನಿರಾಕರಿಸಲಾಗದು. ಬ್ಯಾಂಕು ಹಣ ಕೇಳಿಲ್ಲ, ಆದರೆ ದಾಖಲೆಗಳ ಕುರಿತು ತಿಳಿವಳಿಕೆ ನೀಡಿದ್ದರೆ, ಅದು ಸುಲಭ ಮತ್ತು ಸರಳವಾಗಿ ಆಗುವ ಕೆಲಸವಾದರೆ ಯಾವ ವ್ಯಕ್ತಿಯೂ ಸುಮ್ಮನೇ ಹೆಣ ಕೀಳುವುದಿಲ್ಲ. ಈ ದೇಶದ ಯಾವುದೇ ಬ್ಯಾಂಕು ಒಬ್ಬ ಸಾಧಾರಣ ಬುಡಕಟ್ಟು ಜನರನ್ನು ಹೇಗೆ ನಡೆಸಿಕೊಳ್ಳಬಹುದೋ ಹಾಗೆ ನಡೆಸಿಕೊಂಡಿರುತ್ತದೆ ಆ ಬ್ಯಾಂಕು. ಅರ್ಥವಾಗುವುದಿಲ್ಲ ಅಂದವನಿಗೆ ನಿಯಮ ಅರ್ಥಮಾಡಿಸದೇ 'ಹೋಗಯ್ಯ, ನಿನ್ ಅಕ್ಕ ಸತ್ತಿದಾಳೆ ಅನ್ನೋದಕ್ಕೆ ದಾಖಲೆ ತಗೊಂಡು ಬಾ' ಅಂತ ರೇಗಿದರೆ ಅವನು ದಾಖಲೆ ಯಾಕೆ, ಹೆಣವೇ ತಗೊಳಿ ಅಂತ ತಂದಿಟ್ಟ.

ಹಾಗಾದರೆ ಎಲ್ಲರೂ ಇಂತಹ ಕ್ರಮ ಅನುಸರಿಸಬೇಕೇ? ಕಂಡು ಕೇಳರಿಯದ ಈ ಘಟನೆಗೆ ಹೇಗೆ ಪ್ರತಿಕ್ರಿಯಿಸಬೇಕು? ಅಥವಾ ನಾಳೆ ನಮಗೂ 'ರೂಲ್ಸು, ಏನೂ ಮಾಡಕಾಗಲ್ಲ' ಅಂದಾಗ ಏನು ಮಾಡಬೇಕು? ಏನೂ ಮಾಡುವುದಿಲ್ಲ ನಾವು. ಸುಮ್ಮನೇ ಯಾಕೆ ಅವರ ವಿರೋಧ ಕಟ್ಟಿಕೊಂಡು, ಬರೋ ಮೂರು ಕಾಸಿಗೂ ಕಲ್ಲು ಹಾಕೋಬೇಕು? ಆ ಮೂರು ಕಾಸಿನಲ್ಲಿ ಒಂದು ಕಾಸು ಕೊಟ್ಟೋ, ಮೂರು ದಿನವೋ, ತಿಂಗಳೋ ಕಾದೋ ಕೆಲಸ ಮಾಡಿಸಿಕೊಳ್ಳುವುದು ಒಳ್ಳೆಯದು ತಾನೇ? ನಮಗೆ ಯಾಕೆ ಬೇರೆ ಉಸಾಬರಿ? ಆಮೇಲೆ ಬರೋ ಕಾಸೂ ಬರದೇ ಹೋದ್ರೆ? ಇಂತಹ ಭಯ ಇರುವ ಜನ ತುಂಬಿರುವ ಈ ದೇಶದಲ್ಲಿ, ನಿಯಮಗಳು ಮತ್ತು ದಾಖಲೆಗಳ ಆಧಾರದ ಮೇಲೆ ಈಗಿರುವ ಕೆಲವರಿಗೆ ಬಿಗಿ ಮತ್ತು ಕೆಲವರಿಗೆ ಸಡಿಲಿಕೆಯ ಆಟವೇ ನಮ್ಮ ಸುತ್ತಲೂ ದಿನವೂ ಮುಂದುವರಿಯುತ್ತದೆ. ಜಿತುವಿನ ಹೆಗಲ ಮೇಲಿನ ಹೆಣದ ಚಿತ್ರ ಅಣಕದ ಒಂದು ಉದಾಹರಣೆಯಾಗಿಯಷ್ಟೇ ಉಳಿಯುತ್ತದೆ. (ಲೇಖಕರು ಕಥೆಗಾರರು)

ವರ್ಷಗಳ ಸಂಶೋಧನೆ ಮತ್ತು ಪ್ರಾಚೀನ ಆಯುರ್ವೇದ ಗ್ರಂಥ ಬಳಸಿ ಜಾಲಿ ತುಳಸಿ 51 ಡ್ರಾಪ್ಸ್ ಅನ್ನು ತಯಾರಿಸಲಾಗಿದೆ
ದೇಹವನ್ನು ನಿರ್ವಿಷಗೊಳಿಸುತ್ತದೆ ಮತ್ತು ರೋಗನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಸಹಾಯಮಾಡುತ್ತದೆ
ಪ್ರಾಯೋಗಿಕವಾಗಿ ಪರೀಕ್ಷಿಸಲ್ಪಟ್ಟಿದೆ
ತುಳಸಿಯ 5 ವಿಧದ ಸಾರ ಬಳಸಿ ಬಹಳ ವಿಶೇಷ ವಿಧಾನದಿಂದ ತಯಾರಿಸಲ್ಪಟ್ಟಿದೆ

- ಗ್ಯಾಸ್
- ಸುಡುವ ಸಂವೇದನೆ
- ಅಜೀರ್ಣ
- ಕರುಳಿನ ಆರೋಗ್ಯ
- ಮಲಬದ್ಧತೆ
- ಕೆಟ್ಟ ಶ್ವಾಸ
- ಮೊಡವೆಗಳು/ ಮೊಡವೆ
- ಕೂದಲು ಉದುರುವಿಕೆ
- ಬಾಯಿ ಹುಣ್ಣು
- ಗಮನ ಕೊರತೆ (ADHD)
- ಗಂಟಲು ನೋವು
- ಉಸಿರಾಟ ತೊಂದರೆ
- ಕೆಮ್ಮು
- ಅಲರ್ಜಿ
- ಚರ್ಮ ರೋಗ
- ತಲೆಸುತ್ತು
- ಜ್ಞಾಪಕ
- ದೌರ್ಬಲ್ಯ
- ಕಪ್ಪು ಕಲೆಗಳು ಮತ್ತು ಸುಕ್ಕುಗಳು
- ಮರಗಟ್ಟುವಿಕೆ
- ಕೀಲು ನೋವಿಗೆ ಸಹಕಾರಿ

JOLLY
CLINICALLY TESTED
ತುಳಸಿ 51 ಹನಿಗಳು
5-5 ಹನಿ ಬೆಳಿಗ್ಗೆ ಸಂಜೆ & ಮಕ್ಕಳು, ಹಿರಿಯರು ಮತ್ತು ಯುವಕರು
ಜಾಲಿ ತುಳಸಿ 51 ಬ್ರ್ಯಾಂಡ್‌ನ ಸದಾಶಯ ಮತ್ತು ಗ್ರಾಹಕರ ತಳಹದಿಯ ಲಾಭ ಪಡೆಯಲು ಇದೇ ರೀತಿಯ ಹೆಸರುಗಳೊಂದಿಗೆ ಇನ್ನೂ ಅನೇಕ ಎಷ್ಟೇ ಬಂದರೂ, ಮೆಡಿಕಲ್ ಸ್ಟೋರ್‌ನಿಂದ ಖರೀದಿಸುವಾಗ ತುಳಸಿ ಡ್ರಾಪ್ಸ್ ಬದಲು ಜಾಲಿ ತುಳಸಿ 51 ಡ್ರಾಪ್ಸ್ ಬಗ್ಗೆ ನಿರ್ದಿಷ್ಟವಾಗಿ ಕೇಳಿ ಪಡೆಯಿರಿ
Super Stockist.»Shri Rama Stores,Yellapur. M:98143-30500
Bagalkot: 9972840996, Bangalore: 8951490881, Chitradurga: 9742800795, Davangere: 9591346737, Gadag:9886715963, Gulbarga: 9886294310, Haveri:94486-30757, 9538226227, Hubli: 9980571313, Ilkal: 9448014145, Mangalore: 9964746647, 9845082957, 9945172643, Manipal: 9880451511, Mysore: 9243580210, Ranebennur: 9844323973, Sirsi: 9916250217, Udupi: 9449920235, 9845456115, Kolar: 94482-61087, Mysur: 9590562007, Raichur: 94485-70649, Davangere: 9880708064
ಎಲ್ಲಾ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯವಿದೆ ✆ 97813-30500 www.jollyorganic.com

RNI No. KARKAN/2016/71628
Vol. 11 Issue no. 122
Published by Lokesh K V on behalf of Metropolitan Media Company Limited., Published at 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, Ph: 080 40877666 and Printed at (a) Bennett Coleman & Co Ltd.,The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099. (b) Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) Metropolitan Media Co. Ltd.,Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g) Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. Regd. Office: 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, (Ph:080-40877666). Editor: Sudarshan Channangihalli. © All Rights Reserved. Reproduction in whole or part without permission is prohibited.



ಏಕ ಅನೇಕ
ಎಸ್.ದಿವಾಕರ್

ಮಾರ್ಜಾಲನನ್ನು ನೆನೆದು...

ಒಂದಾನೊಂದು ಕಾಲದಲ್ಲಿ ನಾಯಿ, ಹಸು, ಕುದುರೆ, ಹಂದಿ, ಕುರಿ ಮುಂತಾದವು ಕಾಡುಪ್ರಾಣಿಗಳಾಗಿದ್ದವಷ್ಟೆ. ಅವೆಲ್ಲವುಗಳಿಗಿಂತ ಹೆಚ್ಚು ಕಾಡುಪ್ರಾಣಿಯಾಗಿದ್ದದ್ದು ಬೆಕ್ಕು. ಅದು ಎಷ್ಟು ರಾಜಾರೋಷವಾಗಿ ನಡೆದಾಡುತ್ತಿತ್ತೆಂದರೆ ಎಲ್ಲ ಜಾಗಗಳೂ ಅದಕ್ಕೆ ಒಂದೇ ರೀತಿ ಕಾಣುತ್ತಿದ್ದವು. ಒಂದು ದಿನ ಮನುಷ್ಯರಿದ್ದ ಒಂದು ಗುಹೆಗೆ ಹೋದ ಅದು ಅವರಿಗೆ ದುಂಬಾಲುಬಿದ್ದಿತು. ಅವರ ಕಾಲುಗಳಿಗೆ ಮೈಯುಜ್ಜಿ, ಅವರ ತೊಡೆಯೇರಿ, ಇಲಿಗಳನ್ನು ಕೊಂದು ತನಗೆ ತಾನೇ ಜನಪ್ರಿಯವಾಯಿತು. ಆದರೂ ರಾತ್ರಿಯ ಹೊತ್ತು ಬೆಳದಿಂಗಳಿದ್ದಾಗ ಹೇಳದೆ ಕೇಳದೆ ಕಾಡಿಗೆ ಹೋಗಿ ಠಳಾಯಿಸುವ ತನ್ನ ಸ್ವಭಾವವನ್ನು ಮಾತ್ರ ಬಿಟ್ಟುಕೊಡಲಿಲ್ಲ, ಅದು ಎಲ್ಲಿಗೆ ಹೋಯಿತು, ಯಾಕೆ ಹೋಯಿತು ಎಂದು ಯಾರಿಗೂ ಗೊತ್ತಾಗುತ್ತಿರಲಿಲ್ಲ.

ಮೇಲಿನದು ರಡ್‌ಯಾರ್ಡ್ ಕಿಪ್ಲಿಂಗ್‌ನ 'ದಿ ಕ್ಯಾಟ್ ದಟ್ ವಾಕ್ಡ್ ಬೈ ಹಿಂಸೆಲ್ಫ್' ಎಂಬ ಮಕ್ಕಳ ಕತೆಯಲ್ಲಿರುವ ಬೆಕ್ಕಿನ ಚಿತ್ರ. ನಾವು ಸಾಕುವ ಬೆಕ್ಕು ಜಿರಾಫೆಗಿಂತ ಅಥವಾ ಹಾರಾಡುವ ಹದ್ದಿಗಿಂತ ಹೆಚ್ಚು ಐಂದ್ರಜಾಲಿಕ. ಅದರ ಹಾಗೆ ಆದರವನ್ನೋ ಭೀತಿಯನ್ನೋ ಹುಟ್ಟಿಸುವ ಇನ್ನೊಂದು ಪ್ರಾಣಿಯಿಲ್ಲ. ಮನುಷ್ಯ ಇತಿಹಾಸದಲ್ಲಿ ದೇವರಂತೆ ಪೂಜಿಸಲ್ಪಟ್ಟ, ಪಿಶಾಚಿಯ ದೂತನೆಂದು ಹಿಂಸಿಸಲ್ಪಟ್ಟ ಈ ಪ್ರಾಣಿ ಶತಮಾನಗಳಿಂದ ಸಾಕುಪ್ರಾಣಿಯಾಗಿದ್ದೂ ತನ್ನ ನಿಗೂಢತೆಯನ್ನು ಉಳಿಸಿಕೊಂಡಿರುವಂಥದು. ಇನ್ನು ಇದರ ಬಗ್ಗೆ ಜನಮಾನಸದಲ್ಲಿರುವ ಮೂಢನಂಬಿಕೆಗಳನ್ನು ಬರೆಯುವುದಕ್ಕೆ ಸಾವಿರಾರು ಪುಟಗಳೂ ಸಾಲವು. ಮತ್ತೆ ಆ ಮೂಢನಂಬಿಕೆಗಳೇ ಬೆಕ್ಕುಗಳನ್ನು ಹಿಡಿದು ಹಿಂಸಿಸುವುದಕ್ಕೆ, ಕುದಿಯುವ ನೀರಿನಲ್ಲಿ ಮುಳುಗಿಸುವುದಕ್ಕೆ, ಬೆಂಕಿಗೆಸೆಯುವುದಕ್ಕೆ, ಜೀವಂತ ಸುಡುವುದಕ್ಕೆ ಕಾರಣವಾದವು.

ಆದರೇನು? ಬೆಕ್ಕಿನ ಹಾಗೆ ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಂಡಿರುವ ಇನ್ನೊಂದು ಪ್ರಾಣಿಯಿಲ್ಲ. ನಿಮ್ಮ ತೊಡೆಯ ಮೇಲೋ ಕುರ್ಚಿಯ ಮೇಲೋ ಪವಡಿಸಿರುವ ಬೆಕ್ಕು ಇದ್ದಕ್ಕಿದ್ದಂತೆ ಚಂಗನೆಗರಿ ಇಲಿಯನ್ನೋ ಹಕ್ಕಿಯನ್ನೋ ಬೆನ್ನಟ್ಟುತ್ತದೆ; ಸಖನಂತೆಯೋ ಸಖಿಯಂತೆಯೋ ಇದ್ದು ಕೆಲವೇ ಕ್ಷಣಗಳ ನಂತರ ನಿಮಗೆ ಸಂಬಂಧವೇ ಇಲ್ಲದಂತೆ ತನ್ನ ಪಾಡಿಗೆ ತಾನು ದೂರ ಸರಿಯುತ್ತದೆ. ಬಹುಶಃ ಇದೇ ಕಾರಣದಿಂದಲೇ ನೆಪೋಲಿಯನ್, ಹಿಟ್ಲರರಂಥ ಸರ್ವಾಧಿಕಾರಿಗಳು ಬೆಕ್ಕೆಂದರೆ ಭಯಪಡುತ್ತಿದ್ದಿರಬೇಕು, ದ್ವೇಷಿಸುತ್ತಿದ್ದಿರಬೇಕು.

ಪ್ರಾಚೀನ ಈಜಿಪ್ಟಿನ ಮಾರ್ಜಾಲ ದೇವತೆ 'ಬಾಸ್ತ್'. ಅಲ್ಲಿ ಸಾವಿರಾರು ಬೆಕ್ಕಿನ ಮಮ್ಮಿಗಳು ಸಿಕ್ಕಿವೆ – ಅಂಥ ಕೆಲವು ಮಮ್ಮಿಗಳ ಜೊತೆ ಅವುಗಳ ಆಹಾರವಾದ ಇಲಿಗಳ ಮಮ್ಮಿಗಳೂ ಇವೆ.

ಬ್ರಿಟನ್ನಿನಲ್ಲಿ ಮೊದಲನೆಯ ಎಲಿಜಬೆತ್ ಮತ್ತು ಮೊದಲನೆಯ ಜೇಮ್ಸ್ ಕಾಲದಲ್ಲಿ ಕೈಗೆ ಸಿಕ್ಕ ಬೆಕ್ಕುಗಳನ್ನು ಚರ್ಮದ ಬ್ಯಾಗುಗಳಲ್ಲಿ ತುಂಬಿ ಮರದ ಕೊಂಬೆಗೆ ಕಟ್ಟುತ್ತಿದ್ದರು–ಬಿಲ್ಲುಗಾರರು ಗುರಿಯಿಡುವುದಕ್ಕೆ. 'ಲೆಟಿಂಗ್ ದಿ ಕ್ಯಾಟ್ ಔಟ್ ಆಫ್ ದಿ ಬ್ಯಾಗ್' ಎಂಬ ನುಡಿಗಟ್ಟು ಹುಟ್ಟಿದ್ದೇ ಹೀಗಂತೆ; ಯಾಕೆಂದರೆ ಆ ಕಾಲದಲ್ಲಿ ಬೆಕ್ಕನ್ನು ಪ್ರೀತಿಸುವ ಹೃದಯವಂತರಿದ್ದರು! ಅಂಥವರಿಂದಾಗಿಯೇ ಬೆಕ್ಕಿಗೆ ಏಳು ಜನ್ಮಗಳಂತೆ. ಎಷ್ಟೇ ಎತ್ತರದಿಂದ ಬಿದ್ದರೂ ಅದು, ತನ್ನ ಪಾದಗಳಿಗೆ ಮೆತ್ತೆಯಿರುವುದರಿಂದ, ಏಟು ಮಾಡಿಕೊಳ್ಳುವುದಿಲ್ಲ.

ನಾವು ಬೆಕ್ಕುಗಳ ಸಹವಾಸದಲ್ಲಿ ಬದುಕುತ್ತೇವಷ್ಟೆ. ಬೆಕ್ಕು ಬೇಟೆಯಡುವ ಸ್ವಭಾವದಿಂದ ಮನೆಯ ಸಾಕುಪ್ರಾಣಿಯಾಗಿ ಬದಲಾಗುವುದಕ್ಕೆ ಕೆಲವು ಸೆಕೆಂಡುಗಳು ಸಾಕು. ಒಂದೇ ಮನೆಯಲ್ಲಿ ನಾಯಿಗಳ ಜೊತೆ ಬೆಕ್ಕುಗಳಿದ್ದರೂ ಅವು ತಮ್ಮ ಸ್ವಭಾವಕ್ಕೆ ವಿರುದ್ಧವಾಗಿ – ನೀವು ಎಂಥದೇ ಆಮಿಷ ತೋರಿಸಿದರೂ – ಏನನ್ನೂ ಮಾಡಲಾರವು. ಹಾಗೆ ನೋಡಿದರೆ ಮನುಷ್ಯ ಬೆಕ್ಕನ್ನು ಪಳಗಿಸಿದ್ದಕ್ಕಿಂತ ಬೆಕ್ಕೇ ಮನುಷ್ಯನನ್ನು ಪಳಗಿಸಿತೆನ್ನಬೇಕು.

ಪಿಕಾಸೋನ 'ಕ್ಯಾಟ್ ಕ್ಯಾಚಿಂಗ್ ಎ ಬರ್ಡ್' ಎಂಬ ಪೇಂಟಿಂಗಿನಲ್ಲಿ ಒಂದು ಬೆಕ್ಕು ಹಕ್ಕಿಯೊಂದನ್ನು ಹರಿದು ಚಿಂದಿ ಮಾಡುತ್ತಿರುವ ದೃಶ್ಯವಿದೆ. ನಾವೆಲ್ಲ ಬೆಕ್ಕನ್ನು ಮುದ್ದು ಮಾಡಿದರೆ ಪಿಕಾಸೊ ಇಲ್ಲಿ ಬೆಕ್ಕಿನ ಇನ್ನೊಂದು ಮುಖವನ್ನು, ಅಂದರೆ ಆ ಮನೆಮುದ್ದಿನ ಪ್ರಾಣಿಯ ಹಿಂದಿರುವ ಕ್ರೂರ ಸ್ವಭಾವವನ್ನು ಚಿತ್ರಿಸಿದ್ದಾನೆ. ಒಂದು ಅರ್ಥದಲ್ಲಿ

ಇದು ಬಲಿಪ್ರಾಣಿಯ ಮತ್ತು ಬೇಟೆಗಾರನ ನಡುವಣ ರಕ್ತಸಿಕ್ತ ಸಂಬಂಧದ ಚಿತ್ರಣ. ಇದನ್ನು ಸಾಧಿಸುವುದಕ್ಕಾಗಿಯೇ ಹರಿತವಾಗಿದ್ದೂ ಕಚ್ಚುಕಚ್ಚಾದ ರೇಖೆಗಳನ್ನು ಮೂಡಿಸಿದ ಪಿಕಾಸೊ ಬೆಕ್ಕಿನ ಅನಿರೀಕ್ಷಿತ ಆಕ್ರಮಣವನ್ನು ಸೂಚಿಸುವುದಕ್ಕಾಗಿ ಬಣ್ಣಗಳ ಜೊತೆ ಮರಳನ್ನೂ ಬೆರಸಿದನಂತೆ. ತೀವ್ರ ರೂಪದ ಕರಾಳತೆಯಿರುವ ಈ ಪೇಂಟಿಂಗು ಸ್ಪ್ಯಾನಿಷ್ ಅಂತರ್ಯುದ್ಧವನ್ನು ಕುರಿತ ಈ ಕಲಾವಿದನ ಭಾವನೆಗಳನ್ನು ಪ್ರತಿಫಲಿಸುವ ಹಲವು ಅಲಿಗರಿ ಪೇಂಟಿಂಗುಗಳಲ್ಲಿ ಒಂದು. ಇಲ್ಲಿ ಬೆಕ್ಕು ಯುದ್ಧದ ಭೀಕರತೆಯನ್ನು ಸೂಚಿಸಿದರೆ ಹಕ್ಕಿ ಸ್ಪೇನಿನ ಜನತೆಯ ದುರಂತವನ್ನು ಸೂಚಿಸುತ್ತಿದೆ.

ನಮ್ಮ ಕವಿ ಗೋಪಾಲಕೃಷ್ಣ ಅಡಿಗರ ಮನೆಯಲ್ಲಿದ್ದ ಒಂದು ಬೆಕ್ಕು ಒಂದು ದಿನ ಇದ್ದಕ್ಕಿದ್ದಂತೆ ಕಾಣೆಯಾಯಿತು. ವಾರಗಟ್ಟಲೆ ಅದಕ್ಕಾಗಿ ಹಂಬಲಿಸಿದ ಅಡಿಗರು ಕಡೆಗೆ ತಮ್ಮ ದುಃಖವನ್ನು ನೀಗಿಕೊಳ್ಳುವುದಕ್ಕಾಗಿ 'ನರಸಿಂಗನನ್ನು ನೆನೆದು' ಎಂಬ ಕವನವನ್ನೇ ಬರೆದರು. ಅದರ ಈ ಕೆಲವು ಸಾಲುಗಳನ್ನು ಓದಿ:

ನಮ್ಮ ನರಸಿಂಗನಿಗೆ ಸಿಂಹದ್ದೆ ಬಣ್ಣ; ಆದರೆ ಗಾತ್ರ
ಸಣ್ಣ; ಬೆಕ್ಕಾದರೂ ಕೂಡ ಅಕ್ಕರೆಯ ಸಕ್ಕರೆಯ ಚಿಣ್ಣ;
ನನ್ನ ತೊಡೆ ಮೇಲೆಯೇ ಬೆಳೆದುಬಂದಿದ್ದ ಈ ತರಳ;
ನನಗೂ ಅವನಿಗೂ ಯಾವ ನಂಟೊ ತಿಳಿಯದು ನನ್ನ
ಅಂತರಂಗದ ಭಾರಿ ಗಂಟು ಆತನ ನೆನಪು.
ನಾಲ್ಕೈದು ದಿನಗಳ ಕಾಲ ಊರಿನಲ್ಲಿರದ ನಾನು
ಬಂದು ಮುಖ ತೊಳೆದು ವಿಶ್ರಮಿಸುತ್ತಲಿದ್ದಾಗ
ಬಂದು ಎದೆಯ ಮೇಲೇ ಮಲಗಿ ತನ್ನ ಕೆಮ್ಮೂಗು
ತುದಿಯಿಂದ ನನ್ನ ಮೂಗನು ಮುಟ್ಟಿ
ಉಗುರುಗಳನೊಳಗೆಳೆದುಕೊಂಡು ಮುಂಗೈಗಳಿಂದಲೇ
ಮೃದುವಾಗಿ ಕೆನ್ನೆಗಳ ಸವರಿ, ಅನಂತರ ನನ್ನ
ಕೈಯ ಮಿದುವಾಗಿಯೇ ಕಚ್ಚಿ, ಕಚ್ಚಿದ ಎಡೆಯ
ನೆಕ್ಕಿ ಸೃಷ್ಟಿಯಂತರ್ಗಂಗೆಯೊಂದು ಅಲೆಯ ನನ್ನಂತ
ರಂಗಕ್ಕೆ ಸೇರಿಸಿದಾಗ ಇಬ್ಬರೂ ಪುಳಕಿತರು ಮತ್ತೆ ಮತ್ತೆ.

ಹೀಗೆ ಎಲ್ಲಕಾಲದಲ್ಲೂ ಎಲ್ಲರಿಗೂ ವಾತ್ಸಲ್ಯವನ್ನು ಸೂಸುತ್ತಿರುವುದಿಲ್ಲ ಬೆಕ್ಕು. ವಿಜ್ಞಾನಿ ಕೊನ್ರಾಡ್ ಲೊರೆಂರ್ಝ್‌ನ ಪ್ರಕಾರ, 'ಬೆಕ್ಕಿನ ಆಕರ್ಷಣೆಯಿರುವುದು ಮನುಷ್ಯನ ಜೊತೆ ನಿಕಟ ಸಂಬಂಧವಿಟ್ಟುಕೊಳ್ಳದ, ಅವನ ಉಗ್ರಾಣದಲ್ಲಿ ಸಂತೃಪ್ತಿಯಿಂದ ಬೇಟೆಯಾಡುವ, ಹುಲಿಯ ಹಾಗೆಯೋ ಚಿರತೆಯ ಹಾಗೆಯೋ ರಾಜಿಯಿಲ್ಲದ ಸ್ವಾತಂತ್ರ್ಯವುಳ್ಳ, ತನ್ನ ಒಡೆಯನ ಅಥವಾ ಒಡತಿಯ ಕಾಲುಗಳಿಗೆ ಮೈಯುಜ್ಜುತ್ತಿರುವಾಗ ಕೂಡ ನಿಗೂಢವೂ ದೂರವರ್ತಿಯೂ ಆಗಿರುವ ವಾಸ್ತವಾಂಶದಲ್ಲಿ'.

ಎಡ್ಗರ್ ಅಲೆನ್ ಪೊ, ಕೀಟ್ಸ್, ಬೋದಿಲೇರ್, ಚೆಕಾಫ್, ಎಮಿಲಿ ಝೋಲ, ರಡ್‌ಯಾರ್ಡ್ ಕಿಪ್ಲಿಂಗ್, ಡಬ್ಲ್ಯು.ಬಿ. ಯೇಟ್ಸ್, ರಿಲ್ಕೆ, ಟಿ. ಎಸ್. ಎಲಿಯಟ್, ವ್ಯಾಲೆಸ್ ಸ್ಟೀವನ್ಸ್, ಹೆಮಿಂಗ್‌ವೇ, ಇಟಾಲೊ ಕಲ್ವಿನೊ, ಪಾಬ್ಲೊ ನೆರೂದ, ಹೀಗೆ ಜಗತ್ತಿನ ಅನೇಕ ಲೇಖಕರು, ಕವಿಗಳು ಬೆಕ್ಕಿನ ಬಗ್ಗೆ ಬರೆದಿರುವ ಕತೆ, ಕವನಗಳನ್ನು ಓದಿದ್ದೇನೆ. ಅವುಗಳ ಸೊಬಗನ್ನು, ರೂಪಕಗಳನ್ನು ವರ್ಣಿಸಬೇಕಾದರೆ ಒಂದು ದೊಡ್ಡ ಪುಸ್ತಕವನ್ನೇ ಬರೆಯಬೇಕು.

ಬೆಕ್ಕನ್ನು ಕುರಿತು 'ಮುಖಾಮುಖಿ' ಎಂಬ ಅತ್ಯದ್ಭುತ ಕವನವನ್ನು ಬರೆದ ತಿರುಮಲೇಶ್ ಒಮ್ಮೆ ಟಿ.ಎಸ್. ಎಲಿಯಟ್‌ನ 'ಮೆಕಾವಿಟಿ: ದಿ ಮಿಸ್ಟರಿ ಕ್ಯಾಟ್' ಎಂಬ ಕವನ ಅನುವಾದಿಸಲು ಹೊರಟರು. ಆದರೆ ಆ ಕವನವಿದ್ದ ಪುಸ್ತಕವೇ ನಾಪತ್ತೆಯಾಗುವುದೆಂದರೆ! 'ಯಾರ ಕೈಗೂ, ಕನಿಷ್ಠ ಒಬ್ಬ ಅನುವಾದಕನ ಕೈಗೂ, ಸಿಗಹಾಕಿಕೊಳ್ಳುವುದು ಬೆಕ್ಕಿಗೆ ಇಷ್ಟವಿಲ್ಲ, ಆದ್ದರಿಂದ ತನ್ನ ವಿಶೇಷ ಶಕ್ತಿಯನ್ನು ಉಪಯೋಗಿಸಿ ಅದು ಇಡೀ ಪುಸ್ತಕವನ್ನೇ ಮಾಯವಾಗಿಸಿಬಿಟ್ಟಿತು' ಎಂದುಕೊಂಡರಂತೆ ತಿರುಮಲೇಶ್.

ಪದ್ಯಕಾಲ

ನತ್ತು



ಭುಜ ಮಟ್ಟದ
ಕೂಸಿದ್ದವಳಿಗೀಗ
ನಲವತ್ತರ ನರೆ ಹೆರಳ
ಸಂಭಾಳಿಸುವ ಚಿಂತೆ

ಒಂದು ಕೋರೆಯಾದರೆ
ಮತ್ತೊಂದು ಒರೆಯಾಗಬೇಡವೆ?
ಮೂಗಿಗಾದರೂ
ಹೊಳಪಿನ ಮೂಗುತಿ ತಿರುವಿ
ಸುಂದರಿಯಾಗುವ ತವಕ

ಪಟ್ಟು ಸಾಕಾರವಾಗಿ
ನತ್ತೇರಿ ಗತ್ತಾಗಿ ಕುಳಿತಾಯ್ತು
ನೋಡುಗರ ಸೊಬಗಾಗಿ
ಈಗ ನಾಸಿಕಾಗ್ರದಲ್ಲೇ
ಪ್ರೀತಿ ಸೆರೆ

ಜಂಭವುಳಿವುದೇ ಕಾಲನ ಮುಂದೆ!?
ಮುತ್ತಿನ ನತ್ತು
ಬದುಕ ಹೊಳಪು
ಇಬ್ಬನಿಯಿರುವತನಕ
ಕನಸು ಕರಗಲೇಬೇಕು
ಬಲಿತ ಕಾಲದ ಮಣಭಾರಕ್ಕೆ

ಹಗೂರಾಗಬೇಕು
ಬೆಳಕು ಬಾಡುವ ಹೊತ್ತಿಗೆ
ಭಾರವೆನಿಸುವ ಎಲ್ಲ ಕಳಚಿ!
ಎಲ್ಲೋ ಅಲ್ಲಿ ಎದೆ ನೋವ ಅಳಿಸೋ
ನಟ್ಟಿರುಳ ಹೊತ್ತು
ಮರಳಿ ಬಿಡು ನತ್ತು
ಆ ಭಾರ ಹಗುರಾಗಿಸುವ
ವಿಸ್ಮಯದ ಕಾಲವೇ ಬಂದುಬಿಡು
ತುಟಿ ಮೊಗ್ಗು ಅರಳಿಸು ಪಾರಿಜಾತದಂತೆ...

ಸಂಗೀತ ರವಿರಾಜ್

ಕುರ್ಚಿ



ಕಥೆ ಕಿಟಕಿ
ಗಿರಿಧರ್ ಖಾಸನೀಸ್

ಬೇಡ ಸರ್... ಇದನ್ನು ಯಾರಿಗೂ ಕೊಡಬೇಡಿ. ಈ ಕುರ್ಚಿಯನ್ನು ಮಾಡಿ ಕೊಟ್ಟವನು ನನ್ನ ಅಪ್ಪ, ನಿಮ್ಮ ತಾತನಿಗೆ. ಈ ಮರದೊಳಗೆ ಅವರ ಉಸಿರಿದೆ. ಪ್ರಾರ್ಥನೆ, ನಿದ್ದೆ, ಗೊರಕೆ.. ಎಲ್ಲ ಸೇರಿಕೊಂಡಿವೆ. ನೋಡಿ, ಹೇಗೆ ಮಿರಮಿರ ಅಂತ ಹೊಳೀತಿದೆ. ಇಂತಹ ಟೀಕ್ ಈಗ ಸಿಗೋದಿಲ್ಲ. ಬೇಕಾದ್ರೆ ಒಂದು ಕೋಟ್ ವಾರ್ನಿಷ್ ಹೊಡೆದು ಕೊಡ್ತೀನಿ. ಇನ್ನೂ ಐವತ್ತು ವರ್ಷ ಗ್ಯಾರಂಟಿ.'

'ಹಾಗಲ್ಲ ವಳ್ಳಿ... ಹೊಸ ಫರ್ನಿಚರ್ ಆರ್ಡರ್ ಮಾಡಿದ್ದೀನಿ. ಅವುಗಳ ಜೊತೆ ಇದು ಹೊಂದಿಕೊಳ್ಳಲ್ಲ. ನಿನ್ನ ಅಪ್ಪ ಮಾಡಿದ ಅಂದ ಮೇಲೆ ಇದು ನಿನಗೇ ಸೇರಬೇಕು. ಬೇಡ ಅನ್ನಬೇಡ. ನಿನ್ನ ಹತ್ತಿರ ಇದ್ದರೂ, ನನ್ನ ಹತ್ತಿರ ಇದ್ದ ಹಾಗೆ ಅಲ್ಲವಾ?'



ಒಲ್ಲದ ಮನಸ್ಸಿನಿಂದ ವಳ್ಳಿಯಪ್ಪ ಕುರ್ಚಿಯನ್ನು ಹೊತ್ತುಕೊಂಡು ಹೋದ.

ಕಾರ್ಪೆಂಟರ್ ವಳ್ಳಿಗೆ ಈಗ ವಯಸ್ಸಾಗಿದೆ. ಸಣ್ಣಪುಟ್ಟ ಕೆಲಸ ಮಾಡಿಕೊಂಡೇ ಜೀವನ ಸಾಗಿಸ್ತಾನೆ. ನಾವು ಊರಿಗೆ ಹೋದಾಗ ನಮ್ಮ ಮನೆ ನೋಡಿಕೊಳ್ತಾನೆ. ಗಿಡಗಳಿಗೆ ನೀರು ಹಾಕ್ತಾನೆ.

ಹೋದ ವಾರ ವಳ್ಳಿಯಪ್ಪ ತೀರಿಹೋದ. ಎಂದಿನಂತೆ ಊಟ ಮುಗಿಸಿ, ವೀಳ್ಯ ಜಗಿದು ಅದೇ ಕುರ್ಚಿಯಲ್ಲಿ ಕೂತಿದ್ದನಂತೆ. ತೂಕಡಿಸಿದನಂತೆ. ಮುಚ್ಚಿದ ಕಣ್ಣು ಮತ್ತೆ ತೆರೆಯಲಿಲ್ಲವಂತೆ. ಅವನ ಹೆಂಡತಿ ಹೇಳಿದಳು.

ಆ ರಾತ್ರಿ ನನಗೆ ನಿದ್ದೆ ಬರಲಿಲ್ಲ. ಕನಸಿನಲ್ಲಿ ಯಾತ್ರಿಕರು ಬೆಟ್ಟ ಹತ್ತುತ್ತಿದ್ದರು. ಅವರ ಹಿಂದೆ ಬಂಡೆಯೊಂದು ಉರುಳಿ ಬರುತ್ತಿತ್ತು. ಬೆಚ್ಚಿ ಎದ್ದು ಕೂತೆ. ಬೆಳಕಾಗಿತ್ತು. ಕಿಟಕಿಯ ಹತ್ತಿರ ಹೋಗಿ ನಿಂತೆ. ಗಿಡಗಳು ಒದ್ದೆಯಾಗಿದ್ದವು. ಮಣ್ಣಿನ ವಾಸನೆಯ ಜೊತೆ ವಾರ್ನಿಷ್‌ನ ಘಾಟು ಬೆರೆತಿತ್ತು. ಬೀಸುವ ತಂಗಾಳಿ ಬಂಡೆಯಂತೆ ಭಾರವಾಗಿತ್ತು. ■

ಸಹಜತೆ ಮತ್ತು ವಿರೂಪಗಳ ನಡುವೆ...

ಕೆ.ವೆಂಕಟೇಶ್
venkatesh.k@timesofindia.com

ನಾನು ಓದಿದ ಹೊತ್ತಿಗೆ

ಮನುಷ್ಯ ಮತ್ತು ನಿಸರ್ಗದ ಅವಿನಾಭಾವ ಸಂಬಂಧ, ನಾಗರಿಕತೆಯ ಹೊಡೆತಕ್ಕೆ ಸಿಲುಕಿ ಬದಲಾಗುವ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ ಪತ್ರಕರ್ತೆ ಭಾರತಿ ಹೆಗಡೆ ಅವರ 'ಉಪ್ಪಾಗೆ ಹರಳು' ಕಾದಂಬರಿ. ಉತ್ತರ ಕನ್ನಡದ ಶಿರಸಿ ಸುತ್ತಮುತ್ತ ಕಾಡಿನ ಅಸ್ಮಿತೆ ಉಪ್ಪಾಗೆ ಮರವು ಇಲ್ಲಿ ಕೇವಲ ಕಥಾವಸ್ತುವಲ್ಲ. ಮನುಷ್ಯನ ಬದುಕಿನ ರೂಪಾಂತರವನ್ನು ಸಂಕೇತಿಸುತ್ತದೆ. ಉಪ್ಪಿಗ ಊರು ಜೀವನದ ಏರುತಗ್ಗುಗಳಲ್ಲೂ ಸ್ವಯಂಪೂರ್ಣ ಎನ್ನುವಂತೆ ಇರುತ್ತದೆ. ಆದರೆ ಉಪ್ಪಾಗೆ ತುಪ್ಪ ಮತ್ತು ಸಿಪ್ಪೆಗೆ ಕೇರಳ ಮಾರುಕಟ್ಟೆಯಲ್ಲಿ ನೆಲೆ ಸಿಗುತ್ತದೆ. ಇದು ಊರಿಗೆ ವಲಸೆ ಆಯಾಮ ನೀಡುತ್ತದೆ. ನೇಯ್ಗೆ, ಪತ್ತಲ, ಲಾಭ, ಖುಷಿ, ಸಿಕ್ಕು, ಚಿಂದಿ, ಕಿತ್ತಾಟ, ಬಡಿದಾಟ, ಮನುಷ್ಯನ ವಿಕಾರಕ್ಕೆ ವಿಸ್ತಾರ, ನೀತಿ, ಮೌಲ್ಯಗಳ ಮರು ನಿರೂಪಣೆಗಳಾಗುತ್ತವೆ. ಇದು ಈ ಕಾದಂಬರಿಯ ಮಿದುಳಿನ ಪದರಗಳು. ಜಾನಕಿ ಎಂಬ ಶ್ರಮಿಕ ಮಹಿಳೆಯ ಜೀವನ ಪಯಣ, ಮಗ, ಸೊಸೆಯಿಂದಲೇ ಕಿಲುಬಾದ ಬಂಗಾರತ್ತೆ, ತಿಪ್ಪನ ಬದುಕು ಕಲುಷಿತಗೊಂಡ ಪರಿ ಉಪ್ಪಾಗೆ ಮರದಂತೆ ಬೆಳೆಯುತ್ತದೆ. ಮನುಷ್ಯನ ವಿಕೃತಿ, ದುರಾಸೆ, ಅಪರೂಪದ ನೇವರಿಕೆ, ತಂಪಿನ ಅಲ್ಪ ವಿರಾಮ ಇವೆಲ್ಲವೂ ಇವರಿಬ್ಬರ ಕುಟುಂಬ ಹಾಗೂ ಉಪ್ಪಾಗೆ ಸ್ಥಿತಿಯೂ ಹೌದು. ಬಂಗಾರತ್ತೆ ಆಸ್ತಿ ಸ್ವಾಧೀನಕ್ಕೆ ಆಕೆಯ ಮಗ ಮತ್ತು ಸೊಸೆ ಬಂಗಾರತ್ತೆಯನ್ನು ಊರ ಹೊರಗೆ ಜೈಲಿಗೆ ದಬ್ಬುತ್ತಾರೆ. ಆತನ ಮಗ ನಾಟ ದಂಧೆಗೆ ಬಿದ್ದು, ಜೈಲುವಾಸಿಯಾಗುತ್ತಾನೆ. ಊರಿನ ಎಲ್ಲ ಮನೆಗಳ ಕೆಲಸಗಳ ಭಾರ ಇಳಿಸುವ ಜಾನಕಿ ವಿವಾಹದ ನಿರ್ಧಾರದಿಂದ ಪರಕೀಯಳಾಗುತ್ತಾಳೆ. ಕೆಲಸ ಕೊಡುವ ಅಧಿಕಾರದಿಂದ ತಿಪ್ಪನ ಮಗಳನ್ನು ಆಸ್ತಿಯಾಗಿಸಿ ಕೊಳ್ಳುವ ಬಂಗಾರತ್ತೆ ಮಗ, ಆಕೆಯನ್ನು ಆತ್ಮಹತ್ಯೆಗೆ ದೂಡುತ್ತಾನೆ. ಇದು ಕ್ರಿಯಾಪರ್ವ, ಅಂತರಂಗದ ನಿತ್ಯ ಪರೀಕ್ಷೆಯಾಗುವುದಿಲ್ಲ. ತಾತ್ಕಾಲಿಕ ನಿಲುಗಡೆಯ ಪಯಣವಾಗುತ್ತದೆ. ಅಂತಿಮವಾಗಿ ಕೃಷಿ ಪದವೀಧರೆ ಬಂಗಾರತ್ತೆಯ ಮೊಮ್ಮಗಳು ಜಾನಕಿಯ ಜೊತೆಗೂಡಿ ಉಪ್ಪಾಗೆ ಮರಗಳನ್ನು ಮತ್ತು ಊರಿನ ಸಂಸ್ಕೃತಿಯನ್ನು ಮರುಜೀವಗೊಳಿಸುವ ಸಂಕಲ್ಪ ಮಾಡುವುದರೊಂದಿಗೆ ಕಥೆ ಮುಕ್ತಾಯವಾಗುತ್ತದೆ. ಇಲ್ಲಿ ಹೆಣ್ಣು ಕುಟುಂಬಗಳಿಗೆ ಮುಖ್ಯ ಆಸರೆಯಾದರೆ ಗಂಡು ಪಾರಂಪರಿಕ ಪಾತ್ರಗಳಿಂದ ಕಳಚಿಕೊಳ್ಳುತ್ತಾನೆ. ಇಡೀ ಕಾದಂಬರಿಯಲ್ಲಿ ಹವ್ಯಕ ಒಳನುಡಿ ಪ್ರಧಾನ. **ಉಪ್ಪಾಗೆ ಹರಳು; ಲೇ: ಭಾರತಿ ಹೆಗಡೆ; ಪ್ರ: ಬಹುರೂಪಿ, ಬೆಂಗಳೂರು; ಪುಟ: 264; ಬೆಲೆ: 300 ರೂ.** ■



ಜೋಡಿ ಗೋವುಗಳ ನೋವು

ರವೀಂದ್ರ ಸಿಂಗ್
feedbacklvk@vijaykarnataka.com

ಒಂದು ಹೊಲದಲ್ಲಿ ಜೋಡಿ ಹಸುಗಳು ಬಿಸಿಲು ಗಾಳಿ ಎನ್ನದೆ ದುಡಿಯುತ್ತಿದ್ದವು. ಅದನ್ನು ಸಾಕಿದ್ದ ಯಜಮಾನ ಈ ಹಿಂದೆ ಜಾನುವಾರುಗಳ ಸಂತೆಯಲ್ಲಿ ದುಬಾರಿ ಬೆಲೆ ಕೊಟ್ಟುಕೊಂಡಿದ್ದ. ಆತನಿಗೆ ಆ ಹಣವನ್ನು ಹೇಗಾದರೂ ಮಾಡಿ ಹಸುಗಳ ದುಡಿಮೆಯಿಂದ ಗಳಿಸಬೇಕು ಎನ್ನುವ ದುರಾಲೋಚನೆ ಇತ್ತು. ಅವುಗಳಿಗೆ ನೀಡುವ ಮೇವನ್ನು ಸಹ ಆತ ಲೆಕ್ಕಾಚಾರ ಹಾಕುತ್ತಿದ್ದ. ಆ ಮೂಕ ಜೀವಿಗಳು 'ಕಡೆವರೆಗೂ ನಮಗೆ ಈ ದುಡಿಮೆ ತಪ್ಪಿದ್ದಲ್ಲ' ಎಂದು ಸುಮ್ಮನಾದವು. ಒಂದು ಮಧ್ಯಾಹ್ನ ಯಜಮಾನ ಹಸುಗಳಿಗೆ ಒಂದು ಹಿಡಿ ಒಣ ಹುಲ್ಲು ಹಾಕಿ ಉರಿ ಬಿಸಿಲಿನಲ್ಲೇ ಅವುಗಳನ್ನು ಗೂಟಕ್ಕೆ ಕಟ್ಟಿಹಾಕಿದ. ಹಸುಗಳಿಗೆ ಬಿಸಿಲ ಧಗೆ ತಡೆಯಲಾಗಲಿಲ್ಲ. ಬಾಯಿ ಒಣಗಿ ಕರುಳು ಹಿಂಡಿದಂತಾಗಿ ನೀರಿನ ದಾಹ ಹೆಚ್ಚಾಯಿತು. ಎರಡೂ ಹಸುಗಳು ತಮ್ಮ ಬಲ ಪ್ರಯೋಗಿಸಿ ಗೂಟಕ್ಕೆ ಕಟ್ಟಿದ್ದ ಹಗ್ಗವನ್ನು ತುಂಡರಿಸಿಕೊಂಡು ನೀರಿರುವ ಹೊಂಡದ ಕಡೆ ಹೊರಟವು.

ಅನತಿ ದೂರದಲ್ಲೇ ಒಂದು ನೀರಿನ ಹೊಂಡ ಕಾಣಿಸಿತು. ತಿಳಿಯಾದ ಆ ನೀರಿನ ಹೊಂಡದಲ್ಲಿ ಹಸುಗಳಿಗೆ ನೀರು ಕುಡಿಯುವಾಗ ಅಲ್ಲಿ ಕೆಲವು ಮೀನುಗಳು ಚಟುವಟಿಕೆಯಿಂದ ಅತ್ತಿಂದಿತ್ತ ಇತ್ತಿಂದತ್ತ ಸುಳಿದಾಡುತ್ತಿರುವ ದೃಶ್ಯ ಕಂಡುಬಂತು. ಒಂದು ಹಸು ಮೀನುಗಳಿಗೆ 'ನೀವು ಇಷ್ಟು ಸಂತೋಷದಿಂದ ಜೀವನ ನಡೆಸುತ್ತಿದ್ದೀರಿ. ನಿಮ್ಮ ಭಾಗ್ಯ ನಮಗೆ ದೊರೆತಿಲ್ಲವಲ್ಲ' ಎಂದಿತು. ಅವುಗಳಲ್ಲಿ ಒಂದು ಹಿರಿಯ ಮೀನು, 'ಗೋಮಾತೆ ನಿಮ್ಮ ಕಲ್ಪನೆ ತಪ್ಪು! ನಾವು ಸಂತೋಷವಾಗಿದ್ದೇವೆ ಎಂದು ನಿಮಗೆ ಯಾರು ಹೇಳಿದರು? ಈಗ ಬೇಸಿಗೆ ಶುರುವಾಗಿದೆ. ಹೊಂಡದ ನೀರು ಖಾಲಿಯಾಗಿಬಿಟ್ಟರೆ ನಮ್ಮ ಬದುಕು ಅಯೋಮಯ. ನಾವು ಸಾಯದೆ ಉಳಿಯುವುದಾದರೂ ಹೇಗೆ ಎಂಬ ಚಿಂತೆ ಒಂದು ಕಡೆಯಾದರೆ ಯಾವ ಸಮಯದಲ್ಲಿ ಕಟುಕನಾದವನು ಬಲೆ ಬೀಸಿ ನಮ್ಮನ್ನು ಹಿಡಿದುಕೊಂಡು ಹೋಗುವನೋ ಎಂಬ ಚಿಂತೆ ಮತ್ತೊಂದು ಕಡೆ' ಎಂದು ತಮ್ಮ ಅಳಲನ್ನು ತೋಡಿಕೊಂಡಿತು. ಹಸುಗಳು ನೀರು ಕುಡಿದು ಹಿಂದಿರುಗಿದವು. ಅಲ್ಲೊಂದು ಮರದ ಮೇಲೆ ಹಕ್ಕಿಗಳು ಹಣ್ಣು ತಿಂದು ಚಿಲಿಪಿಲಿ ಸದ್ದು ಮಾಡುತ್ತಾ ಕುಳಿತಿದ್ದವು. ಕೆಲವು ಹಕ್ಕಿಗಳು ಆಕಾಶದಲ್ಲಿ ರೆಕ್ಕೆಬಿಚ್ಚಿ ಹಾರಾಡುತ್ತಿದ್ದವು.

ಮಕ್ಕಳ ಕಥೆ

ಇದನ್ನು ನೋಡಿದ ಮತ್ತೊಂದು ಹಸು, 'ಹಕ್ಕಿಗಳೇ ನಿಮ್ಮ ಬದುಕು ಎಷ್ಟು ಸುಂದರ. ಬೇಕಾದ ಕಡೆ ಹಾರಿ ಹೋಗುವಿರಿ. ಸಿಕ್ಕ ಹಣ್ಣುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುವಿರಿ. ಮರದ ನೆರಳಲ್ಲಿ ಕಾಲ ಕಳೆಯುವಿರಿ. ನಿಮ್ಮಷ್ಟು ಸುಖ ನಮ್ಮದಾಗಲಿಲ್ಲವಲ್ಲ' ಎಂದು ತಮ್ಮ ಕೊರಗನ್ನು ತೋಡಿಕೊಂಡಿತು. ಗುಂಪಿನಲ್ಲಿದ್ದ ತಾಯಿಹಕ್ಕಿಯೊಂದು ಮಾತನಾಡಿ, 'ಕಾಮಧೇನುವೇ, ನಿಜ ಹೇಳಬೇಕೆಂದರೆ ನಿಮ್ಮದು ಸಾರ್ಥಕ ಜನ್ಮ. ಜಗತ್ತಿನಲ್ಲಿ ನಿಮ್ಮ ಹಾಲನ್ನು ಅಮೃತವೆಂದು ಪರಿಗಣಿಸಿದ್ದಾರೆ. ನೀವು ಕಷ್ಟಪಟ್ಟರೆ ಲೋಕಕ್ಕೆ ಅನ್ನ ಸಿಗುವುದು. ಶುಭ ಶಕುನವಾಗಿ ನಿಮ್ಮನ್ನು ಪೂಜಿಸುತ್ತಾರೆ. ನಿಮ್ಮ ಕುರಿತು ಹಾಡಿ ಹೊಗಳಿದ್ದಾರೆ' ಎಂದು ಹೇಳಿತು. ಮುಂದುವರಿದು, 'ನಮಗೆ ಇರಲು ಸರಿಯಾದ ತಾಣವಿಲ್ಲ, ಕಾಡೆಲ್ಲ ಬರಿದು ಮಾಡಿದ್ದಾರೆ. ಎಲ್ಲೆಲ್ಲೂ ಮಾನವನ ಹಸ್ತಕ್ಷೇಪ. ಗೂಡು ಕಟ್ಟಲು ಹರ ಸಾಹಸಪಡಬೇಕು. ಮೊಟ್ಟೆ ಇಟ್ಟರೆ ಹಾವುಗಳ ಕಾಟ. ಮರಿ ಮಾಡಿದರೆ ಗಿಡುಗಗಳ ಕಾಟ. ಮನುಷ್ಯ ಶಬ್ದ ಮಾಲಿನ್ಯ ಮಾಡಿ ನಮ್ಮ ಶಾಂತ ಬದುಕನ್ನು ಕಸಿದುಕೊಂಡಿದ್ದಾನೆ. ಹೇಳಿ ನಿಮಗೆ ಈ ಬಾಧೆ ಇದೆಯೇ' ಎಂದಿತು. ಮೀನು ಮತ್ತು ಹಕ್ಕಿಗಳ ವೇದನೆ ತುಂಬಿದ ಮಾತುಗಳ ಕೇಳಿಸಿಕೊಂಡ ಹಸುಗಳ ದೀನ ನಯನಗಳಲ್ಲಿ ನೀರು ತುಂಬಿ ಬಂತು. ಒಟ್ಟಿನಲ್ಲಿ ಮಾನವನಿಂದ ನಮಗೆಲ್ಲಾ ಒಂದಿಲ್ಲೊಂದು ರೀತಿಯಲ್ಲಿ ಹಿಂಸೆ ತಪ್ಪಿದ್ದಲ್ಲ ಎಂದು ನೊಂದುಕೊಂಡ ಜೋಡಿ ಹಸುಗಳು ಪ್ರಾಣಿ ಪಕ್ಷಿಗಳು ಭೂಮಿ ಮೇಲೆ ಸ್ವತಂತ್ರವಾಗಿ ಬದುಕುವ ಹಕ್ಕನ್ನು ಮನುಷ್ಯ ಏಕೆ ಕಸಿದುಕೊಂಡುಬಿಟ್ಟಿದ್ದಾನೆ ಎಂದು ಪ್ರಶ್ನಿಸಿಕೊಂಡವು. ಅಷ್ಟರಲ್ಲಿ ಯಜಮಾನನು ಕೈಲಿ ದೊಣ್ಣೆ ಹಿಡಿದು ಹಸುಗಳ ಹುಡುಕಿ ಬರುತ್ತಿದ್ದ. ಇದನ್ನು ಕಂಡ ಆ ಹಸುಗಳು ಭಯಭೀತಗೊಂಡು ಅಲುಗಾಡದೆ ಒಂದು ಕಡೆ ನಿಂತುಬಿಟ್ಟವು. ■

ಜೀವ ವೈವಿಧ್ಯ

ಚಮರೀ ಮೃಗ

ಇದು ಕಾಡು ಎಮ್ಮೆಯಂತಹ ಅಸ್ಥಿಪಂಜರ, ಹಸುವಿನ ತಲೆ, ಕುದುರೆಯ ಬಾಲ ಮತ್ತು ಮೇಕೆಯಂತಹ ಕೂದಲನ್ನು ಹೊಂದಿದೆ. ಹಂದಿಯಂತೆ ಗೊಣಗುತ್ತದೆ! ಕ್ರಿಸ್ತಪೂರ್ವ ಮೊದಲ ಸಹಸ್ರಮಾನದಿಂದಲೂ ಟಿಬೆಟ್‌ನಲ್ಲಿ ಯಾಕ್‌ಗಳನ್ನು ಸಾಕಲಾಗುತ್ತಿದೆ. ತನ್ನ ದಪ್ಪನೆಯ ಉಣ್ಣೆ, ಹೆಚ್ಚಿನ ಶ್ವಾಸಕೋಶದ ಸಾಮರ್ಥ್ಯ ಮತ್ತು ಒರಟಾದ ಭೂಪ್ರದೇಶಗಳಲ್ಲಿ ಚುರುಕಾಗಿ ಏರುವ ಸಾಮರ್ಥ್ಯದಿಂದಾಗಿ ಇದು ಎತ್ತರದ ಪ್ರದೇಶಗಳಲ್ಲಿ ವಾಸಿಸಲು ಅತ್ಯಂತ ಸೂಕ್ತವಾಗಿದೆ. ಅದರ ರಕ್ತದ ಕಣಗಳು ಸಹ ಎತ್ತರದ ಪ್ರದೇಶಗಳಿಗೆ ಪೂರಕವಾಗಿ ವಿನ್ಯಾಸಗೊಂಡಿವೆ. ಇದು –40 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ ತಾಪಮಾನದಲ್ಲೂ ಬದುಕಬಲ್ಲದು. ■

ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ 120 ದೇಶಗಳಲ್ಲಿ ತೈಲ ಬೆಲೆ ಏರಿಕೆ

ಭಾರತದಲ್ಲಿ ಮಾತ್ರ ಇಂಧನ ದರ ಸ್ಥಿರ

ಹೊಸದಿಲ್ಲಿ: ಮಧ್ಯಪ್ರಾಚ್ಯ ಸಂಘರ್ಷದಿಂದ ಜಾಗತಿಕವಾಗಿ ಇಂಧನ ದರ ಗಣನೀಯ ಹೆಚ್ಚಳವಾಗಿದೆ. ಹೀಗಾಗಿ 120ಕ್ಕೂ ಹೆಚ್ಚು ದೇಶಗಳು ಇಂಧನ ಬೆಲೆಗಳನ್ನು ಏರಿಸಿವೆ. ಆದರೆ ಭಾರತ ಮಾತ್ರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಸದೇ, ಜಾಗತಿಕ ಇಂಧನ ಮಾರುಕಟ್ಟೆ ಏರಿಳಿತದ ಬಿಸಿ ಗ್ರಾಹಕರಿಗೆ ತಾಕದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಕಳೆದ ನಾಲ್ಕು ವರ್ಷಗಳಿಂದಲೂ ದೇಶದಲ್ಲಿ ಇಂಧನ ಬೆಲೆ ಹೆಚ್ಚಳವಾಗಿಲ್ಲ.



ಎಲ್ಲಿ, ಎಷ್ಟು ಏರಿಕೆ?

ದಕ್ಷಿಣ, ಆಗ್ನೇಯ ಏಷ್ಯಾ	30%-50%
ಉತ್ತರ ಅಮೆರಿಕ	30%
ಯುರೋಪ್	20%

2,400 ಕೋಟಿ. ರೂ- ಭಾರತದ ಸರಕಾರಿ ಸ್ವಾಮ್ಯದ ಭಾರತೀಯ ತೈಲ ಕಂಪನಿಗಳಾದ ಐಒಸಿ, ಬಿಪಿಸಿಎಲ್, ಎಚ್‌ಪಿಸಿಎಲ್‌ಗೆ ಪ್ರತಿದಿನ ಆಗುತ್ತಿರುವ ನಷ್ಟ

ಮಧ್ಯಪ್ರಾಚ್ಯ ಸಂಘರ್ಷ ಪ್ರಾರಂಭವಾದಾಗಿನಿಂದ ಹರ್ಮುಜ್ ಜಲಸಂಧಿಯಲ್ಲಿ ಉಂಟು ಮಾಡಿರುವ ಅಡೆತಡೆಗಳಿಂದ ಬ್ರೆಂಟ್ ಕಚ್ಚಾ ತೈಲ ಪೂರೈಕೆಗೆ ಅಡೆತಡೆಗಳು ಉಂಟಾದವು. ಇದರಿಂದ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಏರುಗತಿಯಲ್ಲೇ ಇದೆ. ಒಂದು ಹಂತದಲ್ಲಿ ಪ್ರತಿ ಬ್ಯಾರೆಲ್‌ಗೆ 126 ಡಾಲರ್ ಮುಟ್ಟಿತ್ತು. ಈ ಬೆಲೆ ಹೆಚ್ಚಳದ ಬಿಸಿ ತಾಳಲಾಗದೇ 120ಕ್ಕೂ ಹೆಚ್ಚು ದೇಶಗಳು ಇಂಧನ ಬೆಲೆ ಹೆಚ್ಚಿಸಿವೆ ಎಂದು ಗ್ಲೋಬಲ್ ಪೆಟ್ರೋಲ್ ಪ್ರೈಸ್ ಡಾಟ್‌ಕಾಮ್ ವರದಿ ಮಾಡಿದೆ.

ನೆರೆ ದೇಶಗಳಾದ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಶ್ರೀಲಂಕಾದ ನಾಗರಿಕರು ದಾಖಲೆ ಮಟ್ಟದ ಇಂಧನ ಬೆಲೆ ಏರಿಕೆಯಿಂದ ತತ್ತರಿಸುತ್ತಿದ್ದಾರೆ. ಭಾರತವು ತನ್ನ ನಾಗರಿಕರ ಮೇಲೆ ಬೆಲೆ ಏರಿಕೆ ಭಾರವನ್ನು ವರ್ಗಾಯಿಸಿಲ್ಲ. ಆ ಹೊರೆಯನ್ನು ತನ್ನ ಹಣಕಾಸಿನ ಬಲದಿಂದಲೇ ನಿರ್ವಹಿಸುವ ಹಾದಿಯನ್ನು ಹಿಡಿದಿದೆ. ಹಲವು ಸವಾಲು ಮತ್ತು ಪ್ರತಿರೋಧದ ನಡುವೆಯೂ ಪ್ರಧಾನಿ ನರೇಂದ್ರ ಮೋದಿ ಈ ಹಾದಿಯಲ್ಲಿ ಅಚಲವಾಗಿ ಮುನ್ನಡೆಯುತ್ತಿದ್ದಾರೆ.

ಸಾರ್ವಜನಿಕರನ್ನು ಹಣದುಬ್ಬರದಿಂದ ಕಾಪಾಡಲು ಕೇಂದ್ರ ಸರಕಾರ ಬೆಲೆ ಏರಿಕೆಗೆ ಕಡಿವಾಣ ಹಾಕುತ್ತಿದೆ. ಆಹಾರ ಮತ್ತು ಸರಕುಗಳ ಸಾಗಣೆ ವೆಚ್ಚವು ಹೆಚ್ಚಾಗಿ ಡೀಸೆಲ್ ಮೇಲೆ ಅವಲಂಬಿತವಾಗಿರುವುದರಿಂದ ಬೆಲೆ ಏರಿಕೆಯು ಸೀಮಿತವಾಗಿರುವುದಿಲ್ಲ. ಅದು ಸರಣಿ ಪರಿಣಾಮಗಳಿಗೆ ಕಾರಣವಾಗುತ್ತದೆ. ಇದನ್ನು ಅರಿತು ಸರಕಾರ ಈ ಒತ್ತಡವನ್ನು ಸರಕಾರಿ ಸ್ವಾಮ್ಯದ ಕಂಪನಿಗಳೇ ಭರಿಸುವಂತೆ ಶ್ರಮ ವಹಿಸುತ್ತಿದೆ. ಆದರೂ ಮುಂದಿನ ದಿನಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎಂದು ಇತ್ತೀಚೆಗೆ ಸರಕಾರಿ ಮೂಲಗಳು ತಿಳಿಸಿವೆ.

ಜುಲೈವರೆಗೆ ಏರ್ ಇಂಡಿಯಾ ಅಂತಾರಾಷ್ಟ್ರೀಯ ಸೇವೆ ಕಡಿತ

ಹೊಸದಿಲ್ಲಿ: ಜೆಟ್ ಇಂಧನ ಬೆಲೆ ಏರಿಕೆಯಿಂದಾಗಿ ಟಾಟಾ ಒಡೆತನದ ಏರ್ ಇಂಡಿಯಾ ಮೇ ತಿಂಗಳಿನಿಂದ ಜುಲೈ ತನಕ ತನ್ನ ಅಂತಾರಾಷ್ಟ್ರೀಯ ವಿಮಾನ ಸೇವೆಗಳನ್ನು ಕಡಿತಗೊಳಿಸಲು ತೀರ್ಮಾನಿಸಿದೆ.

''ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ವಾಯು ಪ್ರದೇಶ ನಿರ್ಬಂಧದಿಂದಾಗಿ ವಿವಿಧ ದೇಶಗಳ ಹಾರಾಟ ಮಾರ್ಗ ಸುದೀರ್ಘ ಎಂದೆನಿಸುತ್ತಿದೆ. ಇದರಿಂದ ಇಂಧನ ಬಳಕೆ ಹೆಚ್ಚುತ್ತಿದೆ. ಇದರ ಪರಿಣಾಮದಿಂದ ಕಳೆದ ಹಣಕಾಸು ವರ್ಷದಲ್ಲಿ ಏರ್ ಇಂಡಿಯಾ ಗ್ರೂಪ್ 22 ಸಾವಿರ ಕೋಟಿ ರೂ. ನಷ್ಟಕ್ಕೀಡಾಗಿದೆ. ಈ ಏರ್‌ಲೈನ್ಸ್‌ನ ಹಲವು ಅಂತಾರಾಷ್ಟ್ರೀಯ ವಿಮಾನಗಳು ಲಾಭದಾಯಕವಾಗಿಲ್ಲ, ಇವುಗಳನ್ನು ಮುಂದುವರಿಸಿದರೆ ನಷ್ಟದ ಪ್ರಮಾಣ ಏರಿಕೆಯಾಗುತ್ತದೆ,'' ಎಂದು ಏರ್ ಇಂಡಿಯಾದ ನಿರ್ಗಮಿತ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಕ್ಯಾಂಪ್‌ಬೆಲ್ ವಿಲ್ಸನ್ ಹೇಳಿದ್ದಾರೆ. ಈ ವರ್ಷಾಂತ್ಯದಲ್ಲಿ ಹುದ್ದೆಯನ್ನು ತೆರವು ಮಾಡುವುದಾಗಿ ಅವರು ಈಗಾಗಲೇ ಘೋಷಿಸಿದ್ದಾರೆ.

''ಜಾಗತಿಕ ಮಾರುಕಟ್ಟೆಯಲ್ಲಿ ವಿಮಾನ ಇಂಧನ ದರ ಏರುಗತಿಯಲ್ಲಿದೆ. ಇದರಿಂದ ನಮ್ಮ ನಿರ್ವಹಣಾ ವೆಚ್ಚ ಶೇ. 30-40ರಷ್ಟು ಜಿಗಿದಿದೆ. ನಿಜಕ್ಕೂ ನಮ್ಮ ಪಾಲಿಗೆ ಇದೊಂದು ದೊಡ್ಡ ಹೊರೆಯಾಗಿ ಪರಿಣಮಿಸಿದೆ. ವಿಮಾನ ಹಾರಾಟ ಕಡಿಮೆ ಮಾಡುವುದಷ್ಟೇ ನಮಗೆ ಉಳಿದಿರುವ ಮಾರ್ಗ. ಇಂಧನ ಬೆಲೆಯಲ್ಲಿ ಸ್ಥಿರತೆ ಮತ್ತು ವಾಯುಪ್ರದೇಶ ನಿರ್ಬಂಧ ತೆರವಿನ ನಂತರ ನಮ್ಮ ಕಾರ್ಯಾಚರಣೆ ಸಹಜ ಸ್ಥಿತಿಗೆ ಬರುತ್ತದೆ,'' ಎಂದು ತಿಳಿಸಿದ್ದಾರೆ. ಬಿಕ್ಕಟ್ಟಿನ ಸಂದರ್ಭದಲ್ಲೂ ಒಗ್ಗಟ್ಟು ಕಾಪಾಡಿಕೊಳ್ಳುವಂತೆ ಸಿಬ್ಬಂದಿಗೆ ಅವರು ಕರೆ ನೀಡಿದ್ದಾರೆ.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562123
ದೂರವಾಣಿ ಸಂಖ್ಯೆ: 080-23718487
ಇ-ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/04/2026-27 ದಿನಾಂಕ: 02/05/2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ ಹಾಗು ನಗರಸಭಾ ನಿಧಿ ಅಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

Indent: 57843 (ST Reserved), Indent: 57845 (Others), Indent: 57853 (Others), Indent: 57855 (Others) & Indent: 57856 (Others).

ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: 08-05-2026 ಸಂಜೆ 5.30 ಗಂಟೆಯವರೆಗೆ, ಕೆ.ಪಿ.ಪಿ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: 11-05-2026 ಸಂಜೆ 5.30 ಗಂಟೆಯವರೆಗೆ ಹಾಗೂ ಸಲ್ಲಿಸಿರುವ ಟೆಂಡರ್‌ಗಳ ಬಿಡ್ ತೆರೆಯುವ ದಿನಾಂಕ 13-05-2026 ಬೆಳಿಗ್ಗೆ 11.00 ಗಂಟೆಗೆ

ಸದರಿ ಟೆಂಡರ್‌ಗೆ ಸಂಬಂದಿಸಿದಂತೆ ಯಾವುದಾದರು ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟ್‌ಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-
ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/474/ಎಸ್‌ಎಂಸಿಎಲ್/2026-27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋ.ಇ ವಿಭಾಗ, ಶಿವಮೊಗ್ಗ
ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಎಇ-1/ಐಎಫ್‌ಟಿ-05/2026-27
ದಿನಾಂಕ: 30-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:04-05-2026 ರಿಂದ 11-05-2026 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ-ಬಂಡವಾಳ ವೆಚ್ಚ ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು

1. ಶಿಕಾರಿಪುರ ತಾಲ್ಲೂಕು 1 ಕಾಮಗಾರಿ (ಇಡೆಂಟ್ ಸಂ:35905) ಪ್ರವರ್ಗ-2 (ಎ) ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು
2. ಶಿಕಾರಿಪುರ ತಾಲ್ಲೂಕು 1 ಕಾಮಗಾರಿ (ಇಡೆಂಟ್ ಸಂ:35907)

ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು

3. ಶಿಕಾರಿಪುರ ತಾಲ್ಲೂಕು 3 ಕಾಮಗಾರಿ (ಇಡೆಂಟ್ ಸಂ:35904, 35906 & 35903) ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : 09 ತಿಂಗಳುಗಳು

ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು, ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182- 274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-25501216/ 080-25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/04/05/172

ರೋಹಿತ್ ಜೈನ್ ಆರ್‌ಬಿಐ ಡೆಪ್ಯೂಟಿ ಗವರ್ನರ್

ಹೊಸದಿಲ್ಲಿ: ಕೇಂದ್ರ ಸರಕಾರ ಆರ್‌ಬಿಐ ಡೆಪ್ಯೂಟಿ ಗವರ್ನರ್ ಆಗಿ ರೋಹಿತ್ ಜೈನ್ ಅವರನ್ನು ನೇಮಿಸಿದೆ. ಅವರ ಅಧಿಕಾರಾವಧಿ 3 ವರ್ಷಗಳ ತನಕ ಇರುತ್ತದೆ. ಆರ್‌ಬಿಐ ಕರೆನ್ಸಿ ನಿರ್ವಹಣೆ ಮತ್ತು ಹಣಕಾಸು ವ್ಯವಸ್ಥೆಯ ಸ್ಥಿರತೆಯ ಮೇಲೆ ಗಮನ ಹರಿಸುತ್ತಿರುವ ಸಮಯದಲ್ಲಿ ಈ ಹೊಸ ನೇಮಕಾತಿ ಆಗಿದೆ. ಜೈನ್ ಸದ್ಯ ಆರ್‌ಬಿಐ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದರು. ಈ ಸ್ಥಾನದಲ್ಲಿದ್ದ ಟಿ. ರಬಿಶಂಕರ್ ಕಳೆದ ತಿಂಗಳು ನಿವೃತ್ತರಾಗಿದ್ದರು.

''ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳಿಂದ ಜಾಗತಿಕವಾಗಿ ಆರ್ಥಿಕ ಹಿನ್ನಡೆ ಉಂಟಾಗಿದೆ. ಆದರೆ ಭಾರತದಲ್ಲಿ ಮಾತ್ರ ಬೆಳವಣಿಗೆಯಲ್ಲಿ ಸ್ಥಿರತೆ ಸಾಧಿಸಲಾಗಿದೆ. ಬಂಡವಾಳ ವೆಚ್ಚದ ಮೇಲೆ ಸರಕಾರ ಹೆಚ್ಚು ಗಮನ ಹರಿಸಿದೆ. ಖಾಸಗಿ ಹೂಡಿಕೆಯನ್ನು ಉತ್ತೇಜಿಸಲು ಮತ್ತು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಆದ್ಯತೆ ನೀಡಿದೆ. ತೈಲ ಬಿಕ್ಕಟ್ಟು ಹೊಸ ಸವಾಲುಗಳನ್ನು ತಂದೊಡ್ಡುತ್ತಿರುವ ಕಾಲಘಟ್ಟದಲ್ಲಿ ರೋಹಿತ್ ಜೈನ್ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುವ ವಿಶ್ವಾಸವಿದೆ,'' ಎಂದು ಹಣಕಾಸು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅಡಿಗಾಸ್ ಯಾತ್ರಾದಿಂದ ಭಾರಿ ರಿಯಾಯಿತಿ

ಬೆಂಗಳೂರು: ಅಡಿಗಾಸ್ ಯಾತ್ರಾ ನಮ್ಮ ಗ್ಯಾರಂಟಿ ಯೋಜನೆ ಅಡಿಯಲ್ಲಿ ವಿದೇಶಿ ಪ್ರವಾಸಗಳಿಗೆ 2 ಸಾವಿರ ರೂ.ನಿಂದ 20 ಸಾವಿರ ರೂ. ತನಕ ಡಿಸ್ಕೌಂಟ್ ನೀಡುತ್ತಿದೆ. ಇದನ್ನು ಬಳಸಿಕೊಳ್ಳದಿದ್ದರೆ ದೇಶೀಯ ಪ್ರವಾಸದಲ್ಲಿ ಇದರ ಜತೆ ಇನ್ನೂ 5 ಸಾವಿರ ರೂ. ಹೆಚ್ಚುವರಿ ಕೊಡುಗೆಯನ್ನು ಪಡೆಯಬಹುದು ಎಂದು ಅಡಿಗಾಸ್ ಯಾತ್ರಾ ಸಂಸ್ಥಾಪಕ ಕೆ. ನಾಗರಾಜ ಅಡಿಗ ತಿಳಿಸಿದ್ದಾರೆ. ಮಧ್ಯಪ್ರಾಚ್ಯ ಬಿಕ್ಕಟ್ಟು, ರೂಪಾಯಿ ಮೌಲ್ಯ ಕುಸಿತದಿಂದ ಅಂತಾರಾಷ್ಟ್ರೀಯ ಪ್ರವಾಸ ದುಬಾರಿಯಾಗಿದೆ. ಆದರೂ ನಾವು ರಿಯಾಯಿತಿ ಆಫರ್ ನೀಡುತ್ತಿದ್ದೇವೆ. ಅಡಿಗಾಸ್ ಯಾತ್ರೆ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ನಮ್ಮ ಪಾಲಿಗೆ ಪ್ರವಾಸಿಗರೇ ಪ್ರಭುಗಳು,'' ಎಂದು ತಿಳಿಸಿದ್ದಾರೆ. ಆಸಕ್ತರು ಹೆಚ್ಚಿನ ಮಾಹಿತಿಗೆ 080 26616678 /7022259008 / 9449478944 ಸಂಖ್ಯೆಗಳನ್ನು ಸಂಪರ್ಕಿಸಬಹುದು.

PUBLIC NOTICE

The general public is hereby informed that our client intends to purchase certain land parcels situated at Doddanagamangala Village, Begur Hobli, Bangalore South Taluk, Bangalore District, more fully set out in the Schedule below and hereinafter referred to as **'Schedule Property'**. The details of the Schedule Property along with the respective landowner's names are more fully described in the **Schedule** below.

Any person/s having objection/s to the above mentioned transaction or any person/s claiming to have any manner of right, title, interest, claim or demand in relation to the Landowners' and/or the Schedule Property or any part thereof, may lodge his/her/their statement/s, objection/s and/or claim/s in writing, along with documentary evidence in support thereof, with the undersigned, within 10 (Ten) days from the date of publication of this notice. In the absence of any genuine and/or rightful objections and/or claims, our client will proceed to finalize and conclude the proposed transaction in respect of the Schedule Property with the Landowners as if no claim/s or objection/s exist and that they have been consciously waived and abandoned by such person/s forever.

SCHEDULE

All that piece and parcel of immovable property land situated at Doddanagamangala Village, Begur Hobli, Bangalore South Taluk, Bangalore District, more fully described in the table below:

Sl Nos	Survey Number	Extent Acres	Extent Guntas	Boundary		Landowner name
1	40/4	0	4	East	Narayana Reddy's land;	Pavuluri Laxmi Bhavani w/o N Swamy Damacherla, C. Neelima w/o Venkata Seshaiah, Chinta Bhuvanasankar Das s/o Chinta Venkatadas, Chinta Praveen Das s/o Chinta Venkatadas, Srikumar Anamala s/o late A chnadrababu, Saravanan Payani s/o late A Payani, P. Balaji s/o late A Payani, V. Sankar s/o Veerapathiram and Nulu Subramnayam s/o Nulu Venkataramaiah
				West	Gurreddy Obala Reddy's land;	
				North	Krishna Reddy's land; and	
				South	Obala Reddy's land.	
2	40/5	0	31	East	Jayarama Reddy's land;	M Adilakshmi w/o M Subramanyam Reddy, V. Hemadri s/o late V Nallama Naidu, S. Gunavathi w/o B Narasimha Reddy, Kallam Subba Reddy s/o Basivi Reddy, Bhimavarapu Priyanka w/o Bhimavarapu Venkata Naga Vijay Kumar Reddy, Villa Vijaya Varalakshmi w/o Villa Bhaskara Rao, Villa Srinivasa Rao s/o Sriramulu, Nagamani Chiluvuri w/o Sivakumar Raju Chiluvuri, Sangeetha G w/o Gopalakrishnan, Chavalli Sheshukumar s/o Subrahmanya Sarma, K Jyothi w/o late Kannaiah
				West	Muniraja Reddy's land;	
				North	Krishna Reddy's land; and	
				South	Jayarama Reddy's land.	
3	40/6	0	13	East	Chikka Gurureddy Hanumaiah's land;	1. M Subramanyam reddy s/o late M Chinnabba Reddy, 2. Velkuri Hemanth Kumar s/o V Vishwanatha Reddy, 3. R Thirumavalavan s/o A Rathinasamy, 4. A Rama w/o A Mohan Naidu
				West	Chikka Nagappa's land;	
				North	Chikka Nagappa's land; &	
				South	Thayappa's land.	
4	40/7	0	12	East	Survey No. 40/8;	J. Dhanush Reddy
				West	Survey Nos. 40/5 & 40/6;	
				North	Survey No. 40/11; and	
				South	Survey No. 45/4.	
5	40/8	0	11	East	Survey No. 40/14 belonging to M. R. Doreswamy Naidu;	Govindu Mahesh Babu s/o Govindu Thulasi Eshwaraiah, Debasis Swain s/o late Gopabandhu Swain, Devireddy Hariharanatha Reddy s/o D Mal Reddy, M. Ananda Krishnan s/o C K Munivenkatesam Chetty, P. Sunitha w/o V Bhaskar
				West	Survey No. 40/7;	
				North	Survey No. 40/11belonging to Lokanath and Pillappa; and	
				South	Land belonging to M. R. Doreswamy Naidu.	
6	40/9	0	19	East	Private Property;	Vijay Sharath Goalla s/o G N V Ramana, Prathibha Anugu w/o Vijay Sharath Goalla, Ganji Meghanath s/o Gopala Reddy G, S Radhakrishnaiah s/o S Ramakrishnaiah, Gangadhar Thota s/o Satyanarayana, Ramesh Mandarapu s/o Mandarapu Papa Rao, Yerri Jagadeesh s/o Yerri Narasimha Rao, Chavali Seshukumar s/o Subrahmanya Sarma, Kathi Madhu Babu s/o Kathi Chinna Ramudu, Buddhi Rajya Lakshmi w/o Murali Krishna Buddhi
				West	Vijaykumar's land;	
				North	K. Kanakaraj's land; and	
				South	Private Property.	
7	40/14	0	7	East	M. R. Doreswamy's land	P. Sreekanth, s/o P. Narayana Reddy and C. Chakradhar Reddy, s/o C. Manohar Reddy.
				West	Survey No. 40/8;	
				North	Pillappa & Madappa's land; and	
				South	M. R. Doreswamy's land.	
8	40/15	0	32	East	Survey No. 40/4,40/15 and 40/18;	C Somashekar s/o Late M C Chandrappa
				West	Remaining portion of Survey No. 40/13;	
				North	Land bearing Survey No.40/4 belongs to Pavulari Laxmi Bhavani and others; and	
				South	Government Road.	
9	40/17	0	8	East	Survey No. 40/3 and 40/15;	Sridevi Nimmakayala w/o Rajanikanth Pasupuleti, Kavitha Prabhu, w/o Prabhu, Jothi Suresh w/o Suresh, M Latha w/o Babu,
				West	Survey No. 40/15;	
				North	Survey No. 40/18; and	
				South	Road.	
10	40/18	0	20	East	Survey No. 40/5;	Pavuluri Laxmi Bhavani w/o N. Swamy Damacherla, C. Neelima w/o C. Venkata seshaiah, Chinta Bhuvanasankar Das s/o Chinta Venkatadas, Chinta Praveen Das s/o Chinta Venkatadas, Srikumar Anamala s/o late A Chnadrababu, Saravanan Payani s/o late A. Payani, P. Balaji s/o late A. Payani, V. Sankar s/o Veerapathiram and Nulu Subramnayam s/o Nulu Venkataramaiah
				West	Survey Nos. 40/15 & 40/17;	
				North	Survey No. 40/4; and	
				South	Survey Nos. 40/3 & 40/17.	
11	45/1	0	19	East	Survey No.45/5;	K. Ananda Kumar, S/o B Kuppuswamy Naidu
				West	Survey No.45/4;	
				North	Survey Nos. 47/1B,47/6, 47/8 & 40/9	
				South	Survey No. 44.	
12	45/2	0	13.5	East	Survey No. 45/3;	Suresh Kumar s/o P Govinda Chetty, Rajanikanth Pasupuleti s/o P Venkataswamy, Sridevi Nimmakayala w/o Rajanikanth Pasupuleti, Vijay Sharath Goalla s/o G N V Ramana, Prathibha Anugu w/o Vijay Sharath Goalla, E Ramesh s/o E Chinnamma Reddy, V Hemadri s/o Late V Nalamma Naidu, G H Jhansi Priya w/o M Venkatesh, C. M. Venkatesulu s/o late C. Munirathnam Chetty, D.P Kumar s/o D Purushotham Naidu, Samala Sreekanth Reddy s/o Samala Jaganmohan Reddy, Ganta Venkata Madhusudhan Rao s/o Ganta Venkata Srihari Rao, N Uma Sandhya w/o Ugandhar Arani, Madhuri Yaragani w/o Chinnibabu Yaragani, Parimala Gowri Tata w/o Kiran Kumar Tata, Bezawada Ashok s/o Bezawada Nageshwara Rao, Vishnu Priyanka Eluri w/o Ashok Bezawada, Prabhu Venugopal s/o late Venugopal, Purushotham Veera Venkata Satyanarayana s/o Venkateswara Rao Purushotham, Mohan Makana s/o M. Venkatarao, Suresh. R s/o Ramalingam and Battina Venkata Kishore s/o Battina Suryanarayana
				West	Survey No. 45/5;	
				North	Survey No. 47/1A1; and	
				South	Survey No. 41.	
13	45/3	0	34	East	Private property;	Suresh Kumar s/o P Govinda Chetty, Rajanikanth Pasupuleti s/o P Venkataswamy, Sridevi Nimmakayala w/o Rajanikanth Pasupuleti, Vijay Sharath Goalla s/o G N V Ramana, Prathibha Anugu w/o Vijay Sharath Goalla, E Ramesh s/o E Chinnamma Reddy, V Hemadri s/o Late V Nalamma Naidu, G H Jhansi Priya w/o M Venkatesh, C. M. Venkatesulu s/o late C. Munirathnam Chetty, D.P Kumar s/o D Purushotham Naidu, Samala Sreekanth Reddy s/o Samala Jaganmohan Reddy, Ganta Venkata Madhusudhan Rao s/o Ganta Venkata Srihari Rao, N Uma Sandhya w/o Ugandhar Arani, Madhuri Yaragani w/o Chinnibabu Yaragani, Parimala Gowri Tata w/o Kiran Kumar Tata, Bezawada Ashok s/o Bezawada Nageshwara Rao, Vishnu Priyanka Eluri w/o Ashok Bezawada, Prabhu Venugopal s/o late Venugopal, Purushotham Veera Venkata Satyanarayana s/o Venkateswara Rao Purushotham, Mohan Makana s/o M. Venkatarao, Suresh. R s/o Ramalingam and Battina Venkata Kishore s/o Battina Suryanarayana
				West	Narayana Reddy's land;	
				North	K. V. Appanna Reddy's land; and	
				South	Dasappa's land.	
14	45/4	0	19	East	Survey No. 45/1;	H Krishna Reddy s/o Hanumaiah
				West	Survey No. 40/6;	
				North	Survey Nos. 40/7, 40/8 & 40/14 & 40/6; and	
				South	Survey Nos. 42, 43 and 44.	
15	45/5	0	13.5	East	Survey No. 45/2;	Suresh Kumar s/o P. Govinda Chetty, Rajanikanth Pasupuleti s/o P. Venkataswamy, Sreedevi Nimmakayala w/o Rajanikanth Pasupuleti, Vijay Sharath Goalla s/o G. N. V Ramana, Prathibha Anugu w/o Vijay Sharath Goalla, E. Ramesh s/o E. Chinnamma Reddy, V Hemadri s/o Late V Nalamma Naidu, G H Jhansi Priya w/o M. Venkatesh, C. M Venkatesulu s/o Late C. Munirathnam Chetty, D.P Kumar s/o D Purushotham Naidu, Samala Sreekanth Reddy s/o Samala Jaganmohan reddy, Ganta Venkata Madhusudhan Rao s/o Ganta Venkata Srihari Rao, N Uma Sandhya w/o Ugandhar Arani, Madhuri Yaragani w/o Chinnibabu Yaragani, Parimala Gowri Tata w/o Kiran Kumar Tata, Bezawada Ashok s/o Bezawada Nageshwara Rao, Vishnu Priyanka Eluri w/o Ashok Bezawada, Prabhu Venugopal s/o late Venugopal, Purushotham Veera Venkata Satyanarayana s/o Venkateswara Rao Purushotham, Mohan Makana s/o M. Venkatarao, Suresh R s/o amalingam, Battina Venkata Kishore s/o Battina Suryanarayana
				West	Survey Nos. 45/1 & 44;	
				North	Survey Nos. 45/1, 47/1A1, 47/6, 47/7; and	
				South	Survey No. 41.	
16	46/2	1	0	East	Remaining extent of Sy no. 46 ;	Kolla Manoj s/o K. Rajagopal Naidu, Kolla Gowri w/o Kolla M.anoj, K Harish s/o Kolla Manoj, S. Shyla w/o A. S Vinothanandan, Sarakallu Srikar s/o S Chandrasekar Reddy, S. Gejalakshmi w/o Eswaran, Naga Babu Parsi s/o Ammanna Rao Parsi, Chinta Bhuvanasankar Das s/o Chintavenkatadas, Chinta Praveen Das s/o Chinta Venkatadas, Villa Vijaya Varalakshmi w/o Villa Bhaskara Rao, P. Devipriya w/o Vasudev. S, Naveen Babu Garla s/o G. Balaramaiah, Sunil Kumar N s/o Neelamegan N. K. Kadirappa Aggile s/o A. Munaswamy
				West	Survey Nos. 45/3, 47/2, 47/1A2;	
				North	Survey Nos. 47/4 and 47/1A3;	
				South	Survey Nos. 36 & 45/3.	
17	47/1A1	0	24	East	Survey Nos. 47/1A2, 47/2, 47/4, 47/5;	Rajanikanth Pasupuleti, s/o of P.Venkataswamy, Vijay Sharath Goalla, s/o G. N. V. Ramana, Mahesh Ganti, s/o G. Rama Mohana Rao, Satya Lakshmi Krishna Ganesh Mynampati, s/o Late Hrushikesa Rao, Vunnam Manoj Kumar Reddy, s/o Vunnam Venkata Reddy, Singarapu Vinay Kumar s/o of Singarapu Chandraiah, Bhimavarapu Priyanka, w/o Bhimavarapu Venkata Naga Vijaya Kumar Reddy, Prabhakar. N, s/o of Late N. Krishnaiah, Vinod Kumar Gunda, s/o of Gunda Satyanarayana and Villa Bhaskara Rao, s/o of Sriramulu
				West	Survey No.47/1B and 47/7;	
				North	Survey No.48/6; &	
				South	Survey Nos. 45/2 , 45/3 and 45/3.	
18	47/1A2	0	4	East	Survey No. 46 and 47/1A3;	B. Anjaneyulu, Chetty, s/o Radha Krishnaiah Chetty
				West	Property belonging to Krishna Reddy;	
				North	47/4; &	
				South	Survey No. 47/2.	
19	47/4	0	12	East	Property of Muni Reddy;	P. Suresh Kumar, s/o of P. Govinda Chetty, Y. D. Kesavulu Reddy, s/o of Y. Dora Swamy Reddy, G. S. Janikirami Reddy, s/o of late G. Sriramulu Reddy, S. Sheela, w/o M. Chandra Mohan, S. Shyla, w/o A. S. Vonothanandan and Neesha K, w/o M. Vinayagamoorthy
				West	Property of Doddamuni Reddy;	
				North	Property of Hanumappa Reddy; and	
				South	Property of H. Krishna Reddy.	
20	47/5	0	8	East	Property of Krishna Reddy;	R. Mahesh, s/o of R. Rajendra Nayudu, Ashwini G, d/o Guruswamy and V. Hemadri, s/o of V. Nallama Naidu.
				West	Property of Munireddy;	
				North	Property of Krishna Reddy; and	
				South	Property of Krishna Reddy;	
21	47/1A3	0	22	East	Survey No.47/1A4;	B. J. Lokesh, s/o of B. Janardhana, K.V. Sathya Sreenivasa Kumar, s/o Rangaiah, K. Narayana Reddy, s/o of K. Sidda Reddy, N.P. Pushpalatha, w/o N.P. Radha Krishna Naidu, Hemalatha Katari, w/o Praveen Katari, Swaroopa, w/o K. Gopi Krishna, Ranamma. M. w/o G.M. Hari Krishna, Rasineni Vijaya Lakshmi w/o R. Bhaskar Naidu, Kiran K.C., s/o Chalapathy M, A. Narasimhulu Naidu, s/o A. Sreenivasulu Naidu and Vamsi Krishna Cholavati, s/o Surya Narayana. C.
				West	Survey No.47/4 and 47/5;	
				North	Survey No.48/4 and 48/5; and	
				South	Survey No.46.	
22	47/1A4	0	24	East	Survey No. 54;	B. Subhash Chand Jain, s/o Late R. Bastimal Jain.
				West	Survey No. 47/1A3;	
				North	Survey No. 48/4; and	
				South	Survey No. 46.	
23	47/1B	0	11	East	Survey No. 47/8	A Chandrashekhar, s/o late Anjana Reddy
				West	Survey No. 40/9;	
				North	Survey Nos. 48/7; and	
				South	Survey No. 45/1.	
24	47/8	0	5	East	Sy no. 47/6	A Chandrashekhar, s/o late Anjana Reddy
				West	Sy no. 47/1B	
				North	Sy no.48/7	
				South	Sy no. 45/1	
25	47/2	0	5	East	Sy no. 46	P. Sunitha w/o V. Bhaskar, B. Madhava Kumar, s/o Raghunandana Chetty, Noothi Hemadri, s/o Noothi Muni Krishna and Noothi Rajesh, s/o Noothi Muni Krishna.
				West	Survey No. 47/1A1;	
				North	Property of Sidda Reddy; and	
				South	Survey No. 45/3.	
26	47/3	0	1	East	Survey No. 47/1A4;	Noothi Hemadri, s/o Noothi Munikrishna.
				West	Survey No. 47/1A3;	
				North	Survey No. 47/1A4; and	
				South	Survey No. 46.	
27	47/6	0	5	East	Survey No.47/7	A. Suresh Kumar s/o late Anjana Reddy
				West	Survey No.47/8	
				North	Survey No.48/6 and 48/7	
				South	Survey No.45/1 and 45/5	
28	47/7	0	5	East	Survey No.47/1A1	A Shankar Reddy s/o late Anjana Reddy
				West	Survey No.47/6	
				North	Survey No.48/6	
				South	Survey No.45/5	
29	48/7 (old sy no.)	0	14	East	Survey No. 48/6;	V. Venkataswamy Reddy s/o late Venkatagiridarappa, K R Ambuja w/o H.V Ramaswmi Reddy, A Venkataswami Reddy- Muniswami Reddy, Bhuvan Kumar s/o Thimmaraya Reddy
				West	Survey Nos. 40/9 & 48/7;	
				North	Remaining portion of same survey number; and	
				South	Survey No. 47/1B, 47/6 and 47/8.	
30	48/4	0	15.04	East	Survey No. 49;	Matam Madhava Reddy s/o M. Munirathnam Reddy, G. Surya Prathap s/o G. Govindaswamy and V. Murali Reddy s/o Venugopal Reddy
				West	Survey No. 48/5;	
				North	Survey No. 48/3; and	
				South	Survey No. 47/1A3, 47/3 and 47/1A4;	
31	48/5	0	17.05	East	Survey No. 48/4;	Alam Vijaya Shekar s/o A. Doraswamy Naidu, P Sridhar s/o P. Kannaiah, Vijaya Sharath Golla s/o G N.V. Ramana, A. Hemanth s/o A R Haribabu, C. Munirathnam s/o Late Ramaiah, Alavali Hemalatha w/o Kurella Charan Kumar, T. Lakshmi Kantham w/o T. Sudhakara Chetty, Garre Rangaiah s/o Balaiah, K P. Bhargavi d/o K. M Prasanna Kumar, T. P Sujatha w/o T. P. Prashanth.
				West	Survey No. 48/6 old Sy no.48/2);	
				North	Pathway and Survey No. 48/2 & 48/3; and	
				South	Survey No. 47/5 and 47/1A3.	

Date: May 03, 2026
Place: Bengaluru

Mr. Harsha Sudhindra - Partner,
Cyril Amarchand Mangaldas, Advocates and Solicitors,
Prestige Falcon Tower, 3rd Floor, Brunton Road, Craig Park Layout,
Victoria Layout, Bangalore – 560 025; Tel. No.: (91-80) 67922000

ವಿಕ ಈ ದಿನ ವಿಶೇಷ — ಮೇ 03

ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನ

ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು 1993ರಲ್ಲಿ ಮೇ 3 ಅನ್ನು 'ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನ' ಎಂದು ಘೋಷಿಸಿತು. ಪತ್ರಿಕಾ ಸ್ವಾತಂತ್ರ್ಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಗೌರವಿಸುವ ಉದ್ದೇಶ ಈ ದಿನದ ಹಿಂದಿದೆ.

ಬ್ರೀಫ್ ಕಾರ್ನರ್

ಐಇಡಿ ಸ್ಫೋಟ, ಡಿಆರ್‌ಜಿಯ ಮೂವರು ಸಿಬ್ಬಂದಿ ಸಾವು

ರಾಯಪುರ: ನೆಲಬಾಂಬ್ ತೆಗೆಯುವ ಕಾರ್ಯಾಚರಣೆ ವೇಳೆ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಸ್ಫೋಟಗೊಂಡು ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ)ಯ ಮೂವರು ಸಿಬ್ಬಂದಿ ಮೃತಪಟ್ಟಿರುವ ಘಟನೆ ಛತ್ತೀಸ್‌ಗಢದ ಕಾಂಕೇರ್ ಜಿಲ್ಲೆಯಲ್ಲಿ ಶನಿವಾರ ನಡೆದಿದೆ. ಅಲ್ಲದೇ ಘಟನೆಯಲ್ಲಿ ಒಬ್ಬ ಸಹಾಯಕ ಸಿಬ್ಬಂದಿ ಗಾಯಗೊಂಡಿದ್ದಾರೆ. ಛೋಟೆಬೆಥಿಯಾ ಪೊಲೀಸ್ ಠಾಣೆ ವ್ಯಾಪ್ತಿಯ ನಾರಾಯಣಪುರ ಜಿಲ್ಲೆಯ ಗಡಿಯ ಸಮೀಪವಿರುವ ಅರಣ್ಯ ಪ್ರದೇಶದಲ್ಲಿ ಸ್ಫೋಟ ಸಂಭವಿಸಿದೆ. ಇನ್‌ಸ್ಪೆಕ್ಟರ್ ಸುಖ್ರಾಮ್ ವಟ್ಟಿ, ಪೇದೆಗಳಾದ ಕೃಷ್ಣ ಕೊಮ್ರಾ ಮತ್ತು ಸಂಜಯ್ ಗಢ್ಪಾಲೆ ಮೃತರು. ಗಾಯಗೊಂಡ ಮತ್ತೊಬ್ಬ ಪೇದೆ ಪರಮಾನಂದ್ ಕೊಮ್ರಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಕ್ಸಲರು ಈ ಹಿಂದೆಯೇ ಹುದುಗಿಸಿಟ್ಟಿದ್ದ ಐಇಡಿಗಳನ್ನು ಪತ್ತೆಹಚ್ಚಲು ಮತ್ತು ಅವುಗಳನ್ನು ನಿಷ್ಕ್ರಿಯಗೊಳಿಸುವ ಕಾರ್ಯಾಚರಣೆಯಲ್ಲಿ ಜಿಲ್ಲಾ ಮೀಸಲು ಪಡೆ ತಂಡ ತೊಡಗಿತ್ತು. ಈ ವೇಳೆ ಒಂದು ಐಇಡಿಯನ್ನು ಪತ್ತೆ ಮಾಡಲಾಗಿತ್ತು.

ಪ್ರಸಾರ ಭಾರತಿ ಅಧ್ಯಕ್ಷರಾಗಿ ಪ್ರಸೂನ್ ಜೋಶಿ ನೇಮಕ

ಹೊಸದಿಲ್ಲಿ: ಖ್ಯಾತ ಗೀತ ರಚನೆಕಾರ ಮತ್ತು ಬರಹಗಾರ ಪ್ರಸೂನ್ ಜೋಶಿ ಅವರು ಪ್ರಸಾರ ಭಾರತಿ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಜೋಶಿ ಅವರು ಮಾಧ್ಯಮ ಮತ್ತು ಆಡಳಿತಾತ್ಮಕ ರಂಗದಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಸಾಹಿತ್ಯ, ಜಾಹೀರಾತು, ಸಿನಿಮಾ ಮತ್ತು ಸಾರ್ವಜನಿಕ ಸಂವಹನ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ. ಅವರು 2017ರಿಂದ ಸೆಂಟ್ರಲ್ ಬೋರ್ಡ್ ಆಫ್ ಫಿಲ್ಮ್ ಸರ್ಟಿಫಿಕೇಶನ್ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಚಲನಚಿತ್ರ ಪ್ರಮಾಣೀಕರಣ ಪ್ರಕ್ರಿಯೆಯನ್ನು ಬಲಪಡಿಸಿದರು. ಪ್ರಸಾರ ಭಾರತಿಯ ಮಾಜಿ ಅಧ್ಯಕ್ಷ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ನವನೀತ್‌ಕುಮಾರ್ ಸೆಹಗಲ್ ಅವರು ಕಳೆದ ವರ್ಷ ಡಿಸೆಂಬರ್‌ನಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು. ''ಪ್ರಸೂನ್ ಜೋಶಿ ಅವರು ಅಪರೂಪದ ಸೃಜನಶೀಲ ಚೇತನ. ಅವರ ನೇತೃತ್ವದಲ್ಲಿ ಪ್ರಸಾರ ಭಾರತಿಯು ಹೊಸ ಶಕ್ತಿ ಮತ್ತು ಉದ್ದೇಶದೊಂದಿಗೆ ಕಾರ್ಯನಿರ್ವಹಿಸಲಿದೆ,'' ಎಂದು ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ನಾಲ್ಕು ವರ್ಷದ ಬಾಲಕಿ ಮೇಲೆ 65ರ ವೃದ್ಧನಿಂದ ಲೈಂಗಿಕ ದೌರ್ಜನ್ಯ

ಪುಣೆ: ಮಹಾರಾಷ್ಟ್ರದ ಪುಣೆ ಜಿಲ್ಲೆಯಲ್ಲಿ 65 ವರ್ಷದ ವೃದ್ಧ 4 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿರುವ ಮಾನವೀಯ ಘಟನೆ ನಡೆದಿದೆ. ಪುಣೆ ಜಿಲ್ಲೆಯ ಭೋರ್ ತಾಲೂಕಿನ ನಸ್ರಾಪುರದಲ್ಲಿ ಈ ಹೇಯಕೃತ್ಯ ನಡೆದಿದೆ. ನತದೃಷ್ಟ ಮಗು ತನ್ನ ಅಜ್ಜಿಯ ಮನೆಗೆ ಬಂದಿದ್ದಳು. ಮನೆಯ ಮುಂದೆ ಆಟವಾಡುತ್ತಿದ್ದ ಮಗುವನ್ನು ಆರೋಪಿಯ ಭೀಮರಾವ್ ಕಾಂಬಳೆ (65) ಆಮಿಷ ಒಡ್ಡಿ ತನ್ನ ಮನೆಯ ಸಮೀಪದ ಕೊಟ್ಟಿಗೆಗೆ ಕರೆದೊಯ್ದಿದ್ದಾನೆ. ಅಲ್ಲಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ್ದಾನೆ. ಸಾಕ್ಷ್ಯ ನಾಶಪಡಿಸಲು ಮೃತದೇಹವನ್ನು ಕೊಟ್ಟಿಗೆಯಲ್ಲಿದ್ದ ಸಗಣಿಯ ರಾಶಿಯ ಅಡಿಯಲ್ಲಿ ಬಚ್ಚಿಟ್ಟಿದ್ದ. ಮಗು ಮನೆಗೆ ಬಾರದಿದ್ದಾಗ ಕುಟುಂಬಸ್ಥರು ಹುಡುಕಾಟ ನಡೆಸಿದ್ದಾರೆ. ಕೊಟ್ಟಿಗೆಯಲ್ಲಿ ಮಗುವಿನ ಮೃತದೇಹ ಪತ್ತೆಯಾದಾಗ ಇಡೀ ಗ್ರಾಮವೇ ಬೆಚ್ಚಿಬಿದ್ದಿದೆ. ಪೊಲೀಸರು ಸಿಸಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ, ಆರೋಪಿ ಕಾಂಬಳೆ ಮಗುವನ್ನು ಕರೆದೊಯ್ಯುತ್ತಿರುವುದು ಗೊತ್ತಾಯಿತು. ತಕ್ಷಣವೇ ಆತನನ್ನು ಬಂಧಿಸಲಾಗಿದೆ. ಆಕ್ರೋಶಗೊಂಡ ಗ್ರಾಮಸ್ಥರು, ''ಆರೋಪಿಯನ್ನು ನಮಗೆ ಒಪ್ಪಿಸುವವರೆಗೂ ಮಗುವಿನ ಶವವನ್ನು ಬಿಟ್ಟು ಕೊಡುವುದಿಲ್ಲ,'' ಎಂದು ಪಟ್ಟು ಹಿಡಿದು ಪ್ರತಿಭಟನೆ ನಡೆಸಿದರು. ಪೊಲೀಸರು ಪ್ರಯಾಸದಿಂದ ಗ್ರಾಮಸ್ಥರ ಮನವೊಲಿಸಿ, ಆರೋಪಿಯನ್ನು ಕರೆದೊಯ್ದರು.

ಮತ್ತೆ ದಾಳಿ ನಡೆದರೆ ಪ್ರತ್ಯುತ್ತರ ಎಂದ ಟೆಹರಾನ್ | ಇರಾನ್ ಅಣ್ವಸ್ತ್ರ ಹೊಂದಲು ಬಿಡಲ್ಲವೆಂದ ಟ್ರಂಪ್

ಮುಂದುವರಿದ ಶೀತಲ ಸಮರ

ಮಧ್ಯಪ್ರಾಚ್ಯ ರಣಾಂಗಣ

ವಾಷಿಂಗ್ಟನ್/ಟೆಹರಾನ್: ''ನಾವು ಸಲ್ಲಿಸಿರುವ ಹೊಸ ಸಂಧಾನ ಸೂತ್ರ ತಿರಸ್ಕರಿಸಿರುವ ಅಮೆರಿಕ ಮತ್ತೆ ದಾಳಿ ಆರಂಭಿಸುವ ಸಾಧ್ಯತೆಗಳಿದ್ದು, ಪಶ್ಚಿಮ ಏಷ್ಯಾ ಬಿಕ್ಕಟ್ಟು ಮತ್ತಷ್ಟು ಬಿಗಡಾಯಿಸುವ ಅಪಾಯವಿದೆ,'' ಎಂದು ಇರಾನ್ ಮಿಲಿಟರಿ ಪ್ರಧಾನ ಕಚೇರಿ ಉಪ ಮುಖ್ಯಸ್ಥ ಮೊಹಮ್ಮದ್ ಜಾಫರ್ ಅಸಾದಿ ಹೇಳಿದ್ದಾರೆ.



''ಸಂಘರ್ಷ ಕೊನೆಗಾಣಿಸುವ ವಿಷಯದಲ್ಲಿ ಅಮೆರಿಕದ ರಾಜತಾಂತ್ರಿಕ ಪ್ರಯತ್ನಗಳು ಪ್ರಾಮಾಣಿಕವಾಗಿಲ್ಲ. ಕದನ ವಿರಾಮ ಒಪ್ಪಂದ ಗೌರವಿಸದ ಅಮೆರಿಕ ಯಾವುದೇ ಕ್ಷಣದಲ್ಲಿ ಮತ್ತೆ ದಾಳಿ ಆರಂಭಿಸಬಹುದು. ಸಂಭವನೀಯ ದಾಳಿ ಎದುರಿಸಲು ಇರಾನ್ ಪೂರ್ಣ ಪ್ರಮಾಣದಲ್ಲಿ ಸಜ್ಜಾಗಿದೆ,'' ಎಂದು ಅಸಾದಿ ಹೇಳಿದ್ದಾರೆ.

ಇರಾನ್ ಪ್ರಸ್ತಾಪಿತ ಹೊಸ ಸಂಧಾನ ಸೂತ್ರವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ ಬೆನ್ನಿಗೆ ಯುದ್ಧ ಮುಂದುವರಿಕೆ ಬಗ್ಗೆ ಭವಿಷ್ಯ ನುಡಿದಿರುವ ಅಸಾದಿ, ''ಅಮೆರಿಕದ ಹೊಸ ದಾಳಿ ಎದುರಿಸಲು ಇರಾನ್ ಪಡೆಗಳನ್ನು ಸನ್ನದ್ಧ ಸ್ಥಿತಿಯಲ್ಲಿಡಲಾಗಿದೆ,'' ಎಂದು ತಿಳಿಸಿದರು.

ಇರಾನ್ ಅಣ್ವಸ್ತ್ರ ಹೊಂದಲು ಬಿಡಲ್ಲ: ಈ ನಡುವೆ, ''ಯಾವುದೇ ಸನ್ನಿವೇಶ ಎದುರಾದರೂ ಇರಾನ್ ಪರಮಾಣು ಶಸ್ತ್ರಾಸ್ತ್ರ ಹೊಂದಲು ಬಿಡುವುದಿಲ್ಲ'' ಎಂದು ಟ್ರಂಪ್ ಗುಡುಗಿದ್ದಾರೆ. ಇರಾನ್ ವಿರುದ್ಧದ ಸೇನಾ ಕಾರ್ಯಾಚರಣೆ ಸಮರ್ಥಿಸಿಕೊಂಡಿರುವ ಟ್ರಂಪ್, ''ಇರಾನಿಯನ್ ಮಿಲಿಟರಿ ಆಡಳಿತದ ಮಹತ್ವಾಕಾಂಕ್ಷೆಯ ಪರಮಾಣು ಕಾರ್ಯಕ್ರಮ ತಡೆಯದಿದ್ದರೆ ಮಧ್ಯಪ್ರಾಚ್ಯ, ಯುರೋಪ್ ದೇಶಗಳು ನಾಶವಾಗುತ್ತಿದ್ದವು,'' ಎಂದು ಹೇಳಿದ್ದಾರೆ.

ಫ್ಲೋರಿಡಾದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಟ್ರಂಪ್, ''ಕಳೆದ ವರ್ಷ ಬಿ2 ಬಾಂಬರ್ ಮೂಲಕ ಇರಾನ್ ಪರಮಾಣು ಸಂಶೋಧನಾ ಕೇಂದ್ರ ನಾಶಪಡಿಸಲಾಯಿತು. ಒಂದು ವೇಳೆ ಇರಾನ್ ಪರಮಾಣು ಅಸ್ತ್ರ ಹೊಂದಲು ಅವಕಾಶ ನೀಡಿದ್ದರೆ ಮೊದಲು ಇಸ್ರೇಲ್ ನಾಶವಾಗುತ್ತಿತ್ತು. ಬಳಿಕ ಮಧ್ಯಪ್ರಾಚ್ಯ ದೇಶಗಳು ನಂತರ ಯುರೋಪ್ ದೇಶಗಳು ಬಲಿಯಾಗುವ ಅಪಾಯವಿತ್ತು. ಅಮೆರಿಕ ಪಡೆಗಳು ಜಾಗತಿಕ ಮಟ್ಟದಲ್ಲಿ ನಡೆಯಬಹುದಾಗಿದ್ದ ದೊಡ್ಡ ನರಮೇಧವನ್ನು ತಪ್ಪಿಸಿದೆ,'' ಎಂದು ಹೇಳಿದ್ದಾರೆ.

ಸಂಸತ್ ಅನುಮೋದನೆ ಅಗತ್ಯವಿಲ್ಲ ಎಂದ ಟ್ರಂಪ್

ಈ ನಡುವೆ, ಇರಾನ್ ವಿರುದ್ಧದ ಯುದ್ಧ ಮುಂದುವರಿಸಲು ಸಂಸತ್ ಅನುಮೋದನೆ ಪಡೆಯುವ ಅಗತ್ಯವಿಲ್ಲ ಎಂದು ಟ್ರಂಪ್ ಹೇಳಿದ್ದಾರೆ. ಸಂಸತ್‌ನಲ್ಲಿ ಯುದ್ಧಾಧಿಕಾರ ನಿರ್ಣಯ ಕಾಯಿದೆ, ಕಾರ್ಯಾಂಗದ ಮೇಲಿನ ಸಾಂವಿಧಾನಿಕ ಮಿತಿ ಕುರಿತ ಚರ್ಚೆಗೆ ಉತ್ತರ ನೀಡಿದ ಟ್ರಂಪ್, ''ಯುದ್ಧ ಮುಂದುವರಿಸಲು ಸಂಸತ್ ಅನುಮೋದನೆ ಪಡೆಯಬೇಕು ಎಂಬ ಕಲ್ಪನೆಯೇ ವಿಚಿತ್ರವಾಗಿದೆ. ಈ ಹಿಂದೆ ಆಡಳಿತ ನಡೆಸಿದ ಯಾವ ಅಧ್ಯಕ್ಷರೂ ಈ ನೀತಿಯನ್ನು ಅನುಸರಿಸಿಲ್ಲ, ಬರಾಕ್ ಒಬಾಮ, ಬಿಲ್ ಕ್ಲಿಂಟನ್ ಕಾಲದಲ್ಲಿ ಸಂಸತ್ ಅನುಮೋದನೆ ಇಲ್ಲದೇ 60 ದಿನಗಳಿಗೂ ಹೆಚ್ಚು ದಿನ ಯುದ್ಧ ನಡೆಸಲಾಗಿದೆ. ಯಾವ ಅಧ್ಯಕ್ಷರು ಪಾಲಿಸದ ನಿಯಮವನ್ನು ನಾನೇಕೆ ಪಾಲಿಸಬೇಕು. ಅಂದು ಇಲ್ಲದ ಪ್ರಶ್ನೆ ಇಂದೇಕೆ,'' ಎಂದು ಪ್ರಶ್ನೆ ಮಾಡಿದ್ದಾರೆ. ವಿಯೆಟ್ನಾಂ ಯುದ್ಧದ ಬಳಿಕ ರೂಪಿತವಾದ 1973ರಲ್ಲಿ ಯುದ್ಧಾಧಿಕಾರ ನಿರ್ಣಯ ಕಾಯಿದೆ ಅಡಿಯಲ್ಲಿ 60 ದಿನಗಳಿಗೂ ಹೆಚ್ಚು ಕಾಲ ಯುದ್ಧ ಮುಂದುವರಿಸಲು ಸಂಸತ್ ಅನುಮೋದನೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.

ಕ್ಯೂಬಾ ಮೇಲೆ ಕಣ್ಣು

''ಇರಾನ್ ಯುದ್ಧದ ಬಳಿಕ ಕ್ಯೂಬಾ ವಶಪಡಿಸಿಕೊಳ್ಳಲಾಗುವುದು. ಇದಕ್ಕಾಗಿ ಯೋಜನೆ ರೂಪಿಸಲಾಗಿದೆ,'' ಟ್ರಂಪ್ ಹೇಳಿದ್ದಾರೆ. ''ಇರಾನ್ ಕಾರ್ಯಾಚರಣೆ ಬಳಿಕ ಕ್ಯೂಬಾ ವಶಪಡಿಸಿಕೊಳ್ಳುವ ಕಾರ್ಯಾಚರಣೆ ನಡೆಯಲಿದೆ. ಮಧ್ಯಪ್ರಾಚ್ಯದಲ್ಲಿರುವ ಅಮೆರಿಕದ ಅಬ್ರಹಾಂ ಲಿಂಕನ್ ಯುದ್ಧನೌಕೆ ಕ್ಯೂಬಾ ಕರಾವಳಿಗೆ ಬರಲಿದೆ. ಆಯಕಟ್ಟಿನ ಜಾಗದಲ್ಲಿ ನಿಯೋಜನೆ ಮಾಡಲಾಗುತ್ತಿದೆ. ಇರಾನ್‌ನಿಂದ ಹಿಂದಿರುಗಿ ಬರುವ ಹಾದಿಯಲ್ಲಿ ನಮ್ಮ ಪಡೆಗಳು ಕ್ಯೂಬಾ ವಶಪಡಿಸಿಕೊಳ್ಳಲಿವೆ,'' ಎಂದು ಹೇಳಿದರು.

ಹಣ ಪಾವತಿಸಿದರೆ ನಿರ್ಬಂಧ: ಅಮೆರಿಕ ಎಚ್ಚರಿಕೆ

ಹರ್ಮುಜ್ ಜಲಸಂಧಿ ಮೂಲಕ ಸುರಕ್ಷಿತವಾಗಿ ಹಾದುಹೋಗಲು ಇರಾನ್‌ಗೆ ಶುಲ್ಕದ ರೂಪದಲ್ಲಿ ಹಣ ಪಾವತಿಸಿದರೆ ನಿರ್ಬಂಧಗಳನ್ನು ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಎಚ್ಚರಿಕೆ ನೀಡಿದೆ. ಅಮೆರಿಕದ ವಿದೇಶಿ ಆಸ್ತಿ ನಿಯಂತ್ರಣ ಕಚೇರಿ ಈ ಬಗ್ಗೆ ಪ್ರಕಟಣೆ ಹೊರಡಿಸಿದೆ. ಫೆಬ್ರುವರಿ 28 ರಂದು ಅಮೆರಿಕ ಮತ್ತು ಇಸ್ರೇಲ್ ಯುದ್ಧವನ್ನು ಪ್ರಾರಂಭಿಸಿದ ನಂತರ ಇರಾನ್ ಹಡಗುಗಳ ಮೇಲೆ ದಾಳಿ ಮಾಡುವುದಾಗಿ ಬೆದರಿಕೆ ಹಾಕುವ ಮೂಲಕ ಹರ್ಮುಜ್ ಜಲಸಂಧಿಯನ್ನು ಮುಚ್ಚಿತ್ತು.

ಟ್ರಂಪ್ ವಿರುದ್ಧ ಹೆಚ್ಚಿದ ಪ್ರತಿಭಟನೆ

ಟ್ರಂಪ್ ಆಡಳಿತ ವೈಖರಿ, ತೆರಿಗೆ ನೀತಿ, ಯುದ್ಧೋನ್ಮಾದ ನಿಲುವು ಖಂಡಿಸಿ ಅಮೆರಿಕದ ಹಲವು ರಾಜ್ಯಗಳಲ್ಲಿ ಮೇ 1 ರಂದು ಬೃಹತ್ ಪ್ರತಿಭಟನೆ ನಡೆಯಿತು. ಕಾರ್ಮಿಕ ಸಂಘಟನೆಗಳು, ನಾಗರಿಕ ಒಕ್ಕೂಟಗಳು, ವಿದ್ಯಾರ್ಥಿ ಸಮೂಹಗಳು ಟ್ರಂಪ್ ಆಡಳಿತ ನೀತಿಯನ್ನು ಖಂಡಿಸಿದವು. 'ನೋ ಕಿಂಗ್ಸ್' ಭಿತ್ತಿಪತ್ರ ಹಿಡಿದು ಪ್ರತಿಭಟನೆ ನಡೆಸಿದ ವಿವಿಧ ಸಂಘಟನೆಗಳ ಕಾರ್ಯಕರ್ತರು, ಜನರ ಮೇಲಿನ ತೆರಿಗೆ ಹೊರೆ ಕಡಿಮೆ ಮಾಡಬೇಕು. ಇರಾನ್ ಯುದ್ಧ ಕೊನೆಗಾಣಿಸಬೇಕು ಎಂದು ಒತ್ತಾಯಿಸಿದರು.

ಜರ್ಮನಿಯಲ್ಲಿದ್ದ ಅಮೆರಿಕ ಪಡೆ ಹಿಂದಕ್ಕೆ

ಈ ಮಧ್ಯೆ ಜರ್ಮನಿಯಲ್ಲಿರುವ ಅಮೆರಿಕದ 5 ಸಾವಿರ ಯೋಧರ ತುಕಡಿಗಳನ್ನು ಹಿಂದಕ್ಕೆ ಕರೆಸಿಕೊಳ್ಳಲು ಅಮೆರಿಕ ನಿರ್ಧರಿಸಿದೆ. ಇರಾನ್ ವಿರುದ್ಧದ ಸಮರದಲ್ಲಿ ನ್ಯಾಟೊ ಮಿತ್ರಕೂಟ ಬೆಂಬಲ ನೀಡದ ಹಿನ್ನೆಲೆಯಲ್ಲಿ ಜರ್ಮನಿಯಲ್ಲಿರುವ ಅಮೆರಿಕ ಐದು ಸಾವಿರ ತುಕಡಿಗಳನ್ನು ವಾಪಸ್ ಕರೆಸಿಕೊಳ್ಳಲು ಮುಂದಾಗಿದೆ. ಮುಂದಿನ 12 ತಿಂಗಳಲ್ಲಿ ಅಮೆರಿಕ ಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳಲಾಗುವುದು ಎಂದು ಪೆಂಟಗನ್ ವಕ್ತಾರ ಸೀನ್ ಪರ್ನೆಲ್ ಹೇಳಿದ್ದಾರೆ. ಜರ್ಮನಿಯಲ್ಲಿ ಹಲವು ಸೇನಾ ನೆಲೆ ಹೊಂದಿರುವ ಅಮೆರಿಕ, ನ್ಯಾಟೊ ಮಿತ್ರ ಪಡೆಗಳ 36 ಸಾವಿರ ಸೈನಿಕರಲ್ಲಿ ಶೇ.14 ರಷ್ಟು ಪಾಲು ಹೊಂದಿದೆ.

ಕೊಲ್ಲಿ ದೇಶಗಳಿಗೆ 8.6 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ

ಪಶ್ಚಿಮ ಏಷ್ಯಾ ಬಿಕ್ಕಟ್ಟು, ಕದನ ವಿರಾಮದ ನಡುವೆ ಕೊಲ್ಲಿ ದೇಶಗಳಿಗೆ 8.6 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಪೂರೈಸಲು ಅಮೆರಿಕ ಸಮ್ಮತಿಸಿರುವುದು ಕುತೂಹಲ ಮೂಡಿಸಿದೆ. ಕತಾರ್, ಯುಎಇ, ಕುವೈತ್, ಇಸ್ರೇಲ್‌ಗೆ ಅಗತ್ಯ ಶಸ್ತ್ರಾಸ್ತ್ರ ಪೂರೈಸಲು ವಿದೇಶಾಂಗ ಇಲಾಖೆ ಒಪ್ಪಿಗೆ ನೀಡಿದೆ. ವಾಯು ರಕ್ಷಣಾ ವ್ಯವಸ್ಥೆ ಒಳಗೊಂಡ ಉಪಕರಣ, ಯುದ್ಧ ಕಮಾಂಡ್ ವ್ಯವಸ್ಥೆ, ಶಸ್ತ್ರಾಸ್ತ್ರ, ಮದ್ದುಗುಂಡು, ಕ್ಷಿಪಣಿ, ಡ್ರೋನ್ ನಿಗ್ರಹ ವ್ಯವಸ್ಥೆ ಒಳಗೊಂಡ ಉಪಕರಣ ಪೂರೈಸಲು ಟ್ರಂಪ್ ಆಡಳಿತ ಅನುಮೋದಿಸಿದೆ. ಇರಾನ್ ವಿರುದ್ಧ ತಾತ್ಕಾಲಿಕ ಕದನ ವಿರಾಮ ಜಾರಿಯಲ್ಲಿರುವ ಹೊತ್ತಿನಲ್ಲೇ ಕೊಲ್ಲಿ, ಮಧ್ಯಪ್ರಾಚ್ಯ ದೇಶಗಳಿಗೆ ಶಸ್ತ್ರಾಸ್ತ್ರ ಪೂರೈಸಿರುವ ಅಮೆರಿಕ ನಿಲುವು ಪರೋಕ್ಷವಾಗಿ ಸಮರ ಮುಂದುವರಿಸುವ ಸೂಚನೆ ಎನ್ನಲಾಗಿದೆ. ಇದೇ ವೇಳೆ ಇಸ್ರೇಲ್‌ಗೆ 6,500 ಟನ್ ಶಸ್ತ್ರಾಸ್ತ್ರ, ಮದ್ದುಗುಂಡು ಪೂರೈಕೆ ಮಾಡಲು ಅಮೆರಿಕ ಅನುಮತಿ ನೀಡಿದೆ. ಜೆರುಸಲೇಂ ಪೋಸ್ಟ್ ಪ್ರಕಾರ ಮದ್ದುಗುಂಡು, ಶಸ್ತ್ರಾಸ್ತ್ರ ತುಂಬಿಕೊಂಡು ಹೊರಟಿರುವ ಎರಡು ಹಡಗುಗಳು 24 ಗಂಟೆಯಲ್ಲಿ ಇಸ್ರೇಲ್ ತಲುಪಲಿವೆ ಎಂದು ವರದಿ ಮಾಡಿದೆ.

ಹರ್ಮುಜ್ ದಾಟಿದ ಭಾರತದ ಎಲ್‌ಪಿಜಿ ಹಡಗು

ಇರಾನ್-ಅಮೆರಿಕ ನಡುವಿನ ಶೀತಲ ಸಮರ, ಜಲಸಂಧಿ ಮೇಲಿನ ನಿರ್ಬಂಧದ ನಡುವೆ 46,313 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತ ಭಾರತದ ಸರ್ವಶಕ್ತಿ ಹಡಗು ಶನಿವಾರ ಹರ್ಮುಜ್ ಜಲಸಂಧಿ ದಾಟಿದೆ. ಭಾರತೀಯ ಮೂಲದ 18 ಮಂದಿ ಸೇರಿದಂತೆ 20 ನಾವಿಕರು ಹಾಗೂ ಸಿಬ್ಬಂದಿ ಹೊಂದಿದ್ದ ಮಾರ್ಷಲ್ ಐಲ್ಯಾಂಡ್ ಧ್ವಜ ಹೊತ್ತ ಸರ್ವಶಕ್ತಿ ಹಡಗು ಶನಿವಾರ ಸಂಜೆ ಹರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿದೆ. 46 ಸಾವಿರ ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತು ಬರುತ್ತಿರುವ ಹಡಗು ಮೇ 13 ರಂದು ಆಂಧ್ರಪ್ರದೇಶದ ವಿಶಾಖ ಪಟ್ಟಣ ಬಂದರು ತಲುಪಲಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಬಂದರಿನಲ್ಲಿ ಎಲ್‌ಪಿಜಿ ಭರ್ತಿ ಮಾಡಿಕೊಂಡು ಹೊರಟ ಸರ್ವಶಕ್ತಿ ಹಡಗು, ಅಮೆರಿಕ ನೌಕಾಪಡೆಯ ದಿಗ್ಬಂಧನದ ನಡುವೆ ಹರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್‌ಗೆ ಸೇರಿದ ಹಡಗು ಪರ್ಷಿಯನ್ ಕೊಲ್ಲಿಯಿಂದ ಭಾರತಕ್ಕೆ ಎಲ್‌ಪಿಜಿ ಸಾಗಣೆ ಮಾಡುತ್ತಿದೆ.

ನಾವು ಕಡಲ್ಗಳ್ಳರಿಂದ್ದಂತೆ: ಟ್ರಂಪ್ ಹೆಮ್ಮೆ

''ಹರ್ಮುಜ್ ಜಲಸಂಧಿ ಬಳಿ ಅಮೆರಿಕ ನೌಕಾಪಡೆಗಳು ಕಡಲ್ಗಳ್ಳರ ರೀತಿ ವರ್ತಿಸುತ್ತಿವೆ. ಇರಾನ್ ಹಡಗುಗಳನ್ನು ವಶಪಡಿಸಿಕೊಳ್ಳುವ ಮೂಲಕ ಜಲಮಾರ್ಗದ ಮೇಲೆ ಹಿಡಿತ ಸಾಧಿಸಿವೆ,'' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡಿದ್ದಾರೆ. ಫ್ಲೋರಿಡಾದಲ್ಲಿ ಮಾತನಾಡಿದ ಟ್ರಂಪ್, ''ಹರ್ಮುಜ್ ದಾಟುವ ಇರಾನ್ ಹಡಗು, ತೈಲ, ಇತರೆ ಸರಕುಗಳನ್ನು ವಶಪಡಿಸಿಕೊಳ್ಳಲಾಗುತ್ತಿದೆ. ಅಮೆರಿಕದ ಪಾಲಿಗೆ ಇದು ಲಾಭದಾಯಕವಾಗಿದೆ. ನಾವು ಒಂದು ರೀತಿಯಲ್ಲಿ ಕಡಲ್ಗಳ್ಳರಂತೆ ಕೆಲಸ ಮಾಡುತ್ತಿದ್ದೇವೆ. ಆದರೆ, ನಾವು ಯಾರ ಜತೆಗೂ ಆಟವಾಡುತ್ತಿಲ್ಲ,'' ಎಂದು ಹೇಳಿದ್ದಾರೆ.

ಕಾನೂನು ಸಮರದಲ್ಲಿ ಟಿಎಂಸಿಗೆ ಹಿನ್ನಡೆ

ಕೋಲ್ಕೊತಾ/ಹೊಸದಿಲ್ಲಿ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮತ ಎಣಿಕೆ ಕೇಂದ್ರಗಳ ಮೇಲ್ವಿಚಾರಕರ ನೇಮಕ ವಿಷಯವಾಗಿ ಕಾನೂನು ಸಮರ ನಡೆಸಿದ ಟಿಎಂಸಿಗೆ ಭಾರಿ ಹಿನ್ನಡೆಯಾಗಿದೆ. ಮತ ಎಣಿಕೆ ಕೇಂದ್ರಗಳ ಮೇಲ್ವಿಚಾರಣೆಗೆ ಕೇಂದ್ರ ಸರಕಾರಿ ನೌಕರರ ನೇಮಕ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶನಿವಾರ ವಜಾಗೊಳಿಸಿದೆ.

ಶನಿವಾರ ಅರ್ಜಿ ವಿಚಾರಣೆ ನಡೆಸಿದ ನ್ಯಾ.ಪಿ. ಎಸ್.ನರಸಿಂಹ ಹಾಗೂ ನ್ಯಾ. ಜೋಯ್ಮಲ್ಯ ಬಾಗ್ಚಿ ಅವರಿದ್ದ ಪೀಠ, ''ಎಣಿಕೆ ಕೇಂದ್ರಗಳಿಗೆ ಸಿಬ್ಬಂದಿ ನೇಮಕ ಮಾಡುವ ಅಧಿಕಾರ ಚುನಾವಣಾ ಆಯೋಗಕ್ಕಿದೆ. ಪಾರದರ್ಶಕವಾಗಿ ಎಣಿಕೆ ಕಾರ್ಯ ಕೈಗೊಳ್ಳಲು ಕೇಂದ್ರಗಳ ಮೇಲ್ವಿಚಾರಣೆಗೆ ಸಿಬ್ಬಂದಿ ನೇಮಕ ಮಾಡುವುದು ಆಯೋಗದ ಪರಮಾಧಿಕಾರವಾಗಿದೆ. ಈ ಸಂಬಂಧ ಏಪ್ರಿಲ್ 13ರಂದು ಹೊರಡಿಸಿದ ಸುತ್ತೋಲೆಯಲ್ಲಿ ಯಾವುದೇ ತಪ್ಪಿಲ್ಲ'' ಎಂದು ಸ್ಪಷ್ಟಪಡಿಸಿತು.

ಶೇ.90ರಷ್ಟು ಮತದಾನ

ಡೈಮಂಡ್ ಹಾರ್ಬರ್, ಮಗ್ರಾಹತ್ ಪಶ್ಚಿಮ ವಿಧಾನಸಭೆ ಕ್ಷೇತ್ರಗಳ 15 ಮತಗಳಟ್ಟೆಗಲ್ಲಿ ಶೇ.90ರಷ್ಟು ಮತದಾನವಾಗಿದೆ. ಇವಿಎಂಗಳ ಮೇಲಿದ್ದ ಬಿಜೆಪಿ ಚಿಹ್ನೆಯನ್ನು ಮುಚ್ಚಿದ್ದ ಆರೋಪ ಹಿನ್ನೆಲೆಯಲ್ಲಿ ಶನಿವಾರ ಮರು ಮತದಾನ ನಡೆಯಿತು. ಡೈಮಂಡ್ ಹಾರ್ಬರ್ ಕ್ಷೇತ್ರದ 4 ಮತಗಟ್ಟೆಗಳಲ್ಲಿ ಶೇ.90, ಮಗ್ರಾಹತ್ ಪಶ್ಚಿಮ ಕ್ಷೇತ್ರದ 11 ಮತಗಟ್ಟೆಗಳಲ್ಲಿ ಶೇ.89ರಷ್ಟು ಮತದಾನವಾಗಿದೆ ಎಂದು ವರದಿಯಾಗಿದೆ.

ಟಿಎಂಸಿಗೆ 200 ಸ್ಥಾನ: ದೀದಿ ವಿಶ್ವಾಸ

''ಮತಗಟ್ಟೆ ಸಮೀಕ್ಷೆ ಮೀರಿ ಟಿಎಂಸಿ 200 ಸ್ಥಾನ ಗೆಲ್ಲಲಿದೆ,'' ಎಂದು ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕೋಲ್ಕೊತಾದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಬ್ಯಾನರ್ಜಿ, ''ಈ ಹಿಂದೆ ಅನೇಕ ಬಾರಿ ಟಿಎಂಸಿ ಸೋಲಲಿದೆ ಎಂಬ ಮತಗಟ್ಟೆ ಸಮೀಕ್ಷೆಗಳ ಭವಿಷ್ಯ ಸುಳ್ಳಾಗಿದೆ. 2021ರ ವಿಧಾನಸಭೆ, 2024ರ ಲೋಕಸಭೆ ಚುನಾವಣೆ ಫಲಿತಾಂಶ ಮತಗಟ್ಟೆ ಸಮೀಕ್ಷೆಯನ್ನು ಬುಡಮೇಲು ಮಾಡಿದೆ,'' ಎಂದು ಹೇಳಿದರು.

ಮೇ 21ಕ್ಕೆ ಮರು ಮತದಾನ

ಹೊಸದಿಲ್ಲಿ: ಪಶ್ಚಿಮ ಬಂಗಾಳದ ಫಾಲ್ತಾ ವಿಧಾನಸಭಾ ಕ್ಷೇತ್ರದಲ್ಲಿ ಮೇ 21 ರಂದು ಸಂಪೂರ್ಣ ಮರು ಮತದಾನಕ್ಕೆ ಕೇಂದ್ರ ಚುನಾವಣಾ ಆಯೋಗ ಶನಿವಾರ ಆದೇಶಿಸಿದೆ. ಏಪ್ರಿಲ್ 29 ರಂದು ನಡೆದ ಚುನಾವಣೆ ವೇಳೆ ಅಕ್ರಮ ನಡೆದ ಆರೋಪ ಹಿನ್ನೆಲೆಯಲ್ಲಿ ಕ್ಷೇತ್ರದ ಎಲ್ಲಾ 285 ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಆದೇಶ ನೀಡಲಾಗಿದೆ. ಮೇ 24 ರಂದು ಮತ ಎಣಿಕೆ ನಡೆಯಲಿದೆ. ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಬರುವ ಫಾಲ್ತಾ ವಿಧಾನಸಭಾ ಕ್ಷೇತ್ರದ ಮತದಾನದ ವೇಳೆ ಟಿಎಂಸಿ ಅಭ್ಯರ್ಥಿ ಜಹಂಗೀರ್ ಖಾನ್ ಮತದಾರರಿಗೆ ಜೀವ ಬೆದರಿಕೆ ಹಾಕಿದ ಆರೋಪ ಕೇಳಿ ಬಂದಿತ್ತು. ಬೆದರಿಕೆ ಆರೋಪದ ಬಳಿಕ ಟಿಎಂಸಿ ಹಾಗೂ ಬಿಜೆಪಿ ಕಾರ್ಯಕರ್ತರು ನಡುವೆ ಘರ್ಷಣೆ ಸಂಭವಿಸಿತ್ತು. ಮತದಾನಕ್ಕೆ ಸೂಕ್ತ ಭದ್ರತೆಗೆ ಆಗ್ರಹಿಸಿ ಮತದಾರರು ಪ್ರತಿಭಟನೆ ನಡೆಸಿದ್ದರು. ದೂರು ಬಳಿಕ ಕ್ಷೇತ್ರದಲ್ಲಿ ಕೇಂದ್ರೀಯ ಸಶಸ್ತ್ರ ಪಡೆಗಳನ್ನು ನಿಯೋಜಿಸಲಾಗಿತ್ತು. ವಿಧಾನಸಭಾ ಕ್ಷೇತ್ರದ ಚುನಾವಣಾ ವೀಕ್ಷಕರು ನೀಡಿದ ವರದಿ ಆಧರಿಸಿ ಎಲ್ಲಾ 285 ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಆದೇಶಿಸಲಾಗಿದೆ.

ತಿರುಪತಿ ಲಡ್ಡು ಕಲಬೆರಕೆ: ಅಧಿಕಾರಿಗಳೇ ಹೊಣೆ

ಹೈದರಾಬಾದ್: ತಿರುಪತಿ ಲಡ್ಡು ಪ್ರಸಾದಕ್ಕೆ ಕಲಬೆರಕೆ ತುಪ್ಪ ಬಳಸಿದ್ದ ಪ್ರಕರಣಕ್ಕೆ ಸಂಬಂಧಿಸಿ ಆಂಧ್ರಪ್ರದೇಶ ಸರಕಾರ ನೇಮಿಸಿದ್ದ ಏಕಸದಸ್ಯ ಸಮಿತಿ ವರದಿ ಸಲ್ಲಿಸಿದ್ದು, ಅಧಿಕಾರಿಗಳು ಮತ್ತು ಖರೀದಿ ಸಮಿತಿಯ ಗಂಭೀರವಾದ ಆಡಳಿತ ವೈಫಲ್ಯವನ್ನು ಪತ್ತೆ ಮಾಡಿದೆ. ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡ (ಎಸ್ಐಟಿ) ಉಲ್ಲೇಖಿಸಿದ್ದ ಅಂಶಗಳನ್ನು ಪರಿಶೀಲಿಸಿ ಹೊಣೆಗಾರರನ್ನು ಗುರುತಿಸುವ ಮತ್ತು ಲೋಪ ಪತ್ತೆ ಮಾಡುವ ಜವಾಬ್ದಾರಿಯನ್ನು ಮಾಜಿ ಮುಖ್ಯಕಾರ್ಯದರ್ಶಿ ದಿನೇಶ್‌ಕುಮಾರ್ ಅವರ ನೇತೃತ್ವದ ಸಮಿತಿಗೆ ನೀಡಲಾಗಿತ್ತು. ಏಕ ಸದಸ್ಯ ಸಮಿತಿ ಕೆಲ ದಿನಗಳ ಹಿಂದೆ ಸಲ್ಲಿಸಿದ ವರದಿಯು ಹಿರಿಯ ಅಧಿಕಾರಿಗಳು ಮತ್ತು ಖರೀದಿ ವಿಭಾಗವನ್ನು ಹೊಣೆಯಾಗಿಸಿದೆ ಎಂದು ಸರಕಾರದ ಮೂಲಗಳು ತಿಳಿಸಿವೆ.

ಮಾಜಿ ಕಾರ್ಯನಿರ್ವಾಹಕ ಅಧಿಕಾರಿ ಎ.ವಿ.ಧರ್ಮಾ ರೆಡ್ಡಿ ಅವರನ್ನು ಮುಖ್ಯ ಹೊಣೆಗಾರರನ್ನಾಗಿ ಮಾಡಲಾಗಿದೆ. ಗುತ್ತಿಗೆ ನಿಯಮಗಳ ಉಲ್ಲಂಘನೆ, ಕಲಬೆರಕೆ ಖಚಿತಪಟ್ಟರೂ ಕ್ರಮ ಕೈಗೊಳ್ಳದಿರುವುದು ಮತ್ತು ಶಂಕಿತ ಪೂರೈಕೆದಾರರನ್ನೇ ಮುಂದುವರಿಸಿದ ಆರೋಪವನ್ನು ರೆಡ್ಡಿ ಅವರ ಮೇಲೆ ಹೊರಿಸಲಾಗಿದೆ. ಮತ್ತೊಬ್ಬ ಆಡಳಿತಾಧಿಕಾರಿ ಅನಿಲ್‌ಕುಮಾರ್ ಸಿಂಘಾಲ್ ಸೇರಿದಂತೆ ಟಿಟಿಡಿಯ ಅಂದಿನ ಖರೀದಿ ಸಮಿತಿ ಈ ಎಲ್ಲಾ ಅಕ್ರಮಕ್ಕೆ ಸಹಕಾರ ನೀಡಿದೆ ಎಂದು ವರದಿ ಉಲ್ಲೇಖಿಸಿದೆ.

ಕುಟುಂಬದ ಸಾವಿಗೆ ಕಲ್ಲಂಗಡಿ ಕಾರಣವಲ್ಲ

ಮುಂಬಯಿ: ಕಲ್ಲಂಗಡಿ ತಿಂದ ಬಳಿಕ ಒಂದೇ ಕುಟುಂಬದ ನಾಲ್ವರು ಮೃತಪಟ್ಟ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದೆ. ಸಾವಿಗೆ ಕಲ್ಲಂಗಡಿ ಕಾರಣವಲ್ಲ, ಬದಲಾಗಿ ಮೃತರ ದೇಹದಲ್ಲಿ ಮಾರ್ಫಿನ್ ಅಂಶ ಪತ್ತೆಯಾಗಿದೆ ಎಂಬ ಮರಣೋತ್ತರ ಪರೀಕ್ಷಾ ವರದಿಯಿಂದ ಬಹಿರಂಗಗೊಂಡಿದೆ.

ನಗರದ ಪೈಧೋನಿ ಪ್ರದೇಶದಲ್ಲಿ ಏ.25 ರಾತ್ರಿ ಸಂಬಂಧಿಗಳು ಸೇರಿದಂತೆ ಒಟ್ಟು ಒಂಬತ್ತು ಸದಸ್ಯರು ಒಟ್ಟಿಗೆ ಊಟ ಮಾಡಿದ್ದರು. ನಂತರ ಸಂಬಂಧಿಕರು ತಮ್ಮ ಮನೆಗಳಿಗೆ ಮರಳಿದ್ದರು. ನಡುರಾತ್ರಿ ನಾಲ್ವರು ಕುಟುಂಬ ಸದಸ್ಯರು ಕಲ್ಲಂಗಡಿ ಹಣ್ಣು ಸೇವಿಸಿದ್ದರು. ಮುಂಜಾನೆ ವೇಳೆ ನಾಲ್ವರಿಗೆ ವಾಂತಿ ಮತ್ತು ಹೊಟ್ಟೆ ನೋವು ಕಾಣಿಸಿಕೊಂಡಿತ್ತು. ಚಿಕಿತ್ಸೆ ಫಲಿಸದೇ ನಾಲ್ವರು ಮೃತಪಟ್ಟಿದ್ದರು. ಊಟ ಮಾಡಿದ ಬಳಿಕ ಕಲ್ಲಂಗಡಿ ತಿಂದಿದ್ದೇ ಅವರ ಸಾವಿಗೆ ಕಾರಣ ಎನ್ನಲಾಗಿತ್ತು.

ಆದರೆ ವಿಧಿವಿಜ್ಞಾನ ಪರೀಕ್ಷೆ ವೇಳೆ ಕಲ್ಲಂಗಡಿಗೆ ಕೃತಕ ಬಣ್ಣ ಹಾಗೂ ಸಿಹಿ ಜಾಸ್ತಿ ಮಾಡಲು ಯಾವುದೇ ಕೆಮಿಕಲ್ ಬಳಕೆ ಮಾಡಿರಲಿಲ್ಲ. ಜತೆಗೆ ಮೃತರ ಮಿದುಳು, ಹೃದಯ ಹಾಗೂ ಕರುಳು ಸೇರಿದಂತೆ ಕೆಲ ಅಂಗಾಂಗಗಳು ಹಸಿರು ಬಣ್ಣಕ್ಕೆ ಬದಲಾಗಿರೋದು ಪತ್ತೆಯಾಗಿದೆ. ರಾಜ್ಯ ಆಹಾರ ಸುರಕ್ಷತೆ ಮತ್ತು ಔಷಧ ಮಂಡಳಿ ಪ್ರಕಾರ, ''ಕಲ್ಲಂಗಡಿ ತಿಂದಿದ್ದೇ ಸಾವಿಗೆ ಕಾರಣವೆಂದು ಈವರೆಗೂ ಸಾಬೀತಾಗಿಲ್ಲ, ಸಾಬೀತಾದರ ಬಳಿಕವೇ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು. ಇನ್ನೂ ಈ ಸಂಬಂಧ ವರದಿ ಬರಬೇಕಿದೆ,'' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನ್ಯಾಯಾಧೀಶ ಆತ್ಮಹತ್ಯೆ

ಹೊಸದಿಲ್ಲಿ: ಸಫ್ದರ್‌ಜಂಗ್ ಪ್ರದೇಶದಲ್ಲಿ ವಾಸವಿದ್ದ ನ್ಯಾಯಾಧೀಶರೊಬ್ಬರು ತಮ್ಮ ನಿವಾಸದಲ್ಲಿಯೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತ ನ್ಯಾಯಾಧೀಶರನ್ನು ಅಮನ್ ಕುಮಾರ್ ಶರ್ಮಾ (30) ಎಂದು ಗುರುತಿಸಲಾಗಿದೆ. ಯಾವುದೇ ಡೆತ್ ನೋಟ್ ಪತ್ತೆ ಆಗಿಲ್ಲ, ಹೀಗಾಗಿ ಆತ್ಮಹತ್ಯೆಗೆ ಕಾರಣ ಸದ್ಯಕ್ಕೆ ತಿಳಿದುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.



ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಹಟ್ಟಿ - 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ, ಕರ್ನಾಟಕ.
ದೂರವಾಣಿ: 08537-275041,
CIN No. U85110KA1947SGC001321

ಕಾನೂನು ಸಲಹೆಗಾರರ (Legal Consultant) ನೇಮಕಾತಿ

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತವು ಕರ್ನಾಟಕ ಸರ್ಕಾರದ ಸೌಮ್ಯಕ್ಕೊಳಪಟ್ಟ ಉದ್ದಿಮೆಯಾಗಿದ್ದು, ಕಂಪನಿಯಲ್ಲಿ ಕಾನೂನು ಸಲಹೆಗಾರರಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಇಚ್ಛಿಸುವ ನಿವೃತ್ತ ನ್ಯಾಯಾಧೀಶರ ನೇಮಕಾತಿಗೆ ಸಂಬಂಧಿಸಿದಂತೆ, ಅರ್ಹತೆ ಮತ್ತು ಇನ್ನಿತರ ವಿವರಗಳಿಗಾಗಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ವೆಬ್‌ಸೈಟ್ : https://huttigold.karnataka.gov.inನ್ನು ವೀಕ್ಷಿಸಿ, ನಿವೃತ್ತ ನ್ಯಾಯಾಧೀಶರು ದಿನಾಂಕ 11.05.2026 ರಂದು ನೇರ ಸಂದರ್ಶನಕ್ಕೆ ಆಡಳಿತ ಕಛೇರಿ, ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ ಹಟ್ಟಿ –584115 ತಾಲ್ಲೂಕು: ಲಿಂಗಸುಗೂರು, ಜಿಲ್ಲಾ: ರಾಯಚೂರು ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

ಸಹಿ/–ಕಾರ್ಯನಿರ್ವಾಹಕ ನಿರ್ದೇಶಕರು

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಹೆಬ್ಬಾಳ ವಿಭಾಗ, ಬೆಂ.ಉ.ನ.ಪಾಲಿಕೆ, ವಲಯ–2, 2ನೇ ಮಹಡಿ ಬೆಂ.ಉ.ನ.ಪಾಲಿಕೆ, (ಹಳೆಯ ಬಿಬಿಎಂಪಿ) ಕಟ್ಟಡ, ಇಂದಿರಾ ಕ್ಯಾಂಟೀನ್ ಎದುರು, ಜೆಸಿ ನಗರ ಮುಖ್ಯರಸ್ತೆ, ಮುನಿರೆಡ್ಡಿಪಾಳ್ಯ, ಬೆಂಗಳೂರು–560 006.
ಸಂಖ್ಯೆ:ಬೆಉನಪಾ/ವ2–ಕಾಪಾಅ/ಹೆವಿ/ಟಿಆರ್/02/2026–27 ದಿನಾಂಕ: 02–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಈ ಕೆಳಗಿನ ಸಹಿದಾರರು, ಆಯುಕ್ತರು, ಬೆಂ.ಉ.ನ.ಪಾಲಿಕೆ ಇವರ ಪರವಾಗಿ ಕೆಳಕಂಡ ಕಾಮಗಾರಿಗಳಿಗೆ ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ–3)

ಕ್ರ ಸಂ.	ಕಾಮಗಾರಿಗಳ ಹೆಸರು/ವರ್ಗ
1	ವಾರ್ಡ್ ಸಂಖ್ಯೆ–61, ಹೆಬ್ಬಾಳ ಕ್ಷೇತ್ರದಲ್ಲಿ 2026–27ನೇ ಸಾಲಿಗೆ ಬೃಹತ್ ನೀರು ಕಾಲುವೆಗಳನ್ನು ವಾರ್ಷಿಕ ನಿರ್ವಹಣೆ ಮಾಡುವುದು. ಅಂದಾಜು ಮೊತ್ತ: ₹.100.00 ಲಕ್ಷಗಳು, ಇಎಂಡಿ ಮೊತ್ತ: ₹.2,00,000/– (₹.1,00,000/– ಇ-ಪಾವತಿ (ಎನ್‌ಇಎಫ್‌ಟಿ) ಮೂಲಕ ಉಳಿಕೆ ₹.1,00,000/– ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮುಂಚೆ ಕಡ್ಡಾಯವಾಗಿ ಸಲ್ಲಿಸುವುದು) (ಸಾಮಾನ್ಯರಿಗೆ)

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 04–05–2026ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16–05–2026ರ ಸಂಜೆ 4:00 ಗಂಟೆಯವರೆಗೆ. (3) ಟೆಂಡರ್‌ಗಳನ್ನು ದಿನಾಂಕ: 18–05–2026ರ ಬೆಳಿಗ್ಗೆ 11:00 ಗಂಟೆಯ ನಂತರ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೆಬ್ಬಾಳ ವಿಭಾಗ, ವಲಯ–2

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ – ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
ಮುಖ್ಯ ಯೋಜನಾಧಿಕಾರಿರವರ ಕಛೇರಿ, ಯೋಜನಾ ಅನುಷ್ಠಾನ ಘಟಕ,
ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಲೋಕೋಪಯೋಗಿ ಇಲಾಖೆ ಅನೆಕ್ಸ್ ಕಟ್ಟಡ,
ಕೆ.ಆರ್.ವೃತ್ತ, ಬೆಂಗಳೂರು–560001. ವೆಬ್‌ಸೈಟ್: www.shdpkar.in ಇ–ಮೇಲ್: cposhdp2020@gmail.com

ಸಂ: ಮುಯೋಅ/ಯೋಅಘ/ರಾಹೆಅಯೋ/ಹಂತ–4 ಘಟ್ಟ–2/ಟೆಂಡರ್ ಪ್ರಕಟಣೆ–01/2026–27/199 ದಿನಾಂಕ: 30–04–2026

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–4 (ಘಟ್ಟ–2) ರಡಿಯಲ್ಲಿ ಪ್ಯಾಕೇಜ್ ಸಂಖ್ಯೆ: 574ರ ಬಾಕಿ ಉಳಿಕೆ ಕಾಮಗಾರಿಗಾಗಿ ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27 ದಿನಾಂಕ: 30–04–2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಅಧೀಕ್ಷಕ ಇಂಜಿನಿಯರ್–1, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ಇವರಿಂದ ಸರ್ಕಾರದ ಆದೇಶ ಸಂಖ್ಯೆ: ಲೋಇ 101 ಇಎಪಿ 2026 ಬೆಂಗಳೂರು, ದಿನಾಂಕ: 16.04.2026 ರಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–4 ಘಟ್ಟ–2 ರಲ್ಲಿನ ಪ್ಯಾಕೇಜ್ ಸಂಖ್ಯೆ: 574 ಕಾಮಗಾರಿಯ ಗುತ್ತಿಗೆ ರದ್ದು ಮಾಡಿದ್ದು, ಬಾಕಿ ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸುವ ಸಂಬಂಧ ಈ ಕೆಳಕಂಡಂತೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (https:kppp.karnataka.gov.in) ಮೂಲಕ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (KW-4) ಹಾಗೂ ಎಸ್.ಹೆಚ್.ಡಿ.ಪಿ ನಿಯಮಗಳಾನುಸಾರವಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆದಾರರ ದರ್ಜೆ	ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ
1	ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–4 (ಹಂತ–2) ರಲ್ಲಿನ ಪ್ಯಾಕೇಜ್ ಸಂಖ್ಯೆ: 574ರ ಬಾಕಿ ಉಳಿಕೆ ಕಾಮಗಾರಿ.	ರೂ.1,97,35,773/– (ಜಿಎಸ್‌ಟಿ ಹೊರತುಪಡಿಸಿ)	ರೂ.2.97 ಲಕ್ಷಗಳು	3ನೇ ದರ್ಜೆ ಮತ್ತು ಮೇಲ್ಪಟ್ಟು	3 ತಿಂಗಳು (ಮಳೆಗಾಲ ಸೇರಿ)

ಟೆಂಡರ್ ಪ್ರಕ್ರಿಯೆಯ ವಿವರಗಳು:– (1) ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ದಾಖಲಾತಿಗಳನ್ನು ದಿನಾಂಕ: 04/05/2026 ರಿಂದ ದಿನಾಂಕ: 19/05/2026 ರ ಸಂಜೆ 4.30 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. (2) ಟೆಂಡರ್‌ಗೆ ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಪ್ರೀ–ಟೆಂಡರ್ ಮೀಟಿಂಗ್ ದಿನಾಂಕ: 11/05/2026 ರಂದು ಬೆಳಿಗ್ಗೆ 11.30 ಗಂಟೆಗೆ (ಮುಖ್ಯ ಯೋಜನಾಧಿಕಾರಿ, ಎಸ್.ಹೆಚ್.ಡಿ.ಪಿ ಬೆಂಗಳೂರುರವರ ಕಛೇರಿ). (3) ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 19/05/2026 ರ ಸಂಜೆ 5.30 ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 21/05/2026 ರ ಬೆಳಿಗ್ಗೆ 11.30 ಗಂಟೆಗೆ. (5) ಅರ್ಹ ಟೆಂಡರ್‌ಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ಸಂಭವನೀಯ ದಿನಾಂಕ: 04/06/2026 ರ ಬೆಳಿಗ್ಗೆ 11.30 ಗಂಟೆಗೆ. (6) ತಿದ್ದುಪಡಿ ಪ್ರಕಟಣೆಗಳು, ಮಾರ್ಪಾಡುಗಳ ಪ್ರಕಟಣೆಗಳು ಮತ್ತು ಪ್ರಕಟಣೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ ಅವುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಲೋಕೋಪಯೋಗಿ ಇಲಾಖೆ ಮತ್ತು ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿತ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.
ಟೆಂಡರ್ ಆಹ್ವಾನಿಸಿರುವ ಬಗ್ಗೆ ಹೆಚ್ಚಿನ ವಿವರಗಳನ್ನು ಮುಖ್ಯ ಯೋಜನಾಧಿಕಾರಿರವರ ಕಛೇರಿ, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರುರವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಮೂಲಕ support@eprochelpdesk.com ರಲ್ಲಿ ಪಡೆಯಬಹುದಾಗಿದೆ. ಕೆಪಿಪಿ ಪೋರ್ಟಲ್‌ನ ಸಹಾಯವಾಣಿ ದೂರವಾಣಿ ಸಂಖ್ಯೆಗಳು: +91-9240214000/+91-9240214001.

ಸಹಿ/– ಅಧೀಕ್ಷಕ ಇಂಜಿನಿಯರ್–1,
ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ,
ಕೆ.ಆರ್. ವೃತ್ತ, ಬೆಂಗಳೂರು.

DIPR/CP/460/SPAN/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಸಂ.ಕಾನಿಇಂ/ಪಿಬಿ/ಗುತ್ತಿಗೆ/8443/2026–27/491 ದಿನಾಂಕ : 02–05–2026

ಮುಂದೂಡಿದ ಪ್ರಕಟಣೆ ನಂ.01

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.ಪಿಬಿ/ಗುತ್ತಿಗೆ/8443/2026–27/103/ ದಿನಾಂಕ : 07–04–2026ರಲ್ಲಿನ ಕಾಮಗಾರಿಗಳ ಕ್ರಸಂ.01 (ನಂ.35506) ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನಂತೆ ದಿನಾಂಕಗಳನ್ನು ಮರು ನಿಗದಿಪಡಿಸಲಾಗಿದೆ. (1) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 20–05–2026ರ ಸಾಯಂಕಾಲ 04–00 ಗಂಟೆಯವರೆಗೆ (2) ಕಾಮಗಾರಿಯ ಗುತ್ತಿಗೆ ಪತ್ರಗಳನ್ನು ತೆರೆಯುವ ದಿನಾಂಕ : 21–05–2026ರ ಸಾಯಂಕಾಲ 04–30 ಗಂಟೆಗೆ (3) ಕಾಮಗಾರಿಯ ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ : 22–05–2026 ರ ಮುಂಜಾನೆ 11–00 ಗಂಟೆಗೆ
ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/72/2026–27

ಕರ್ನಾಟಕ ಸರ್ಕಾರ
ರಾಯಚೂರು ಮಹಾನಗರ ಪಾಲಿಕೆ
E-mail:itstaff_ulb_raichurn@yahoo.com Website:-www.raichurcity.gov.in
Phone No:08532-226768 Fax No:08532-226316
No. CCR/ENG/TS/CF/511/2025-26 Date:30/04/2026

ಟೆಂಡರ್ ಅಧಿಸೂಚನೆ (KPPP 2.0 ವಿಧಾನದಲ್ಲಿ)

ಕೆಳಕಂಡ ಅನುದಾನದಡಿ ಸೂಚಿಸಲಾದ ಕಾಮಗಾರಿಗಳಿಗೆ KPPP 2.0 ವಿಧಾನದಲ್ಲಿ ಟೆಂಡರ್ ಅಧಿಸೂಚನೆಗಳನ್ನು ಆಹ್ವಾನಿಸಲಾಗುತ್ತಿದೆ ಎಂದು ತಿಳಿಸಲಾಗುತ್ತದೆ. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರ್ ದರಪತ್ರಗಳನ್ನು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (www.kppp.karnataka.gov.in) ಮೂಲಕ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ರಾಯಚೂರು ಮಹಾನಗರ ಪಾಲಿಕೆ ಅಧಿಕೃತ ಜಾಲತಾಣ (http://www.raichurcity.mrc.gov.in) ದಲ್ಲಿಯೂ ಪಡೆಯಬಹುದು.

Sl. No	Grant Details	Name of Work	Indent Number
1	UIDF Grant	Local Area Plan for De Congestion of Urkund Eranna Slum and Shifting of Slaughterhouse from the Slum Area in Raichur City Corporation Raichur. **Estimate Cost Rs. 924.48 Lakhs.**	DMA/2026-27/ BD/ WORK_ INDENT56974

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.

DIP/RCR/52KSMCA/54/2026-27

ಪ್ರಯೋಗದಿಂದ ಹೊಮ್ಮಿದ ಕಥೆಗಳು



ಮಿತಸಮಯ; ಸಂ: ಬಸವರಾಜ ಸಾದರ ಪ್ರ: ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಪುಟ: 108; ಬೆಲೆ: 100 ರೂ.

ಕನ್ನಡದಲ್ಲಿ ಈಗಾಗಲೇ ಲೇಖಕಿಯರಾಗಿ, ಕಥೆಗಾರ್ತಿಯರಾಗಿ ಗುರುತಿಸಿಕೊಂಡಿರುವ ಹತ್ತು ಲೇಖಕಿಯರು ಬರೆದ ಪ್ರಾಯೋಗಿಕ ಕಥೆಗಳ ಸಂಕಲನ 'ಮಿತ ಸಮಯ'. ಲೇಖಕ ಬಸವರಾಜ ಸಾದರ ತಮ್ಮ ಅವ್ವನ ಸ್ಮರಣಾರ್ಥವಾಗಿ ಹತ್ತು ಕಥೆಗಾರ್ತಿಯರಿಗೆ ಒಂದು ಸಾವಿರ ಶಬ್ದದೊಳಗೆ, ಹತ್ತು ನಿಮಿಷಗಳ ಒಳಗಾಗಿ ಓದಬಲ್ಲ ಕಥೆ ಬರೆದು ಪ್ರಸ್ತುತಪಡಿಸಲು ಕೋರಿದ ಆಹ್ವಾನವನ್ನು ಒಪ್ಪಿಕೊಂಡು ಆ ಹತ್ತು ಲೇಖಕಿಯರು ಬರೆದ ಕಥೆಗಳನ್ನು ಇಲ್ಲಿ ಸಂಕಲಿಸಲಾಗಿದೆ.

ಇಂದಿನ ಹೆಣ್ಣುಮಕ್ಕಳ ಆಂತರಂಗಿಕ ತಲ್ಲಣವನ್ನು ಸಂಧ್ಯಾ ಹೊನಗುಂಟಿಕರ್ ಅವರ ಕಥೆ 'ಒಂದು ನಂಬಿಕೆಯ ಆತ್ಮಹತ್ಯೆ' ತೆರೆದಿಟ್ಟರೆ, ಡಾ.ಮಾಲತಿ ಪಟ್ಟಣಶೆಟ್ಟಿ ಅವರ 'ನನಗೊಂದು ಮಗು ಬೇಕು...' ಕಥೆ ಹೆಣ್ತನದ ಹಕ್ಕಿಗೆ ದನಿಯಾಗುತ್ತದೆ. ಹೆಣ್ಣಿನ ಹಂಬಲವೆಂಬ ಅರಳಿಮರ ಡಾ.ವಿನಯಾ ಒಕ್ಕುಂದ ಅವರ 'ಆಲಿಶಾಳ ಅರಳಿಮರ' ಕಥೆಯಲ್ಲಿ ಅರಳಿದ್ದರೆ ಡಾ.ಶೋಭಾ ಹೆಗಡೆಯವರ 'ಧರ್ಮಸೂಕ್ಷ್ಮ' ಕಥೆ ಮಹಾಭಾರತವನ್ನು ನೆನಪಿಸುತ್ತದೆ, ಶ್ವೇತಾ ನರಗುಂದ ತಮ್ಮ 'ಕೊನೆಯ ಪತ್ರ' ಕಥೆಯಲ್ಲಿ ತಾಯಿಯ ಅಂತರಂಗವನ್ನು ಆರ್ದ್ರವಾಗಿ ನಿರೂಪಿಸುತ್ತಾರೆ. ಭಾಷೆ, ನಿರೂಪಣೆಯಿಂದ ಸೆಳೆಯುವ ಡಾ.ಪ್ರಜ್ಞಾ ಮತ್ತಿಹಳ್ಳಿ ಅವರ 'ಪೊಡವಿಗೋಸುಗ ಬಳಗ ಸಹಿತಲಿ', ಪ್ರೀತಿಪ್ರೇಮ ಕಮರುವ ಕಥೆ ಹೇಳುವ ಡಾ.ಮೈತ್ರೇಯಿಣಿ ಗದಿಗೆಪ್ಪನವರ್ ಅವರ 'ನುಂಗಿದಷ್ಟು ನಂಜು', ಕನ್ನಡನಾಡಿನ ಮೇಲಿನ ಪ್ರೀತಿ ಸಾರುವ ರೇಣುಕಾ ಕೋಡಗುಂಟಿ ಅವರ 'ಆಮೆಯ ಹಾದಿಯಲ್ಲಿ ಅಂತರಂಗದ ಪಯಣ', ಇಂದಿನ ಹೆಣ್ಮಕ್ಕಳ ಕಥೆ ಹೇಳುವ ನಿರ್ಮಲಾ ಶೆಟ್ಟರ ಬರೆದ 'ಅಪ್ಡೇಡ್' ಹಾಗೂ ಪೊಲೀಸನ ಬದುಕಿನ ಸಾರ್ಥಕ ಕಾರ್ಯದ ವಿವರ ನೀಡುವ ಸುನಂದಾ ಕಡಮೆ ಅವರ ಕಥೆ 'ನಿವೃತ್ತಿ'-ಎಲ್ಲವೂ ಒಂದಕ್ಕಿಂತ ಒಂದು ಭಿನ್ನವಾಗಿ ಗಮನ ಸೆಳೆಯುತ್ತವೆ. ಪ್ರಯೋಗವೊಂದರ ಭಾಗವಾಗಿ ದಾಖಲಾಗಿರುವ ಈ ಕಥೆಗಳು ಶಬ್ದಮಿತಿ ಮತ್ತು ಸಮಯಮಿತಿಗಳ ಚೌಕಟ್ಟಿಗೆ ತಲೆಬಾಗಿಯೂ ಈ ದಿನಮಾನದ ತಲ್ಲಣಗಳಿಗೆ ದನಿಯಾಗಿರುವುದು ವಿಶೇಷ. ■

ಒಡನಾಡಿಗಳ ಆಪ್ತಚಿತ್ರ



ಜೀವ ಜೀವದ ನಂಟು; ಲೇ: ಬಿ.ಎಸ್. ಜಯಪ್ರಕಾಶ ನಾರಾಯಣ ಪ್ರ: ವೀರಲೋಕ ಬುಕ್ಸ್, ಬೆಂಗಳೂರು ಪುಟ: 224; ಬೆಲೆ: 275 ರೂ.

ಪತ್ರಕರ್ತ, ಲೇಖಕ ಬಿ.ಎಸ್.ಜಯಪ್ರಕಾಶ ನಾರಾಯಣ ಅವರು ಬರೆದ ವ್ಯಕ್ತಿಚಿತ್ರಗಳ ಸಂಕಲನ 'ಜೀವ ಜೀವದ ನಂಟು'. ತಾವು ಬಾಲ್ಯದಲ್ಲಿ ನೋಡಿದವರು, ಜೊತೆಯಲ್ಲಿ ಕೆಲಸ ಮಾಡಿದ ಪತ್ರಕರ್ತರು, ಚಿತ್ರ ಕಲಾವಿದರು, ವಿದ್ವಾಂಸರು, ಪರ್ಯಾಯ ಚಿಕಿತ್ಸಕರು, ಪರಿವ್ರಾಜಕ ಮನೋಭಾವದ ಘನ ವ್ಯಕ್ತಿತ್ವದವರು ಹೀಗೆ ತಮ್ಮ ಸುತ್ತಲ ಪರಿಸರದಲ್ಲಿ ತಾವು ಕಂಡ, ತಮ್ಮನ್ನು ಪ್ರಭಾವಿಸಿದ 17 ವ್ಯಕ್ತಿತ್ವಗಳ ಕುರಿತು ಅವರು ಇಲ್ಲಿ ಪ್ರಬಂಧಗಳನ್ನು ಬರೆದಿದ್ದಾರೆ.

ಇಲ್ಲಿನ 17 ವ್ಯಕ್ತಿಗಳಲ್ಲಿ 16 ಜನರೂ ಭೌತಿಕವಾಗಿ ಇಂದಿಲ್ಲದವರು. ಆದರೆ, ಅವರೆಲ್ಲ ವಿವಿಧ ರೀತಿಗಳಲ್ಲಿ ಸಮಾಜ, ಸಂಸ್ಕೃತಿಯ ಉನ್ನತಿಗೆ ಕಾರಣರಾದವರು. ಪತ್ರಕರ್ತ ವಸಂತ ನಾಡಿಗೇರ್, ಚಿತ್ರ ಕಲಾವಿದ ನಾಗಲಿಂಗಪ್ಪ ಬಡಿಗೇರ್, ಧಾರ್ಮಿಕ-ಆಧ್ಯಾತ್ಮಿಕ ಲೋಕದಲ್ಲಿ ಸಕ್ರಿಯರಾಗಿದ್ದ ಮಂಡಗದ್ದೆ ಪ್ರಕಾಶ್ ಬಾಬು ಮೊದಲಾದ ವಿರಳ, ಸರಳ ವ್ಯಕ್ತಿತ್ವಗಳ ಕುರಿತು ಅವರು ಇಲ್ಲಿ ಬರೆದಿದ್ದಾರೆ. ತೆರೆಮರೆಯಲ್ಲಿ ಮರೆಯಾಗಿಯೇ ಹೋಗಬಹುದಾದ ಇಂತಹ ವ್ಯಕ್ತಿತ್ವಗಳ ಬಗೆಗೆ ಬರೆದುದು ಮೆಚ್ಚಬೇಕಾದ ಸಂಗತಿ. ಇದಲ್ಲದೆ ಬೇಂದ್ರೆ, ಕೃಷ್ಣಪ್ಪ, ಎಸ್.ಎಲ್.ಭೈರಪ್ಪ, ಕೆ.ಸಿ.ರಘು ಮೊದಲಾದ ಖ್ಯಾತನಾಮರ ಬಗೆಗೂ ಬರಹಗಳಿವೆ.

ಇಲ್ಲಿ ಮನುಷ್ಯ ಸ್ವಭಾವಗಳ ಚಿತ್ರಣವಿದೆ. ಆಪ್ತ ಒಡನಾಟದ ಉಲ್ಲೇಖಗಳಿವೆ. ವ್ಯಕ್ತಿಗಳ ವಿಮರ್ಶೆ, ಗುಣ-ದೋಷಗಳ ಪಟ್ಟಿ ಮಾಡುವುದಕ್ಕಿಂತಲೂ ಹೆಚ್ಚಾಗಿ ಅವರಿಂದ ಕಲಿಯಬೇಕಾದುದನ್ನು ಗಮನಿಸುವುದು, ಸಮಾಜವನ್ನು ಗ್ರಹಿಸುವುದು ಲೇಖಕರ ಉದ್ದೇಶವಾಗಿ ಕಾಣುತ್ತದೆ. ಲೇಖಕರ ಅನನ್ಯ ಆಪ್ತ ಶೈಲಿ ಒಳ್ಳೆಯ ಓದಿನ ಅನುಭವ ನೀಡುತ್ತದೆ. ■

ನ್ಯೂ ಬುಕ್

ಬದಲಾದ ಇತಿಹಾಸದ ನಿರೂಪಣೆ



ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್; ಲೇ: ನವೀನ್ ಸೂರಿಂಜೆ ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು ಪುಟ: 136; ಬೆಲೆ: 180ರೂ.

ಇತಿಹಾಸದ ಸತ್ಯ ಹಾಗೆಯೇ ಇದ್ದರೂ, ರಾಜಕೀಯ ಪ್ರೇರಿತವಾಗಿ ಅದು ವಿವಿಧ ಬಣ್ಣ ಬಳಿಯಲ್ಪಟ್ಟು ಬದಲಾಗಿ ಗೋಚರವಾಗುವುದಿದೆ. ಹೈದರ್ ಮತ್ತು ಟಿಪ್ಪುವಿನ ಕಾಲದ ಇತಿಹಾಸವೂ ಈ ಬಗೆಯ ರಾಜಕೀಯಾತ್ಮಕ ಪ್ರಭಾವಗಳಿಂದಾಗಿ ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿರುವುದು ವಿಪರ್ಯಾಸ. ಅಂದಿನ ಮೈಸೂರು ಮಾತ್ರವಲ್ಲದೆ ಕರಾವಳಿ ಭಾಗವನ್ನೂ ಆಳಿದ ಹೈದರ್, ಟಿಪ್ಪುವಿನ ಬಗ್ಗೆ ಇತಿಹಾಸ ಬಗೆಬಗೆಯಾಗಿ ದಾಖಲಿಸುತ್ತದೆ. ಆದರೆ, ಹೈದರ್ ಹಾಗೂ ಟಿಪ್ಪು ಇತಿಹಾಸದಲ್ಲಿ ದಾಖಲಾಗಿರುವಂತೆ ಹಿಂದೂ ದ್ವೇಷಿಗಳಲ್ಲ, ಅವರಿಬ್ಬರಿಗೂ ಪ್ರಜಾಪ್ರಭುತ್ವವಾದಿ ಮುಖವಿತ್ತು ಎಂಬುದನ್ನು ಹೇಳುತ್ತಿರುವ ಕೃತಿ 'ಕರಾವಳಿಯ ಚರಿತ್ರೆಯಲ್ಲಿ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್'. ಪತ್ರಕರ್ತ ನವೀನ್ ಸೂರಿಂಜೆಯವರು ಇತಿಹಾಸ-ವರ್ತಮಾನದ 35 ಪುಸ್ತಕಗಳನ್ನು ಅಧ್ಯಯನ ಮಾಡಿ ಬರೆದಿರುವ ಕೃತಿ ಇದು. ಕರಾವಳಿಯ ಕ್ರಿಶ್ಚಿಯನ್ನರು, ಮಾಧ್ವರು-ಹವ್ಯಕರು ಮೊದಲಾದ ಬ್ರಾಹ್ಮಣ ಪಂಗಡಗಳು, ಆ ಭಾಗದ ವಿವಿಧ ಮಠಗಳು, ಅರಸರು ಇತ್ಯಾದಿ ಸಮಾಜದ ವಿವಿಧ ಪಂಗಡಗಳ ಜೊತೆ ಹೈದರ್, ಟಿಪ್ಪುವಿಗೆ ಇದ್ದ ನಂಟು, ಅವು ಪಡೆದ ತಿರುವುಗಳು ಎಲ್ಲವುಗಳ ಬಗ್ಗೆ ಲೇಖಕರು ಇಲ್ಲಿ ವಿವರಗಳನ್ನು ದಾಖಲಿಸುತ್ತ ಹೋಗಿದ್ದಾರೆ. ಕೃತಿಗಾಗಿ ಅವರು ಮಾಡಿದ ಅಧ್ಯಯನ ಗಮನಾರ್ಹ. ■

ಪುಸ್ತಕ ಟಿಪ್ಪಣಿ

ಕಿರುಗವಿತೆಗಳ ಗುಚ್ಛ



ಪ್ರೀತಿ ಉಳಿಯಲಿ ಎನ್ನುತ / ಪ್ರೇಮಿಗಳು ಕುಳಿತಿರುವರು/ ಕಾಯುತ/ ರೈಲು ಹಳಿಗಳ ಮೇಲೆ! - ಎಂದು ನಾಲ್ಕು ಸಾಲುಗಳಲ್ಲಿ ದುರಂತ ಪ್ರೇಮವನ್ನು ತೆರೆದಿಡುವ ಕವಿ ಶಿವಾನಂದ ಹೊಂಬಳ. ಅವರ ಸಣ್ಣ ಸಣ್ಣ ಕವನಗಳ ಸಂಕಲನ 'ಹೊಲದಂಚಿನ ಹೂವುಗಳು'. ನಾಲ್ಕು, ಆರು, ಎಂಟು ಹೀಗೆ ವಿವಿಧ ಗಾತ್ರಗಳ ಒಟ್ಟು 112 ಕವನಗಳು ಈ ಸಂಕಲನದಲ್ಲಿವೆ. **ಹೊಲದಂಚಿನ ಹೂವುಗಳು; ಲೇ: ಶಿವಾನಂದ ಹೊಂಬಳ; ಪ್ರ: ನಲುಮೆ ಪ್ರಕಾಶನ, ಬೆಂಗಳೂರು; ಪುಟ: 72; ಬೆಲೆ: 80ರೂ.** ■

ಕನ್ನಡಕ್ಕೆ ಬಂದ ಹಂಗರ್

ನಾರ್ವೆಯ ನೊಬೆಲ್ ಪುರಸ್ಕೃತ ಲೇಖಕ ನಟ್ ಹಾಮ್ಸನ್ ಬರೆದ ಪ್ರಸಿದ್ಧ ಕಾದಂಬರಿ 'ಹಂಗರ್'. ಬಡ ಬರಹಗಾರ ತನ್ನ ಬಡತನವನ್ನೂ ನಿಭಾಯಿಸುತ್ತಾ ಆತ್ಮಗೌರವವನ್ನು ಉಳಿಸಿಕೊಳ್ಳಲು ಸೆಣಸುವ ಕಥೆ ಹೊಂದಿರುವ ಈ ಕಾದಂಬರಿ ಈಗ ಟಿ.ಡಿ.ರಾಜಣ್ಣ ತಗ್ಗಿ ಅವರ ಮೂಲಕ ಕನ್ನಡಕ್ಕೆ ಬಂದಿದೆ. 20ನೆಯ ಶತಮಾನದ ಕಾದಂಬರಿ ಕೃಷಿಗೆ ಹೊಸ ದಿಕ್ಕು ತೋರಿದ ಕೃತಿ ಎನಿಸಿಕೊಂಡಿರುವ ಕೃತಿ ಇದು. ಅನುವಾದ ಸರಳ, ಸುಲಲಿತವಾಗಿದೆ. **ಹಂಗರ್; ಮೂಲ: ನಟ್ ಹಾಮ್ಸನ್; ಅನು: ಟಿ.ಡಿ.ರಾಜಣ್ಣ ತಗ್ಗಿ; ಪ್ರ: ದೇಸಿ ಪುಸ್ತಕ, ಬೆಂಗಳೂರು; ಪುಟ: 212; ಬೆಲೆ: 260 ರೂ.** ■

ಇರಾನ್‌ನ ಇತಿವೃತ್ತ



ಪತ್ರಕರ್ತ ಗೋಪಾಲಕೃಷ್ಣ ಕುಂಟಿನಿ ಮಧ್ಯಪ್ರಾಚ್ಯ ಯುದ್ಧದ ಹಿನ್ನೆಲೆಯಲ್ಲಿ ವಿಶೇಷ ಒಳನೋಟಗಳುಳ್ಳ ಕೃತಿ ಬರೆದಿದ್ದಾರೆ. 'ಇರಾನ್: ಗುಡ್ ಬ್ಯಾಡ್ ಅಗ್ಲಿ' ಶೀರ್ಷಿಕೆಯ ಈ ಕೃತಿ ಇರಾನ್‌ನ ಹಿನ್ನೆಲೆ, ಖಮೇನಿ ಆಡಳಿತಕ್ಕೆ ಬಂದ ಬಗೆ, ಇಸ್ರೇಲ್ ಜೊತೆಗಿನ ವೈರ ಸೇರಿದಂತೆ ಇಂದಿನ ಯುದ್ಧ, ದೇಶದೊಳಗಿನ ಎಲ್ಲ ಆಗುಹೋಗುಗಳನ್ನು ಕಟ್ಟಿಕೊಡುತ್ತದೆ. ಕುಂಟಿನಿ ಅವರ ಶೈಲಿ ಚೆಂದ, ಸರಳ. **ಇರಾನ್: ಗುಡ್ ಬ್ಯಾಡ್ ಅಗ್ಲಿ; ಲೇ: ಗೋಪಾಲಕೃಷ್ಣ ಕುಂಟಿನಿ; ಪ್ರ: ಸಾವಣ್ಣ ಎಂಟರ್‌ಪ್ರೈಸಸ್, ಬೆಂ; ಪುಟ: 112; ಬೆಲೆ: 150 ರೂ.** ■

ಪುಟಾಣಿಗಳಿಗೆ ಕಾದಂಬರಿ



ಮಕ್ಕಳಿಗೆ ಆಸಕ್ತಿಕರವಾಗಿ ಕಥೆ ಹೇಳಬಲ್ಲ ಲೇಖಕಿ ಕೃಪಾ ಬಿ.ಎಂ. ಬರೆದಿರುವ ಮಕ್ಕಳ ಕಾದಂಬರಿ 'ಮಕ್ಕಳ ಮ್ಯಾಜಿಕ್: ಸಾಹಸ-02'. ಒಂದು ಪುಟದಲ್ಲಿ ಚಿತ್ರ ಇನ್ನೊಂದು ಪುಟದಲ್ಲಿ ಕಥೆ, ಹೀಗೆ ಪುಸ್ತಕ ವಿನ್ಯಾಸವೂ ಆಕರ್ಷಕ. ಆಕರ್ಷ್ ಎಂ.ಆರ್. ಅವರ ಚಿತ್ರಗಳು ಗಮನ ಸೆಳೆಯುತ್ತವೆ. **ಮಕ್ಕಳ ಮ್ಯಾಜಿಕ್; ಲೇ: ಕೃಪಾ ಬಿ.ಎಂ.; ಪ್ರ: ಅವ್ವ ಪುಸ್ತಕಾಲಯ, ತುಮಕೂರು; ಪುಟ: 92; ಬೆಲೆ: 150 ರೂ.** ■

ವಿಜಯಬಂಧ – 7934



ಎಡದಿಂದ ಬಲಕ್ಕೆ

1 ಹರನನ್ನು ನೋಡಲು ಹತ್ತಿ ಹೋಗುವುದೇ ಸಮೀಪ 3
3 ಹನುಮಂತರಾಯರು ತಂದು ಕೊಟ್ಟ ನಿರೂಪ 3
5 ಆತನು ಹೊತ್ತು ತಂದ ನಲವತ್ತು ಗಜಗಳ ಬಟ್ಟೆಯ ಗಂಟು 2
6 ಗುಟ್ಟು ಹೊರ ಬಂದಾಗ ಪುಸ್ತಕಕ್ಕೆ ಹಾಕಿದ ಮೇಲುಹೊದಿಕೆ 2
7 ಬೀಡಿನಲ್ಲಿ ಕಟ್ಟಿದ ಅತಿಥಿಗಳು ಉಳಿದುಕೊಳ್ಳುವ ಮನೆ 3
8 ನೂರು ತರಂಗಿಣಿಗಳು ಒಟ್ಟಾಗಿ ಹರಿದಿವೆ 4
10 ಮರದ ಸಹವಾಸದಲ್ಲಿದೆ ಸಮನ್ವಯತೆ 4
13 ನಕ್ಷೆಯನ್ನು ಹತ್ತಿರ ತಂದ ವಿಶ್ವಾಮಿತ್ರನ ಶಿಷ್ಯ 4
16 ಗೃಹಿಣಿ ಕೇಳಿದ ತೆಂಗಿನಕಾಯಿ ತನ್ನಿ 4
18 ಅನರ್ಘ್ಯ ಮಣಿಗಳಿಂದ ರಚಿತವಾದ ದೇಹ 3
19 ರಸ್ತೆಯಲ್ಲಿ ವಿರುತ್ತಾ ಬಂದ ದೇವರ ರಥ 2
20 ಮಾಂಕಾಳಿಯೂ ಸೇವಿಸಿದ ಪ್ರಾಣವಾಯು 2
21 ಬಾಗಿಲನ್ನು ಭದ್ರಪಡಿಸಲು ಸೇರಿಸಿದ ಸರಪಳಿ ಕೊಂಡಿ 3
22 ಜಟೆಯ ಸಿಕ್ಕನ್ನು ಬಿಡಿಸುವುದು ತುಂಬಾ ಕ್ಲಿಷ್ಟ 3

ಮೇಲಿನಿಂದ ಕೆಳಕ್ಕೆ

1 ಆಮಂತ್ರಣ ನೀಡಿದ ಕೂಡಲೇ ಬಂದ ಆಂಜನೇಯ 4
2 ದೇವರ ತೇರು ಸಂಚರಿಸುವ ಊರಿನ ಪ್ರಮುಖ ಹಾದಿ 4
3 ದಶರಥ ಪುತ್ರ ಆರಾಮಾಗಿ ಕುಳಿತು ಸೇವಿಸಿದ ಪೇಯ 4
4 ಸದಾ ಸರ ಹಿಡಿದು ಕುಳಿತ ಸೈನ್ಯದ ಅಧಿಕಾರಿ 4
8 ಮನದಿಂದಲೇ ರೋಗ ವಾಸಿಯಾಗಿದೆ 3
9 ನಳಿನಾಕ್ಷ ಚಿತ್ರದಲ್ಲಿ ಕಂಡ ತಾರೆ 3
11 ಮರದ ಮೇಲೆ ಮಂಡಿಯೂರಿ ಕುಳಿತ ನವಿಲು 3
12 ಹಪ್ಪಳ ಮುರಿಯುವಾಗ ಕೇಳಿದ ಶಬ್ದ 3
14 ಅಲ್ಪಕಾಲದಲ್ಲಿ ಸವಿಯನ್ನು ತಂದು ಮರೆಯಾಗುವ ಮಿಂಚು 4
15 ಭರಣಿ ಹೊತ್ತು ತಂದ ಲೆಕ್ಕಿಗ 4
16 ಸರ್ಪಲೋಕದ ಅರಸ ಗಜದ ಮೇಲೆ ಕುಳಿತ 4
17 ಸುಡುಗಾಡು ಸುತ್ತಿ ಬಂದ ಕೆಟ್ಟ ಸಮಯ 4

ವಿಜಯಬಂಧ | 7933

ಎಡದಿಂದ ಬಲಕ್ಕೆ: 2.ಹಾಸ್ಯಚಟಾಕಿ 6.ಕವಲು 7.ವಿಹಾರ 8.ಅಂಬರ 10.ಆತುರ 12.ಅಜ 13.ಸದರ 14.ಸಿರಾ 15.ನಯನ 17.ತವಕ 22.ಗುಮಾನಿ 23.ಚರಂತಿ 24.ಕರ್ಣಕಠೋರ.

ಮೇಲಿನಿಂದ ಕೆಳಕ್ಕೆ: 1.ತಾಕತ್ತು 2.ಹಾಲುಗಂಬ 3.ಚತುರ್ಥಿ 4.ಕಿವಿಮಾತು 5.ಸಾರಥ್ಯ 8.ಅಂಜನ 9.ರಸನ 10.ಆರತ 11.ರಸಿಕ 16.ಯವನಿಕ 18.ವನಚರ 19.ಉಂಗುರ 20.ಮಂಡೂಕ 21.ವಂತಿಗೆ.

ಅ.ನಾ. ಪ್ರಹ್ಲಾದರಾವ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ಕಟಕ, ಧನು, ಮೀನ ರಾಶಿಯವರಿಗೆ ಇಷ್ಟಾರ್ಥ ನೆರವೇರಲಿದೆ

ಮೇಷ ಹೊಸ ಉದ್ಯೋಗ ಅಥವಾ ಕರಾರುಗಳ ವಿಚಾರಗಳಲ್ಲಿ ಮುಂದುವರಿಯುವುದು ಸರಿಯಲ್ಲ. ಮಾಧ್ಯಮ ಕ್ಷೇತ್ರದಲ್ಲಿರುವವರಿಗೆ ಉತ್ತಮ ದಿನ. ಬಂಧುಗಳೊಂದಿಗೆ ಮನಸ್ತಾಪ ಉಂಟಾಗಬಹುದು. **ಅದೃಷ್ಟ ಸಂಖ್ಯೆ 2, ಅದೃಷ್ಟ ಬಣ್ಣ ಹಸಿರು**
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ ಬಾಕಿ ಇರಿಸಿದ ಕೆಲಸ-ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಗಮನ ವಹಿಸಿ. ವಾಹನಗಳ ಬಿಡಿ ಭಾಗಗಳ ಮಾರಾಟಗಳಿಂದ ಲಾಭ ಪಡೆಯುವಿರಿ. ಹಾಲಿನ ವ್ಯಾಪಾರಿಗಳಿಗೆ ಲಾಭವಿದೆ. **ಅದೃಷ್ಟ ಸಂಖ್ಯೆ 8, ಅದೃಷ್ಟ ಬಣ್ಣ ಹಳದಿ**
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ ನಾಳೆಯ ಕಾರ್ಯಕ್ರಮಗಳಿಗೆ ಇಂದಿನಿಂದಲೇ ತಯಾರಿಯನ್ನು ನಡೆಸಿ. ಹೊಸ ಕ್ರಿಯಾಶೀಲ ಉದ್ಯೋಗದಿಂದ ತೃಪ್ತಿ ಕಾಣುವಿರಿ. ದೈನಂದಿನ ಕೆಲಸಗಳಲ್ಲಿ ಬದಲಾವಣೆಗಳು ಇರುವುದಿಲ್ಲ. **ಅದೃಷ್ಟ ಸಂಖ್ಯೆ 4, ಅದೃಷ್ಟ ಬಣ್ಣ ಕೆಂಪು**
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರ, ಪುನರ್ವಸು 1, 2, 3

ಕಟಕ ಕುಟುಂಬದ ಸದಸ್ಯರು ಜೊತೆಗೂಡಿ ಸಂತೋಷಮಯವಾಗಿ ಕಾಲ ಕಳೆಯುವ ಅವಕಾಶ ಲಭ್ಯ. ಸ್ನೇಹಿತರ ಸಹಾಯ, ಸಹಕಾರ ಹಾಗೂ ಸಲಹೆಯಿಂದ ಎಲ್ಲವೂ ಸರಾಗವಾಗಿ ನಡೆಯಲಿವೆ. **ಅದೃಷ್ಟ ಸಂಖ್ಯೆ 1, ಅದೃಷ್ಟ ಬಣ್ಣ ಆಕಾಶನೀಲಿ**
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ ಸಂಸಾರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಏಕಾಏಕಿ ನಿರ್ಧಾರ ತೆಗೆದುಕೊಳ್ಳುವುದರ ಬದಲು ಮಡದಿಯೊಂದಿಗೆ ಚರ್ಚೆ ನಡೆಸಿ. ಸ್ನೇಹಿತರ ಆತ್ಮೀಯ ಮಾತುಗಳಿಂದ ಜೀವನದಲ್ಲಿ ಧೈರ್ಯ ಬಂದಂತಾಗುತ್ತದೆ. **ಅದೃಷ್ಟ ಸಂಖ್ಯೆ 7, ಅದೃಷ್ಟ ಬಣ್ಣ ಕಿತ್ತಳೆ**
(ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರದಿಂದ ಲಾಭ ಗಳಿಸುವಿರಿ. ಹೊಸ ವಸ್ತುಗಳನ್ನು ಕೊಳ್ಳುವ ಯೋಗವಿದೆ. ವಾಹನಾದಿ ಯಂತ್ರಗಳಿಂದ ಧನ, ಸಮಯ ವ್ಯಯವಾಗಬಹುದು. ಶ್ರೀ ಮಹಾಗಣಪತಿಯನ್ನು ಆರಾಧಿಸಿ. **ಅದೃಷ್ಟ ಸಂಖ್ಯೆ 9, ಅದೃಷ್ಟ ಬಣ್ಣ ಗುಲಾಬಿ**
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ ವಿದೇಶಿ ವ್ಯವಹಾರ ಲಾಭದಾಯಕವಾಗಿರುತ್ತದೆ. ವ್ಯವಹಾರಕ್ಕಾಗಿ ವಿದೇಶಿ ಯಾನ ಮಾಡಬೇಕಾದ ಪರಿಸ್ಥಿತಿ ಬರಬಹುದು. ಬಾಡಿಗೆದಾರರಿಂದ ಸಣ್ಣಪುಟ್ಟ ಕಿರಿಕಿರಿ ತಪ್ಪಿದ್ದಲ್ಲ. ಆರೋಗ್ಯದಲ್ಲಿ ಕಾಳಜಿ ಇರಲಿ. **ಅದೃಷ್ಟ ಸಂಖ್ಯೆ 6, ಅದೃಷ್ಟ ಬಣ್ಣ ಆಕಾಶ ನೀಲಿ**
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ ಮೌನವೆಂಬ ಅಸ್ತ್ರವು ಹಲವು ಸಮಸ್ಯೆಗಳಿಂದ ದೂರ ಉಳಿಯುವ ಹಾಗೆ ಮಾಡಲಿದೆ. ರಾಜಕೀಯ ವಲಯದಲ್ಲಿ ನಿರೀಕ್ಷಿತ ಕಾರ್ಯಗಳು ನೆರವೇರಲಿವೆ. ಸ್ನೇಹಿತನ ಆಗಮನದಿಂದ ಮನಸ್ಸಿಗೆ ನೆಮ್ಮದಿ. **ಅದೃಷ್ಟ ಸಂಖ್ಯೆ 3, ಅದೃಷ್ಟ ಬಣ್ಣ ಕಂದು**
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು ನೇರ ನಡೆ-ನುಡಿಯು ಕಲಹ ಉಂಟಾಗಲು ಕಾರಣವಾಗಬಹುದು. ದೇಹದಲ್ಲಿ ಉತ್ಸಾಹವಿರುವುದರಿಂದ ಎಲ್ಲ ಕಾರ್ಯಗಳಲ್ಲಿ ಯಶಸ್ಸು ದೊರೆಯುವುದು. **ಅದೃಷ್ಟ ಸಂಖ್ಯೆ 5, ಅದೃಷ್ಟ ಬಣ್ಣ ಸಿಂಧೂರ ಕೆಂಪು**
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ ರೋಗ ಉಲ್ಬಣವಾಗುವ ಸಾಧ್ಯತೆಗಳಿವೆ. ಪ್ರಯಾಣ ಮತ್ತು ಹೊಸಬರ ಪರಿಚಯ ಅನುಕೂಲಕರವಾಗಲಿದೆ. ಇಂದಿನ ಕೆಲಸಗಳಿಗೆ ಆತ್ಮಸ್ಥೈರ್ಯ ಮುಖ್ಯ. **ಅದೃಷ್ಟ ಸಂಖ್ಯೆ 6, ಅದೃಷ್ಟ ಬಣ್ಣ ಬಿಳಿ**
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ ಆಡಳಿತ ಮಂಡಳಿಯ ಎದುರು ಕಾರ್ಮಿಕರ ಪರವಾಗಿ ನಿಲ್ಲುವುದು ಉದ್ಯೋಗಕ್ಕೆ ಕಂಟಕವನ್ನು ತಂದೊಡ್ಡಲಿದೆ. ಉದ್ವೇಗಕ್ಕೆ ಒಳಗಾಗದಿದ್ದರೆ ಮನಸ್ಸು ನಿಮ್ಮದೇ. **ಅದೃಷ್ಟ ಸಂಖ್ಯೆ 4, ಅದೃಷ್ಟ ಬಣ್ಣ ಕಡುಗೆಂಪು**
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ ಹಿರಿಯ ಅಧಿಕಾರಿಗಳ ಆಕಸ್ಮಿಕ ಭೇಟಿಯ ಫಲವಾಗಿ ಉದ್ಯೋಗದಲ್ಲಿ ಹುದ್ದೆ, ಅಧಿಕಾರ ಪ್ರಾಪ್ತಿಯಾಗಲಿದೆ. ಸ್ನೇಹಪರ ಸ್ವಭಾವದಿಂದ ವೈಯಕ್ತಿಕ ಸ್ಥಾನಮಾನಗಳು ಲಭಿಸಲಿವೆ. ಆತ್ಮವಿಶ್ವಾಸವೇ ಶ್ರೀರಕ್ಷೆಯಾಗಿರುತ್ತದೆ. **ಅದೃಷ್ಟ ಸಂಖ್ಯೆ 8, ಅದೃಷ್ಟ ಬಣ್ಣ ಬಿಳಿ**
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಮೆಸ್ಕಾಂ ಆದೇಶ ರದ್ದು: ಮತ್ತೆ ಸೇವೆಗೆ ಪರಿಗಣಿಸಲು ನಿರ್ದೇಶನ

■ **ವಿಕ ಸುದ್ದಿಲೋಕ** ಬೆಂಗಳೂರು

ಕೊಲೆ ಆರೋಪದಲ್ಲಿ ವಿಚಾರಣಾಧೀನ ಕೈದಿಗಳಾಗಿ ನ್ಯಾಯಾಂಗ ಬಂಧನದಲ್ಲಿದ್ದು ಕೆಲಸಕ್ಕೆ ಸುದೀರ್ಘ ಗೈರು ಹಾಜರಾದ ಇಬ್ಬರು ಕಾರ್ಮಿಕರನ್ನು ಅಧಿಕೃತ ವಿಚಾರಣೆ ನಡೆಸದೆ ಸೇವೆಯಿಂದ ವಜಾಗೊಳಿಸಿದ್ದ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ (ಮೆಸ್ಕಾಂ) ಆದೇಶ ರದ್ದುಗೊಳಿಸಿರುವ ಹೈಕೋರ್ಟ್, ಇಬ್ಬರು ಗ್ಯಾಂಗ್‌ಮನ್‌ಗಳನ್ನು ಮತ್ತೆ ಸೇವೆಗೆ ಪರಿಗಣಿಸಬೇಕೆಂದು ಆದೇಶಿಸಿದೆ.

ಮೆಸ್ಕಾಂ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾ. ಅನು ಶಿವರಾಮನ್ ಮತ್ತು ಟಿ.ಎಂ.ನದಾಫ್ ಅವರಿದ್ದ ಪೀಠ ಈ ಆದೇಶ ನೀಡಿದೆ. ''ಕಾರ್ಮಿಕರನ್ನು ಸೇವೆಯಿಂದ ವಜಾಗೊಳಿಸಬೇಕಾದಲ್ಲಿ ಪ್ರೊಬೇಷನರಿ ಮಜ್ದೂರ್ ನಿಯಮಗಳು 1997ರ ಪ್ರಕಾರ ಕಡ್ಡಾಯವಾಗಿ ಮೌಖಿಕ ವಿಚಾರಣೆ ನಡೆಸಬೇಕು. ಆದರೆ ಈ ಪ್ರಕರಣದಲ್ಲಿ ವಿಚಾರಣೆ ನಡೆಸಿಲ್ಲ. ಇಬ್ಬರೂ ಗ್ಯಾಂಗ್‌ಮನ್‌ಗಳು, ನ್ಯಾಯಾಂಗ ಬಂಧನದಲ್ಲಿದ್ದ ಕಾರಣ ಕೆಲಸಕ್ಕೆ ಗೈರು ಹಾಜರಾಗಿದ್ದರು. ಇದು ಅವರ ನಿಯಂತ್ರಣ ಮೀರಿದ ಅನಿವಾರ್ಯ ಪರಿಸ್ಥಿತಿಯಾಗಿದ್ದರಿಂದ ಅದನ್ನು ಸ್ವಯಂಪ್ರೇರಿತವಾಗಿ ಕೆಲಸ ಬಿಟ್ಟು ಹೋದ ಪ್ರಕರಣವೆಂದು ಪರಿಗಣಿಸಲಾಗುವುದಿಲ್ಲ'' ಎಂದು ನ್ಯಾಯಪೀಠ ತಿಳಿಸಿದೆ.

ಇಬ್ಬರು ಕಾರ್ಮಿಕರ ವಜಾಗೊಳಿಸಿದ ಪ್ರಕರಣ

''ಗೈರು ಹಾಜರಿಯು ಉದ್ದೇಶಪೂರ್ವಕವಾಗಿದೆಯೇ ಅಥವಾ ಅನಿವಾರ್ಯ ಕಾರಣಗಳಿಂದಾಗಿದೆಯೇ ಎಂಬುದನ್ನು ಇಲಾಖಾ ತನಿಖೆಯ ಮೂಲಕ ಸಾಬೀತುಪಡಿಸದೆ ನೇರ ವಜಾ ಮಾಡುವುದು ಸರಿಯಾದ ಕ್ರಮವಲ್ಲ,'' ಎಂದು ತಿಳಿಸಿರುವ ನ್ಯಾಯಪೀಠ, ಇಬ್ಬರೂ ನೌಕರರು ಜಾಮೀನಿನ ಮೇಲೆ ಬಿಡುಗಡೆಯಾದ ದಿನಾಂಕದಿಂದ ಮರು ನೇಮಕವಾಗುವವರೆಗಿನ ಅವಧಿಗೆ ಶೇ.50ರಷ್ಟು ಹಿಂಬಾಕಿ ವೇತನ ಮತ್ತು ಸೇವಾ ಮುಂದುವರಿಕೆ (ಕಂಟಿನ್ಯೂಟಿ) ನೀಡಬೇಕು ಎಂದು ಮೆಸ್ಕಾಂಗೆ ನಿರ್ದೇಶನ ನೀಡಿ ಆದೇಶಿಸಿದೆ.

ಅರ್ಜಿದಾರರು 2005ರಲ್ಲಿ ಸೇವೆಯಿಂದ ವಜಾಗೊಂಡಿದ್ದರೂ 2013ರಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಆದ್ದರಿಂದ ಅವರ ಮನವಿ ಪರಿಗಣಿಸಬಾರದೆಂಬ ಮೆಸ್ಕಾಂ ಪರ ವಕೀಲರ ವಾದವನ್ನು ತಿರಸ್ಕರಿಸಿರುವ ನ್ಯಾಯಪೀಠ, 'ಇಬ್ಬರೂ ಕಾರ್ಮಿಕರು ಕ್ರಿಮಿನಲ್ ಪ್ರಕರಣದಿಂದ ಖುಲಾಸೆಗೊಳ್ಳುವವರೆಗೆ ಕಾಯಬೇಕಾಗಿತ್ತು ಮತ್ತು ಖುಲಾಸೆಗೊಂಡ ಕೂಡಲೇ ಮನವಿ ಸಲ್ಲಿಸಿದ್ದಾರೆ. ಆದ್ದರಿಂದ ವಿಳಂಬದ ವಾದವನ್ನು ಒಪ್ಪಲಾಗದು' ಎಂದು ಪೀಠ ತಿಳಿಸಿದೆ.

ಪ್ರಕರಣದ ಹಿನ್ನೆಲೆ: ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಉಪ ವಿಭಾಗದ ಮೆಸ್ಕಾಂನಲ್ಲಿ ಗೋಪಾಲಕೃಷ್ಣ ಮತ್ತು ಕೆ.ಅಶೋಕ್ ಕುಮಾರ್ ಎಂಬುವವರು 1998ರಿಂದ ತಾತ್ಕಾಲಿಕ ಗ್ಯಾಂಗ್‌ಮನ್‌ಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. 2005ರ ಜನವರಿಯಲ್ಲಿ ಕೊಲೆ ಪ್ರಕರಣವೊಂದರ ಸಂಬಂಧ ಇಬ್ಬರನ್ನು ಪೊಲೀಸರು ಬಂಧಿಸಿದ್ದರು. ಗೋಪಾಲಕೃಷ್ಣ 4 ತಿಂಗಳ ನಂತರ ಜಾಮೀನಿನ ಮೇಲೆ ಬಿಡುಗಡೆಯಾದರೆ, ಅಶೋಕ್ ಕುಮಾರ್ ಸುಮಾರು ಒಂದೂವರೆ ವರ್ಷಗಳ ಕಾಲ ನ್ಯಾಯಾಂಗ ಬಂಧನದಲ್ಲಿದ್ದು, ಬಳಿಕ ಬಿಡುಗಡೆಯಾಗಿದ್ದರು. ಸತತ ಗೈರು ಹಾಜರಿ ಸಂಬಂಧ ಹಲವು ಬಾರಿ ನೋಟಿಸ್ ನೀಡಿದ್ದ ಮೆಸ್ಕಾಂ ಆಡಳಿತ ಮಂಡಳಿ, ಅನಧಿಕೃತ ಗೈರು ಹಾಜರಿ ಎಂದು ಪರಿಗಣಿಸಿ 2005ರಲ್ಲಿ ಇವರಿಬ್ಬರನ್ನೂ ಸೇವೆಯಿಂದ ವಜಾಗೊಳಿಸಿತ್ತು. ಈ ನಡುವೆ, ಇಬ್ಬರು ಕಾರ್ಮಿಕರು ಕ್ರಿಮಿನಲ್ ಪ್ರಕರಣದಿಂದ ಖುಲಾಸೆಗೊಂಡ ನಂತರ ತಮ್ಮನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವಂತೆ ಮೆಸ್ಕಾಂಗೆ ಮನವಿ ಸಲ್ಲಿಸಿದ್ದರು. ಆದರೆ ಮೆಸ್ಕಾಂ ಈ ಮನವಿ ತಿರಸ್ಕರಿಸಿದ ಕಾರಣ, ಅವರು ಹೈಕೋರ್ಟ್ ಮೊರೆ ಹೋಗಿದ್ದರು. ಏಕಸದಸ್ಯ ಪೀಠ, ಇಬ್ಬರೂ ಗ್ಯಾಂಗ್‌ಮನ್‌ಗಳನ್ನು ಸೇವೆಗೆ ಮರು ಸೇರ್ಪಡೆ ಮಾಡಿ, ಜಾಮೀನು ಪಡೆದ ದಿನದಿಂದ ಬಾಕಿ ವೇತನದ ಶೇ.50ರಷ್ಟು ಬಿಡುಗಡೆ ಮಾಡಬೇಕು ಎಂದು ಸೂಚನೆ ನೀಡಿತ್ತು. ಅದನ್ನು ಪ್ರಶ್ನಿಸಿ ಮೆಸ್ಕಾಂ ಮೇಲ್ಮನವಿ ಸಲ್ಲಿಸಿತ್ತು.

ಇಬ್ಬರು ಮಕ್ಕಳ ಸಾಯಿಸಿ ತಂದೆ ಆತ್ಮಹತ್ಯೆ

■ **ವಿಕ ಸುದ್ದಿಲೋಕ** ಕುಣಿಗಲ್ (ತುಮಕೂರು)

ತಾಲೂಕಿನ ಆಲ್ಕೆರೆ ಗ್ರಾಮದಲ್ಲಿ ತನ್ನಿಬ್ಬರು ಮಕ್ಕಳನ್ನು ಸಾಯಿಸಿ ತಂದೆಯೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಳಕಿಗೆ ಬಂದಿದೆ.

ಶುಕ್ರವಾರ ತಡರಾತ್ರಿ ಈ ಘಟನೆ ನಡೆದಿದೆ. ಶಿವಣ್ಣ(40) ಎಂಬಾತ ತಮ್ಮಿಬ್ಬರು ಮಕ್ಕಳಾದ ಜೀವನ್(10) ಮತ್ತು ಪ್ರಾಣೇಶ್(6)ರನ್ನು ಸಾಯಿಸಿ ತಾನೂ ನೇಣು ಬಿಗಿದುಕೊಂಡ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮನೆಯಲ್ಲಿ ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಶಿವಣ್ಣನ ಮೃತದೇಹ ಪತ್ತೆಯಾದರೆ, ಮಕ್ಕಳು ಮಂಚದ ಮೇಲೆ ಮಲಗಿದ್ದ ಸ್ಥಿತಿಯಲ್ಲಿ ಮೃತಪಟ್ಟಿದ್ದು, ಕೌಟುಂಬಿಕ ಕಲಹ ಘಟನೆಗೆ ಕಾರಣ ಎಂಬುದು ಮೇಲ್ನೋಟಕ್ಕೆ ತಿಳಿದು ಬಂದಿದೆ.

ಒಂದು ವಾರದ ಹಿಂದಷ್ಟೇ ಮೃತ ಶಿವಣ್ಣನ ಪತ್ನಿ ಕಾವ್ಯಾ, ತಮ್ಮ ಅಕ್ಕನ ಮಗ ಹೇಮಂತ್ ಎಂಬಾತನ ಜತೆ ಪರಾರಿಯಾಗಿದ್ದರು. ಇದಾದ ಬಳಿಕ ಪ್ರಕರಣ ಪೊಲೀಸ್ ಠಾಣೆಯ ಮೆಟ್ಟಿಲೇರಿತ್ತು. ಆಲ್ಕೆರೆ ಗ್ರಾಮಕ್ಕೆ ಬಂದಿದ್ದ ಕಾವ್ಯಾ ಮನೆಯಲ್ಲಿದ್ದ ಹಣ ಮತ್ತು ಚಿನ್ನಾಭರಣ ದೋಚಿ ಪರಾರಿಯಾಗಿದ್ದರು. ಇದರಿಂದ ಮನನೊಂದು ಶಿವಣ್ಣ ತನ್ನಿಬ್ಬರು ಮಕ್ಕಳೊಂದಿಗೆ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಕಳೆದ ಮೂರು ವರ್ಷಗಳ ಹಿಂದೆ ಸೊಸೆಯ ಕಾಟಕ್ಕೆ ಬೇಸತ್ತು ಶಿವಣ್ಣನ ತಾಯಿ ಹೊನ್ನಮ್ಮ ಬಾವಿಗೆ ಬಿದ್ದು ಸಾವನ್ನಪ್ಪಿದ್ದರು. ಕುಣಿಗಲ್ ಠಾಣೆಯ ಸಿಪಿಐ ಮಾಧ್ಯಾನಾಯಕ್, ಎಎಸ್‌ಪಿ ಗೋವಿಂದಸ್ವಾಮಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ. ಪತ್ನಿ ಕಾವ್ಯಾರನ್ನು ವಶಕ್ಕೆ ಪಡೆದಿರುವ ಪೊಲೀಸರು, ಹೇಮಂತ್‌ಗಾಗಿ ಹುಡುಕಾಡುತ್ತಿದ್ದಾರೆ.

ನೇಮಕಾತಿಗೆ ಶುಕ್ರದೆಸೆ

» ಮೊದಲ ಪುಟದಿಂದ

ಬಜೆಟ್ ಅನುಷ್ಠಾನ: ''2026-27 ನೇ ಸಾಲಿನ ಬಜೆಟ್ ಜಾರಿಯಾಗಿ ತಿಂಗಳು ಕಳೆದರೂ ಮುಂಗಡಪತ್ರದಲ್ಲಿನ ಘೋಷಣೆಗಳ ಪೈಕಿ 5 ವಿಚಾರಗಳ ಬಗ್ಗೆ ಮಾತ್ರವೇ ಘೋಷಣೆಗಳ ಸರಕಾರಿ ಆದೇಶ ಹೊರಡಿಸಲಾಗಿದೆ. ಕಳೆದ ವರ್ಷದ ಮುಂಗಡಪತ್ರದಲ್ಲಿನ 15 ಘೋಷಣೆಗಳು ಇನ್ನೂ ಜಾರಿಯಾಗಿಲ್ಲ, ಈ ವರ್ಷದ ಬಜೆಟ್‌ನಲ್ಲಿ 218 ಹೊಸ ಘೋಷಣೆಗಳು ಸೇರಿದಂತೆ ಒಟ್ಟಾರೆ 565 ಕಾರ್ಯಕ್ರಮಗಳನ್ನು ಪ್ರಕಟಿಸಲಾಗಿದೆ. ಈ ತಿಂಗಳಾಂತ್ಯದೊಳಗೆ ಬಜೆಟ್‌ನ ಈ ಎಲ್ಲ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆದೇಶಗಳನ್ನು ಹೊರಡಿಸಿ ಅನುಷ್ಠಾನ ಕಾರ್ಯವನ್ನು ಆರಂಭಿಸಬೇಕು. ತಪ್ಪಿದರೆ ಸಂಬಂಧಪಟ್ಟ ಇಲಾಖೆ ಕಾರ್ಯದರ್ಶಿಯನ್ನೇ ನೇರವಾಗಿ ಹೊಣೆಗಾರರಾಗಿ ಮಾಡಲಾಗುವುದು,'' ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

''ಬಜೆಟ್ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪ್ರಾಯೋಗಿಕ ತೊಡಕುಗಳು ಎದುರಾದರೆ, ನೇರವಾಗಿ ನನ್ನ ಅಥವಾ ಮುಖ್ಯ ಕಾರ್ಯದರ್ಶಿ ಗಮನಕ್ಕೆ ತರಬೇಕು. ಜತೆಗೆ, ತಾವು ಅಧಿಕಾರಕ್ಕೆ ಬಂದ ಬಳಿಕ ನಡೆಸಿದ ಎರಡು ಜನಸ್ಪಂದನ ಸಭೆಯಲ್ಲಿ ಸ್ವೀಕರಿಸಲಾಗಿದ್ದ 15,334 ಸ್ವೀಕೃತಿಗಳ ಪೈಕಿ ಇನ್ನೂ ಬಾಕಿ ಇರುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಬೇಕು. ಸುಮಾರು 3.27 ಲಕ್ಷ ಸಾರ್ವಜನಿಕ ಕುಂದುಕೊರತೆ ಅರ್ಜಿಗಳ ಪೈಕಿ ಸಾವಿರಾರು ಅರ್ಜಿಗಳ ವಿಲೇವಾರಿ ಆಗಿಲ್ಲ, ಇದರಿಂದ ಜನರಿಗೆ ಸರಕಾರದ ಮೇಲೆ ಜನರ ವಿಶ್ವಾಸ ಉಳಿಯುವುದಿಲ್ಲ, ಇದಕ್ಕೆ ಮುಂದಿನ ದಿನಗಳಲ್ಲಿ ಅವಕಾಶ ಕೊಡಬಾರದು. ಸಕಾಲ ಯೋಜನೆಯಡಿ ಸ್ವೀಕರಿಸುವ ಅರ್ಜಿಗಳನ್ನು ನಿಗದಿತ ಕಾಲಮಿತಿಯಲ್ಲಿ ವಿಲೇವಾರಿ ಮಾಡಬೇಕು,'' ಎಂದು ಸೂಚಿಸಿದರು.

''ಕೇಂದ್ರ ಪುರಸ್ಕೃತ ನಾನಾ ಯೋಜನೆಗಳಡಿ 2025-26 ನೇ ಸಾಲಿನಲ್ಲಿ ರಾಜ್ಯ ಸರಕಾರ ತನ್ನ ಪಾಲಿನ 22,768 ಕೋಟಿ ರೂ. ಹಾಗೂ ಕೇಂದ್ರ ಸರಕಾರ 16,729 ಕೋಟಿ ರೂ. ಬಿಡುಗಡೆ ಮಾಡಿದೆ. ಕೇಂದ್ರದಿಂದ ಇನ್ನೂ 11,367 ಕೋಟಿ ರೂ. ಅನುದಾನ ಬಿಡುಗಡೆಗೆ ಬಾಕಿಯಿದೆ. ಒಟ್ಟಾರೆ ಲಭ್ಯವಿರುವ 42,222 ಕೋಟಿ ಅನುದಾನದ ಪೈಕಿ 38,236 ಕೋಟಿ ರೂ. ವೆಚ್ಚ ಮಾಡಲಾಗಿದೆ. ಉಳಿದ ಅನುದಾನವನ್ನು ನಿಗದಿತ ಕಾಲಮಿತಿಯೊಳಗೆ ಖರ್ಚು ಮಾಡಲು ಕ್ರಮ ವಹಿಸಬೇಕು,'' ಎಂದು ನಿರ್ದೇಶನ ನೀಡಿದರು.

ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಭೆಯಲ್ಲಿದ್ದರು.



ಬೆಂಗಳೂರಿನ ಚಾಮರಾಜಪೇಟೆಯ ಎಸ್‌ಎಲ್‌ವಿ ಕಾಫಿ ಬಾರ್ ಹೋಟೆಲ್‌ನಲ್ಲಿ ಶನಿವಾರ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್, ಎಂಎಲ್‌ಸಿ ಸಿ.ಟಿ.ರವಿ ಅವರು ಒಟ್ಟಿಗೆ ಆಗಮಿಸಿ ಉಪಾಹಾರ ಸೇವಿಸಿದರು.

ಕೆಲವು ರೈಲು ಸಂಚಾರ ಸೇವೆ ರದ್ದು

■ **ವಿಕ ಸುದ್ದಿಲೋಕ** ಬೆಂಗಳೂರು

ಚನ್ನಸಂದ್ರ ನಿಲ್ದಾಣದಲ್ಲಿ ಯಾರ್ಡ್ ಮರುವಿನ್ಯಾಸ ಕಾಮಗಾರಿ ಕೈಗೊಂಡಿರುವ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ಸಂಚರಿಸುವ ನಾನಾ ರೈಲುಗಳ ಸಂಚಾರವನ್ನು ನೈರುತ್ಯ ರೈಲ್ವೆ ರದ್ದುಪಡಿಸಿದೆ.

ಮೇ 4ರಂದು ಕೆಎಸ್‌ಆರ್ ಬೆಂಗಳೂರು-ಕೋಲಾರ ಮೆಮು, ಕೋಲಾರ-ಬಂಗಾರಪೇಟೆ ಮೆಮು, ಬಂಗಾರಪೇಟೆ-ಕೋಲಾರ ಮೆಮು, ಕೋಲಾರ-ಬೆಂಗಳೂರು ಕಂಟೋನ್ಮೆಂಟ್ ಮೆಮು ರೈಲು ಸೇವೆಗಳನ್ನು ರದ್ದುಪಡಿಸಲಾಗಿದೆ. ಎಸ್‌ಎಂವಿಟಿ ಬೆಂಗಳೂರು- ಬೀದರ್ ಎಕ್ಸ್‌ಪ್ರೆಸ್ ವಿಶೇಷ ರೈಲನ್ನು ಮೇ 3ರಂದು ಹಾಗೂ ಬೀದರ್-ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್ ವಿಶೇಷ ರೈಲಿನ ಸಂಚಾರವು ಮೇ 4ರಂದು ರದ್ದಾಗಲಿದೆ.

ಬೆಂಗಳೂರು-ಹಜೂರ್ ಸಾಹಿಬ್ ನಾಂದೇಡ್ ಎಕ್ಸ್‌ಪ್ರೆಸ್ ರೈಲು ಕೆಎಸ್‌ಆರ್ ಬೆಂಗಳೂರು ನಿಲ್ದಾಣದಿಂದ 75 ನಿಮಿಷ ತಡವಾಗಿ ಹೊರಡಲಿದೆ. ಹಾಗೆಯೇ ವಾಪಸ್ಸಾಗುವ ರೈಲು 4 ಗಂಟೆ ಕಾಲ ಮಾರ್ಗ ಮಧ್ಯೆ ವಿಳಂಬವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ | ಘೋಷಣೆಯಾಗದ ಫಲಿತಾಂಶ

ಇಡೀ ದಿನ ಗೊಂದಲ, ಹೈಡ್ರಾಮಾ, ಪ್ರತಿಭಟನೆ

■ **ವಿಕ ಸುದ್ದಿಲೋಕ** ಚಿಕ್ಕಮಗಳೂರು

ಹೈಕೋರ್ಟ್ ಆದೇಶದ ಮೇರೆಗೆ ಶನಿವಾರ ನಡೆದ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಯಲ್ಲಿ ಇಡೀ ದಿನ ಹಲವು ಹೈಡ್ರಾಮಾ, ಪ್ರತಿಭಟನೆ, ಸಂಭ್ರಮಾಚರಣೆಗೆ ಸಾಕ್ಷಿಯಾಗಿಯಿತು. ಆದರೆ, ಫಲಿತಾಂಶ ಮಾತ್ರ ಪ್ರಕಟವಾಗಲಿಲ್ಲ.

ಬೆಳಗ್ಗೆ ಸ್ಟ್ರಾಂಗ್ ರೂಮಿನಿಂದ ಆರಂಭವಾದ ಗೊಂದಲ ರಾತ್ರಿಯವರೆಗೂ ಮುಂದುವರಿಯಿತು. ಬೆಳಗ್ಗೆ 7ಕ್ಕೆ ನಗರದ ಸಗನೀಪುರ ರಸ್ತೆಯಲ್ಲಿರುವ ಸ್ಟ್ರಾಂಗ್ ರೂಂ ಬಾಗಿಲು ತೆರೆದು ಮತಪೆಟ್ಟಿಗೆ ತೆರೆಯಲಾಯಿತು. ಈ ವೇಳೆ 20 ಪೆಟ್ಟಿಗೆಗಳಲ್ಲಿ ಕೆಲ ಪೆಟ್ಟಿಗೆಗಳಿಗೆ ಸೀಲ್ ಮತ್ತು ಬೀಗ ಹಾಕಿರಲಿಲ್ಲ, ವಿರೋಪಗೊಳಿಸಿರುವ ಸಾಧ್ಯತೆ ಇದೆ ಎಂದು ಶಾಸಕ ಟಿ.ಡಿ.ರಾಜೇಗೌಡ ಮತ್ತು ಅವರ ಪರ ಏಜೆಂಟರು ಅಸಮಾಧಾನ ವ್ಯಕ್ತಪಡಿಸಿ ನಡಾವಳಿಯಲ್ಲಿ ಆಕ್ಷೇಪಣೆಗಳನ್ನು ದಾಖಲಿಸಿದರು. ಬಳಿಕ ಪೆಟ್ಟಿಗೆಗಳನ್ನು ಐಡಿಎಸ್‌ಜಿ ಕಾಲೇಜಿನ ಎಣಿಕಾ ಕೇಂದ್ರಕ್ಕೆ ತರಲಾಯಿತು. ಅಭ್ಯರ್ಥಿಗಳು ಮತ್ತು ಏಜೆಂಟರ ಸಮ್ಮುಖದಲ್ಲಿ ಎಣಿಕೆ ಆರಂಭಿಸಲಾಯಿತು.

ಜೆಡಿಎಸ್ ಅಭ್ಯರ್ಥಿಯಾಗಿದ್ದ ಸುಧಾಕರ ಶೆಟ್ಟಿ ಅವರು ಮಧ್ಯಾಹ್ನ 3ರ ವೇಳೆಗೆ ಎಣಿಕೆ ಕೇಂದ್ರದಿಂದ ಹೊರಬಂದು, ತಿರಸ್ಕೃತ ಮತಗಳ ಪರಿಶೀಲನೆ ಅಂತಿಮ ಹಂತಕ್ಕೆ ಬಂದಿದೆ, 2023ರ ಚುನಾವಣೆ ಫಲಿತಾಂಶದ ಪ್ರಕಾರ ಟಿ.ಡಿ.ರಾಜೇಗೌಡ 201 ಮತಗಳ ಅಂತರದಿಂದ ಗೆದ್ದಿದ್ದು, ಇಂದಿನ ಮರು ಎಣಿಕೆಯಿಂದ ಫಲಿತಾಂಶದಲ್ಲಿ ವ್ಯತ್ಯಾಸ ಆಗುವುದಿಲ್ಲ ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು. ಈ ವೇಳೆ ಕೇಂದ್ರದ ಬಳಿ ಕಾಂಗ್ರೆಸ್ ಕಾರ್ಯಕರ್ತರು, ಪಟಾಕಿ ಸಿಡಿಸಿ ಸಂಭ್ರಮಿಸಿದರು.



2023ರಲ್ಲಿ ಹಂಚಿಕೆಯಾದ ಅಂಚೆ ಮತಗಳು

- ಒಟ್ಟು ಅಂಚೆ ಮತಗಳು: 1822
- ಡಿ.ಎನ್.ಜೀವರಾಜ್: 689
- ಟಿ.ಡಿ.ರಾಜೇಗೌಡ: 562
- ಸುಧಾಕರ ಶೆಟ್ಟಿ: 256
- ಇತರ 12 ಅಭ್ಯರ್ಥಿಗಳು: 33
- ನೋಟಾ: 3
- ತಿರಸ್ಕೃತ: 279

ಮತಪತ್ರ ವಿರೂಪ, ಕೆಲಕಾಲ ಗೊಂದಲ

ತಿರಸ್ಕೃತಗೊಂಡಿದ್ದ 279 ಮತಗಳನ್ನು ಇರಿಸಿದ್ದ ಪೆಟ್ಟಿಗೆಯಲ್ಲಿ 267 ಮತಪತ್ರಗಳು ಮಾತ್ರ ಲಭ್ಯವಾಗಿದ್ದು, ಅವುಗಳ ಪೈಕಿ 8 ಮತಗಳು ಮಾನ್ಯವಾದವು. ಅವುಗಳನ್ನು 2023ರ ಫಲಿತಾಂಶದ ವೇಳೆಯೇ ಮಾನ್ಯವಾಗಿದ್ದ 1540 ಮತಗಳ ಜತೆಗೆ ಸೇರಿಸಿ ಎಣಿಕೆ ಮಾಡುವ ಕಾರ್ಯವನ್ನು ಅಧಿಕಾರಿಗಳು ಆರಂಭಿಸಿದರು.

ಎರಡು ಕಟ್ಟುಗಳಲ್ಲಿನ 50 ಮತಗಳು ವಿರೂಪವಾಗಿರುವ ಬಗ್ಗೆ ಮಾಹಿತಿ ಬಂದ ಕೂಡಲೇ ಮಾಧ್ಯಮ ಕೇಂದ್ರದಲ್ಲಿದ್ದ ಟಿ.ಡಿ.ರಾಜೇಗೌಡ ಅವರು ಎಣಿಕಾ ಕೇಂದ್ರಕ್ಕೆ ತೆರಳಿದರು. 2023ರಲ್ಲಿ ನಡೆದಿದ್ದ ಎಣಿಕೆ ವೇಳೆ ಮಾನ್ಯವಾಗಿದ್ದ ಮತಪತ್ರಗಳಲ್ಲಿ ಈಗ ಇಬ್ಬರ ಹೆಸರಿಗೂ ಗುರುತು ಹಾಕಲಾಗಿದೆ ಎಂದರೆ ಮತಪತ್ರಗಳನ್ನು ವಿರೂಪಗೊಳಿಸಲಾಗಿದೆ. ಮತ ಎಣಿಕೆ ಮಾಡಲು ಅವಕಾಶ ನೀಡುವುದಿಲ್ಲ ಎಂದು ಪಟ್ಟುಹಿಡಿದರು. ಈ ವೇಳೆ ಇಬ್ಬರು ಅಭ್ಯರ್ಥಿಗಳು ಹಾಗೂ ಏಜೆಂಟರ ನಡುವೆ ಗಂಟೆಗೂ ಹೆಚ್ಚುಕಾಲ ವಾದವಿವಾದ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೆ॥ ಪ್ರಕೃತಿ ರಿಯಾಲಿಟಿ ಅಂಡ್ ಇನ್‌ಫ್ರಾ ಪ್ರೈ. ಲಿ., ನಂ. 802, ಎ ಬ್ಲಾಕ್, 14ನೇ ಮೈನ್, 18ನೇ ಅಡ್ಡರಸ್ತೆ, ಸಹಕಾರ ನಗರ, ಬೆಂಗಳೂರು, ಕರ್ನಾಟಕ ರಾಜ್ಯ ಇವರು ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರುಗಳಾದ ಶ್ರೀ ಎಂ. ಶ್ರೀನಿವಾಸಯ್ಯ ಬಿನ್ ಲೇಟ್ ಮಾಧ್ಯಯ್ಯ ಅಲಿಯಾಸ್ ಮಾದಯ್ಯ, ವಯಸ್ಸು ಸುಮಾರು 48 ವರ್ಷ, ವಾಸ ನಂ. 40, 2ನೇ ಅಡ್ಡರಸ್ತೆ, ಅಂಬೇಡ್ಕರ್ ನಗರ, ನಾಗರಭಾವಿ, ಬೆಂಗಳೂರು-560 072 ಮತ್ತು ಶ್ರೀ ಸಿ. ಜಗದೀಶ್ ಬಿನ್ ಲೇಟ್ ಚಿಕ್ಕತಿಮ್ಮಯ್ಯ, ಲೇಟ್ ಶ್ರೀಮತಿ ಲಕ್ಷ್ಮೀದೇವಮ್ಮನವರ ಮೊಮ್ಮಗ, ವಯಸ್ಸು ಸುಮಾರು 38 ವರ್ಷ, ವಾಸ ನಂ.95, ಮೂಡಲ ಮನೆ, I.S.E.C ಮುಖ್ಯ ರಸ್ತೆ, ನಾಗರಭಾವಿ, ಬೆಂಗಳೂರು-560 072 ಇವರುಗಳಿಂದ ಕೊಂಡುಕೊಳ್ಳಲು ಇಚ್ಛಿಸಿರುತ್ತಾರೆ.

ಯಾವುದೇ ವ್ಯಕ್ತಿಗಳಿಗೆ ಸದರಿ ಸ್ವತ್ತಿನ ಮೇಲೆ ಮೇಲೆ ಯಾವುದೇ ಕ್ಲೇಮುಗಳು, ಹಕ್ಕು, ಶೀರ್ಷಿಕೆ, ಆಸಕ್ತಿ ಹೊಂದಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ ಹದಿನೈದು (15) ದಿನಗಳ ಒಳಗೆ ಕೆಳಗೆ ತಿಳಿಸಿದ ವಿಳಾಸಕ್ಕೆ ಲಿಖಿತವಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ವಿಫಲವಾದಲ್ಲಿ ಯಾರಿಂದಲೂ ಯಾವುದೇ ರೀತಿಯ ಕ್ಲೇಮುಗಳು, ಹಕ್ಕು, ಶೀರ್ಷಿಕೆ ಅಥವಾ ಹಿತಾಸಕ್ತಿ ಇಲ್ಲ ಎಂದು ಪರಿಗಣಿಸಲಾಗುತ್ತದೆ ಮತ್ತು ನನ್ನ ಕಕ್ಷಿದಾರರು ಮಾರಾಟ ವಹಿವಾಟನ್ನು ಪೂರ್ಣಗೊಳಿಸಲು ಮುಂದುವರಿಯುತ್ತಾರೆ ಮತ್ತು ಷೆಡ್ಯೂಲ್ ಸ್ವತ್ತನ್ನು ಅವರ ಹೆಸರಿನಲ್ಲಿ ನೋಂದಾಯಿಸಿಕೊಳ್ಳುತ್ತಾರೆಂದು ತಿಳಿಯುವುದು.

ಷೆಡ್ಯೂಲ್ 'ಎ' ಸ್ವತ್ತು

ಬೆಂಗಳೂರು, ಬೆಂಗಳೂರು ಉತ್ತರ, ಯಶವಂತಪುರ ಹೋಬಳಿ, ನಾಗರಭಾವಿಯಲ್ಲಿರುವ ಸರ್ವೆ ನಂ. 32ರಲ್ಲಿರುವ ಸ್ಥಿರಾಸ್ತಿ ಸ್ವತ್ತು ಮನೆ, ಎಂ.ಆರ್. ನಂ. ಹೆಚ್3/2018-19, ಖಾತಾ ನಂ. 5, ಅಳತೆ 1 ಎಕರೆ 07 ಗುಂಟೆಗಳ ಸ್ವತ್ತಿಗೆ ಚೆಕ್ಕುಬಂದಿ- ಪೂರ್ವಕ್ಕೆ: ಎಂ. ಶ್ರೀನಿವಾಸರವರಿಗೆ ಸೇರಿದ ಇದೇ ಸರ್ವೆ ನಂ. 32ರ ಸ್ವತ್ತು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ: ಇತರರ ಸ್ವತ್ತು, ದಕ್ಷಿಣಕ್ಕೆ : 25 ಅಡಿಗಳ ರಸ್ತೆ.

ಷೆಡ್ಯೂಲ್ 'ಬಿ' ಸ್ವತ್ತು

ಬೆಂಗಳೂರು, ಬೆಂಗಳೂರು ಉತ್ತರ, ಯಶವಂತಪುರ ಹೋಬಳಿ, ನಾಗರಭಾವಿಯಲ್ಲಿರುವ ಸರ್ವೆ ನಂ. 32ರಲ್ಲಿರುವ ಸ್ಥಿರಾಸ್ತಿ ಸ್ವತ್ತು ಮನೆ, ಎಂ.ಆರ್. ನಂ. ಹೆಚ್3/2018-19, ಖಾತಾ ನಂ. 5, ಅಳತೆ 1 ಎಕರೆ 00 ಗುಂಟೆಗಳ ಸ್ವತ್ತಿಗೆ ಚೆಕ್ಕುಬಂದಿ- ಪೂರ್ವಕ್ಕೆ: ಹಳ್ಳ, ಪಶ್ಚಿಮಕ್ಕೆ : 1ನೇ ಕಾರ್ಯನಿರ್ವಾಹಕ ಸಿ. ಜಗದೀಶ್ ರವರಿಗೆ ಸೇರಿದ ಇದೇ ಸರ್ವೆ ನಂ. 32ರ ಸ್ವತ್ತು, ಉತ್ತರಕ್ಕೆ: ಖರಾಬು ಜಮೀನು, ದಕ್ಷಿಣಕ್ಕೆ : 25 ಅಡಿಗಳ ರಸ್ತೆ.

ಐ.ಎ. ಖಾನ್, ವಕೀಲರು
ಕೆ.ಕೆ. ಲಾ ಅಸೋಸಿಯೇಟ್ಸ್,
ನಂ.52, 46ನೇ ಅಡ್ಡರಸ್ತೆ, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010. ಮೊಬೈಲ್: 99459 79092
Email: kklawassociates7@gmail.com
ದಿನಾಂಕ: 02.05.2026

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಚಾಮರಾಜಪೇಟೆ ವಿಭಾಗ,
2ನೇ ಮುಖ್ಯರಸ್ತೆ, ಟಿ.ಆರ್. ಮಿಲ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018

ನಂ.: ಕಾಪಾಅ/ಚಾರಾಪೇ/ಕೆಪಿಪಿಪಿ/ಟೆಂಡರ್/02/2026-27 ದಿನಾಂಕ: 02.05.2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿ ಲಕೋಟೆ ಪದ್ಧತಿ) ಅಲ್ಪಾವಧಿ ಟೆಂಡರ್
(ಜಿಒಕೆ ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಕೇಂದ್ರ ನಗರ ಪಾಲಿಕೆ (ಬಿಸಿಸಿಸಿ)ಯ ಚಾಮರಾಜಪೇಟೆ ವಿಭಾಗದ ವಲಯ-2ರ ಕಾರ್ಯಪಾಲಕ ಅಭಿಯಂತರರು, ಕೆಪಿಪಿಪಿ ವ್ಯವಸ್ಥೆಯ ಮೂಲಕ ಆಹ್ವಾನಿಸಲಾದ ಯೋಜನಾ ಕಾಮಗಾರಿಗಳಿಗೆ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುವುದು, ಮೇಲ್ವಿಚಾರಣೆ, ಯೋಜನಾ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣಕ್ಕಾಗಿ ಸಲಹೆಗಾರರಾಗಿ ಇದೇ ರೀತಿಯ ಕೆಲಸವನ್ನು ಮಾಡಿದ ಆಸಕ್ತ ಫರ್ಮ್‌ಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ವಿನಂತಿ. ಬೆಂಗಳೂರು ಕೇಂದ್ರ ನಗರ ಪಾಲಿಕೆ / ಕೆಪಿಡಬ್ಲ್ಯೂಡಿ / ಎಲೆಕ್ಟ್ರಿಕಲ್ / ಸಿಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	"ಬಿನ್ನಿ ಮಿಲ್ ಟ್ಯಾಂಕ್ ಬಂಡ್ ರಸ್ತೆಯಿಂದ ವಿಜಯನಗರ ಪೈಪ್‌ಲೈನ್ ರಸ್ತೆಯವರೆಗೆ ಪಾದರಾಯನಪುರ ಮುಖ್ಯರಸ್ತೆಯ ಅಗಲೀಕರಣ" ಕಾಮಗಾರಿಗಾಗಿ 1.855 ಕಿ.ಮೀ. ಟಿಡಿಆರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸ್ಥಳಾಕೃತಿ ಸಮೀಕ್ಷೆ, ಭೂಮಾಪನ ಸಮೀಕ್ಷೆ, ಭೂಸ್ವಾಧೀನ ಯೋಜನೆ ತಯಾರಿಕೆ ಮತ್ತು ನಮೂನೆ-1, ನಮೂನೆ-3 ಅಧಿಸೂಚನೆ ಮತ್ತು ಸಹಾಯಕ ಇಲಾಖೆಗೆ ಸಲಹಾ ಸೇವೆಗಳು. (ಅಂದಾಜು ವೆಚ್ಚ ರೂ. 4000.00 ಲಕ್ಷಗಳು). **ಪಿಎಂಸಿ ವೆಚ್ಚ (ಲಕ್ಷಗಳಲ್ಲಿ ರೂ.):** 40.00, **ಇಎಂಡಿ ಮೊತ್ತ ರೂ.ಗಳಲ್ಲಿ:** 1.00 ಲಕ್ಷ.

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ದಿನಾಂಕ **05.05.2026** ರಿಂದ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು ಕಾರ್ಯಪಾಲಕ ಅಭಿಯಂತರರ ಕಛೇರಿ (ಚಾಮರಾಜಪೇಟೆ ವಿಭಾಗ)ದಲ್ಲಿ **12.05.2026ರ ಬೆಳಿಗ್ಗೆ 11:00 ಗಂಟೆಗೆ** ನಡೆಯಲಿದೆ. (3) ಟೆಂಡರ್ ದಸ್ತಾವೇಜುಗಳನ್ನು ಆನ್‌ಲೈನ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **14.05.2026ರ ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದು ಮತ್ತು ಟೆಂಡರನ್ನು ಕೆಪಿಪಿಪಿ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಛೇರಿ, (ಚಾಮರಾಜಪೇಟೆ ವಿಭಾಗ)ಯಲ್ಲಿ ವೆಬ್‌ಸೈಟ್ **https://kppp.karnataka.gov.in** ಮೂಲಕ ದಿನಾಂಕ **15.05.2026ರ ಸಂಜೆ 5:00 ಗಂಟೆಗೆ** ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಚಾಮರಾಜಪೇಟೆ ವಿಭಾಗ, ಬೆಂಗಳೂರು ಕೇಂದ್ರ ನಗರ ಪಾಲಿಕೆ

ಮಾರ್ಚ್ 28ರಿಂದ ಮೇ 31ರವರೆಗೆ

ಐಪಿಎಲ್ ಸಂಗ್ರಾಮ

2026ರ ಹಂಗಾಮ

2026ರ ಐಪಿಎಲ್ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ರನ್ ರೇಟ್
ಪಂಜಾಬ್	8	6	1	1	13	+1.043
ಬೆಂಗಳೂರು	9	6	3	0	12	+1.420
ಹೈದರಾಬಾದ್	9	6	3	0	12	+0.832
ರಾಜಸ್ಥಾನ	10	6	4	0	12	+0.510
ಗುಜರಾತ್	9	5	4	0	10	-0.192
ಚೆನ್ನೈ	9	4	5	0	08	+0.005
ಡೆಲ್ಲಿ	9	4	5	0	08	-0.895
ಕೋಲ್ಕೊತಾ	8	2	5	1	05	-0.751
ಮುಂಬಯಿ	9	2	7	0	04	-0.803
ಲಖನೌ	8	2	6	0	04	-1.106

433 ರನ್
ಕೆ.ಎಲ್. ರಾಹುಲ್
ಡೆಲ್ಲಿ ಕ್ಯಾಪಿಟಲ್ಸ್

17 ವಿಕೆಟ್
ಭುವನೇಶ್ವರ್ ಕುಮಾರ್
ರಾಯಲ್ ಚಾಲೆಂಜರ್ಸ್

ಶನಿವಾರ ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಆಂಡ್ರೀವಾರನ್ನು ಮಣಿಸಿ ಚೊಚ್ಚಲ ಪ್ರಶಸ್ತಿ ಗೆದ್ದ ಉಕ್ರೇನ್‌ನ ಮಾರ್ತಾ ಕೊಸ್ಟ್ಯುಕ್.

ಋತುರಾಜ್, ಕಾರ್ತಿಕ್ ಅರ್ಧ ಶತಕ | ಮುಂಬಯಿಗೆ 8 ವಿಕೆಟ್ ಸೋಲು

ಚೆನ್ನೈ ಸೂಪರ್ ಕಿಂಗ್ಸ್‌ಗೆ ಜಯ

ಚೆನ್ನೈ: ಮುಂಬಯಿ ಇಂಡಿಯನ್ಸ್ ಒಡ್ಡಿದ 160 ರನ್‌ಗಳ ಸಾಧಾರಣ ಗುರಿಯನ್ನು ಬೆನ್ನಟ್ಟಿದ ಚೆನ್ನೈ ಸೂಪರ್ ಕಿಂಗ್ಸ್ ತಂಡ 18.1 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು ಗುರಿ ಮುಟ್ಟಿ ಜಯಶಾಲಿಯಾಗಿದೆ. ಹೊಣೆಗಾರಿಕೆಯ ಆಟ ನಿಭಾಯಿಸಿದ ನಾಯಕ ಋತುರಾಜ್ ಗಾಯಕ್ವಾಡ್(67) ಮತ್ತು ಕಾರ್ತಿಕ್ ಶರ್ಮ(54) ಅರ್ಧ ಶತಕ ಗಳಿಸಿ ತಂಡವನ್ನು ಗೆಲುವಿನ ಗೆರೆ ದಾಟಿಸುವಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸಿದರು.

ಚಿದಂಬರಂ ಕ್ರೀಡಾಂಗಣದಲ್ಲಿ ಟಾಸ್ ಗೆದ್ದುಬ್ಯಾಟಿಂಗ್ ಆಯ್ದುಕೊಂಡ ಮುಂಬಯಿ ಇಂಡಿಯನ್ಸ್ ತಂಡ 7 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿತು. ಮುಂಬಯಿ ಪರ ನಮನ್ ಧೀರ್ (37 ಎಸೆತಗಳಲ್ಲಿ 57) ಅರ್ಧಶತಕ ಗಳಿಸಿ ತಂಡಕ್ಕೆ ಆಸರೆಯಾದರು. ಸಿಎಸ್‌ಕೆ ಪರ ನೂರ್ ಅಹ್ಮದ್ 4 ಓವರ್‌ಗಳಲ್ಲಿ ಕೇವಲ 26 ರನ್ ನೀಡಿ 2 ವಿಕೆಟ್ ಪಡೆದರೆ, ಅನ್ಸುಲ್ ಕಾಂಬೋಜ್ 32 ರನ್‌ಗಳಿಗೆ 3 ವಿಕೆಟ್ ಪಡೆದರು.

ಆರಂಭಿಕ ಆಘಾತ: ಮುಕೇಶ್ ಚೌಧರಿ ಮೊದಲ ಓವರ್‌ನಲ್ಲಿ ಕೇವಲ 1 ರನ್ ನೀಡಿ ಮುಂಬಯಿಗೆ ಕಡಿವಾಣ ಹಾಕಿದರು. ಪದಾರ್ಪಣೆ ಆಟಗಾರ ರಾಮಕೃಷ್ಣ ಅವರು ವಿಲ್ ಜಾಕ್ಸ್ ಅವರ ಅದ್ಭುತ ಕ್ಯಾಚ್ ಹಿಡಿಯುವ ಮೂಲಕ ಮುಂಬಯಿಗೆ ಮೊದಲ ಆಘಾತ ನೀಡಿದರು.

ಋತುರಾಜ್ ಗಾಯಕ್ವಾಡ್

ಆರಂಭದಲ್ಲಿ ರನ್ ಗಳಿಸಲು ತಿಣುಕಾಡಿದ ರಿಕಲ್ಟನ್ ಬೇಗನೆ ಫಾರ್ಮ್ ಕಂಡುಕೊಂಡರು. ಅವರು ಮುಕೇಶ್ ಮತ್ತು ಪ್ರಶಾಂತ್ ವೀರ್ ಅವರ ಓವರ್‌ಗಳಲ್ಲಿ ಸತತ ಸಿಕ್ಸರ್ ಸಿಡಿಸಿ ರನ್ ವೇಗ ಹೆಚ್ಚಿಸಿದರು. ಪವರ್ ಪ್ಲೇ ಅಂತ್ಯಕ್ಕೆ ಮುಂಬಯಿ 57 ರನ್ ಗಳಿಸಿತು. ಮುಂಬಯಿಗೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ ಮುಳುವಾಯಿತು. ಉತ್ತಮವಾಗಿ ಆಡುತ್ತಿದ್ದ ರಿಕಲ್ಟನ್‌ರನ್ನು ನೂರ್ ಅಹ್ಮದ್ ಪೆವಿಲಿಯನ್‌ಗೆ ಅಟ್ಟಿದರು. ಸೂರ್ಯಕುಮಾರ್ ಯಾದವ್ (21) ಮತ್ತು ತಿಲಕ್ ವರ್ಮಾ ದೊಡ್ಡ ಮೊತ್ತ ಗಳಿಸುವಲ್ಲಿ ವಿಫಲರಾದರು. ನಾಯಕ ಹಾರ್ದಿಕ್ ಪಾಂಡ್ಯ 23 ಎಸೆತಗಳಲ್ಲಿ ಕೇವಲ 18 ರನ್ ಗಳಿಸಿ ನಿರಾಸೆ ಮೂಡಿಸಿದರು.

ಸಂಕ್ಷಿಪ್ತ ಸ್ಕೋರ್

ಮುಂಬಯಿ ಇಂಡಿಯನ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 159 (ನಮನ್ ಧೀರ್ 57, ರಯಾನ್ ರಿಕಲ್ಟನ್ 37; ಅನ್ಸುಲ್ ಕಾಂಬೋಜ್ 32ಕ್ಕೆ 3, ನೂರ್ ಅಹ್ಮದ್ 26ಕ್ಕೆ 2).
ಚೆನ್ನೈ ಸೂಪರ್ ಕಿಂಗ್ಸ್: 18.1 ಓವರ್‌ಗಳಲ್ಲಿ 2 ವಿಕೆಟ್‌ಗೆ 160 (ಋತುರಾಜ್ ಗಾಯಕ್ವಾಡ್ 67, ಕಾರ್ತಿಕ್ ಶರ್ಮ 54, ಜಸ್‌ಪ್ರಿತ್ ಬುಮ್ರಾ 20ಕ್ಕೆ 1, ಅಲ್ಲಾ ಗಜನ್‌ಫರ್ 40ಕ್ಕೆ 1).

ಟಿ20 ವಿಶ್ವಕಪ್‌ಗೆ ಭಾರತ ಮಹಿಳೆಯರ ತಂಡ ಪ್ರಕಟ

- ಪ್ರತಿಕಾ ರಾವಲ್, ಅಮನ್‌ಜೋತ್‌ಗೆ ಕೊಕ್
- ಕನ್ನಡತಿ ಶ್ರೇಯಾಂಕಾಗೆ ಸ್ಥಾನ

ಹೊಸದಿಲ್ಲಿ: ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಜೂನ್ 12ರಿಂದ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್‌ಗೆ ಭಾರತದ 15 ಸದಸ್ಯರ ತಂಡವನ್ನು ಶನಿವಾರ ಪ್ರಕಟಿಸಲಾಗಿದೆ. ಈ ತಂಡದಲ್ಲಿ ಅನ್‌ಕ್ಯಾಪ್ಡ್ ಆಟಗಾರ್ತಿ ನಂದಿನಿ ಶರ್ಮಾ, ವಿಕೆಟ್ ಕೀಪರ್ ಮತ್ತು ಬ್ಯಾಟರ್ ಯಸ್ತಿಕಾ ಭಾಟಿಯಾ ಸ್ಥಾನ ಪಡೆದಿದ್ದಾರೆ.

ಆಲ್‌ರೌಂಡರ್ ಅಮನ್‌ಜೋತ್ ಕೌರ್ ಗಾಯದ ಸಮಸ್ಯೆಯಿಂದಾಗಿ ಹೊರಬಿದ್ದಿದ್ದರೆ, ಪ್ರತಿಕಾ ರಾವಲ್‌ರನ್ನು ತಂಡದಿಂದ ಕೈಬಿಡಲಾಗಿದೆ. ಆದರೆ, ಜುಲೈ 10ರಿಂದ 13 ರವರೆಗೆ ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಏಕೈಕ ಟೆಸ್ಟ್ ಪಂದ್ಯದ ತಂಡದಲ್ಲಿ ಪ್ರತಿಕಾ ಸ್ಥಾನ ಉಳಿಸಿಕೊಂಡಿದ್ದಾರೆ. ಹರ್ಮನ್‌ಪ್ರೀತ್ ಕೌರ್ ತಂಡವನ್ನು ಮುನ್ನಡೆಸಲಿದ್ದು, ಸ್ಮೃತಿ ಮಂಧಾನ ಉಪನಾಯಕಿಯಾಗಿದ್ದಾರೆ. ವಿಶ್ವಕಪ್‌ಗೂ ಮುನ್ನ ಭಾರತ ತಂಡವು ಮೇ 28ರಿಂದ ಆತಿಥೇಯ ಇಂಗ್ಲೆಂಡ್ ವಿರುದ್ಧ ಮೂರು ಪಂದ್ಯಗಳ ಟಿ20 ಸರಣಿಯನ್ನು ಆಡಲಿದೆ. ಟಿ20 ವಿಶ್ವಕಪ್‌ಗೆ ಆಯ್ಕೆ ಮಾಡಲಾದ ತಂಡವನ್ನೇ ಈ ಸರಣಿಗೂ ಉಳಿಸಿಕೊಳ್ಳಲಾಗಿದೆ.

ಶ್ರೇಯಾಂಕ ಪಾಟೀಲ್

ತಂಡ

ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ), ಶಫಾಲಿ ವರ್ಮಾ, ಜೆಮಿಮಾ ರೋಡ್ರಿಗಸ್, ಭಾರ್ತಿ ಫುಲ್ಮಾಲಿ, ದೀಪ್ತಿ ಶರ್ಮಾ, ರಿಚಾ ಘೋಷ್, ಶ್ರೀಚರಣಿ, ಯಸ್ತಿಕಾ ಭಾಟಿಯಾ, ನಂದಿನಿ ಶರ್ಮಾ, ಅರುಂಧತಿ ರೆಡ್ಡಿ, ರೇಣುಕಾ ಠಾಕೂರ್, ಕ್ರಾಂತಿ ಗೌಡ್, ಶ್ರೇಯಾಂಕ ಪಾಟೀಲ್, ರಾಧಾ ಯಾದವ್.

ಡೋಪಿಂಗ್ ಅಧಿಕಾರಿಗಳ ಕಣ್ತಪ್ಪಿಸುತ್ತಿರುವ ಕ್ರೀಡಾಪಟುಗಳು

ಹೊಸದಿಲ್ಲಿ: ಭಾರತದಲ್ಲಿನ ಉದ್ದೀಪನ ಮದ್ದು ಸೇವನೆ (ಡೋಪಿಂಗ್) ಪ್ರಕರಣಗಳ ಹೆಚ್ಚಳದ ಬಗ್ಗೆ ಅಂತಾರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಮುಖ್ಯಸ್ಥ ಬೆಂಜಮಿನ್ ಕೊಹೆನ್ ಕಳವಳ ವ್ಯಕ್ತಪಡಿಸಿದ್ದಾರೆ. ಡೋಪಿಂಗ್ ಪರೀಕ್ಷೆಗೆಂದು ಅಧಿಕಾರಿಗಳು ಬಂದ ಸಂದರ್ಭದಲ್ಲಿ ಭಾರತೀಯ ಕ್ರೀಡಾಪಟುಗಳು ಓಡಿಹೋಗುತ್ತಿರುವ ಬಗ್ಗೆ ದೂರುಗಳು ಕೇಳಿಬರುತ್ತಿರುವುದಾಗಿ ಅವರು ತಿಳಿಸಿದ್ದಾರೆ. ಅಧಿಕಾರಿಗಳ ಆಗಮನ ಕುರಿತು ಮುಂಚಿತವಾಗಿಯೇ ಕ್ರೀಡಾಪಟುಗಳಿಗೆ ಮಾಹಿತಿ ದೊರೆಯುತ್ತಿದೆಯೆಂದೂ ಅವರು ಆರೋಪಿಸಿದ್ದಾರೆ.

ಅಂತಾರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಮುಖ್ಯಸ್ಥ ಕೊಹೆನ್ ಕಳವಳ

ಒಂದು ವೇಳೆ ಭಾರತ 2036ರ ಒಲಿಂಪಿಕ್ಸ್ ಆಯೋಜಿಸಲು ಬಯಸಿದರೆ, ತನ್ನ ಕ್ರೀಡಾ ಆಡಳಿತದಲ್ಲಿ ಪ್ರಮುಖ ಸುಧಾರಣೆಗಳನ್ನು ತರಬೇಕೆಂದು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ ಸೂಚಿಸಿದೆ. ವಿಶ್ವ ಉದ್ದೀಪನ ಮದ್ದು ತಡೆ ಸಂಸ್ಥೆಯ (ವಾಡಾ) ವರದಿಯಂತೆ ಭಾರತ ಸತತ ಮೂರು ವರ್ಷಗಳಿಂದ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಭಾರತದ 'ನಾಡಾ' ಮತ್ತು ಒಲಿಂಪಿಕ್ ಸಂಸ್ಥೆಗಳು ಸುಧಾರಣೆಗೆ ಒಲವು ತೋರುತ್ತಿದ್ದರೂ, ಅಂತಾರಾಷ್ಟ್ರೀಯ ಮಟ್ಟದ ಸ್ವತಂತ್ರ ಸಂಸ್ಥೆಗಳೊಂದಿಗೆ ಸಹಕರಿಸಲು ಹಿಂಜರಿಯುತ್ತಿವೆ ಎಂದು ಕೊಹೆನ್ ಅಭಿಪ್ರಾಯಪಟ್ಟಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಭಾರತ ತನ್ನ ಪಾರದರ್ಶಕತೆಯನ್ನು ಸಾಬೀತುಪಡಿಸುವುದು ಅನಿವಾರ್ಯವಾಗಿದೆ.

ಹಾರ್ಸ್ ಪವರ್

ಬೆಂಗಳೂರು ರೇಸ್ | ಅಶ್ವಬಂಧು

ಗೆಲುವಿನ ತವಕದಲ್ಲಿ ಪ್ರೊಕೊಫಿವ್

ಪ್ರಸನ್ನ ಕುಮಾರ್ ತರಬೇತಿಯಲ್ಲಿ ಪಳಗಿರುವ ಪ್ರೊಕೊಫಿವ್ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆ ರಾಂಕ್ವಿಲಿನೊ ಕಪ್ ಗೆಲ್ಲುವ ಫೇವರಿಟ್ ಆಗಿದೆ. ಏಳು ರೇಸ್‌ಗಳನ್ನು ಏರ್ಪಡಿಸಿದ್ದು, ಮೊದಲನೇ ರೇಸ್ ಮಧ್ಯಾಹ್ನ 3 ಗಂಟೆಗೆ ಪ್ರಾರಂಭವಾಗಲಿದೆ.

ನಮ್ಮ ಆಯ್ಕೆ

- 1ನೇ ರೇಸ್: ಬ್ಲೂಸ್ಟಾರ್ಮ್ 1, ಶಾಕ್ ಅಂಡ್ ಆವ್ 7, ವರ್ಸೇಸ್ 3
- 2ನೇ ರೇಸ್: ಮ್ಯೂಚುವಲ್ ಟ್ರಸ್ಟ್ 1, ನೈಟ್ ರೈಡರ್ 2, ನೆಮೊಸ್ಯೆನ್ 4
- 3ನೇ ರೇಸ್: ಫಿಲ್ಸ್ ಡಿ ಫ್ರಾನ್ಸ್ 1, ಲಾರ್ಸನ್ 2, ಸುಪ್ರೀಮ್ ಸಕ್ಸಸ್ 7
- 4ನೇ ರೇಸ್: ಜೇಡ್ ಮೌಂಟೇನ್ 6, ಸಪ್ಪೊರೊ 1, ಸ್ಪ್ಲೆಂಡಿಡ್ ಡ್ರೀಮ್ 2
- 5ನೇ ರೇಸ್: ಪ್ರೊಕೊಫಿವ್ 8, ರೀಕೊ 2, ಡಾನ್ ಕಾರ್ಲೋಸ್ 1
- 6ನೇ ರೇಸ್: ಬುಲ್ಲೆಟ್ ಪ್ರೂಫ್ 1, ಬ್ರೆತ್ ಟೇಕಿಂಗ್ 6, ಪರ್ಲ್ ಸ್ಟಾರ್ 10
- 7ನೇ ರೇಸ್: ಮನಿ ಬ್ಯಾಗ್ಸ್ 2, ಸೀ ದಿ ಲೈಟ್ 12, ಫ್ಲೈಟ್ ಆಫ್ ಫ್ಯಾನ್ಸಿ 10

ಮಲ್ಟಿ ಲೆಗ್ ಪೂಲ್ಸ್:

- ಜಾಕ್‌ಪಾಟ್: 3, 4, 5, 6, 7; 1ನೇ ಟ್ರಿಬಲ್: 2, 3, 4; 2ನೇ ಟ್ರಿಬಲ್: 5, 6, 7

ಅತ್ಯುತ್ತಮ ಬೆಟ್: ಫಿಲ್ಸ್ ಡಿ ಫ್ರಾನ್ಸ್

ಎಟಿಪಿ ಚಾಲೆಂಜರ್ ಫೈನಲ್‌ಗೆ ಮಾನಸ್ ಧಾಮ್ನೆ ಲಗ್ಗೆ

ಹೊಸದಿಲ್ಲಿ: ದೇಶದ ಉದಯೋನ್ಮುಖ ಟೆನಿಸ್ ಪ್ರತಿಭೆ ಮಾನಸ್ ಧಾಮ್ನೆ, ಕಜಕಸ್ತಾನದ ಶಿಮ್ಕೆಂಟ್‌ನಲ್ಲಿ ನಡೆಯುತ್ತಿರುವ ಎಟಿಪಿ ಚಾಲೆಂಜರ್ ಟೂರ್ನಿಯ ಫೈನಲ್ ಪ್ರವೇಶಿಸುವ ಮೂಲಕ ಇತಿಹಾಸ ಬರೆದಿದ್ದಾರೆ. ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ 18 ವರ್ಷದ ಮಾನಸ್, ಫ್ರಾನ್ಸ್‌ನ ಆಂಟೊಯಿನ್ ಗಿಬೌಡೊ ವಿರುದ್ಧ 6-4, 6-3 ನೇರ ಸೆಟ್‌ಗಳ ಭರ್ಜರಿ ಜಯ ದಾಖಲಿಸಿದರು.

ಕ್ಲೇ ಕೋರ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ಮಾನಸ್ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದರು. ಮೊದಲ ಸೆಟ್‌ನಲ್ಲಿ ಕಠಿಣ ಪೈಪೋಟಿ ನೀಡಿದ ಅವರು, ಎರಡನೇ ಸೆಟ್‌ನಲ್ಲಿಯೂ ಸಂಪೂರ್ಣ ಹಿಡಿತ ಸಾಧಿಸಿ ಸುಲಭವಾಗಿ ಪಂದ್ಯವನ್ನು ಗೆದ್ದುಕೊಂಡರು. ಎಟಿಪಿ ಚಾಲೆಂಜರ್ ಫೈನಲ್ ತಲುಪಿದ ಕೆಲವೇ ಭಾರತೀಯರ ಪಟ್ಟಿಗೆ ಈಗ ಮಾನಸ್ ಸೇರ್ಪಡೆಯಾಗಿದ್ದಾರೆ. ಭಾನುವಾರ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಮಾನಸ್ ಬೆಲ್ಜಿಯಂನ ಬ್ಲುವೈಸ್ ಗಡಾಮೌರಿ ಅವರನ್ನು ಎದುರಿಸಲಿದ್ದು, ಚೊಚ್ಚಲ ಪ್ರಶಸ್ತಿ ಗೆಲ್ಲುವ ವಿಶ್ವಾಸದಲ್ಲಿದ್ದಾರೆ.

ಗೆಲುವಿನ ನಿರೀಕ್ಷೆಯಲ್ಲಿ ಕೆಕೆಆರ್

ಹೈದರಾಬಾದ್‌ಗೆ ಗೆಲುವಿನ ಅಭಿಯಾನ ಮುಂದುವರಿಸುವ ತವಕ

ಹೈದರಾಬಾದ್: ಐಪಿಎಲ್ ಟೂರ್ನಿಯ ಭಾನುವಾರದ ಪಂದ್ಯದಲ್ಲಿ ಪ್ರಬಲ ಸನ್ ರೈಸರ್ಸ್ ಹೈದರಾಬಾದ್ ತಂಡವು ಪುಟಿದೇಳುವ ಹಂಬಲದಲ್ಲಿರುವ ಕೋಲ್ಕೊತಾ ನೈಟ್‌ರೈಡರ್ಸ್ ತಂಡವನ್ನು ಎದುರಿಸಲಿದೆ. ಸತತ 5 ಪಂದ್ಯಗಳನ್ನು ಗೆದ್ದಿರುವ ಹೈದರಾಬಾದ್, ಅಂಕಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದೆ. ಅಭಿಷೇಕ್ ಶರ್ಮಾ, ಹೆನ್ರಿಚ್ ಕ್ಲಾಸೆನ್ ಮತ್ತು ಇಶಾನ್ ಕಿಶನ್ ಅವರಂತಹ ಸ್ಫೋಟಕ ಬ್ಯಾಟರ್‌ಗಳನ್ನು ಹೊಂದಿರುವ ಹೈದರಾಬಾದ್ ಅತ್ಯಂತ ಬಲಿಷ್ಠವಾಗಿದೆ. ಕಳೆದ ಪಂದ್ಯದಲ್ಲಿ ಟ್ರಾವಿಸ್ ಹೆಡ್ ಫಾರ್ಮ್‌ಗೆ ಮರಳಿರುವುದು ತಂಡದ ಆತ್ಮವಿಶ್ವಾಸ ಹೆಚ್ಚಿಸಿದೆ. ನಾಯಕ ಪ್ಯಾಟ್ ಕಮಿನ್ಸ್ ಬೌಲಿಂಗ್ ವಿಭಾಗವನ್ನು ಮುನ್ನಡೆಸುತ್ತಿದ್ದಾರೆ.

ಮತ್ತೊಂದೆಡೆ, ಅಜಿಂಕ್ಯ ರಹಾನೆ ನೇತೃತ್ವದ ಕೆಕೆಆರ್ 8ನೇ ಸ್ಥಾನದಲ್ಲಿದ್ದರೂ, ಕಳೆದ ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿ ಚೇತರಿಸಿಕೊಂಡಿದೆ. ರಹಾನೆ ಬ್ಯಾಟಿಂಗ್‌ನಲ್ಲಿ ವೈಯಕ್ತಿಕವಾಗಿ ಮಿಂಚುತ್ತಿದ್ದರೂ, ಅವರ ನಾಯಕತ್ವದ ನಿರ್ಧಾರಗಳು ಚರ್ಚೆಗೆ ಗ್ರಾಸವಾಗಿವೆ. ಫಿನ್ ಅಲೆನ್ ಮತ್ತು ಟಿಮ್ ಸೀಫರ್ಟ್ ಅವರ ವೈಫಲ್ಯ ಹಾಗೂ ವರುಣ್ ಚಕ್ರವರ್ತಿ ಅವರ ಸಾಧಾರಣ ಬೌಲಿಂಗ್ ತಂಡಕ್ಕೆ ಚಿಂತೆಯಾಗಿದೆ. ಈ ಪಂದ್ಯದಲ್ಲಿ ರಚಿನ್ ರವೀಂದ್ರಗೆ ಅವಕಾಶ ಸಿಗುವುದೇ ಎಂದು ಕಾತರದಿಂದ ನೋಡಬೇಕಿದೆ. ಮೊದಲ ಹಂತದ ಪಂದ್ಯದಲ್ಲಿ ಹೈದರಾಬಾದ್ ಜಯ ಗಳಿಸಿತ್ತು.

ಪಂದ್ಯ : ರಾಜೀವ್ ಗಾಂಧಿ ಕ್ರೀಡಾಂಗಣ, ಹೈದರಾಬಾದ್; **ಸಮಯ:** ಮಧ್ಯಾಹ್ನ 3.30 ; **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್

ದಿನದ ಎರಡನೇ ಪಂದ್ಯ
ಪಂಜಾಬ್ vs ಗುಜರಾತ್
ಪಂದ್ಯ : ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್
ಸಮಯ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಥಾಮಸ್ ಕಪ್

ಲಕ್ಷ್ಯ ಅಲಭ್ಯ

ಹಾರ್ಸೆನ್ಸ್(ಡೆನ್ಮಾರ್ಕ್): ಥಾಮಸ್ ಕಪ್ ಸೆಮಿಫೈನಲ್ ಪಂದ್ಯದಲ್ಲಿ ಫ್ರಾನ್ಸ್ ವಿರುದ್ಧದ ಸೆಣಸಾಟಕ್ಕೆ ಭಾರತದ ಸ್ಟಾರ್ ಶಟ್ಲರ್ ಲಕ್ಷ್ಯ ಸೇನ್ ಅಲಭ್ಯರಾಗಿದ್ದಾರೆ.

ಕ್ವಾರ್ಟರ್‌ಫೈನಲ್‌ನಲ್ಲಿ ಚೈನೀಸ್ ತೈಪೆ ವಿರುದ್ಧದ ರೋಚಕ ಪಂದ್ಯದ ವೇಳೆ ಲಕ್ಷ್ಯ ಅವರ ಬಲಗೈಗೆ ಗಾಯ ಮಾಡಿಕೊಂಡಿದ್ದರು. ಮುನ್ನೆಚ್ಚರಿಕಾ ಕ್ರಮವಾಗಿ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಯುವ ಆಟಗಾರ ಆಯುಷ್ ಶೆಟ್ಟಿ ಮೊದಲ ಸಿಂಗಲ್ಸ್ ಪಂದ್ಯವಾಡಲಿದ್ದಾರೆ. ಕಿಡಂಬಿ ಶ್ರೀಕಾಂತ್ ಮತ್ತು ಎಚ್.ಎಸ್. ಪ್ರಣಯ್ ಕ್ರಮವಾಗಿ 2ನೇ ಮತ್ತು 3ನೇ ಸಿಂಗಲ್ಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ. ನಂತರ ಹರಿಹರನ್- ಅರ್ಜುನ್ ಜೋಡಿ ಹಾಗೂ ಸಾತ್ವಿಕ್ ಸಾಯಿರಾಜ್- ಚಿರಾಗ್ ಶೆಟ್ಟಿ ಜೋಡಿ ಆಡಲಿದೆ.